₹ 6 @vishwavaninews epaper.vishwavani.news vishwavani.news ಬೆಂಗಳೂರು | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ ಮಂಗಳವಾರ 17.06.2025 ಸಂಪುಟ: 10 ಸಂಚಿಕೆ: 154 ಪುಟಗಳು: 12 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಮೋದಿಗೆ ಸೈಪ್ರಸ್‌ನ ನಾಗರಿಕ ಪ್ರಶಸ್ತಿ

ಸೈಪ್ರಸ್ ಪ್ರವಾಸದಲ್ಲಿರುವ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಸೋಮವಾರ ಆ ದೇಶದ ಅತ್ಯುನ್ನತ ನಾಗರಿಕ ಪ್ರಶಸ್ತಿಯಾದ ಗ್ರ್ಯಾಂಡ್ ಕ್ರಾಸ್ ಆಫ್ ದಿ ಆರ್ಡರ್ ಆಫ್ ಮಕರಿಯೋಸ್ III ಆಫ್ ಸೈಪ್ರಸ್ ಪ್ರದಾನ ಮಾಡಲಾಯಿತು. ಸೈಪ್ರಸ್ ಅಧ್ಯಕ್ಷ ನಿಕೋಸ್ ಕ್ರಿಸ್ಟೋಡೌಲೈಡ್ಸ್ ಪ್ರಶಸ್ತಿ ನೀಡಿ ಗೌರವಿಸಿದರು. ಆರ್ಡರ್ ಆಫ್ ಮಕರಿಯೋಸ್ III ಸೈಪ್ರಸ್‌ನ ಮೊದಲ ಅಧ್ಯಕ್ಷ ಆರ್ಚ್‌ಬಿಷಪ್ ಮಕರಿಯೋಸ್ III ಅವರ ಹೆಸರಿನಲ್ಲಿ ನೀಡುವ ಅತ್ಯುನ್ನತ ನಾಗರಿಕ ಗೌರವವಾಗಿದೆ.

ಸೊಂಪಾದ ಪುಟಗಳು

ದಳಗಳನ್ನು ಒಗ್ಗೂಡಿಸುವುದು ಸುಲಭವೇ?

ಅಶ್ವತ್ಥಕಟ್ಟೆ
ರಂಜಿತ್ ಎಚ್. ಅಶ್ವತ್ಥ 6

ಅಭಿವೃದ್ಧಿ ಎನ್ನುವ ಮಾಯಾಜಿಂಕೆಯ ಬೆನ್ನತ್ತಿ ಸಿಕ್ಕಿದ್ದು ಖಿನ್ನತೆ!

ವಿಶ್ವರಂಗ
ರಂಗಸ್ವಾಮಿ ಮೂಕನಹಳ್ಳಿ 7

ದಾರಿದೀಪೋಕ್ತಿ

ದೈಹಿಕ ಸೌಂದರ್ಯ ಜೀವನವಿಡೀ ಒಂದೇ ರೀತಿ ಇರುವುದಿಲ್ಲ. ವರ್ಷಗಳು ಉರುಳಿದಂತೆ ಆಕರ್ಷಣೆ ಕುಗ್ಗುತ್ತದೆ. ಆದರೆ ನಮ್ಮ ಗುಣ, ಸ್ವಭಾವ ಮತ್ತು ವರ್ತನೆ ಹಾಗಲ್ಲ, ಅವು ಯಾವತ್ತೂ ಸುಧಾರಿಸುತ್ತಾ ಹೋಗಬೇಕು. ಅವು ಕುಗ್ಗಲು ಬಿಡಬಾರದು. ನಮ್ಮ ವ್ಯಕ್ತಿತ್ವವನ್ನು ಕಾಪಾಡುವುದು ಅವೇ ಎನ್ನುವುದನ್ನು ಮರೆಯಬಾರದು.

ವಕ್ರತುಂಡೋಕ್ತಿ

ಕೆಲವರು ಶಾಪಿಂಗ್ ಮಾಡುವುದನ್ನು ಬಿಟ್ಟುಬಿಡಬೇಕು ಎಂದು ನಿರ್ಧರಿಸುತ್ತಾರೆ. ಆದರೆ ಕೈಚೆಲ್ಲಿದರು ಎಂದು ಅನಿಸಿಕೊಳ್ಳಲು ಅವರಿಗೆ ಇಷ್ಟವಿರುವುದಿಲ್ಲ.

ಹೃದಯಾಘಾತ: ಜಿಲ್ಲಾ ಜಡ್ಜ್ ಸಾವು

ಕಲಬುರಗಿ: ಕೋರ್ಟ್ ಹಾಲ್‌ಗೆ ತೆರಳುವ ಕೆಲವೇ ನಿಮಿಷಗಳಿಗೂ ಮುನ್ನ ಹೃದಯಾಘಾತದಿಂದ ಹಿರಿಯ ನ್ಯಾಯಾಧೀಶರು ಸಾವನಪ್ಪಿರುವ ಘಟನೆ ಕಲಬುರಗಿಯ ಜಿಲ್ಲಾ ನ್ಯಾಯಾಲಯದಲ್ಲಿ ನಡೆದಿದೆ. ಕಲಬುರಗಿ ಜಿಲ್ಲಾ 3ನೇ ಹಿರಿಯ ಶ್ರೇಣಿ ನ್ಯಾಯಾಧೀಶರಾದ ವಿಶ್ವನಾಥ್ ವಿ ಮೂಗತಿ (44) ಸಾವನ್ನಪ್ಪಿದ ದುರ್ದೈವಿ ನ್ಯಾಯಾಧೀಶರಾಗಿದ್ದಾರೆ. ಕೋರ್ಟ್ ಹಾಲಿಗೆ ತೆರಳುವ ಕೆಲಸವೇ ಸಮಯಕ್ಕೂ ಮೊದಲು ಘಟನೆ ಸಂಭವಿಸಿದೆ. ಕಳೆದ ವಾರ ವಷ್ಟೇ ಕಲಬುರಗಿ ಕೋರ್ಟ್‌ಗೆ ವಿಶ್ವನಾಥ ಅವರು ವರ್ಗಾವ ಣೆಯಾಗಿದ್ದರು.

ಹಜ್ ಯಾತ್ರಿಕರಿದ್ದ ವಿಮಾನದಲ್ಲಿ ಹೊಗೆ

ಲಖನೌ: ಏರ್ ಇಂಡಿಯಾ ವಿಮಾನ ದುರಂತದ ಬೆನ್ನಿಗೇ ಸೌದಿ ಅರೇಬಿಯಾದ ಜೆಡ್ಡಾದಿಂದ ಹೊರಟು ಭಾರತದತ್ತ ಹಜ್ ಯಾತ್ರಿಕರು ಸೇರಿದಂತೆ 242 ಪ್ರಯಾಣಿಕರನ್ನು ಕರೆತರುತ್ತಿದ್ದ ಸೌದಿ ಏರ್‌ಲೈನ್ಸ್ ವಿಮಾನದಲ್ಲಿ ತಾಂತ್ರಿಕ ದೋಷ ಕಾಣಿಸಿಕೊಂಡಿದ್ದು, ವಿಮಾನದ ಚಕ್ರಗಳ ಭಾಗದಲ್ಲಿ ಕಿಡಿ ಉಂಟಾಗಿ ಹೊಗೆ ಹೊರ ಹೊಮ್ಮಿದೆ. ಸುದೈವವಶಾತ್ ವಿಮಾನ ಉತ್ತರ ಪ್ರದೇಶದ ಲಖನೌ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಭಾನುವಾರ ಬೆಳಗ್ಗೆ ಸುರಕ್ಷಿತವಾಗಿ ಇಳಿದಿದೆ. ವಿಮಾನದ ಎಡ ಚಕ್ರದ ಭಾಗದಲ್ಲಿ ಕಿಡಿಯುಂಟಾಗಿ ಹೊಗೆ ಹೊರ ಹೊಮ್ಮಿದೆ. ಹೈಡ್ರಾಲಿಕ್ ವ್ಯವಸ್ಥೆಯ ದೋಷದಿಂದ ಕಿಡಿ ಉಂಟಾಗಿರಬಹುದು ಎಂದು ಹೇಳಲಾಗಿದೆ. ಅಗ್ನಿಶಾಮಕ ದಳ ತಕ್ಷಣವೇ ಸ್ಥಳಕ್ಕೆ ಧಾವಿಸಿ ಕಿಡಿಯನ್ನು ನಿವಾರಿಸಿ ಹೊಗೆ ಹೊರಹೊಮ್ಮುವುದನ್ನು ತಡೆದಿದೆ.

ವಿಮಾನದ 2ನೇ ಬ್ಲ್ಯಾಕ್‌ಬಾಕ್ಸ್ ಪತ್ತೆ

ಅಹಮದಾಬಾದ್: ಏರ್ ಇಂಡಿಯ 171 ಬೋಯಿಂಗ್ ವಿಮಾನದ 2ನೇ ಬ್ಲ್ಯಾಕ್ ಬಾಕ್ಸ್ ಪತ್ತೆಯಾಗಿದೆ. 2ನೇ ಬ್ಲ್ಯಾಕ್‌ಬಾಕ್ಸ್ ವಿಮಾನ ಪತನದ ಕಾರಣ ತಿಳಿಯುವುದಕ್ಕೆ ಪ್ರಮುಖವಾಗಿದ್ದು ಇದರಲ್ಲಿ ವಿಮಾನ ಹಾರಾಟದ ಕೊನೆಯ 2 ಗಂಟೆಗಳ ಸಂಭಾಷಣೆ, ದತ್ತಾಂಶವಿರುತ್ತವೆ. ಕಾಕ್‌ಪಿಟ್‌ನಲ್ಲಿ ವಾಯ್ಸ್ ರೆಕಾರ್ಡರ್ ಮತ್ತು ಹಿಂಬದಿ ಬಾಲದ ಬಳಿ ಡೇಟಾ ರೆಕಾರ್ಡರ್ ಇರುತ್ತದೆ.

ಇರಾನ್–ಇಸ್ರೇಲ್ ಸಂಘರ್ಷ ತೀವ್ರ। ಅಣುಸ್ಥಾವರಗಳ ಮೇಲೆ ದಾಳಿ

ನಿಲ್ಲದ ಯುದ್ಧೋನ್ಮಾದ

ದೆಹಲಿ: ಇಸ್ರೇಲ್ ಮತ್ತು ಇರಾನ್ ನಡುವಿನ ಸಂಘರ್ಷ 4ನೇ ದಿನ ತೀವ್ರ ಸ್ವರೂಪ ಪಡೆದಿದ್ದು ಇಸ್ರೇಲ್‌ನ ಸರಣಿ ಕ್ಷಿಪಣಿ ದಾಳಿಗೆ 224 ಮಂದಿ ಮೃತಪಟ್ಟಿದ್ದು 2 ಸಾವಿರಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ ಎಂದು ಇರಾನ್ ತಿಳಿಸಿದೆ. ಇದೇ ವೇಳೆ ಇರಾನ್ ದಾಳಿಗೆ 24 ನಾಗರಿಕರು ಬಲಿಯಾಗಿದ್ದಾರೆ ಎಂದು ಇಸ್ರೇಲ್ ಹೇಳಿದೆ. ಆದರೆ ಸುದ್ದಿ ಸಂಸ್ಥೆಗಳ ಪ್ರಕಾರ ಎರಡೂ ದೇಶಗಳ ಸಂಘರ್ಷದಲ್ಲಿ 400ಕ್ಕೂ ಹೆಚ್ಚು ಮೃತಪಟ್ಟು 3 ಸಾವಿರಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. ದಾಳಿಯನ್ನು ಮತ್ತಷ್ಟು ತೀವ್ರಗೊಳಿಸಿರುವ ಇಸ್ರೇಲ್ ವಾಯುಪಡೆ ಸೋಮವಾರ ಇರಾನ್‌ನ ವಿಶ್ವದ ಅತಿದೊಡ್ಡ ಅನಿಲ ಸಂಗ್ರಹಗಾರದ ಮೇಲೆ ದಾಳಿ ನಡೆಸಿದೆ. 100 ಪ್ರಮುಖ ಸ್ಥಳಗಳನ್ನು ಗುರಿಯಾಗಿಸಿಕೊಂಡು ನಡೆಸಿದ ವೈಮಾನಿಕ ದಾಳಿಯಲ್ಲಿ ಇರಾನ್‌ನ ನಟಾಂಜ್, ಇಶ್ಫಹಾನ್, ಫೊರ್ಡೋವ್ ಅಣುಕೇಂದ್ರಗಳು ಹಾನಿಗೀಡಾಗಿವೆ. ಇರಾನ್ ವೈಮಾನಿಕ ರಕ್ಷಣೆ ಹಾಗೂ ಕ್ಷಿಪಣಿ ವ್ಯವಸ್ಥೆಯನ್ನು ಧ್ವಂಸಗೊಳಿಸಲಾಗಿದೆ. ಪಶ್ಚಿಮ ಇರಾನ್‌ನಿಂದ ಟೆಹರಾನ್‌ವರೆಗಿನ ವಾಯು ಪ್ರದೇಶದ ಮೇಲೆ ಸಂಪೂರ್ಣ ಹಿಡಿತ ಸಾಧಿಸಲಾಗಿದೆ ಎಂದು ಇಸ್ರೇಲ್ ಸೇನೆ ಹೇಳಿಕೊಂಡಿದೆ.

200ಕ್ಕೂ ಹೆಚ್ಚು ಖಂಡಾಂತರ ಕ್ಷಿಪಣಿ ಬಳಸಿಕೊಂಡು ಇರಾನ್ ಪ್ರತಿದಾಳಿ ನಡೆಸಿದ್ದು, ಇಸ್ರೇಲ್ ರಾಜಧಾನಿಯಲ್ಲೂ ವ್ಯಾಪಕ ಹಾನಿ ಸಂಭವಿಸಿದೆ. ನಮ್ಮ ವಾಯುರಕ್ಷಣಾ ವ್ಯವಸ್ಥೆ ಐರನ್ ಡೋಮ್, 50 ಫೈಟರ್ ಜೆಟ್‌ಗಳು ಇರಾನ್ ದಾಳಿಯನ್ನು ಹಿಮ್ಮೆಟ್ಟಿಸಿವೆ. ಇದುವರೆಗೂ 24 ನಾಗರಿಕರು ಸಾವಿಗೀಡಾಗಿದ್ದಾರೆ. 100 ಜನ ಗಾಯಗೊಂಡಿದ್ದಾರೆ ಎಂದು ಇಸ್ರೇಲ್ ಸೇನಾ ವಕ್ತಾರ ತಿಳಿಸಿದ್ದಾರೆ.

ಬಂಕರ್‌ನಲ್ಲಿ ಅಡಗಿದ ಖಮೇನಿ: ಇದೇ ವೇಳೆ ಇರಾನ್‌ನ ಸರ್ವೋಚ್ಚ ನಾಯಕ ಅಯತೊಲ್ಲಾಅಲಿ ಖಮೇನಿ ಹತ್ಯೆ ಪ್ರಯತ್ನವನ್ನು ತಪ್ಪಿಸಿರುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಿಳಿಸಿದ್ದಾರೆ. ಈಶಾನ್ಯ ಇರಾನ್ ಪ್ರದೇಶದ ಲ್ಲಿ ಭೂಗತವಾಗಿ ನಿರ್ಮಿಸಲಾದ ಅತ್ಯಾಧುನಿಕ ಸುರಕ್ಷಿತ ಬಂಕರ್‌ನಲ್ಲಿ ಖಮೇನಿ ಮತ್ತವರ ಕುಟುಂಬ ಸದಸ್ಯರನ್ನು ಇರಿಸಲಾಗಿದೆ ಎಂದು ವರದಿಯಾಗಿದೆ.

ಲೈವ್‌ದಾಳಿ: ಇರಾನ್‌ನ ಅಧಿಕೃತ ಟಿವಿ ಸಂಸ್ಥೆಯ ಮೇಲೆ ಕ್ಷಿಪಣಿ ದಾಳಿ ಆಗಿದ್ದು ನಿರೂಪಕಿ ಸುದ್ದಿ ವಾಚನ ಮಾಡುತ್ತಿದ್ದ ಸಂದರ್ಭದಲ್ಲಿಯೇ ದಾಳಿ ನಡೆದ ದೃಶ್ಯ ವೈರಲ್ ಆಗಿವೆ.

ಪಾಕ್ ಅಣು ಬಾಂಬ್ ದಾಳಿ?

ಇಸ್ರೇಲ್ ಪರಮಾಣು ಕ್ಷಿಪಣಿಗಳನ್ನು ಬಳಸಿದರೆ, ನಾವು ಪರಮಾಣು ಶಸ್ತ್ರಾಸ್ತ್ರಗಳಿಂದ ದಾಳಿ ಮಾಡುತ್ತೇವೆ ಎಂದು ಪಾಕಿಸ್ತಾನ ನಮಗೆ ತಿಳಿಸಿದೆ ಎಂದು ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್ (ಐಆರ್‌ಜಿಸಿ) ಜನರಲ್ ಮತ್ತು ಇರಾನ್ ರಾಷ್ಟ್ರೀಯ ಭದ್ರತಾ ಮಂಡಳಿಯ ಸದಸ್ಯ ಮೊಹ್ಸೆನ್ ರೆಜೈ ಸಂದರ್ಶನವೊಂದರಲ್ಲಿ ಹೇಳಿದ್ದಾರೆ. ಆದರೆ ಪಾಕಿಸ್ತಾನದ ರಕ್ಷಣಾ ಸಚಿವ ಖವಾಜಾ ಆಸಿಫ್ ಈ ಹೇಳಿಕೆಯನ್ನು ನಿರಾಕರಿಸಿದ್ದು ನಾವು ಅಂತಹ ಯಾವುದೇ ಕೆಲಸಕ್ಕೆ ಮುಂದಾಗಲ್ಲ ಎಂದು ಹೇಳಿದ್ದಾರೆ. ಇಸ್ರೇಲ್ ಕ್ರಮಗಳನ್ನು ಖಂಡಿಸಿರುವ ಪಾಕಿಸ್ತಾನವು ಇರಾನ್‌ಗೆ ಬೆಂಬಲ ವ್ಯಕ್ತಪಡಿಸಿದೆ.

ಅಮೆರಿಕದ ರಾಯಭಾರ ಕಚೇರಿ ಮೇಲೆ ದಾಳಿ

ಇಸ್ರೇಲ್ ದಾಳಿಯ ಹಿಂದೆ ಅಮೆರಿಕದ ಕುಮ್ಮಕ್ಕು ಇದೆ ಎಂದು ಆರೋಪಿಸಿರುವ ಇರಾನ್ ಟೆಲ್ ಅವೀವ್ ನಲ್ಲಿರುವ ಅಮೆರಿಕದ ರಾಯಭಾರ ಕಚೇರಿಯ ಮೇಲೆ ಕ್ಷಿಪಣಿ ದಾಳಿ ನಡೆಸಿದೆ. ಘಟನೆಯ ಬಳಿಕ ರಾಯಭಾರ ಕಚೇರಿ ಮತ್ತು ಅದರ ದೂತಾವಾಸವನ್ನು ಮುಚ್ಚಲಾಗಿದೆ. ಕಚೇರಿಯ ಸಮೀಪದಲ್ಲಿ ಕ್ಷಿಪಣಿ ಅಪ್ಪಳಿಸಿದ ನಂತರ ಸಣ್ಣಪುಟ್ಟ ಹಾನಿ ಸಂಭವಿಸಿದೆ. ಈ ಘಟನೆಯಲ್ಲಿ ಯಾವುದೇ ಅಮೇರಿಕನ್ ಸಿಬ್ಬಂದಿಗೆ ಗಾಯಗಳಾಗಿಲ್ಲ ಎಂದು ಇಸ್ರೇಲಿನ ಅಮೆರಿಕದ ರಾಯಭಾರಿ ಮೈಕ್ ಹಕಬೀ ತಿಳಿಸಿದ್ದಾರೆ.

ಕನ್ನಡಿಗರ ರಕ್ಷಣೆ: ಎಚ್‌ಡಿ ಕುಮಾರಸ್ವಾಮಿ ಭರವಸೆ

ದೆಹಲಿ: ಯುದ್ಧದ ಹಿನ್ನೆಲೆಯಲ್ಲಿ ಇಸ್ರೇಲ್ ನಲ್ಲಿ ಸಂಕಷ್ಟಕ್ಕೆ ಸಿಲುಕಿರುವ ಕನ್ನಡಿಗರೊಂದಿಗೆ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು ವಿಡಿಯೋ ಕರೆ ಮಾಡಿ ಮಾತುಕತೆ ನಡೆಸಿದ್ದು ರಕ್ಷಣೆಯ ಭರವಸೆ ನೀಡಿದ್ದಾರೆ. ಈ ನಡುವೆ ಇರಾನ್‌ನಲ್ಲಿ ಗೌರಿಬಿದನೂರು ತಾಲ್ಲೂಕಿನ ಅಲೀಪುರ ಗ್ರಾಮದ ಏಳು ವಿದ್ಯಾರ್ಥಿಗಳು ಸಿಲುಕಿದ್ದು ತಮ್ಮನ್ನು ರಕ್ಷಣೆ ಮಾಡುವಂತೆ ಪ್ರಧಾನಿ ಮೋದಿ ಹಾಗೂ ಸಿಎಂ ಸಿದ್ದರಾಮಯ್ಯರನ್ನು ಟ್ಯಾಗ್ ಮಾಡಿ ಎಕ್ಸ್ ಪೋಸ್ಟ್ ಮಾಡಿದ್ದಾರೆ. ರಾಜ್ಯವು ಈ ಸಂಬಂಧ ಕೇಂದ್ರಕ್ಕೆ ಪತ್ರ ಬರೆದಿದೆ.

2 ಹಂತದಲ್ಲಿ ಗಣತಿ, ಸ್ವಯಂಗಣತಿಗೂ ಅವಕಾಶ

ಕೇಂದ್ರ ಜನಗಣತಿಗೆ ಅಧಿಸೂಚನೆ ಜಾರಿ

ದೆಹಲಿ: ಕೇಂದ್ರಸರಕಾರ ಬಹು ನಿರೀಕ್ಷಿತ ಜನಗಣತಿ ಮತ್ತು ಜಾತಿಗಣತಿಗೆ ಸೋಮವಾರ ಅಧಿಸೂಚನೆ ಜಾರಿ ಮಾಡಿದೆ. ಲಡಾಖ್‌ನಂತಹ ಹಿಮಾವೃತ ಪ್ರದೇಶದಲ್ಲಿ 2026ರ ಅಕ್ಟೋಬರ್ 1 ಮತ್ತು ದೇಶದ ಉಳಿದ ಭಾಗಗಳಲ್ಲಿ 2027ರ ಮಾರ್ಚ್ 1ರಂದು ಜನಗಣತಿಯೊ ಂದಿಗೆ ಜಾತಿ ಗಣತಿ ಆರಂಭವಾಗಲಿದೆ ಎಂದು ಅಧಿಸೂಚ ನೆಯಲ್ಲಿ ತಿಳಿಸಲಾಗಿದೆ. 1931ರ ಬಳಿಕ ಮೊದಲ ಬಾರಿಗೆ ಜನಗಣತಿಯ ಜೊತೆಗೆ ಜಾತಿಗಣತಿ ನಡೆಯಲಿರುವುದರಿಂದ ಈ ಗಣತಿ ಮಹತ್ವ ಪಡೆದುಕೊಂಡಿದೆ.

ಸುಮಾರು 16 ವರ್ಷಗಳ ನಂತರ 16ನೇ ಜನಗಣತಿಯೊಂದಿಗೆ ಜಾತಿ ಗಣತಿ ನಡೆಸಲು ಕೇಂದ್ರ ಸರಕಾರ ಮುಂದಾಗಿದೆ. ಲಡಾಖ್, ಜಮ್ಮು ಕಾಶ್ಮೀರ, ಹಿಮಾಚಲ ಪ್ರದೇಶ ಮತ್ತು ಉತ್ತರಾಖಂಡದಂತಹ ಹಿಮದಿಂದ ಆವೃ ತವಾದ ಮತ್ತು ದೂರದ ರಾಜ್ಯ/ಕೇಂದ್ರಾಡಳಿತ ಪ್ರದೇಶಗಳಲ್ಲಿ ಅಕ್ಟೋಬರ್ 1, 2026ರಂದು ಗಣತಿ ಪ್ರಾರಂಭಗೊಳ್ಳಲಿದೆ. ಉಳಿದ ರಾಜ್ಯ/ ಕೇಂದ್ರಾಡಳಿತ ಪ್ರದೇಶಗಳಿಗೆ ಮಾರ್ಚ್ 1, 2027 ದಿನಾಂಕವನ್ನು ನಿಗದಿಪಡಿಸಲಾಗಿದೆ.

ಮೊದಲ ಹಂತದಲ್ಲಿ, ಆಸ್ತಿಗಳು, ಕುಟುಂಬದ ಆದಾಯ, ವಸತಿ ಪರಿಸ್ಥಿತಿಗಳು ಮತ್ತು ಸೌಕರ್ಯಗಳಿಗೆ ಸಂಬಂಧಿಸಿದ ಡೇಟಾವನ್ನು ಸಂಗ್ರಹಿಸಲಾಗುತ್ತದೆ. ಈ ಪ್ರಕ್ರಿಯೆ ಹಲವು ತಿಂಗಳ ಕಾಲ ನಡೆಯಲಿದೆ. ಮನೆ ಪಟ್ಟಿ ಪ್ರಕ್ರಿಯೆ 2026ರ ಮಾರ್ಚ್ ಒಂದರಿಂದ ಸೆಪ್ಟೆಂಬರ್ 30ರ ನಡುವೆ ನಡೆಯುವ ನಿರೀಕ್ಷೆ ಇದೆ. ವಿವಿಧ ರಾಜ್ಯಗಳು ತಮ್ಮ ಅನುಕೂಲಕ್ಕೆ ಅನುಗುಣವಾಗಿ, ಮನೆ ಪಟ್ಟಿ ಮಾಡುವ ಸಮಯವನ್ನು ನಿರ್ಧರಿಸುತ್ತವೆ. ಇದಕ್ಕೂ ಮೊದಲು ರಾಜ್ಯಗಳು ಆಡಳಿತಾತ್ಮಕ ಗಡಿಗಳನ್ನು (ಜಿಲ್ಲೆಗಳು) ಗುರುತಿಸು ವುದು, ಪೂರ್ವಸಿದ್ಧತಾ ಮ್ಯಾಪಿಂಗ್ ತಯಾರಿಕೆ ಮತ್ತು ಗಣತಿದಾರರ ತರಬೇತಿ ಸೇರಿದಂತೆ ಅನೇಕ ಪ್ರಕ್ರಿಯೆಗಳು ಇವೆ.

ಎರಡನೇ ಹಂತದ ಗಣತಿಯಲ್ಲಿ ಪ್ರತಿಯೊಬ್ಬ ವ್ಯಕ್ತಿಯ ಬಗ್ಗೆ ಜನಸಂಖ್ಯಾ, ಸಾಮಾಜಿಕ- ಆರ್ಥಿಕ, ಸಾಂಸ್ಕೃತಿಕ ಮತ್ತು ಇತರ ವೈಯಕ್ತಿಕ ಮಾಹಿತಿಯನ್ನು ಸಂಗ್ರಹಿಸಲಾ ಗುತ್ತದೆ. ಮೊದಲ ಬಾರಿಗೆ, ಜಾತಿ ಗಣತಿಯು ಜನಗಣತಿ ಆಯಾಮದ ಭಾಗವಾಗಲಿದೆ. ವ್ಯಕ್ತಿಯ ಹೆಸರು, ವಯಸ್ಸು, ಲಿಂಗ, ಹುಟ್ಟಿದ ದಿನಾಂಕ, ಮನೆಯ ಮುಖ್ಯಸ್ಥರೊಂದಿಗಿನ ಸಂಬಂಧ, ವೈವಾಹಿಕ ಸ್ಥಿತಿ, ಶಿಕ್ಷಣ, ಉದ್ಯೋಗ, ಧರ್ಮ, ಜಾತಿ/ಪಂಗಡ, ಅಂಗವೈಕಲ್ಯ ಸ್ಥಿತಿ ಮತ್ತು ವಲಸೆ ಇತಿಹಾಸವನ್ನು ದಾಖಲಿಸುವ ಮೂಲಕ ಜನರ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗಳ ಮಾಹಿತಿಯ ಬಗ್ಗೆ ಮಾಹಿತಿ ಪಡೆಯಲಾಗುತ್ತದೆ.

ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಸೋಮವಾರ ಹಿರಿಯ ಅಧಿಕಾರಿಗಳೊಂದಿಗೆ ಜನಗಣತಿಯ ಸಿದ್ಧತೆಗಳನ್ನು ಪರಿಶೀಲಿಸಿದರು.

2027ರ ಗಣತಿಯಲ್ಲಿ ಹೊಸದು ಏನು ?

2027ರ ಜನಗಣತಿಯು ಭಾರತದ ಇತಿಹಾಸದಲ್ಲಿ ಮೊದಲ ಡಿಜಿಟಲ್ ಜನಗಣತಿಯಾಗಲಿದ್ದು, ಮೊಬೈಲ್ ಅಪ್ಲಿಕೇಶನ್‌ಗಳ ಬಳಕೆ, ಆನ್‌ಲೈನ್ ಸ್ವಯಂ-ಗಣತಿ ಮತ್ತು ಬಹುತೇಕ ನೈಜ-ಸಮಯದ ಮೇಲ್ವಿಚಾರಣೆಯನ್ನು ಒಳಗೊಂಡಿರುತ್ತದೆ. 1931ರ ನಂತರ ಎಲ್ಲಾ ಸಮುದಾಯಗಳ ಜಾತಿ ಡೇಟಾವನ್ನು ಸಂಗ್ರಹಿಸುವ ಮೊದಲ ಗಣತಿ ಇದು.

ಮೊದಲ ಬಾರಿಗೆ ಸ್ವಯಂ ಗಣತಿಗೆ ಅವಕಾಶ ನೀಡಲು ಸರಕಾರ ಯೋಜಿಸಿದೆ. ಜನರು ಸರಕಾರಿ ಪೋರ್ಟಲ್‌ಗೆ ಲಾಗಿನ್ ಆಗಿ ತಮ್ಮ ವಿವರಗಳನ್ನು ತಾವೇ ಭರ್ತಿ ಮಾಡಬಹುದು ಅಥವಾ ಇದಕ್ಕಾಗಿ ಮೊಬೈಲ್ ಅಪ್ಲಿಕೇಶನ್ ಬಳಸಬಹುದು. ಜನರು ಸ್ವಯಂಗಣತಿ ಮಾಡಿದ ಬಳಿಕ ಅಥವಾ ತಮ್ಮ ಮಾಹಿತಿಯನ್ನು ತಾವೇ ತುಂಬಿದ ನಂತರ, ಸಿಸ್ಟಮ್ ಒಂದು ವಿಶಿಷ್ಟ ಐಡಿಯನ್ನು ಕ್ರಿಯೇಟ್ ಮಾಡುತ್ತದೆ. ಜನಗಣತಿ ಮಾಡುವವರು ಮನೆಗೆ ಬಂದಾಗ ಆ ಐಡಿಯನ್ನು ನೀಡಬೇಕಾಗುತ್ತದೆ. ಗಣತಿದಾರರು ಜನಗಣತಿ ಅಪ್ಲಿಕೇಶನ್‌ನೊಂದಿಗೆ ಮೊದಲೇ ಲೋಡ್ ಮಾಡಲಾದ ಹ್ಯಾಂಡ್‌ಹೆಲ್ಡ್ ಸಾಧನಗಳು ಅಥವಾ ಸ್ಮಾರ್ಟ್‌ಫೋನ್‌ಗಳನ್ನು ಸಹ ಬಳಸಲಿದ್ದಾರೆ.

ಇಲಾಖೆಗೆ ಸಭಾಪತಿ ಪತ್ರ

ನೀತಿ ಶಿಕ್ಷಣ ಜಾರಿಗೆ ಹೊರಟ್ಟಿ ಒತ್ತಾಯ

ಬೆಂಗಳೂರು: ಉತ್ತಮ ನಾಗರಿಕರನ್ನು ರೂಪಿಸಲು ಪ್ರಸ್ತುತ ಶಾಲಾ ಪಠ್ಯಕ್ರಮದಲ್ಲಿ ನೈತಿಕ ಹಾಗೂ ಮೌಲ್ಯ ಶಿಕ್ಷಣ ಅಳವಡಿಕೆ ಕುರಿತು ಅಗತ್ಯ ಕ್ರಮ ವಹಿಸುವಂತೆ ವಿಧಾನ ಪರಿಷತ್ತಿನ ಸಭಾಪತಿ ಬಸವರಾಜ ಹೊರಟ್ಟಿ ಅವರು ಸರಕಾರಕ್ಕೆ ಆಗ್ರಹಿಸಿದ್ದಾರೆ.

ಈ ಸಂಬಂಧ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಪ್ರಧಾನ ಕಾರ್ಯದರ್ಶಿಗೆ ಸುದೀರ್ಘ ಪತ್ರ ಬರೆದಿರುವ ಅವರು, ಭಾರತದಲ್ಲಿ ಮೌಲ್ಯ ಶಿಕ್ಷಣ ಮಹತ್ವವನ್ನು ಪ್ರಜಾಪ್ರಭುತ್ವ ಚಿಂತನೆಯ ಪರಿಕಲ್ಪನೆ ಯೊಂದಿಗೆ ಒತ್ತಿ ಹೇಳಲಾಗುತ್ತದೆ. ಹೀಗಾಗಿ ಶಾಲೆಗಳಲ್ಲಿ ನೈತಿಕತೆ ಮತ್ತು ಮೌಲ್ಯಗಳ ಬೋಧನೆಯ ನಿರ್ಣಾಯಕ ಪಾತ್ರ ಅರ್ಥ ಮಾಡಿಕೊಂಡು ಉತ್ತಮ ವ್ಯಕ್ತಿತ್ವ ನಿರ್ಮಾಣ ಮಾಡಬೇಕಿದೆ ಎಂದು ಅವರು ತಿಳಿಸಿದ್ದಾರೆ.

ಪತ್ರದ ಸಾರಾಂಶ: ಮಕ್ಕಳ ಸರ್ವತೋಮುಖ ಅಭಿವೃದ್ಧಿಯಲ್ಲಿ ನಾಡಿನ ಮುಂದಿನ ಭವಿಷ್ಯ ಅಡಗಿರುತ್ತದೆ. ಹದಿಹರೆಯದ ಮಕ್ಕಳು ಎದುರಿಸುತ್ತಿರುವ ಸಮಸ್ಯೆಗಳು, ಮಕ್ಕಳ ಹಕ್ಕುಗಳ ರಕ್ಷಣೆ ಮತ್ತು ಮಕ್ಕಳು ವ್ಯಸನ ಮುಕ್ತರಾಗಲು ಇತ್ತೀಚೆಗೆ ನಡೆದ ಸಭೆಯಲ್ಲಿ ಅನೇಕ ನಿರ್ಣಯ ಕೈಗೊಳ್ಳಬೇಕಾಗಿದೆ.

→ 4

ರಾಹುಲ್‌ಗೆ ಸವಾರರ ಪತ್ರ

ಬೈಕ್ ಟ್ಯಾಕ್ಸಿ ಸ್ಥಗಿತ ಗ್ರಾಹಕರ ಪರದಾಟ

ಬೆಂಗಳೂರು: ಮಧ್ಯಂತರ ಆದೇಶ ನೀಡಲು ಹೈಕೋರ್ಟ್ ನಿರಾಕರಿಸಿದ ಹಿನ್ನೆಲೆಯಲ್ಲಿ ಸೋಮವಾರದಿಂದ ಕರ್ನಾಟಕದಲ್ಲಿ ಬೈಕ್ ಟ್ಯಾಕ್ಸಿ ಸ್ಥಗಿತಗೊಂಡಿದ್ದು, ಸೋಮವಾರ ಬೆಳಗ್ಗೆಯಿಂದ ಜನರು ಪರದಾಡಿದರು.



ಬೈಕ್ ಟ್ಯಾಕ್ಸಿ ಸೇವೆ ನೀಡಲು ಮಾರ್ಗ ಸೂಚಿ ಜಾರಿಯಾಗುವವರೆಗೂ ಸೇವೆಗಳನ್ನು ಸ್ಥಗಿತಗೊಳಿಸುವ ರಾಜ್ಯ ಸರಕಾರದ ಆದೇಶವನ್ನು ಕರ್ನಾಟಕ ಹೈಕೋರ್ಟ್ ಎತ್ತಿಹಿಡಿದಿತ್ತು. ಬೈಕ್ ಟ್ಯಾಕ್ಸಿ ಕಂಪನಿಗಳು ಕೋರಿದ್ದ ಆರು ವಾರಗಳ ಕಾಲಾವಕಾಶ ಸಹ ಭಾನುವಾರ (ಜೂನ್ 15)ದಂದು ಮುಕ್ತಾಯಗೊಂಡಿದ್ದು, ಮಧ್ಯಂ ತರ ಅನು ಮತಿಯನ್ನೂ ನಿರಾಕರಿಸಲಾಗಿದೆ. ಆದ್ದರಿಂದ ರ‍್ಯಾಪಿಡೋ, ಊಬರ್ ಮತ್ತಿತರ ಕಂಪನಿಗಳು ತಮ್ಮ ಆ್ಯಪ್‌ನಲ್ಲಿ ಬೈಕ್ ಟ್ಯಾಕ್ಸಿ ಸೇವೆಯ ಆಯ್ಕೆಯನ್ನು ತೆಗೆದು ಹಾಕಿವೆ.

ಸೇವೆ ಹಿಂಪಡೆದ ರ‍್ಯಾಪಿಡೋ: ಇದರ ಬೆನ್ನಲ್ಲೇ ಸೇವೆಯನ್ನು ಹಿಂಪಡೆಯುವುದಾಗಿ ರ‍್ಯಾಪಿಡೋ ಘೋಷಿಸಿದೆ. ಬೈಕ್ ಟ್ಯಾಕ್ಸಿಗಳಿಗೆ ಸಂಬಂಧಿಸಿದಂತೆ ರಾಜ್ಯಹೈಕೋರ್ಟ್ ಸೋಮವಾರದಿಂದ ಜಾರಿಗೆ ಬರುವಂತೆ ಆದೇಶವನ್ನು ನೀಡಿದ್ದು, ಈ ಆದೇಶವನ್ನು ನಾವು ಗೌರವಿಸುತ್ತೇವೆ ಎಂದು ರ‍್ಯಾಪಿಡೋ ಘೋಷಿಸಿದೆ.

→ 4

ದ.ಕ, ಉ.ಕದಲ್ಲಿ ಶಾಲೆಗಳಿಗೆ ರಜೆ, ಸಾಂತ್ವನ ಕೇಂದ್ರ

ಮಳೆಗೆ ದ. ಕರ್ನಾಟಕ ತತ್ತರ

ಬೆಂಗಳೂರು: ರಾಜ್ಯದ ಕರಾವಳಿ ಮತ್ತು ಮಲೆನಾಡು ಭಾಗದಲ್ಲಿ ಧಾರಾಕಾರ ಮಳೆ ಮುಂದುವರಿದಿದ್ದು, ಇನ್ನೂ ಎರಡು ದಿನಗಳ ಕಾಲ ಕರಾವಳಿ ಹಾಗೂ ಉತ್ತರ ಒಳನಾಡಿನ ಜಿಲ್ಲೆಗಳಲ್ಲಿ ಅತಿ ಹೆಚ್ಚು ವರ್ಷಧಾರೆ ಸುರಿಯಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಶಿವಮೊಗ್ಗದ ಆಯನೂರು ಸಮೀಪ ಭಾರೀ ಮಳೆಗೆ ಮನೆಗೋಡೆ ಕುಸಿದು ಶತಾಯುಷಿ ವೃದ್ಧೆ ಸೀತಮ್ಮ ಮೃತಪಟ್ಟಿದ್ದಾರೆ. ನಾಲ್ವರು ಗಾಯಗೊಂಡಿದ್ದು ಓರ್ವ ಮಹಿಳೆಗೆ ಗಂಭೀರ ಗಾಯವಾಗಿದೆ

ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳಿಗೆ ರೆಡ್ ಅಲರ್ಟ್ ಘೋಷಿಸಿದ್ದರೆ, ಉತ್ತರ ಕನ್ನಡ, ಬೆಳಗಾವಿ, ಧಾರವಾಡ, ಚಿಕ್ಕಮಗಳೂರು,ಹಾಸನ, ಕೊಡಗು ಜಿಲ್ಲೆಗಳಿಗೆ ಆರೆಂಜ್ ಅಲರ್ಟ್ ಹಾಗೂ ಶಿವಮೊಗ್ಗ, ಹಾವೇರಿ, ವಿಜಯನಗರ, ತುಮಕೂರು, ಬಳ್ಳಾರಿ, ಕೊಪ್ಪಳ, ಗದಗ ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ. ಜೂನ್ 18ರಿಂದ ಮಳೆ ಇಳಿಮುಖವಾಗುವ ಸಾಧ್ಯತೆ ಇದೆ ಎಂದು ರಾಜ್ಯ ಹವಾಮಾನ ಇಲಾಖೆ ಮಾಹಿತಿ ನೀಡಿದೆ.

ಸಾಂತ್ವನ ಕೇಂದ್ರ ಸ್ಥಾಪನೆ: ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ಸೋಮವಾರವೂ ಭಾರೀ ಮಳೆ ಮುಂದುವರಿದಿದೆ. ಮುಂಜಾಗ್ರತಾ ಕ್ರಮವಾಗಿ ಜಿಲ್ಲೆಯಲ್ಲಿ ಸಾಂತ್ವನ ಕೇಂದ್ರ ಸ್ಥಾಪಿಸಲಾಗಿದೆ. ಮಂಗಳೂರು ನಗರಕ್ಕೆ ನೀರುಣಿಸುವ ಬಂಟ್ವಾಳ ತಾಲೂಕಿನ ತುಂಬೆ ವೆಂಟೆಡ್ ಅಣೆಕಟ್ಟೆಯ ನೀರಿನ ಮಟ್ಟ 4.50 ಮೀಟರ್‌ಗೆ ಏರಿಕೆಯಾಗಿದೆ. ಜೀವನದಿಗಳಾದ ನೇತ್ರಾವತಿ, ಕುಮಾರಧಾರಾ ನದಿಗಳು ತುಂಬಿ ಹರಿಯುತ್ತಿವೆ. ಮಳೆಯ ಪರಿಣಾಮ ಜಿಲ್ಲೆಯಲ್ಲಿ ವ್ಯಾಪಕ ಆಸ್ತಿಪಾಸ್ತಿ ನಷ್ಟ ಸಂಭವಿಸಿದೆ. ಭಾರಿ ಮಳೆ ಹಿನ್ನೆಲೆಯಲ್ಲಿ ಜಿಲ್ಲೆಯ ಟ್ರೆಕ್ಕಿಂಗ್ ಮತ್ತು ಜಲಪಾತದ ಪ್ರವಾಸಿ ತಾಣಗಳಿಗೆ ಪ್ರವೇಶ ನಿಷೇಧಿಸಲಾಗಿದೆ. ಕಳೆದ ಮೂರುದಿನಗಳಿಂದ ಶಿವಮೊಗ್ಗ ಜಿಲ್ಲೆಯಲ್ಲಿ ಸುರಿಯುತ್ತಿರುವ ಧಾರಾಕಾರ ಮಳೆಯಿಂದಾಗಿ ತುಂಗಾ ಜಲಾಶಯದ ಒಳ ಮತ್ತು ಹೊರ ಹರಿವು ಹೆಚ್ಚಳವಾಗಿದ್ದು, ತುಂಗಾನದಿ ಮೈದುಂಬಿ ಹರಿಯುತ್ತಿದೆ. ಮಂಜಿನ ನಗರಿ ಮಡಿಕೇರಿಯಲ್ಲಿ ಶೀತ ಗಾಳಿ ಸಹಿತ ಅಧಿಕ ಮಳೆಯಾಗುತ್ತಿದೆ. ಭರ್ತಿಯಾಗುತ್ತಿರುವ ಹಾರಂಗಿ ಜಲಾಶಯದಿಂದ 10 ಸಾವಿರ ಕ್ಯೂಸೆಕ್ ನೀರನ್ನು ನದಿಗೆ ಬಿಡುಗಡೆ ಮಾಡಲಾಗಿದೆ. ಜಿಲ್ಲೆಯ ಹಲವೆಡೆ ಮನೆ ಗೋಡೆ ಕುಸಿದು ಹಾನಿ ಸಂಭವಿಸಿದೆ.



ಮಾರುತಿಗೆ ಜಲದಿಗ್ಬಂಧನ

ಬೆಳಗಾವಿ: ಪಶ್ಚಿಮ ಘಟ್ಟ ಮತ್ತು ಕಣಕುಂಬಿ ಭಾಗದಲ್ಲಿ ಧಾರಾಕಾರವಾಗಿ ಮಳೆ ಆಗುತ್ತಿರುವ ಹಿನ್ನೆಲೆಯಲ್ಲಿ ಮಲಪ್ರಭಾ ನದಿ ದಂಡೆಯ ಮೇಲಿರುವ ಮಾರುತಿ ಮಂದಿರಕ್ಕೆ ಜಲದಿಗ್ಬಂಧನ ಆಗಿದೆ. ಖಾನಾಪುರ ತಾಲೂಕಿನ ಹಬ್ಬಾನಟ್ಟಿ ಗ್ರಾಮದಲ್ಲಿರುವ ಮಾರುತಿ ದೇವಸ್ಥಾನದ ಗರ್ಭಗುಡಿಗೆ ನೀರು ಪ್ರವೇಶಿಸಿದೆ. ಇಲ್ಲಿನ ಆಂಜನೇಯ ಸ್ವಾಮಿ ವಿಗ್ರಹ ಭಾಗಶಃ ಮುಳುಗಡೆಯಾಗಿದ್ದು, ನೀರಲ್ಲೇ ನಿಂತುಕೊಂಡು ಭಕ್ತರು ದೇವರಿಗೆ ಪೂಜೆ ಸಲ್ಲಿಸಿ ದರ್ಶನ ಮಾಡುತ್ತಿದ್ದಾರೆ.

ಸಮಾಚಾರ ಸಣ್ಣದಲ್ಲ

19ರಂದು ನೀರು ಸರಬರಾಜು ವ್ಯತ್ಯಯ

ಬೆಂಗಳೂರು: ಟಿ.ಕೆ.ಹಳ್ಳಿಯಲ್ಲಿ ವಾರ್ಷಿಕ ನಿರ್ವಹಣೆ ಹಾಗೂ ಕಾವೇರಿ 5ನೇ ಹಂತದ ಕೊಳವೆ ಮಾರ್ಗಕ್ಕೆ ಹೊಸ 3000 ಮಿ.ಮೀ ಕೊಳವೆ ಜೋಡಣೆ ಕಾಮಗಾರಿ ಹಿನ್ನೆಲೆ ಜೂ.19ರಂದು ಬೆಳಗ್ಗೆ 6.00 ಗಂಟೆಯಿಂದ 24ಗಂಟೆಗಳ ಕಾಲ ನೀರು ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಮಂಡಳಿ ತಿಳಿಸಿದೆ.

ಟಿ.ಕೆ. ಹಳ್ಳಿಯಲ್ಲಿ ಕಾವೇರಿ 5ನೇ ಹಂತದ ಕೊಳವೆ ಮಾರ್ಗಕ್ಕೆ ಹೊಸ 3000 ಮಿ.ಮೀ. ವ್ಯಾಸ ಕೊಳವೆ ಮಾರ್ಗದ ಜೋಡಣೆ, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮವು ಸೂಚಿಸಿರುವ ವಿದ್ಯುತ್ ಸ್ಥಾವರಗಳ ವಾರ್ಷಿಕ ನಿರ್ವಹಣೆ, ತುರ್ತು ಕಾಮಗಾರಿ ಮತ್ತು ವಿವಿಧ ವಾರ್ಷಿಕ/ ನಿಯಮಿತ ತುರ್ತು ನಿರ್ವಹಣಾ ಕಾಮಗಾರಿಗಳನ್ನು ಕೈಗೆತ್ತಿ ಕೊಳ್ಳಲಾಗುತ್ತಿದ್ದು, ಕಾವೇರಿ ನೀರು ಸರಬರಾಜು ಯೋಜನೆಯ ಹಂತ-1 ರಿಂದ ಹಂತ-5ರವರೆಗಿನ ಜಲರೇಚಕ ಯಂತ್ರಾಗಾರ ಗಳನ್ನು ಸ್ಥಗಿತಗೊಳಿಸ ಲಾಗುವುದು. ಹೀಗಾಗಿ ನೀರಿನ ಪೂರೈಕೆ ವ್ಯತ್ಯಯವಾಗಲಿದೆ ಎಂದು ಮಂಡಳಿ ತಿಳಿಸಿದೆ.

ಲೋಕಾಯುಕ್ತ ಹೆಸರಲ್ಲಿ ಕೋಟ್ಯಂತರ ಲೂಟಿ

ನಿವೃತ್ತ ಹೆಡ್‌ಕಾನ್‌ಸ್ಟೇಬಲ್ ನಿಂಗಪ್ಪ ಬಂಧನ | ಲೋಕಾ ಎಸ್ಪಿ ಶ್ರೀನಾಥ್ ದಿಢೀರ್ ವರ್ಗ

ಬೆಂಗಳೂರು: ಲೋಕಾಯುಕ್ತ ಹೆಸರು ಹೇಳಿ ಸರಕಾರಿ ಅಧಿಕಾರಿಗಳಿಂದ ಕೋಟಿ ಕೋಟಿ ರು. ವಸೂಲಿ ಮಾಡಿರುವ ಕೇಸಲ್ಲಿ ನಿವೃತ್ತ ಹೆಡ್‌ಕಾನ್‌ಸ್ಟೇಬಲ್ ನಿಂಗಪ್ಪ ಬಂಧನವಾಗಿದ್ದಾರೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಲೋಕಾಯುಕ್ತ ತನಿಖಾಧಿಕಾರಿಗಳು ಹಲವು ಸಾಕ್ಷಿಗಳನ್ನು ಕಲೆ ಹಾಕಿದ್ದಾರೆ. ಲೋಕಾಯುಕ್ತ ಎಸ್ಪಿ ಶ್ರೀನಾಥ್ ಜೋಶಿ ಅವರ ಮನೆ ಮೇಲೆ ಲೋಕಾಯುಕ್ತ ತನಿಖಾಧಿಕಾರಿಗಳು ದಾಳಿ ಮಾಡಿದ್ದಾರೆ.

ಶ್ರೀನಾಥ್ ಜೋಶಿ ಅವರು ವಾಸವಿರುವ ಕೋರಮಂಗಲದ ಮನೆಯಲ್ಲಿ 2025ರ ಜೂನ್ 15ರಂದು ಡಿವೈಎಸ್ಪಿ ಶ್ರೀನಿವಾಸ್ ನೇತೃತ್ವದ ತಂಡವು ಶೋಧ ಕಾರ್ಯಾಚರಣೆ ನಡೆಸಿತ್ತು. ಈ ವೇಳೆ ಜೋಶಿ ಅವರು ಮನೆಯಲ್ಲಿ ಇರಲಿಲ್ಲ, ಅವರ ಪುತ್ರ ಮನೆಯಲ್ಲಿದ್ದರು. ಜೋಶಿ ಅವರು ತಲೆಮರೆಸಿಕೊಂಡಿದ್ದಾರೆ. ಶೋಧ ಕಾರ್ಯಾಚರಣೆಯಲ್ಲಿ ಯಾವುದೇ ದಾಖಲೆಗಳು ಲಭ್ಯವಾಗಿಲ್ಲ. ಬಂಧಿತ ಆರೋಪಿ ನಿಂಗಪ್ಪ ಕೋಟ್ಯಂತರ ರು. ವಸೂಲಿ ಮಾಡಿರುವ ಗಂಭೀರ ಆರೋಪಕ್ಕೆ ಸಂಬಂಧಿಸಿದಂತೆ ತನಿಖಾಧಿಕಾರಿಯು ಹಲವು ಪುರಾವೆ ಸಾಕ್ಷ್ಯಗಳನ್ನು ಕಲೆಹಾಕಿದ್ದಾರೆ. ಈ ಪ್ರಕರಣ ಬೆಳಕಿಗೆ ಬರುತ್ತಿದ್ದಂತೆ ಲೋಕಾಯುಕ್ತ ಎಸ್ಪಿ ಶ್ರೀನಾಥ್ ಜೋಶಿ ಅವರನ್ನು ಎತ್ತಂಗಡಿ ಮಾಡಲಾಗಿತ್ತು.

ಆರೋಪಕ್ಕೆ ಗುರಿಯಾಗಿರುವ ಎಸ್ಪಿ ಶ್ರೀನಾಥ ಜೋಶಿ ಅವರೊಂದಿಗೆ ಮುಖ್ಯಮಂತ್ರಿ ಸಚಿವಾಲಯದ ಉನ್ನತ ಅಧಿಕಾರಿಗಳಿಬ್ಬರು ನಿಕಟ ಸಂಪರ್ಕ ಹೊಂದಿದ್ದರು. ಮತ್ತು ಕೆಲವು ಪ್ರಕರಣಗಳಲ್ಲಿ ಅವರು ನೆರವು ಕೋರಿದ್ದರು ಎಂದು ತಿಳಿದುಬಂದಿದೆ. ಈ ನಿಟ್ಟಿನಲ್ಲಿ ತನಿಖೆಯೂ ನಡೆದಿದೆ ಎಂದು ಗೊತ್ತಾಗಿದೆ. ಬಂಧಿತ ಆರೋಪಿ ನಿಂಗಪ್ಪ ಎಂಬಾತನೊಂದಿಗೆ ಹಾಲಿ ರಾಜ್ಯ ಸರಕಾರದ ಪ್ರಭಾವಿ ಮೂವರು ಸಚಿವರ ಆಪ್ತ ಕಾರ್ಯದರ್ಶಿಗಳು ನಿಕಟ ಸಂಪರ್ಕ ಹೊಂದಿದ್ದರು ಎಂದು ಹೇಳಲಾಗಿದೆ.

ನಿಂಗಪ್ಪ ಮೂಲತಃ ಚಿತ್ರದುರ್ಗದ ಹೊಸದುರ್ಗದಲ್ಲಿ ಕಾರ್ಯನಿರ್ವಹಿಸಿದ್ದ. ಆ ಅವಧಿಯಲ್ಲಿಯೇ ಲೋಕಾಯುಕ್ತ ಎಸ್ಪಿ ಶ್ರೀನಾಥ ಜೋಶಿ ಅವರು ಸಹ ಚಿತ್ರದುರ್ಗದಲ್ಲಿ ಕಾರ್ಯನಿರ್ವಹಿಸಿದ್ದರು. ಆಗಿನಿಂದಲೂ ನಿಂಗಪ್ಪ ಸಂಪರ್ಕದಲ್ಲಿದ್ದ ಎಂದು ಹೇಳಲಾಗಿದೆ. ಬಂಧಿತ ಆರೋಪಿ ಹೆಡ್ ಕಾನ್‌ಸ್ಟೇಬಲ್ ನಿಂಗಪ್ಪ ಕರ್ತವ್ಯಕ್ಕೆ ಅನಧಿಕೃತವಾಗಿ ಗೈರು ಹಾಜರಾಗಿದ್ದ. ಹಲವು ಬಾರಿ ತಿಳಿವಳಿಕೆ ನೋಟೀಸ್ ನೀಡಿದ್ದರೂ ಸಹ ಯಾವುದೇ ಪ್ರತಿಕ್ರಿಯೆ ಮತ್ತು ಉತ್ತರವನ್ನೂ ನೀಡಿರಲಿಲ್ಲ. ಹಾಗಾಗಿ ಆತನನ್ನು ಸೇವೆಯಿಂದ ವಜಾಗೊಳಿಸಲಾಗಿತ್ತು. ವಜಾಗೊಂಡ ಆದೇಶವನ್ನೂ ನಿಂಗಪ್ಪ ಪಡೆದಿಲ್ಲ ಎಂದು ಗೊತ್ತಾಗಿದೆ.

ಸರಕಾರಿ ಅಧಿಕಾರಿಗಳನ್ನು ಬೆದರಿಸಿ ಸುಲಿಗೆ

ಕರ್ತವ್ಯದಿಂದ ವಜಾಗೊಂಡ ನಂತರ ನಿಂಗಪ್ಪ ಲೋಕಾಯುಕ್ತ ಹೆಸರಿನಲ್ಲಿ ಅಧಿಕಾರಿಗಳಿಂದ ವಸೂಲಿಗಿಳಿದಿದ್ದ. ಬಳಿಕ ಲೋಕಾಯುಕ್ತ ಪೊಲೀಸರ ಹೆಸರಿನಲ್ಲಿ ಸರಕಾರಿ ಅಧಿಕಾರಿಗಳನ್ನು ಬೆದರಿಸಿ ಸುಲಿಗೆಯನ್ನೇ ವೃತ್ತಿ ಮಾಡಿಕೊಂಡಿದ್ದ. ಈ ಸಂಬಂಧ ಬೆಂಗಳೂರು ಸೇರಿದಂತೆ ರಾಜ್ಯದ ಹಲವು ಠಾಣೆಗಳಲ್ಲಿ ಪ್ರಕರಣಗಳು ದಾಖಲಾಗಿವೆ. ಹಲವು ಬಾರಿ ಜೈಲು ಸೇರಿದ್ದ.

ವಜಾಗೊಂಡಿರುವ ಮುಖ್ಯ ಪೇದೆ ನಿಂಗಪ್ಪ ಎಂಬಾತನು 8ಕ್ಕೂ ಹೆಚ್ಚು ಕೆಎಎಸ್ ಅಧಿಕಾರಿಗಳಿಂದ ಹಣ ವಸೂಲು ಮಾಡಿದ್ದ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖಾಧಿಕಾರಿ ಮುಂದೆ, ಸಚಿವರುಗಳ ಆಪ್ತ ಕಾರ್ಯದರ್ಶಿಗಳು ಹಾಗೂ ಪೊಲೀಸ್ ಅಧಿಕಾರಿಗಳ ಹೆಸರು ಬಾಯಿಬಿಟ್ಟಿದ್ದಾನೆ. ಈ ಹೊತ್ತಿನಲ್ಲಿಯೇ ಆರೋಪಿ ನಿಂಗಪ್ಪನೊಂದಿಗೆ ವಿಧಾನಸೌಧದಲ್ಲಿರುವ ಸಚಿವರುಗಳ ಆಪ್ತ ಕಾರ್ಯದರ್ಶಿಗಳ ಹೆಸರುಗಳನ್ನೂ ಬಹಿರಂಗಪಡಿಸಿದ್ದಾನೆ ಎಂಬುದೂ ಸಹ ತೀವ್ರ ಚರ್ಚೆಗೆ ಗ್ರಾಸವಾಗಿತ್ತು.

ಅಪಘಾತದಲ್ಲಿ ಯುವ ಡ್ಯಾನ್ಸರ್ ಜೋಡಿ ಸಾವು

ಬೆಂಗಳೂರು: ನೃತ್ಯ ಕಾರ್ಯಕ್ರಮದ ಹಣ ತೆಗೆದುಕೊಂಡು ಬರುವಾಗ ಲಾರಿ ಹಾಗೂ ಬೈಕ್ ನಡುವೆ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ಯುವ ಡ್ಯಾನ್ಸರ್ ಜೋಡಿ ಸ್ಥಳದಲ್ಲೇ ಸಾವನ್ನಪ್ಪಿರುವ ದುರ್ಘಟನೆ ನೆಲಮಂಗಲದ ಕುಣಿಗಲ್ ಬೈಪಾಸ್ ಬಳಿ ನಡೆದಿದೆ. ಶ್ರೀರಾಮಪುರದ ಪ್ರಜ್ವಲ್ (22)



ಹಾಗೂ ಸಹನಾ(21) ಮೃತಪಟ್ಟವರು. ಇವರಿಬ್ಬರು ಕೆಲ ಸಿನಿಮಾಗಳಲ್ಲಿಯೂ ಡ್ಯಾನ್ಸರ್‌ಗಳಾಗಿ ಕೆಲಸ ಮಾಡಿದ್ದರು. ಹಲವು ಇವೆಂಟ್‌ಗಳಲ್ಲಿಯೂ ಜೋಡಿಯಾಗಿ ಡ್ಯಾನ್ಸ್ ಪ್ರದರ್ಶನ ನೀಡಿದ್ದರು. ತುಮಕೂರಿನ ಕುಣಿಗಲ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಇಬ್ಬರೂ, ವೇತನ ಪಡೆದುಕೊಂಡು ಬೈಕ್‌ನಲ್ಲಿ ಬೆಂಗಳೂರಿನತ್ತ ಬರುತ್ತಿದ್ದಾಗ ಮಾರ್ಗ ಮಧ್ಯದ ಕುಣಿಗಲ್ ಬೈಪಾಸ್ ಬಳಿ ಅತಿವೇಗವಾಗಿ ಬಂದ ಲಾರಿ ಬೈಕ್‌ಗೆ ಡಿಕ್ಕಿ ಹೊಡೆದು ಘಟನೆ ಸಂಭವಿಸಿದೆ. ನೆಲಮಂಗಲ ಸಂಚಾರ ಠಾಣೆ ಪೊಲೀಸರು ಲಾರಿಸಮೇತ ಚಾಲಕನನ್ನು ವಶಕ್ಕೆ ಪಡೆದಿದ್ದಾರೆ. ಸಂಚಾರ ಪೊಲೀಸರು ಪ್ರಕರಣ ದಾಖಲಿಸಿ ಲಾರಿ ಸಮೇತ ಚಾಲಕ ವಶಕ್ಕೆ ಪಡೆದು ಮುಂದಿನ ತನಿಖೆ ಕೈಗೊಂಡಿದ್ದಾರೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

ಡ್ರಗ್ ಪೆಡ್ಲರ್ಸ್‌ಗಳ ಬಂಧನ

ಬೆಂಗಳೂರು: ಅಂತಾರಾಜ್ಯ ಡ್ರಗ್ ಪೆಡ್ಲರ್ಸ್‌ಗಳನ್ನು ಬಂಧಿಸಿದ ಜಿಗಣಿ ಪೊಲೀಸರು ಆರೋಪಿಗಳಿಂದ 2 ಕೆಜಿ ಗಾಂಜಾ, 84ಗ್ರಾಂ ಎಂಡಿಎಂಎ, 9ಗ್ರಾಂ ಹೆರಾಯಿನ್ ವಶಪಡಿಸಿಕೊಂಡಿದ್ದಾರೆ.

ಅಸ್ಸಾಂ ಮೂಲದ ಬಿಸ್ವಾಜಿತ್ ದಾವ್(24), ಜಾಕೀರ್ ಹುಸೇನ್(24), ಶರ್ಫುದ್ದೀನ್(28) ಮತ್ತು ಒರಿಸ್ಸಾ ಮೂಲದ ಅಕ್ಷಯ್(24) ಬಂಧಿತರು. ತ್ರಿಪುರಾದಲ್ಲಿ ಕುಳಿತು ದಂಧೆ ನಡೆಸುತ್ತಿರುವ ಮತ್ತೊಬ್ಬ ಆರೋಪಿ ಸುಬುಲ್ ರಾಯ್ ದಂಧೆಯ ಕಿಂಗ್ ಪಿನ್. ಉತ್ತರ ಭಾರತದವರಾದ ಆರೋಪಿಗಳೆಲ್ಲರೂ ಪಶ್ಚಿಮ ಬಂಗಾಳದಿಂದ ರೈಲಿನಲ್ಲಿ ಡ್ರಗ್ಸ್ ಅನ್ನು ಬೆಂಗಳೂರಿಗೆ ತಂದು ಸಿನಿಮಾ ಶೈಲಿಯಲ್ಲಿ ವಿತರಣೆ ಮಾಡುತ್ತಿದ್ದರು. ಸುಬುಲ್ ರಾಯ್ ಮಾಲನ್ನು ನೀಡುವ ಮೊದಲೇ ಖಾತೆಗೆ ಹಣ ಹಾಕಿಸಿಕೊಂಡು ಜಮಾ ಖಾತಾರಿಯಾದ ನಂತರ ಮಾಲು ಸಿಗುವ ಲೊಕೇಶನ್ ಕಳಿಸುತ್ತಿದ್ದ. ಲೊಕೇಷನ್ ಸ್ಥಳ ವಿಚಿತ್ರವಾದರೂ ಮಾಲು ಪಕ್ಕಾ ಸಿಗುತ್ತಿತ್ತು. ಯಾವುದಾದರೂ ಮರ, ಕಟ್ಟಡ, ವಿದ್ಯುತ್ ಕಂಬದ ಬಳಿ ಬರಲು ತಿಳಿಸಿ ಸ್ಥಳದಲ್ಲಿನ ಫೋಟೋ ಶೇರ್ ಕಳುಹಿಸುತ್ತಿದ್ದು ಅವನ ಆಣತಿಯಂತೆ ಉಳಿದ ಆರೋಪಿಗಳು ಡ್ರಗ್ಸ್ ಸಪ್ಲೆ ಮಾಡುತ್ತಿದ್ದರು. ಖಚಿತ ಮಾಹಿತಿ ಮೇರೆಗೆ ಆರೋಪಿಗಳನ್ನು ಮಾಲು ಸಹಿತ ಹಿಡಿಯಲಾ ಯಿತು ಎಂದು ಇನ್ಸ್‌ಪೆಕ್ಟರ್ ಮಂಜುನಾಥ್ ತಿಳಿಸಿದರು.

ವಿರಾಮ
ಪ್ರತಿ ಭಾನುವಾರ

BEFORE THE HON'BLE ASSISTANT COMMISSIONER, DODDABALLAPUR SUB DIVISION, BANGALORE RURAL DISTRICT AT BANGALORE
PTCL (DEV). No. 31/2024

BETWEEN: Smt. Rathnamma and others ...**Appellants** -V/s-
AND: Thasildar and others ...**Respondents.**

NOTICE UNDER ORDER 5 RULE 20 READ WITH SECTION 151 OF THE CODE OF CIVIL PROCEDURE.

Respondent No.2: Smt. Munivenkatamma, W/o Late. Muniyappa, Major, R/at A.K. Colony, Vijayapura, DevanahalliTaluk, Bengaluru Rural District. **Respondent No.3: Smt. Thimmakka,** D/o Late Munishamappa, W/o Late Thippaiah, age: Major, R/at at No. 757, Venkatagirikote village, Harijana Colony, ChintamaniTaluk, Chikkaballapura District. **Respondent No.4: Sri. Nanjappa,** S/o. Late. Chikkanna, Major in age, R/at Vijayapura Town, Devanahalli Taluk, Bangalore Rural District. **Respondent No.5: Gowrav. G,** S/o Late. Govindappa, aged about 32 years., **Respondent No.6: Gagan .G,** S/o Late. Govindappa, aged about 29 years, The respondent No 6 and 7 are Residing at Srirampura Village, Yelahanka Hobli, Jakkur post, Bangalore North Taluk, Bangalore- 560064.

Whereas the Appellants is filed a Appeal in PTCL(DEV).No. 31/2024 against the Respondants. For relief of fresh Order in respect of land bearing Old Sy.No. 160, New Sy. No. 432, measuring 2.00 acres guntas, situated at Vijayapura village & Hobli, Devanahalli Taluk, Bangalore Rural District, The above Appeal now stands posted **18-07-2025** at **2:30 P.M** Before the Assistant Commissioner Bangalore Rural District at Doddaballapur, Therefore you is hereby directed to appear before this Hon'ble Court either in person or through advocate to answer the Appellants question, failing which the matter will be heard and disposed on in your absence.

Given under my hand and seal of this Court on this 09-06-2025

By order of the Court, Assistant Commissioner, Doddaballapura Sub-Division, Doddaballapura, Bengaluru Rural District,.

Advocate for Appellants
K. RAGHAVENDRA
No.18, 1st floor, Y.M. Goplappa Building, B.B. Road, Yelahanka, Bangalore- 560064.

ಎಕ್ಸಿಸ್ ಬ್ಯಾಂಕ್ **ಪ್ಲಾಟ್ ಸಂಖ್ಯೆ 41, ಶೇಷಾದ್ರಿ ರಸ್ತೆ, ಆನಂದ್ ರಾವ್ ಸರ್ಕಲ್, ಬೆಂಗಳೂರು –560009**

ತಗಾದೆ ಸೂಚನೆ

ಈ ಕೆಳಗಿನ ಸಾಲಗಾರರು ಬ್ಯಾಂಕಿನಿಂದ ಪಡೆದ ಸಾಲ ಸೌಲಭ್ಯಗಳ ಮೇಲಿನ ಅಸಲು ಮತ್ತು ಬಡ್ಡಿಯನ್ನು ಹಿಂಪಾವತಿಸುವಲ್ಲಿ ವಿಫಲರಾಗಿರುವುದರಿಂದ ಆ ಸೌಲಭ್ಯಗಳು ನಿರ್ವಹಣಾರಹಿತ ಸ್ವತ್ತುಗಳಾಗಿ ಪರಿವರ್ತಿತವಾಗಿವೆ ಎಂದು ಈ ಸೂಚನೆಯ ಮೂಲಕ ತಿಳಿಸಲಾಗಿದೆ. 2002ರ ಹಣಕಾಸು ಆಸ್ತಿಗಳ ಖಾತರೀಕರಣ ಮತ್ತು ಪುನನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯ್ದೆ ವಿಭಾಗ 13(2)ರ ಅಡಿಯಲ್ಲಿ, ಅವರು ಕೊನೆಯದಾಗಿ ತಿಳಿಸಲಾಗಿರುವಂತಹ ತಮ್ಮ ವಿಳಾಸಗಳಿಗೆ ಸೂಚನೆಗಳನ್ನು ಕಳುಹಿಸಲಾಯಿತಾದರೂ, ಅವು ಸ್ವೀಕೃತಗೊಳ್ಳದೇ ಹಿಂದಿರುಗಿರುವುದರಿಂದ ಸಾರ್ವಜನಿಕ ಪ್ರಕಟಣೆಯ ಮೂಲಕ ಅವರಿಗೆ ಈ ಕುರಿತು ತಿಳಿಸಲಾಗುತ್ತಿದೆ.

ಕ್ರ. ಸಂ	ಸಾಲಗಾರರ ಹೆಸರು ಮತ್ತು ವಿಳಾಸ	ಸಾಲಗಾರರು ಅಡಮಾನ ಮಾಡಿರುವ ಆಸ್ತಿಯ ವಿವರ	ನೋಟೀಸ್ ದಿನಾಂಕ	ಬರಬೇಕಾದ ಬಾಕಿ (ರೂ.ಗಳಲ್ಲಿ)
1	**(1) ಶ್ರೀ ಅರುಣ್ ಕುಮಾರ್ ಎ** ಬಿನ್ ಶ್ರೀ ಅಂಜನಪ್ಪ, **(2) ಶ್ರೀಮತಿ ಫ್ಲೋರಾ ಜಾನೆಟ್** ಕೋಂ ಶ್ರೀ ಅರುಣ್ ಕುಮಾರ್, **ಇವರಿಬ್ಬರ ವಿಳಾಸ:** ನಂ.102, 2ನೇ ಕ್ರಾಸ್, ಮಾಕುತಮ್ಮ ಹೊರಮಾವು ಮುಖ್ಯ ರಸ್ತೆ, ಬಾಣಸವಾಡಿ, ಕರ್ನಾಟಕ–560043. **ಮತ್ತೊಂದು ವಿಳಾಸ:** 453, ಫ್ಲಾಟ್ ನಂ.236, 1ನೇ ಮಹಡಿ, ಬ್ಲಾಕ್ ಬಿ, ಧೀರನ್, ನ್ಯೂಯಾರ್ಕ್, ಮೆಡೋಸ್, ಸರ್ವೆ ನಂ.29/2, ಇಗ್ಗೂರು ಗ್ರಾಮ, ಅತ್ತಿಬೆಲೆ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು–560099. **ಮತ್ತೊಂದು ವಿಳಾಸ:** **ಶ್ರೀಮತಿ ಫ್ಲೋರಾ ಜಾನೆಟ್** ಕೋಂ ಶ್ರೀ ಅರುಣ್ ಕುಮಾರ್, ನಂ.90/ಇ, 4ನೇ ಕ್ರಾಸ್, 5ನೇ ಅಡ್ಡ ಮುಖ್ಯರಸ್ತೆ, ವಿಠಲ್ ನಗರ, ಚಾಮರಾಜಪೇಟೆ, ಬೆಂಗಳೂರು, ದಕ್ಷಿಣ, ಚಾಮರಾಜಪೇಟೆ, ಬೆಂಗಳೂರು–560018.	**ಈ ಆಸ್ತಿಯು ಶ್ರೀ ಅರುಣ್ ಕುಮಾರ್ & ಶ್ರೀಮತಿ ಫ್ಲೋರಾ ಜಾನೆಟ್ ರವರ ಹೆಸರಿನಲ್ಲಿದೆ.** **ಷೆಡ್ಯೂಲ್ 'ಎ' ಆಸ್ತಿ: (ಅಪಾರ್ಟ್‌ಮೆಂಟ್‌ನ ಸಂಪೂರ್ಣ ಆಸ್ತಿಯ ವಿವರ):** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ವಾಸಯೋಗ್ಯ ಪರಿವರ್ತಿತ ಭೂಮಿಯ ಸರ್ವೆ ನಂ.29/2, (ದಿನಾಂಕ 11.02.2005ರಂದು ವಿಶೇಷ ಜಿಲ್ಲಾಧಿಕಾರಿ, ಬೆಂಗಳೂರು ಜಿಲ್ಲೆ, ಬೆಂಗಳೂರು ಅವರು ಅಂಗೀಕರಿಸಿರುವ ಆದೇಶ ನಂ.BDS.ALN. (A)SR.424/2004-05ರ ಪ್ರಕಾರ ಇದನ್ನು ಕೃಷಿಯಿಂದ ಕೃಷಿಯೇತರ ವಸತಿ ಉದ್ದೇಶಕ್ಕಾಗಿ ಪರಿವರ್ತಿಸಲಾಗಿದೆ), ವಿಸ್ತೀರ್ಣ 1 ಎಕರೆ 26 ಗುಂಟೆಗಳು, ಈ ಆಸ್ತಿಯು ಇಗ್ಗಲೂರು ಗ್ರಾಮ, ಅತ್ತಿಬೆಲೆ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆಯಲ್ಲಿದೆ ಮತ್ತು ಚಕ್ಕುಬಂದಿ: ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ಚಂದ್ರರೆಡ್ಡಿರವರ ಭೂಮಿ, ಉತ್ತರಕ್ಕೆ: ನಾರಾಯಣಪ್ಪರವರ ಭೂಮಿ, ದಕ್ಷಿಣಕ್ಕೆ: ತಿಮ್ಮರಾಯರೆಡ್ಡಿರವರ ಭೂಮಿ. **ಷೆಡ್ಯೂಲ್ 'ಬಿ' ಆಸ್ತಿ: (ಮೇಲೆ ಇರುವ ಆಸ್ತಿಯನ್ನು ಷೆಡ್ಯೂಲ್ 'ಬಿ' ಆಸ್ತಿ ಎಂದು ಹೇಳಲಾಗಿದೆ):** 285 ಚದರ ಅಡಿ ಅವಿಭಾಜಿತ ಭಾಗ, ಹಕ್ಕು, ಶೀರ್ಷಿಕೆ, ಹಿತಾಸಕ್ತಿ ಮತ್ತು ಮಾಲೀಕತ್ವವನ್ನು ಷೆಡ್ಯೂಲ್ 'ಎ' ಆಸ್ತಿಯಲ್ಲಿ ಒಳಗೊಂಡಿದ್ದು, ವಾಸಯೋಗ್ಯ ಅಪಾರ್ಟ್‌ಮೆಂಟ್ ಕಟ್ಟಡವನ್ನೊಳಗೊಂಡಿದೆ. **ಷೆಡ್ಯೂಲ್ 'ಸಿ' ಆಸ್ತಿ: (ಖರೀದಿದಾರರಿಗೆ ಮಾರಾಟವಾದ ಆಸ್ತಿ):** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ವಾಸಯೋಗ್ಯ ಅಪಾರ್ಟ್‌ಮೆಂಟ್ ನಂ.236, ಈ ಆಸ್ತಿಯು ಮೊದಲನೇ ಮಹಡಿ, ಬ್ಲಾಕ್ ಬಿ ನ್ನು "DHIRAAN NEWYORK MEADOWS", ಎಂದು ಕರೆಯಲ್ಪಡುವ ಅಪಾರ್ಟ್‌ಮೆಂಟ್‌ನ ಕಟ್ಟಡವನ್ನು ಷೆಡ್ಯೂಲ್ 'ಎ' ಆಸ್ತಿಯಲ್ಲಿ ನಿರ್ಮಿಸಲಾಗಿದ್ದು, 900 ಚದರ ಅಡಿ ಸೂಪರ್ ಬಿಲ್ಟ್‌ಅಪ್ ಪ್ರದೇಶವನ್ನೊಳಗೊಂಡಿದೆ, ಎರಡು ಬೆಡ್‌ರೂಮ್, ಹಾಲ್, ಅಡುಗೆ ಮನೆ, ಡೈನಿಂಗ್ ಹಾಲ್‌ನ್ನು ಅಪಾರ್ಟ್‌ಮೆಂಟ್ ಕಟ್ಟಡದಲ್ಲಿ ನಿರ್ಮಿಸಲಾಗಿದೆ ಮತ್ತು ಸಾಮಾನ್ಯ ಪ್ರದೇಶ, ಪ್ಯಾಸೇಜ್, ಲಾಬಿಗಳು, ಲಿಫ್ಟ್‌ಗಳು, ಸ್ಟೇರ್‌ಕೇಸ್ ಮತ್ತು ಇತರ ಸೌಲಭ್ಯಗಳನ್ನೊಳಗೊಂಡಿದೆ ಮತ್ತು ಸ್ಟಿಲ್ಟ್/ತಳಮಹಡಿಯಲ್ಲಿ ಒಂದು ಮುಚ್ಚಿದ ಕಾರು ನಿಲ್ಲಿಸುವ ಸ್ಥಳ ಮತ್ತು ಸಾಮಾನ್ಯ ಪ್ರದೇಶವನ್ನೊಳಗೊಂಡಿದೆ ಮತ್ತು ಚಕ್ಕುಬಂದಿ: ಪೂರ್ವಕ್ಕೆ: ಡಕ್ & ಫ್ಲಾಟ್ ನಂ.237, ಪಶ್ಚಿಮಕ್ಕೆ: ಡಕ್ & ಫ್ಲಾಟ್ ನಂ.235, ಉತ್ತರಕ್ಕೆ: ಪ್ಯಾಸೇಜ್, ದಕ್ಷಿಣಕ್ಕೆ: ಸೆಟ್‌ಬ್ಯಾಕ್. **ಯಾವುದೇ ಮಾಹಿತಿಗಾಗಿ ಶ್ರೀ ಸಂಜಯ್‌ಪ್ರಸಾದ್, ಮೊಬೈಲ್ ನಂ. 9916566630 ರವರನ್ನು ಸಂಪರ್ಕಿಸಿ.**	23.05.2025 ಎನ್‌ಪಿಎ ದಿನಾಂಕ 03.11.2024	**POWER HOME VANILLA BRE** **Loan No.: PHR16880 3635332** **Amount Rs. 24,35,500/-** **ಒಟ್ಟು ಬಾಕಿ ಮೊತ್ತ ರೂ. 19,39,101/– ದಿನಾಂಕ: 14.05.2025 ರಂದು ಇದ್ದಂತೆ**
2	**(1) ಶ್ರೀ ಕೆ ಉತ್ಕರ್ಷ್ ಆನಂದ್** ಬಿನ್ ಶ್ರೀ ಶೈಲೇಂದ್ರ ಕುಮಾರ್ ಸಿನ್ಹಾ, **(2) ಶ್ರೀಮತಿ ಪೂಜಾ ಆನಂದ್** ಕೋಂ ಶ್ರೀ ಕೆ ಉತ್ಕರ್ಷ್ ಆನಂದ್, **ಇವರಿಬ್ಬರ ವಿಳಾಸ:** ಡಿ–912, ಅರೌಟ್ ಮಿಲಾನೊ ಗುಟ್ಟಹಳ್ಳಿ, ನಿರ್ಮಲ ವಿದ್ಯಾಲಯದ ಪಕ್ಕದಲ್ಲಿ ಗುಟ್ಟಹಳ್ಳಿ, ಬೆಂಗಳೂರು–560099. **ಮತ್ತೊಂದು ವಿಳಾಸ:** 117, ವೈಭೌ ಉಪವಾನ್ ಹಂತ–1, ಕರಿಯನಪುರ ಗ್ರಾಮ, ಜಂಗಮಕೋಟೆ, ಬೆಂಗಳೂರು–562102.	**ಈ ಆಸ್ತಿಯು ಶ್ರೀ ಉತ್ಕರ್ಷ ಆನಂದ್ ಮತ್ತು ಶ್ರೀಮತಿ ಪೂಜಾರವರ ಹೆಸರಿನಲ್ಲಿದೆ.** **ಷೆಡ್ಯೂಲ್ 'ಎ' ಆಸ್ತಿ:** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ವಾಸಯೋಗ್ಯ ಪರಿವರ್ತಿತ ಲೇಔಟ್ ಅನ್ನು "Vaibhav Upavan Phase-1" ರಲ್ಲಿ ನಿರ್ಮಿಸಲಾಗಿದ್ದು, ವಾಸಯೋಗ್ಯ ಭೂಮಿಯ ಸರ್ವೆ ನಂ.12/1 (ಹಿಂದೆ ಸರ್ವೆ ನಂ.12 ರ ಭಾಗವಾಗಿತ್ತು), ವಿಸ್ತೀರ್ಣ 3 (ಮೂರು) ಎಕರೆಗಳು 21 (ಇಪ್ಪತ್ತೊಂದು) ಗುಂಟೆಗಳು, (ದಿನಾಂಕ 27/08/2019ರಂದು ಜಿಲ್ಲಾಧಿಕಾರಿ, ಚಿಕ್ಕಬಳ್ಳಾಪುರ ಜಿಲ್ಲೆ ಅವರು ಅಂಗೀಕರಿಸಿರುವ ಅಫಿಶಿಯಲ್ ಮೆಮೊರಂಡಮ್ ಆದೇಶ ನಂ.LAND10020002 ರ ಪ್ರಕಾರ ಇದನ್ನು ಕೃಷಿಯಿಂದ ಕೃಷಿಯೇತರ ವಸತಿ ಉದ್ದೇಶಕ್ಕಾಗಿ ಪರಿವರ್ತಿಸಲಾಗಿದೆ) ಭೂಮಿ ಸರ್ವೆ ನಂ.12/2 (ಹಿಂದೆ ಸರ್ವೆ ನಂ.12ರ ಭಾಗವಾಗಿತ್ತು), ವಿಸ್ತೀರ್ಣ 3 (ಮೂರು) ಎಕರೆಗಳು 38 (ಮೂವತ್ತೆಂಟು) ಗುಂಟೆಗಳು (ದಿನಾಂಕ 27/08/2019ರಂದು ಜಿಲ್ಲಾಧಿಕಾರಿ, ಚಿಕ್ಕಬಳ್ಳಾಪುರ ಜಿಲ್ಲೆ ಅವರು ಅಂಗೀಕರಿಸಿರುವ ಅಫಿಶಿಯಲ್ ಮೆಮೊರಂಡಮ್ ಆದೇಶ ನಂ.LAND10020001 ರ ಪ್ರಕಾರ ಇದನ್ನು ಕೃಷಿಯಿಂದ ಕೃಷಿಯೇತರ ವಸತಿ ಉದ್ದೇಶಕ್ಕಾಗಿ ಪರಿವರ್ತಿಸಲಾಗಿದೆ), ಒಟ್ಟು ವಿಸ್ತೀರ್ಣ 7 ಎಕರೆಗಳು 19 ಗುಂಟೆಗಳು, ಈ ಆಸ್ತಿಯು ಕರಿಯನಪುರ ಗ್ರಾಮ ಜಂಗಮಕೋಟೆ ಹೋಬಳಿ, ಶಿಡ್ಲಘಟ್ಟ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿದೆ ಮತ್ತು ಚಕ್ಕುಬಂದಿ: ಪೂರ್ವಕ್ಕೆ: ಭೂಮಿ ಸರ್ವೆ ನಂ.63, ಪಶ್ಚಿಮಕ್ಕೆ: ಭೂಮಿ ಸರ್ವೆ ನಂ.13 & ಸರ್ವೆ ನಂ.10, ಉತ್ತರಕ್ಕೆ: ಭೂಮಿ ಸರ್ವೆ ನಂ.11, ಸರ್ವೆ ನಂ.7 & ಸರ್ವೆ ನಂ.5, ದಕ್ಷಿಣಕ್ಕೆ: ಭೂಮಿ ಸರ್ವೆ ನಂ.14 & ಸರ್ವೆ ನಂ.62. **ಷೆಡ್ಯೂಲ್ 'ಬಿ' ಆಸ್ತಿ: (ಮಾರಾಟ ಮಾಡಲು ಒಪ್ಪಿಕೊಂಡ ಆಸ್ತಿ):** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಸ್ಥಿರಾಸ್ತಿಯ ವಾಸಯೋಗ್ಯ ನಿವೇಶನ ನಂ.117, ಆಸ್ತಿಯ ಐಡಿ ನಂ.152800601800320585, ಖಾತಾ ನಂ.ಡಿ.ಆರ್.ನಂ.153/117, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: (13.29+12.19)/2 ಮೀಟರ್‌ಗಳು ಮತ್ತು ಉತ್ತರದಿಂದ ದಕ್ಷಿಣಕ್ಕೆ: (9.3+14.6)/2 ಮೀಟರ್‌ಗಳು, ಒಟ್ಟು ವಿಸ್ತೀರ್ಣ 152.24 ಚದರ ಮೀಟರ್‌ಗಳು, "Vaibhav Upavan Phase-1" ಎಂದು ಕರೆಯಲ್ಪಡುವ ವಾಸಯೋಗ್ಯ ಲೇಔಟ್‌ನ್ನು ಷೆಡ್ಯೂಲ್ 'ಎ' ಆಸ್ತಿಯಲ್ಲಿ ನಿರ್ಮಿಸಲಾಗಿದೆ, ಈ ಆಸ್ತಿಯು ಕರಿಯನಪುರ/ಹೆಚ್–ಕ್ರಾಸ್ ಗ್ರಾಮ, ಕಂಬಿಗನಹಳ್ಳಿ ಗ್ರಾಮ ಪಂಚಾಯತ್, ಜಂಗಮನಕೋಟೆ ಹೋಬಳಿ, ಶಿಡ್ಲಘಟ್ಟ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿದೆ ಮತ್ತು ಚಕ್ಕುಬಂದಿ: ಪೂರ್ವಕ್ಕೆ: 12 ಮೀಟರ್‌ಗಳ ರಸ್ತೆ, ಪಶ್ಚಿಮಕ್ಕೆ: ನಿವೇಶನ ನಂ.104 ಮತ್ತು 103, ಉತ್ತರಕ್ಕೆ: ಖಾಸಗಿ ಆಸ್ತಿ, ದಕ್ಷಿಣಕ್ಕೆ: ನಿವೇಶನ ನಂ.116. **ಯಾವುದೇ ಮಾಹಿತಿಗಾಗಿ ಶ್ರೀ ಪ್ರೇಮ್, ಮೊಬೈಲ್ ನಂ. 8880041234 ರವರನ್ನು ಸಂಪರ್ಕಿಸಿ.**	19.05.2025 ಎನ್‌ಪಿಎ ದಿನಾಂಕ 05.05.2025	**POWER HOME VANILLA BRE** **Loan No. PHR1688 07515413** **Amount : Rs. 15,69,507/-** **ಒಟ್ಟು ಬಾಕಿ ಮೊತ್ತ ರೂ. 13,39,445/– ದಿನಾಂಕ: 20.05.2025 ರಂದು ಇದ್ದಂತ**
3	**(1) ಶ್ರೀಮತಿ ರಿಹಾನಾ ಕೋಂ** ಶ್ರೀ ಸಬ್ಬೀರ್ ಅಹಮ್ಮದ್ ಎನ್, **(2) ಶ್ರೀ ಸಬ್ಬೀರ್ ಅಹ್ಮದ್ ಆರ್** ಬಿನ್ ಶ್ರೀ ರಫೀಕ್ ಅಹ್ಮದ್ **ಇವರಿಬ್ಬರ ವಿಳಾಸ:** 107, ಚಿಕ್ಕ ಮಸೀದಿ ರಸ್ತೆ, 8ನೇ ವಾರ್ಡ್, 2ನೇ ವಿಭಾಗ, ಚಾಮರಾಜನಗರ, ಗುಂಡ್ಲುಪೇಟೆ ನಗರ, ಕರ್ನಾಟಕ–571111. **ಮತ್ತೊಂದು ವಿಳಾಸ:** ಮನೆ ನಂ.117, ಮೂಡ L.I.G-1, Hudco, 1ನೇ ಹಂತ, ಕ್ಯಾತಮಾರನಹಳ್ಳಿ ಎಕ್ಸ್‌ಟೆನ್ಷನ್ ನಜರಾಬಾದ್ ಮೊಹಲ್ಲಾ, ಮೈಸೂರು–570010.	**ಈ ಆಸ್ತಿಯು ಶ್ರೀ ರಿಹಾನಾ ಎನ್ ಸಂದ್ ಮತ್ತು ಶ್ರೀ ಸಬ್ಬೀರ್ ಅಹಮದ್ ಆರ್ ರವರ ಹೆಸರಿನಲ್ಲಿದೆ.** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಸ್ಥಿರಾಸ್ತಿಯ ಮೂಡ ಆಸ್ತಿಯ ಮನೆ ನಂ.117 ಎಲ್‌ಐಜಿ–1, ಈ ಆಸ್ತಿಯು 1ನೇ ಹಂತ, ಕ್ಯಾತಮಾರನಹಳ್ಳಿ ಹುಡ್ಕೋ ಎಕ್ಸ್‌ಟೆನ್ಷನ್, ನಜರಾಬಾದ್ ಮೊಹಲ್ಲಾ, ಮೈಸೂರಿನಲ್ಲಿದೆ ಮತ್ತು ಚಕ್ಕುಬಂದಿ: ಪೂರ್ವಕ್ಕೆ: ಆಸ್ತಿ ನಂ.86 ಎಲ್‌ಐಜಿ–1, ಪಶ್ಚಿಮಕ್ಕೆ: ರಸ್ತೆ (9 ಮೀಟರ್), ಉತ್ತರಕ್ಕೆ: ಆಸ್ತಿ ನಂ.116 ಎಲ್‌ಐಜಿ–1, ದಕ್ಷಿಣಕ್ಕೆ: ಆಸ್ತಿ ನಂ.118 ಎಲ್‌ಐಜಿ–1, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 12.25 ಮೀಟರ್‌ಗಳು, ಉತ್ತರದಿಂದ ದಕ್ಷಿಣಕ್ಕೆ: 3.00 ಮೀಟರ್‌ಗಳು, ಒಟ್ಟು 36.75 ಚದರ ಮೀಟರ್‌ಗಳ ನಿವೇಶನ, ಜೊತೆಗೆ ಆರ್.ಸಿ.ಸಿ ಫ್ಲೋರಿಂಗ್‌ನ 2.00 ಚದರ ಬಿಲ್ಟ್ ಪ್ರದೇಶ ಜೊತೆಗೆ ರೆಡ್–ಆಕ್ಸೈಡ್ ಫ್ಲೋರಿಂಗ್ ಮನೆ, ಜೊತೆಗೆ ನೀರು, ವಿದ್ಯುತ್ ಮತ್ತು ಸ್ಯಾನಿಟರಿ ಸೌಲಭ್ಯಗಳನ್ನೊಳಗೊಂಡಿದೆ. **ಯಾವುದೇ ಮಾಹಿತಿಗಾಗಿ ಶ್ರೀ ಸುದರ್ಶನ್ ಮೊಬೈಲ್ ನಂ. 9620703099 ರವರನ್ನು ಸಂಪರ್ಕಿಸಿ.**	16.05.2025 ಎನ್‌ಪಿಎ ದಿನಾಂಕ 06.05.2025	**POWER HOME BRE** **Loan No. PHR01510 5745275** **Amount : Rs.10,17,526/-** **ಒಟ್ಟು ಬಾಕಿ ಮೊತ್ತ ರೂ. 8,15,182/– ದಿನಾಂಕ 14.05.2025 ರಂದು ಇದ್ದಂತೆ**
4	**(1) ಶ್ರೀ ಮೋಹನ ಹೆಚ್ ಆರ್** ಬಿನ್ ಶ್ರೀ ರೇವಣ್ಣ, **(2) ಶ್ರೀಮತಿ ಚಂಪಾ ಎಂ ಶ್ರೀ ಮೋಹನ ಹೆಚ್ ಆರ್, ಇವರಿಬ್ಬರ ವಿಳಾಸ:** ಡಿ.ನಂ.43691, ನೆಲ ಮಹಡಿ ಮಾರುತಿ ಎಕ್ಸ್‌ಟೆನ್ಷನ್, ಹುಣಸೂರು, ಮೈಸೂರು–571105. **ಮತ್ತೊಂದು ವಿಳಾಸ:** ನಂ.5089/10, ಎಸ್ ಜೆ ರಸ್ತೆ ಹುಣಸೂರು, ಮೈಸೂರು–571105. **ಮತ್ತೊಂದು ವಿಳಾಸ:** ನಿವೇಶನ ನಂ.13, ಖಾತಾ ನಂ.1730/13/ಎ, 2ನೇ ವಿಭಾಗ, ವಾರ್ಡ್ ನಂ.22, ಗೋಕುಲ ಎಕ್ಸ್‌ಟೆನ್ಷನ್, ಹುಣಸೂರು ಪಟ್ಟಣ 571129.	**ಈ ಆಸ್ತಿಯು ಶ್ರೀಮತಿ ಚಂಪಾ ರವರ ಹೆಸರಿನಲ್ಲಿದೆ.** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಆಸ್ತಿಯ ಹುಣಸೂರು ಪುರಸಭಾ ಖಾತಾ ಅಸೆಸ್‌ಮೆಂಟ್ ನಂ.1730/13ಎ, ವಾರ್ಡ್ ನಂ.22, ನಿವೇಶನ ನಂ.13, ಈ ಆಸ್ತಿಯು ಗೋಕುಲ ಲೇಔಟ್, 2ನೇ ವಿಭಾಗ, ಹುಣಸೂರು ಟೌನ್‌ನಲ್ಲಿದೆ. ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 37 ಅಡಿ ಮತ್ತು ಉತ್ತದಿಂದ ದಕ್ಷಿಣಕ್ಕೆ: 26½, ಷೆಡ್ಯೂಲ್ ಆಸ್ತಿಯ ಚಕ್ಕುಬಂದಿ: ಪೂರ್ವಕ್ಕೆ: ನಿವೇಶನ ನಂ.14, ಪಶ್ಚಿಮಕ್ಕೆ: 20 ಅಡಿ ರಸ್ತೆ, ಉತ್ತರಕ್ಕೆ: ಖಾಸಗಿ ಆಸ್ತಿ, ದಕ್ಷಿಣಕ್ಕೆ: ನಿವೇಶನ ನಂ.12. **ಯಾವುದೇ ಮಾಹಿತಿಗಾಗಿ ಶ್ರೀ ಸುದರ್ಶನ್ ಮೊಬೈಲ್ ನಂ. 9620703099 ರವರನ್ನು ಸಂಪರ್ಕಿಸಿ.**	16.05.2025 ಎನ್‌ಪಿಎ ದಿನಾಂಕ 11.05.2025	**POWER HOME BRE** **Loan No. PHR0151 01819101** **Amount : Rs.11,92,246/-** **ಒಟ್ಟು ಬಾಕಿ ಮೊತ್ತ ರೂ.11,86,123/– ದಿನಾಂಕ: 14.05.2025 ರಂದು ಇದ್ದಂತೆ**
5	**(1) ಶ್ರೀಮತಿ ರಮಾಮಣಿ ಬಿ ಹೆಚ್** D/o ಹೊಸಲ್ಲಯ್ಯ, **(2) ಶ್ರೀಮತಿ ದಾಕ್ಷಾಯಿಣಿ ಬಿ ಹೆಚ್** D/o ಹೊಸಲ್ಲಯ್ಯ, **ಇವರಿಬ್ಬರ ವಿಳಾಸ:** 674/3, ದೇವಣ್ಣ ಕಟ್ಟಡ, 6ನೇ ಕ್ರಾಸ್, 2ನೇ ಮೇನ್, ದೇವಾಂಗರ್ ಸೋಮೇಶ್ವರಪುರಂ, ತುಮಕೂರು, ಕರ್ನಾಟಕ–572102. **ಮತ್ತೊಂದು ವಿಳಾಸ:** ನಿವೇಶನ ನಂ.28, ವಾರ್ಡ್ ನಂ.23, ಉಪ್ಪರಹಳ್ಳಿ, ತುಮಕೂರು, ಕರ್ನಾಟಕ–572103.	**ಈ ಆಸ್ತಿಯು ಶ್ರೀಮತಿ ರಮಾಮಣಿ ಬಿ ಹೆಚ್‌ರವರ ಹೆಸರಿನಲ್ಲಿದೆ.** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಆಸ್ತಿಯ ನಿವೇಶನ ನಂ.28, ಖಾತಾ ನಂ.6711/1797, ಪಿಐಡಿ ನಂ.21195, ಸರ್ವೆ ನಂ.18/3ರಲ್ಲಿ ನಿರ್ಮಿಸಲಾಗಿದೆ, ವಿಸ್ತೀರ್ಣ 2 ಎಕರೆ 6 ಗುಂಟೆಗಳು, ಈ ಆಸ್ತಿಯು ಉಪ್ಪಾರಹಳ್ಳಿ ಲೇಔಟ್, ತುಮಕೂರಿನಲ್ಲಿದ್ದು, ಪ್ರಸ್ತುತ ಟಿಎಂಪಿ ವ್ಯಾಪ್ತಿಯಲ್ಲಿದೆ. ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 30 ಅಡಿ, ಉತ್ತರದಿಂದ ದಕ್ಷಿಣಕ್ಕೆ: 40 ಅಡಿ ಮತ್ತು ಚಕ್ಕುಬಂದಿ: ಪೂರ್ವಕ್ಕೆ: ಕೃಷ್ಣಯ್ಯ ಶೆಟ್ಟಿರವರ ನಿವೇಶನ ನಂ.27, ಪಶ್ಚಿಮಕ್ಕೆ: ನಾಗೇಶರಾಯರವರ ನಿವೇಶನ ನಂ.29, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ: ಕನ್ಸರ್ವೆನ್ಸಿ. **ಯಾವುದೇ ಮಾಹಿತಿಗಾಗಿ ಶ್ರೀ ಸುದರ್ಶನ್ ಮೊಬೈಲ್ ನಂ. 9620703099 ರವರನ್ನು ಸಂಪರ್ಕಿಸಿ.**	16.05.2025 ಎನ್‌ಪಿಎ ದಿನಾಂಕ 11.05.2025	**POWER HOME BRE** **Loan No. PHR0227 02681711** **Amount : Rs.12,12,440/-** **ಒಟ್ಟು ಬಾಕಿ ಮೊತ್ತ ರೂ. 9,99,553/– ದಿನಾಂಕ: 14.05.2025 ರಂದು ಇದ್ದಂತೆ.**
6	**(1) ಶ್ರೀ ಜವಾದ್‌ಶರೀಫ್** ಬಿನ್ ಶ್ರೀ ಅಬ್ದುಲ್‌ಮಜೀದ್, **(2) ಶ್ರೀಮತಿ ತಾಹೆರಾಬೇಗಂ** ಕೋಂ ಶ್ರೀ ಅಬ್ದುಲ್‌ಮಜೀದ್, **ಇವರಿಬ್ಬರ ವಿಳಾಸ:** ನಂ.631, 7ನೇ ಕ್ರಾಸ್, ಅಲ್ ಕರೀಮ್ ಶಾಲೆ, ರಾಜೀವ್ ನಗರ, ಮೈಸೂರು, ಕರ್ನಾಟಕ–570019. **ಮತ್ತೊಂದು ವಿಳಾಸ:** ಮನೆ ನಂ.384 LIG BWC aziz Sait nagara ನಜರ್‌ಬಾದ್ ಮೊಹಲ್ಲಾ, ಕೆಎಂ ಹಳ್ಳಿ ಎಕ್ಸ್‌ಟೆನ್ಷನ್, ಮೈಸೂರು–570019.	**ಈ ಆಸ್ತಿಯು ಶ್ರೀ ಜವಾದ್‌ಶರೀಫ್ ಮತ್ತು ಶ್ರೀಮತಿ ತಾಹೆರಾಬೇ ರವರ ಹೆಸರಿನಲ್ಲಿದೆ.** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಸ್ಥಿರಾಸ್ತಿಯ ವಾಸಯೋಗ್ಯ ಕೆಹೆಚ್‌ಬಿ ಆಸ್ತಿಯ ಮನೆಯ ನಂ.384 ಎಲ್‌ಐಜಿ, ಈ ಆಸ್ತಿಯು ಬೀಡಿ ಕಾರ್ಮಿಕರ ಕಾಲೋನಿ, ಅಜೀಜ್ ಸೈಟ್ ನಗರ, ಕೆ.ಎಂ. ಹಳ್ಳಿ ಎಕ್ಸ್‌ಟೆನ್ಷನ್, ನಜರಾಬಾದ್ ಮೊಹಲ್ಲಾ, ಮೈಸೂರಿನಲ್ಲಿದೆ ಮತ್ತು ಚಕ್ಕುಬಂದಿ: ಪೂರ್ವಕ್ಕೆ: 9 ಮೀಟರ್‌ಗಳ ರಸ್ತೆ, ಪಶ್ಚಿಮಕ್ಕೆ: ಆಸ್ತಿಯ ನಂ.381, ಉತ್ತರಕ್ಕೆ: ಆಸ್ತಿಯ ನಂ.383, ದಕ್ಷಿಣಕ್ಕೆ: ಆಸ್ತಿಯ ನಂ.385. ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 12.20 ಮೀಟರ್‌ಗಳು, ಉತ್ತರದಿಂದ ದಕ್ಷಿಣಕ್ಕೆ: 6.50 ಮೀಟರ್‌ಗಳು, ಒಟ್ಟು 79.3 ಚದರ ಮೀಟರ್‌ಗಳ ನಿವೇಶನ, ಜೊತೆಗೆ ನಿರ್ಮಿತ ಪ್ರದೇಶ 2.30+4.00 6.30 ಚದರಗಳು ಆರ್.ಸಿ.ಸಿ. ರೂಫಿಂಗ್ ಜೊತೆಗೆ ಮೊಸಾಯಿಕ್ ಫ್ಲೋರಿಂಗ್ ಮನೆಯನ್ನೊಳಗೊಂಡಿದೆ ಜೊತೆಗೆ ನೀರು, ವಿದ್ಯುತ್ ಮತ್ತು ಸ್ಯಾನಿಟರಿ ಸೌಲಭ್ಯಗಳನ್ನೊಳಗೊಂಡಿದೆ. **ಯಾವುದೇ ಮಾಹಿತಿಗಾಗಿ ಶ್ರೀ ಪ್ರೇಮ್, ಮೊಬೈಲ್ ನಂ. 8880041234 ರವರನ್ನು ಸಂಪರ್ಕಿಸಿ.**	23.05.2025 ಎನ್‌ಪಿಎ ದಿನಾಂಕ 09.12.2023	**POWER HOME BRE** **Loan No. PHR0151 07418181** **Amount : Rs.25,00,000/-** **ಒಟ್ಟು ಬಾಕಿ ಮೊತ್ತ ರೂ. 31,84,374/–**
7	**(1) ಶ್ರೀ ಮೊಹಮ್ಮದ್ ತಬ್ರೇಜ್** ಬಿನ್ ಶ್ರೀ ಅಬ್ದುಲ್ ಸಮದ್ **(2) ಶ್ರೀಮತಿ ಅನಾ ಆಯೇಷಾ** ಕೋಂ ಶ್ರೀ ಮೊಹಮ್ಮದ್ ತಬ್ರೇಜ್, **ಇವರಿಬ್ಬರ ವಿಳಾಸ:** ತವಕ್ಕಲ್ ಮಂಜಿಲ್, ಪೆರ್ಮುದೆ ಪೋಸ್ಟ್, ಪೆರ್ಮುದೆ, ಮಂಗಳೂರು, ಕರ್ನಾಟಕ–574509. **ಮತ್ತೊಂದು ವಿಳಾಸ:** ಫ್ಲಾಟ್‌ನ ಮರುಮಾರಾಟ ನಂ.2–5ಎ2ಬಿ ಮತ್ತು 2–5ಎ, ಅಪಾರ್ಟ್‌ಮೆಂಟ್ ನಂ.703, 7ನೇ ಮಹಡಿ, ಡಿ ನಂ.25–2–174/110, ಕ್ಲಾಸಿಕ್ ಹಾರ್ಮನಿ ಬಿ–ಬ್ಲಾಕ್, ಕಂಕನಾಡಿ ಗ್ರಾಮ, ಬಾಲಿಕಾಶ್ರಮ ರಸ್ತೆ, ಮಂಗಳೂರು–575001.	**ಈ ಆಸ್ತಿಯು ಶ್ರೀ ಮೊಹಮ್ಮದ್ ತಬ್ರೇಜ್ ಪ್ರತಿನಿಧಿಸುವವರು ಶ್ರೀಮತಿ ಅನಾ ಆಯೇಶಾ ಕೋಂ ಶ್ರೀ ಮೊಹಮ್ಮದ್ ತಬ್ರೇಜ್ ಪ್ರತಿನಿಧಿಸಿದ್ದಾರೆರವರ ಹೆಸರಿನಲ್ಲಿದೆ.** **ಷೆಡ್ಯೂಲ್ 'ಎ':** ಎಲ್ಲಾ ಹಕ್ಕು ಬಾಧ್ಯತೆಗಳನ್ನೊಳಗೊಂಡಿರುವ ಕೃಷಿಯೇತರ ಸ್ಥಿರಾಸ್ತಿಯು ಕಂಕನಾಡಿ ಗ್ರಾಮ, ಮಂಗಳೂರು ತಾಲ್ಲೂಕಿನಲ್ಲಿದ್ದು, ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿದೆ ಮತ್ತು ಮಂಗಳೂರು ನಗರ ಉಪ ನೋಂದಣಿ ಜಿಲ್ಲೆ, ದಕ್ಷಿಣ ಕನ್ನಡದ ವ್ಯಾಪ್ತಿಯಲ್ಲಿದೆ ಮತ್ತು comprised in: Item No.1: R.S. No.: 2/5A, Kissam: Converted, Extent: 0.50, Portion: Whole, Item No.2: R.S. No.: 2/5A2B, Kissam: Converted, Extent: 0.45, Portion: Northern. ಜೊತೆಗೆ ಎಲ್ಲಾ ಹಕ್ಕು ಬಾಧ್ಯತೆಗಳನ್ನೊಳಗೊಂಡಿದೆ ಮತ್ತು ಚಕ್ಕುಬಂದಿ: ಉತ್ತರಕ್ಕೆ: ಬಾಲಿಕಾಶ್ರಮ ರಸ್ತೆ, ದಕ್ಷಿಣಕ್ಕೆ: ಚರಂಡಿ, ಪಶ್ಚಿಮಕ್ಕೆ: ಎಸ್.ಡಿ.ಲೇನ್, ಪೂರ್ವಕ್ಕೆ: ಲೇನ್ & ಸರ್ವೆ ಲೇನ್. **ಷೆಡ್ಯೂಲ್ 'ಬಿ': ಆಸ್ತಿಯ ವಿವರ:** ವಾಸಯೋಗ್ಯ ಅಪಾರ್ಟ್‌ಮೆಂಟ್ ನಂ.703, ಸಿಟಿ ಕಾರ್ಪೊರೇಷನ್ ಡೋರ್ ನಂ.25–2–174/110, ವಿಸ್ತೀರ್ಣ 1285 ಚದರ ಅಡಿ ಸೂಪರ್ ಬಿಲ್ಟ್‌ಅಪ್ ಪ್ರದೇಶ, ಜೊತೆಗೆ ಏಳನೇ ಮಹಡಿಯಲ್ಲಿ ವಿಶೇಷ ಕಾರ್ ಪಾರ್ಕಿಂಗ್ ಸ್ಲಾಟ್ ನಂ.12, CLASSIQUE HARMONY ಎಂದು ಕರೆಯಲ್ಪಡುವ ಅಪಾರ್ಟ್‌ಮೆಂಟ್ ಕಟ್ಟಡದಲ್ಲಿ ತಳಮಹಡಿಯನ್ನೊಳಗೊಂಡಿದೆ ಜೊತೆಗೆ 0.934% ಅವಿಭಾಜಿತ ಭಾಗ, ಹಕ್ಕು, ಶೀರ್ಷಿಕೆ ಮತ್ತು ಹಿತಾಸಕ್ತಿಯನ್ನು ಷೆಡ್ಯೂಲ್ "ಎ" ಆಸ್ತಿಯಲ್ಲಿ ಒಳಗೊಂಡಿದೆ. ಜೊತೆಗೆ ಅವಿಭಾಜಿತ ಹಿತಾಸಕ್ತಿ, ಸಾಮಾನ್ಯ ಪ್ರದೇಶ, ಸೌಲಭ್ಯಗಳನ್ನು ಅಪಾರ್ಟ್‌ಮೆಂಟ್‌ನಲ್ಲಿ ನಿರ್ಮಿಸಲಾಗಿದೆ. **ಯಾವುದೇ ಮಾಹಿತಿಗಾಗಿ ಶ್ರೀ ಪ್ರೇಮ್ ಮೊಬೈಲ್ ನಂ. 8880041234 ರವರನ್ನು ಸಂಪರ್ಕಿಸಿ.**	23.05.2025 ಎನ್‌ಪಿಎ ದಿನಾಂಕ 11.05.2023	**POWER HOME** **Loan No. PHR0077 00258242** **Amount Rs. 30,00,000/-** **ಒಟ್ಟು ಬಾಕಿ ಮೊತ್ತ ರೂ. 1,02,391/– ದಿನಾಂಕ: 14.05.2025 ರಂದು ಇದ್ದಂತೆ.**
8	**(1) ಶ್ರೀ ಆನಂದ್ ಗೋಗೆ** ಬಿನ್ ಶ್ರೀ ಅಶೋಕ್ ಗೋಗೆ, **(2) ಶ್ರೀಮತಿ ಸುಂದರ್ ಗೋಗೆ** ಕೋಂ ಶ್ರೀ ಆನಂದ್ ಗೋಗೆ, ಇವರಿಬ್ಬರ ವಿಳಾಸ: ಗಣೇಶ್ ನಗರ, ಹುಲ್ಸೂರು ತಾಲ್ಲೂಕು, ಹುಲ್ಸೂರು, ಬೀದರ್ ನಗರ–ಹುಲ್ಸೂರು, ಬೀದರ್–585416. **ಮತ್ತೊಂದು ವಿಳಾಸ:** ಪ್ಲಾಟ್ ನಂ.40, ಜಿಪಿ ನಂ.8/108, ಆರ್‌ಎಸ್ ನಂ.317/ಸಿವಿ, ಪಿಐಡಿ 150600202900201878, ಜಿರೋಬ್ ಕಾಲೋನಿ, ಹುಲ್ಸೂರು ಬಸವಕಲ್ಯಾಣ–585416.	**ಈ ಆಸ್ತಿಯು ಶ್ರೀಮತಿ ಸುಂದರ್ ಗೋಗೆ ರವರ ಹೆಸರಿನಲ್ಲಿದೆ.** ಪ್ಲಾಟ್ ನಂ.40, ಜಿಪಿ ನಂ.8/108, ಆಸ್ತಿಯ ಐಡಿ ನಂ.150600202900201878, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 60' ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ: 30' ಅಡಿ, ಒಟ್ಟು 1800 ಚದರ ಅಡಿ, ಈ ಆಸ್ತಿಯು ಎನ್‌ಎ ಭೂಮಿ ಸರ್ವೆ ನಂ.317/ಸಿವಿ, ಜಿರೋಬಿ ಕಾಲೋನಿ, ಹುಲ್ಸೂರು ತಾಲ್ಲೂಕು, ಬಸವಕಲ್ಯಾಣ ಜಿಲ್ಲೆ, ಬೀದರ್‌ನಲ್ಲಿದೆ. ಚಕ್ಕುಬಂದಿ: ಪೂರ್ವಕ್ಕೆ: ಕಾಲೋನಿ ರಸ್ತೆ, ಪಶ್ಚಿಮಕ್ಕೆ: ವ್ಯವಸಾಯ ಭೂಮಿ, ಉತ್ತರಕ್ಕೆ: ಪ್ಲಾಟ್ ನಂ.41, ದಕ್ಷಿಣಕ್ಕೆ: ಪ್ಲಾಟ್ ನಂ.39. **ಯಾವುದೇ ಮಾಹಿತಿಗಾಗಿ ಶ್ರೀ ಸುದರ್ಶನ್ ಮೊಬೈಲ್ ನಂ. 9620703099 ರವರನ್ನು ಸಂಪರ್ಕಿಸಿ.**	16.05.2025 ಎನ್‌ಪಿಎ ದಿನಾಂಕ 06.05.2025	**POWER HOME IMGC BRE** **Loan No. PHR0342 06517396** **Amount : Rs.15,34,026/-** **ಒಟ್ಟು ಬಾಕಿ ಮೊತ್ತ ರೂ.15,70,024/– ದಿನಾಂಕ: 14.05.2025 ರಂದು ಇದ್ದಂತೆ.**
9	**(1) ಶ್ರೀ ರಮೇಶ್ ದೇವಸಿ** ಬಿನ್ ಶ್ರೀ ಹರಚಂದ್ರಂ, C/o ಹರಚಂದ್ರಂ, ಬಿ ಬಿ ರಸ್ತೆ, ಹೊಸ ಬಸ್ ನಿಲ್ದಾಣದ ಹತ್ತಿರ, ಶಹಾಪುರ, ಯಾದಗಿರಿ, ಗುಲ್ಬರ್ಗ–585224. **(2) ಶ್ರೀ ನೌಶಾದ್ ಖಾನ್** ಬಿನ್ ಶ್ರೀ ಮೋ ಅಲಿ C/o ಶ್ರೀ ಮೋ ಅಲಿ, ವಾರ್ಡ್ ನಂ.12, ಗುತ್ತಿಪೇತ್, ವಿದ್ಯಾ ನಗರ ಶಹಾಪುರ–585223. **ಮತ್ತೊಂದು ವಿಳಾಸ: (1) ಶ್ರೀ ರಮೇಶ್ ದೇವಸಿ** ಬಿನ್ ಶ್ರೀ ಹರಚಂದ್ರಮ್, **(2) ಶ್ರೀ ನೌಶಾದ್ ಖಾನ್** ಬಿನ್ ಶ್ರೀ ಮೋ ಅಲಿ, ಪ್ಲಾಟ್ ನಂ.19 1/45, 19–1/46, ಆದಿಲ್ ಪೋರ್ ಟಿಜಿ ಶಹಾಪೋರ್ ಜಿಲ್ಲೆ, ಯಾದಗೀರ್ ಆದಿಲ್ಪುರ್ ಶಹಾಪುರ–585223.	**ಈ ಆಸ್ತಿಯು ಶ್ರೀ ರಮೇಶ್ ದೇವಸಿ ರವರ ಹೆಸರಿನಲ್ಲಿದೆ.** ವಾರ್ಡ್ ನಂ.17, ಪ್ಲಾಟ್ ನಂ.52 513 190, ತೆರೆದ ಪ್ಲಾಟ್ ನಂ.19–1 (36), ಸಿಎಂಸಿ ನಂ.52–513–190, ಹಳೆ ನಂ.19–1/45, 66–47, ವಿಸ್ತೀರ್ಣ 12X9=108 ಚದರ ಮೀಟರ್‌ಗಳು. ಈ ಆಸ್ತಿಯು ಭೂಮಿ ಸರ್ವೆ ನಂ.8, ಶಹಪುರ, ಯಾದಗಿರಿ ಜಿಲ್ಲೆಯಲ್ಲಿದೆ, ಚಕ್ಕುಬಂದಿ: ಪೂರ್ವಕ್ಕೆ: 514–10ನೇ ಲೇಔಟ್‌ನ ಮುಖ್ಯರಸ್ತೆ, ಪಶ್ಚಿಮಕ್ಕೆ: 52–513–190, ಉತ್ತರಕ್ಕೆ: 52–514–537, ದಕ್ಷಿಣಕ್ಕೆ: 52–514–533. **ಯಾವುದೇ ಮಾಹಿತಿಗಾಗಿ ಶ್ರೀ ಸುದರ್ಶನ್ ಮೊಬೈಲ್ ನಂ. 9620703099 ರವರನ್ನು ಸಂಪರ್ಕಿಸಿ.**	16.05.2025 ಎನ್‌ಪಿಎ ದಿನಾಂಕ 06.05.2025	**POWER HOME BRE** **Loan No. PHR0342 08715400** **Amount : Rs.29,91,283/-** **ಒಟ್ಟು ಬಾಕಿ ಮೊತ್ತ ರೂ. 21,60,996/– ದಿನಾಂಕ: 14.05.2025 ರಂದು ಇದ್ದಂತೆ.**
10	**(1) ಶ್ರೀ ಮೊಯಿನುದ್ದೀನ್** ಬಿನ್ ಶ್ರೀ ಮೊಹಮ್ಮದ್ ಯಾನಸಾ, **(2) ಶ್ರೀಮತಿ ಪರವೀನಾ** ಬಿನ್ ಶ್ರೀ ಮೊಯಿನುದ್ದೀನ್, **ಇವರಿಬ್ಬರ ವಿಳಾಸ:** ನೇತಾಜಿ ನಗರ, ತೆಪ್ಪು ರಸ್ತೆ, ದೇವದುರ್ಗ, ರಾಯಚೂರು–584111. **ಮತ್ತೊಂದು ವಿಳಾಸ:** ಪ್ಲಾಟ್ ನಂ.29, ಸಾಯಿ ಬಾಬಾ ಕಾಲೋನಿ ನಗರ, HZP ದರ್ಗಾ, ಸಹಾಪುರ ರಸ್ತೆ, HZP ದರ್ಗಾ ಹತ್ತಿರ, ರಾಯಚೂರು, ಕರ್ನಾಟಕ–584111.	**ಈ ಆಸ್ತಿಯು ಶ್ರೀ ಮೊಯಿನುದ್ದೀನ್ ರವರ ಹೆಸರಿನಲ್ಲಿದೆ.** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ನಿವೇಶನ ನಂ.86 ಎಲ್‌ಐಜಿ (ಇ ಆಸ್ತಿಯ ನಂ.4194876056), (ಹಳೆ ಆಸ್ತಿ ನಂ.7–1–78/ಕೆಹೆಚ್‌ಬಿ/ಎಲ್‌ಐಜಿ86), ಈ ಆಸ್ತಿಯು 100 ಹೆಚ್‌ಪಿ ಕೆಹೆಚ್‌ಬಿ ಕಾಲೋನಿ, ನಾಗರಗುಂಡ ಗ್ರಾಮ, ದೇವದುರ್ಗಾ, ರಾಯಚೂರು, ಸರ್ವೆ ನಂ.184, 203, 211, 201 & 213ರಲ್ಲಿದೆ, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 12.00 ಮೀಟರ್‌ಗಳು, ಉತ್ತರದಿಂದ ದಕ್ಷಿಣಕ್ಕೆ: 9.00 ಮೀಟರ್‌ಗಳು ಮತ್ತು ಒಟ್ಟು ವಿಸ್ತೀರ್ಣ 108.00 ಚದರ ಮೀಟರ್‌ಗಳು, ರಾಯಚೂರು ಜಿಲ್ಲೆಯ ವ್ಯಾಪ್ತಿಯಲ್ಲಿದೆ ಮತ್ತು ಚಕ್ಕುಬಂದಿ: ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ಕೆಹೆಚ್‌ಬಿ ಗಡಿ, ಉತ್ತರಕ್ಕೆ: ನಿವೇಶನ ನಂ.ಎಲ್‌ಐಜಿ 87, ದಕ್ಷಿಣಕ್ಕೆ: ನಿವೇಶನ ನಂ.ಎಲ್‌ಐಜಿ 85. **ಯಾವುದೇ ಮಾಹಿತಿಗಾಗಿ ಶ್ರೀ ಸುದರ್ಶನ್ ಮೊಬೈಲ್ ನಂ. 9620703099 ರವರನ್ನು ಸಂಪರ್ಕಿಸಿ.**	16.05.2025 ಎನ್‌ಪಿಎ ದಿನಾಂಕ 11.05.2025	**POWER HOME BRE** **Loan No. PHR03420 7265594** **Amount : Rs.13,42,243/-** **ಒಟ್ಟು ಬಾಕಿ ಮೊತ್ತ ರೂ.13,65,528/– ದಿನಾಂಕ: 14.05.2025 ರಂದು ಇದ್ದಂತೆ.**
11	**(1) ಶ್ರೀ ಆರ್ ವೀರೇಶ್ ಶ್ರೀ ಮಲ್ಲಯ್ಯ, (2) ಶ್ರೀಮತಿ ಪುಷ್ಪಾವತಿ ಆರ್** ಕೋಂ ಶ್ರೀ ಆರ್ ವೀರೇಶ್, **ಇವರಿಬ್ಬರ ವಿಳಾಸ:** 9–13–59, ಮಡ್ಡಿಪೇಟೆ ಗಾವೋಲ್ ರಸ್ತೆ, ರಾಯಚೂರು, ಕರ್ನಾಟಕ–584101. **ಮತ್ತೊಂದು ವಿಳಾಸ:** ಓಪನ್ ಪ್ಲಾಟ್ ನಂ.16, ಪುರಸಭೆ ನಂ.01 11–50/1/16, ಸರ್ವೆ ನಂ.100, ಎಕ್ಲಾಸ್‌ಪುರ ಗ್ರಾಮ, ಇಂದಿರಾ ಗಾಂಧಿ ಎಸ್‌ಸಿ ಕ್ಯಾಸ್ಟ್ ಇಎಂಪಿ ಹೌಸಿಂಗ್ ಕೋ–ಆಪರೇಟಿವ ಸೊಸೈಟಿ ಲಿಮಿಟೆಡ್, ರಾಯಚೂರು–584101.	**ಈ ಆಸ್ತಿಯು ಶ್ರೀ ಆರ್ ವೀರೇಶ್‌ರವರ ಹೆಸರಿನಲ್ಲಿದೆ.** ಪ್ಲಾಟ್ ನಂ.16, ಸಿಎಂಸಿ ನಂ.1–11–50/1/16, ವಿಸ್ತೀರ್ಣ 9.00 ಮೀಟರ್‌ಗಳು x 12.00 ಮೀಟರ್‌ಗಳು, ಸರ್ವೆ ನಂ.100, ಎಕ್ಲಾಸ್‌ಪುರ ಗ್ರಾಮ, ರಾಯಚೂರು ತಾಲ್ಲೂಕು & ಜಿಲ್ಲೆಯಲ್ಲಿದೆ "ಇಂದಿರಾ ಗಾಂಧಿ ಪರಿಶಿಷ್ಟ ಜಾತಿ ನೌಕರರ ವಸತಿ ಸಹಕಾರ ಸಂಘ ನಿಯಮಿತ. ರಾಯಚೂರು" ದೇವರಾಜ್ ಅರಸ್ ಕಾಲೋನಿಯ ಪಕ್ಕದಲ್ಲಿದೆ. ಚಕ್ಕುಬಂದಿ: (ಮಾರಾಟ ಪತ್ರ ನಂ.10555/2011–12 ರ ಪ್ರಕಾರ). ಪೂರ್ವಕ್ಕೆ: ಪ್ಲಾಟ್ ನಂ.17, ಪಶ್ಚಿಮಕ್ಕೆ: ಪ್ಲಾಟ್ ನಂ.15, ಉತ್ತರಕ್ಕೆ: ಪ್ಲಾಟ್ ನಂ.29, ದಕ್ಷಿಣಕ್ಕೆ: 9 ಮೀಟರ್‌ಗಳು ಅಗಲದ ರಸ್ತೆ. **ಯಾವುದೇ ಮಾಹಿತಿಗಾಗಿ ಶ್ರೀ ಸಂಜಯ್ ಪ್ರಸಾದ್ ಮೊಬೈಲ್ ನಂ. 9916566630 ರವರನ್ನು ಸಂಪರ್ಕಿಸಿ.**	23.05.2025 ಎನ್‌ಪಿಎ ದಿನಾಂಕ 31.05.2023	**POWER HOME BRE** **Loan No. PHR0342 06401427** **Amount : Rs.19,68,518/-** **ಒಟ್ಟು ಬಾಕಿ ಮೊತ್ತ ರೂ.19,18,595/– ದಿನಾಂಕ: 14.05.2025 ರಂದು ಇದ್ದಂತೆ.**
12	**(1) ಶ್ರೀ ಆರ್ ಹಿದಾಯತ್ ಉಲ್ಲಾ** ಬಿನ್ ಶ್ರೀ ಮಹಮ್ಮದ್ ಯೂಸುಫ್ ರಾಜನಹಳ್ಳಿ, **(2) ಶ್ರೀಮತಿ ಆಯೇಷಾ ಸಿದ್ದಿಖಾ** ಕೋಂ ಶ್ರೀ ಆರ್ ಹಿದಾಯತ್ ಉಲ್ಲಾ, **ಇವರಿಬ್ಬರ ವಿಳಾಸ:** ನಂ.36, ಹಳ್ಳದಕೆರೆ ಎಸ್‌ಎಂಯು ಸ್ಕೂಲ್ ಹರಿಹರ, ಯುಆರ್‌ಡಿಯು ಶಾಲೆಯ ಹತ್ತಿರ, ದಾವಣಗೆರೆ, ಕರ್ನಾಟಕ–577601. **ಮತ್ತೊಂದು ವಿಳಾಸ:** ನಂ.26, ಮರು ಸರ್ವೆ ನಂ.43, ದೊಡ್ಡಬೂದಿಹಾಳ್ ವಿಭಾಗ, ಜೆಜೆ ಕಾನ್ವೆಂಟ್ ಹತ್ತಿರ, ಬಿಸ್ಮಿಲ್ಲಾ ಲೇಔಟ್, ದಾವಣಗೆರೆ, ಕರ್ನಾಟಕ–577006.	**ಈ ಆಸ್ತಿಯು ಶ್ರೀ ಆರ್ ಹಿದಾಯತ್ ಉಲ್ಲಾ ರವರ ಹೆಸರಿನಲ್ಲಿದೆ.** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ವಾಸಯೋಗ್ಯ ಆರ್‌ಸಿಸಿ ನಿರ್ಮಿತ ಕಟ್ಟಡದ ಆಸ್ತಿಯ ನಿವೇಶನ ನಂ.71, ವಿಸ್ತೀರ್ಣ 20x30 ಅಡಿ, ಈ ಆಸ್ತಿಯು ದೊಡ್ಡಬೂದಿಹಾಳ್ ಗ್ರಾಮ, ದಾವಣಗೆರೆ ತಾಲ್ಲೂಕಿನಲ್ಲಿದೆ. ಚಕ್ಕುಬಂದಿ: ಪೂರ್ವಕ್ಕೆ: ನಿವೇಶನ ನಂ.70, ಪಶ್ಚಿಮಕ್ಕೆ: ನಿವೇಶನ ನಂ.72, ಉತ್ತರಕ್ಕೆ: 20 ಅಡಿ ರಸ್ತೆ, ದಕ್ಷಿಣಕ್ಕೆ: ಇತರರಿಗೆ ಸೇರಿದ ಆಸ್ತಿ. **ಯಾವುದೇ ಮಾಹಿತಿಗಾಗಿ ಶ್ರೀ ಸುದರ್ಶನ್ ಮೊಬೈಲ್ ನಂ. 9620703099 ರವರನ್ನು ಸಂಪರ್ಕಿಸಿ.**	16.05.2025 ಎನ್‌ಪಿಎ ದಿನಾಂಕ 06.05.2025	**POWER HOME BRE** **Loan No. PHR0129 06118307** **Amount Rs. 30,08,000/-** **ಒಟ್ಟು ಬಾಕಿ ಮೊತ್ತ ರೂ.30,08,219/– ದಿನಾಂಕ: 14.05.2025 ರಂದು ಇದ್ದಂತೆ.**
13	**(1) ಶ್ರೀಮತಿ ಕಟ್ಟಾ ಸುನಿತಾ ಕೆ ಕೋಂ** ಶ್ರೀ ನಾಗೇಶ್ವರ ರಾವ್ ಕಟ್ಟಾ, **(2) ಶ್ರೀ ಕಟ್ಟಾ ನಾಗೇಶ್ವರ ರಾವ್** ಬಿನ್ ಶ್ರೀ ರಾಮಪ್ಪ ಕಟ್ಟಾ, **ಇವರಿಬ್ಬರ ವಿಳಾಸ:** ಟಿ.ಎಸ್.ನಂ.13, ಎ1/2, 3ನೇ ಕ್ರಾಸ್, ವಿದ್ಯಾನಗರ, ಕಂಟೋನ್ಮೆಂಟ್, ಎನ್‌ಆರ್ ಚರ್ಚ್, ಬಳ್ಳಾರಿ, ಕರ್ನಾಟಕ–583104. **ಮತ್ತೊಂದು ವಿಳಾಸ:** ನಿವೇಶನ ನಂ.54, ಬುಕ್ ನಂ.9, ಇನ್ನಾರೆಡ್ಡಿ ಕಾಲೋನಿ, ಇನ್‌ಫಾಂಟ್ರಿ ರಸ್ತೆ ಕಂಟೋನ್ಮೆಂಟ್, ಬಳ್ಳಾರಿ, ಕರ್ನಾಟಕ–583104.	**ಈ ಆಸ್ತಿಯು ಶ್ರೀ ಆರ್ ಹಿದಾಯತ್ ಉಲ್ಲಾ ರವರ ಹೆಸರಿನಲ್ಲಿದೆ.** ಸ್ಥಿರಾಸ್ತಿ ಆರ್.ಸಿ.ಸಿ. ಮನೆಯ ಆಸ್ತಿ ಜೊತೆಗೆ ತೆರೆದ ನಿವೇಶನವು ಬಳ್ಳಾರಿ ಜಿಲ್ಲೆ ಮತ್ತು ಉಪಜಿಲ್ಲೆಯಲ್ಲಿದ್ದು, ಬಳ್ಳಾರಿ ಕಾರ್ಪೊರೇಷನ್ ವಾರ್ಡ್ ನಂ.30, ಸಿ.ಎಂ.ಸಿ. ವಾರ್ಡ್ ನಂ.25, ಸಿ.ಟಿ.ಎಸ್. ವಾರ್ಡ್ ನಂ.22, ಬ್ಲಾಕ್ ನಂ.9, ಅಸೆಸ್‌ಮೆಂಟ್ ನಂ.40182/54/50057, ಟಿ.ಎಸ್. ನಂ.74/1/54, ವಾಸಯೋಗ್ಯ ಆರ್.ಸಿ.ಸಿ. ಮನೆಯ ನಿವೇಶನ ನಂ.54, ಈ ಆಸ್ತಿಯು ಎನ್ನಾರೆಡ್ಡಿ ಕಾಲೋನಿಯಲ್ಲಿದೆ, ಆರ್.ಸಿ.ಸಿ ಮನೆ ಜೊತೆಗೆ ತೆರೆದ ನಿವೇಶನದ ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 40.00 ಅಡಿ, ಉತ್ತರದಿಂದ ದಕ್ಷಿಣಕ್ಕೆ: 60.00 ಅಡಿ, ನಿವೇಶನದ ಒಟ್ಟು ವಿಸ್ತೀರ್ಣ 2,400 ಚದರ ಅಡಿಗಳು ಮತ್ತು ನೆಲ ಮಹಡಿಯಲ್ಲಿರುವ ಆರ್.ಸಿ.ಸಿ. ಮನೆಯ ಪ್ಲಿಂತ್ ಪ್ರದೇಶದ ವಿಸ್ತೀರ್ಣ 1,242 ಚದರ ಅಡಿಗಳು, ಮೊದಲನೇ ಮಹಡಿಯಲ್ಲಿರುವ ಆರ್.ಸಿ.ಸಿ. ಮನೆಯ ಪ್ಲಿಂತ್ ಪ್ರದೇಶದ ವಿಸ್ತೀರ್ಣ 0,180 ಚದರ ಅಡಿಗಳು (ಆರ್.ಸಿ.ಸಿ. ಮನೆಯ ಒಟ್ಟು ಬಿಲ್ಟ್‌ಅಪ್ ಪ್ರದೇಶದ ವಿಸ್ತೀರ್ಣ 1,422 ಚದರ ಅಡಿಗಳು), ಚಕ್ಕುಬಂದಿ: ಪೂರ್ವಕ್ಕೆ: 30 ಅಡಿ ಅಗಲದ ರಸ್ತೆ, ಪಶ್ಚಿಮಕ್ಕೆ: ಪ್ಲಾಟ್ ನಂ.53, ಉತ್ತರಕ್ಕೆ: ಪ್ಲಾಟ್ ನಂ.55, ದಕ್ಷಿಣಕ್ಕೆ: 30 ಅಡಿ ಅಗಲದ ರಸ್ತೆ. ಪೂರ್ತಿ ಆಸ್ತಿಯು ಚಕ್ಕುಬಂದಿಯಲ್ಲಿದೆ. **ಯಾವುದೇ ಮಾಹಿತಿಗಾಗಿ ಶ್ರೀ ಪ್ರೇಮ್, ಮೊಬೈಲ್ ನಂ. 8880041234 ರವರನ್ನು ಸಂಪರ್ಕಿಸಿ.**	19.05.2025 ಎನ್‌ಪಿಎ ದಿನಾಂಕ 02.05.2025	**POWER HOME** **Loan No. Ph26701 00142383** **Amount Rs. 41,00,000/-** **ಒಟ್ಟು ಬಾಕಿ ಮೊತ್ತ ರೂ.20,01,791/– ದಿನಾಂಕ: 20.05.2025 ರಂದು ಇದ್ದಂತ**

ದಯವಿಟ್ಟು ಗಮನಿಸಿ, ಮೇಲೆ ತಿಳಿಸಿದ ಕಾಯಿದೆಯ ಸೆಕ್ಷನ್–13 ರ ಉಪ–ಸೆಕ್ಷನ್ 13 ರಲ್ಲಿ ಉಲ್ಲೇಖಿಸಿರುವಂತೆ, ಈ ಸೂಚನೆಯಲ್ಲಿ ಉಲ್ಲೇಖಿಸಲಾದ ಭದ್ರತೆಯ ಅಡಿಯಲ್ಲಿ ಹೇಳಲಾದ ಯಾವುದೇ ಸ್ವತ್ತುಗಳನ್ನು ನಮ್ಮ ಬ್ಯಾಂಕಿನ ಪೂರ್ವ ಲಿಖಿತ ಅನುಮತಿಯಿಲ್ಲದೆ ನೀವು ಮಾರಾಟ, ಗುತ್ತಿಗೆ ಅಥವಾ ಇತರ ರೀತಿಯಲ್ಲಿ ವರ್ಗಾಯಿಸಬಾರದು.

ಸೆಕ್ಯೂರಿಟೈಜೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್ 2002ರ ಸೂಚನೆಯು ಆದೇಶಾನುಸಾರವಾಗಿ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಮೇಲೆ ಉಲ್ಲೇಖಿಸಲಾದ ಸಾಲಗಾರರು ಮತ್ತು/ಅಥವಾ ಖಾತರಿದಾರರು (ಎಲ್ಲೆಲ್ಲಿ ಅನ್ವಯವಾಗುತ್ತದೆಯೋ) ಈ ಮೇಲೆ ತಿಳಿಸಲಾದ ಬಾಕಿ ಉಳಿದಿರುವ ಮೊತ್ತವನ್ನು ಭವಿಷ್ಯದ ಬಡ್ಡಿ ಮತ್ತು ಅನ್ವಯವಾಗುವ ಶುಲ್ಕಗಳೊಂದಿಗೆ, ಈ ಸೂಚನೆ ಪ್ರಕಟಣೆಗೊಂಡ ದಿನಾಂಕದಿಂದ 60 ದಿನಗಳೊಳಗಾಗಿ ಪಾವತಿಸುವಂತೆ ಸಲಹೆ ನೀಡಲಾಗಿದ್ದು, ವಿಫಲವಾದಲ್ಲಿ ಸೂಚನಾ ತಾರೀಖಿನಿಂದ 60 ದಿನಗಳ ಅವಧಿ ಮುಕ್ತಾಯದ ನಂತರ, 2002ರ ಹಣಕಾಸು ಆಸ್ತಿಗಳ ಖಾತರೀಕರಣ ಮತ್ತು ಪುನನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯ್ದೆಯ ನಿಬಂಧನೆಗನುಸಾರವಾಗಿ, ಮುಂದಿನ ಕ್ರಮಗಳನ್ನು ಕೈಗೊಳ್ಳಲಾಗುವುದು.

ಮೇಲೆ ತಿಳಿಸಲಾದ ಕಾಯ್ದೆಯ ವಿಭಾಗ 13(13), ಉಪ–ವಿಭಾಗ(2)ರ ಅಡಿಯಲ್ಲಿ ಉಲ್ಲೇಖಿಸಿರುವಂತೆ, ಯಾವುದೇ ಒಬ್ಬ ಸಾಲಗಾರ ಈ ಸೂಚನೆಯು ತಲುಪಿದ ನಂತರ, ಭದ್ರತಾ ಸಾಲ ನೀಡಿದವರ ಲಿಖಿತ ಪೂರ್ವಾನುಮತಿ ಪಡೆಯದೇ, ಸೂಚನೆಯಲ್ಲಿ ಪ್ರಸ್ತಾಪಿಸಲಾಗಿರುವ ಭದತಾ ಆಸ್ತಿಗಳನ್ನು ಮಾರಾಟದ ಮೂಲಕ ವರ್ಗಾಯಿಸುವುದಾಗಲಿ, ಭೋಗ್ಯಕ್ಕೆ ನೀಡುವುದಾಗಲಿ ಅಥವಾ ಬೇರೆ ರೀತಿಯಲ್ಲಿ ಬಳಸಿಕೊಳ್ಳುವುದಾಗಲಿ ಮಾಡುವಂತಿಲ್ಲ ಎಂಬುದನ್ನು ದಯವಿಟ್ಟು ಗಮನಿಸತಕ್ಕದ್ದು.

ಆಕ್ಟ್‌ನ ಸೆಕ್ಷನ್ 13ರ ಸಬ್ ಸೆಕ್ಷನ್ (8)ರಲ್ಲಿನ ನಿಯಮಗಳ ಅನುಸಾರ ಭದ್ರತಾ ಸ್ವತ್ತುಗಳನ್ನು ಹಿಂದಕ್ಕೆ ಪಡೆದುಕೊಳ್ಳಲು ಕಾಲಾವಕಾಶವನ್ನು ನೀಡಲಾಗುವುದು ಎಂದು ಈ ಮೂಲಕ ಸಾಲಗಾರರ ಗಮನಕ್ಕೆ ತರಲಾಗುವುದು. ಸಾರ್ವಜನಿಕ ಹರಾಜಿಗಾಗಿ ಅಥವಾ ಭೋಗ್ಯ, ಹಂಚಿಕೆ ಅಥವಾ ಮಾರಾಟದ ಮೂಲಕ ಭದ್ರತಾ ಸ್ವತ್ತುಗಳ ವರ್ಗಾವಣೆಗಾಗಿ ಸಾರ್ವಜನಿಕ ಅಥವಾ ಖಾಸಗಿ ಒಪ್ಪಂದಕ್ಕೆ ಉಲ್ಲೇಖಗಳನ್ನು ಅಥವಾ ಟೆಂಡರ್ ಆಹ್ವಾನಿಸುವ ಸೂಚನಾ ಪ್ರಕಟಣೆಯ ದಿನಾಂಕಕ್ಕಿಂತ ಮೊದಲು ಯಾವುದೇ ಸಮಯದಲ್ಲಿ ಸಾಲಗಾರರು, ಸುರಕ್ಷಿತ ಸಾಲದಾತರ ಖರ್ಚು, ವೆಚ್ಚ ಮತ್ತು ಶುಲ್ಕಗಳನ್ನು ಒಳಗೊಂಡಂತೆ ಎಲ್ಲಾ ಬಾಕಿಯನ್ನು ಪಾವತಿಸಿ, ಭದ್ರತಾ ಸ್ವತ್ತುಗಳನ್ನು ಬಿಡಿಸಿಕೊಳ್ಳಬಹುದು.

ದಿನಾಂಕ : 10.06.2025
ಸ್ಥಳ : ಬೆಂಗಳೂರು

ಸಹಿ/– ಅಧಿಕೃತ ಅಧಿಕಾರಿ
ಎಕ್ಸಿಸ್ ಬ್ಯಾಂಕ್ ಲಿಮಿಟೆಡ್

ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ, ಕನಕಪುರ
ಸಿ.ಮಿಸ್.ನಂ. 846/2024

ಅರ್ಜಿದಾರರು: ಶ್ರೀ ಯೋಗನರಸಿಂಹಯ್ಯ ಬಿನ ಲೇಟ್ ಹೊನ್ನಯ್ಯ ವಯಸ್ಸು 61 ವರ್ಷ ವಾಸ: ಊಖಲು 203, 2ನೇ ಮಹಡಿ ನಂ. 177, ಕೆ.ಹೆಚ್.ಬಿ ಕಾಲೋನಿ 3ನೇ ಹಂತ, ನೇತಾಜಿ ಲೇಔಟ್ ಕೆ. ಎಸ್. ಟೌನ್, ಬೆಂಗಳೂರು–ದಕ್ಷಿಣ ಕೆಂಗೇರಿ ಬೆಂಗಳೂರು–5600600

ವಿರುದ್ಧ

ಪ್ರತಿ ಅರ್ಜಿದಾರರು: 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್ ಹಾರೋಹಳ್ಳಿ , ಹಾರೋಹಳ್ಳಿ ತಾಲ್ಲೂಕು, ರಾಮನಗರ ಜಿಲ್ಲೆ 3. ಗ್ರಾಮ ಲೆಕ್ಕಾಧಿಕಾರಿಗಳು, ಲಿಂಗೇಗೌಡನದೊಡ್ಡಿ ಗ್ರಾಮ, ದೊಡ್ಡಮುದವಾಡಿ ವೃತ್ತ, ಹಾರೋಹಳ್ಳಿ ಹೋಬಳಿ, ಹಾರೋಹಳ್ಳಿ ತಾಲ್ಲೂಕು, ರಾಮನಗರ ಜಿಲ್ಲೆ.

ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, ಅರ್ಜಿದಾರರ ತಾಯಿಯವರಾದ ಜವರಮ್ಮ ಕೋಂ ಲೇಟ್ ಹೊನ್ನಯ್ಯ ರವರು, ರಾಮನಗರ ಜಿಲ್ಲೆ, ಹಾರೋಹಳ್ಳಿ ತಾಲ್ಲೂಕು, ಹಾರೋಹಳ್ಳಿ ಹೋಬಳಿ, ಲಿಂಗೇಗೌಡನದೊಡ್ಡಿ ಗ್ರಾಮದಲ್ಲಿ ದಿನಾಂಕ 05.09.1964 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, 19.07.2025ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರೂ ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥ ಗೊಳಿಸಲಾಗುವುದು.

2025ರ ಜೂನ್ 12ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ ಪ್ರಧಾನ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕನಕಪುರ

ಅರ್ಜಿದಾರರ ಪರ ವಕೀಲರು
ಸಿ.ಸುರೇಶ್, ವಕೀಲರು
ಸ್ಥಳ : ಕನಕಪುರ
ದಿನಾಂಕ: 12/06/2025

ಮಾನ್ಯ ಗೌರವಾನ್ವಿತ 3ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ಕನಕಪುರ
ಸಿ.ಮಿಸ್.ನಂ. 163/2025

ಅರ್ಜಿದಾರರು: ಶ್ರೀಮತಿ ಕೆಂಪಮ್ಮ ಕೋಂ ಲೇಟ್ ಮರಿಗೌಡ ವಯಸ್ಸು 92 ವರ್ಷ ವಾಸ: ಕೆಮ್ಮಾಳೆ ಗ್ರಾಮ, ಸಾತನೂರು ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ. ಮತ್ತು ಇತರರು.

ವಿರುದ್ಧ

ಪ್ರತಿ ಅರ್ಜಿದಾರರು: 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್ ಕನಕಪುರ ತಾಲ್ಲೂಕು. 2.ಗ್ರಾಮ ಲೆಕ್ಕಾಧಿಕಾರಿಗಳು, ಹಲಸೂರು ವೃತ್ತ, ಸಾತನೂರು ಹೋಬಳಿ, ಕನಕಪುರ ತಾಲ್ಲೂಕು.

ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, ಅರ್ಜಿದಾರರ ತಂದೆಯವರಾದ ಶ್ರೀ ಮರಿಗೌಡ ಬಿನ್ ಲೇಟ್ ಚನ್ನೇಗೌಡ ರವರು, ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಸಾತನೂರು ಹೋಬಳಿ, ಕೆಮ್ಮಾಳೆ ಗ್ರಾಮದಲ್ಲಿ ದಿನಾಂಕ 17.06.1981 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂ–ದರೆ, 16/07/2025 ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರೂ ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥ ಗೊಳಿಸಲಾಗುವುದು.

2025ರ ಜೂನ್ 11ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗ
ಶಿರಸ್ತೆದಾರರು,
ಮಾನ್ಯ 3ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್.ಸಿ. ನ್ಯಾಯಾಲಯ, ಕನಕಪುರ

ಅರ್ಜಿದಾರರ ಪರ ವಕೀಲರು
ಎ.ಸಿ. ಚನ್ನೇಗೌಡ, ವೈರಮುಡಿ
ವಕೀಲರು, ಕನಕಪುರ
ದಿನಾಂಕ : 16/06/2025
ಕನಕಪುರ

ಸಹಕಾರ ಸಂಘಗಳ ಅಪರ ನಿಬಂಧಕರು (ನಿಯಮ.441) ಹಾಗೂ ವಸೂಲಾಧಿಕಾರಿಗಳು
ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬಾಂಕುಗಳ ಮಹಾ ಮಂಡಳ ನಿ.
ನಂ.132, 2ನೇ ಮಹಡಿ, ಕೆಂಗಲ್ ಹನುಮಂತಯ್ಯ ರಸ್ತೆ, ಬೆಂಗಳೂರು–560027.

ವ್ಯಾಜ್ಯ ಸಂಖ್ಯೆ : ಎ.ಆರ್.ಡಿ./ಯು.ಬಿ.ಎಫ್./ಟಿ–01/2024–2025
ಅಮಲ್ಜಾರಿ ಸಂಖ್ಯೆ :ಎ ಆರ್ ಇ/ಯು ಬಿ ಎಫ್ /372/2024–2025

ವಾದಿ :– ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಶ್ರೀ ತ್ಯಾಗರಾಜ ಕೋ ಆಪ್‌ರೇಟಿವ್ ಬ್ಯಾಂಕ್ ಲಿ. ನಂ. 5, 9ನೇ ಅಡ್ಡರಸ್ತೆ, ಎನ್.ಆರ್.ಕಾಲೋನಿ, ಬೆಂಗಳೂರು–560019
ವಿರುದ್ಧ
ಪ್ರತಿವಾದಿ : ನಾದಮುನಿ ಎನ್ ಬಿನ್ ನಾರಾಯಣ್.ಎಂ. ನಂ. 1/4, 1ನೇ ಮುಖ್ಯರಸ್ತೆ, 3ನೇ ಅಡ್ಡರಸ್ತೆ, ಆವಲಹಳ್ಳಿ, ಬ್ಯಾಟರಾಯನಪುರ ಹೊಸ ಬಡಾವಣೆ, ಬೆಂಗಳೂರು –560026
ಅಮಾಲ್ಜಾರಿ ಮೊತ್ತ : ರೂ. 10,26,980/–

ಪ್ರತಿವಾದಿ ನಾದಮುನಿಗೆ ದಿನ ಪತ್ರಿಕೆ ಪ್ರಕಟಣೆಯ ಮೂಲಕ ಸಹಕಾರ ಸಂಘಗಳ ಸಹಾಯಕ ನಿಬಂಧಕರು (ನಿ.) ಇವರಿಂದ ನೋಟಿಸ್

ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 70(1) ಪ್ರಕಾರ ವಾದಿಯು ಪ್ರತಿವಾದಿಯ ವಿರುದ್ಧ ಮೇಲೆ ನಮೂದಿಸಿರುವ ಸಾಲದ ಮೊತ್ತದ ವಸೂಲಾತಿಗಾಗಿ ಅವಾರ್ಡ್ ಪಡೆದುಕೊಂಡು ಅಮಲ್ಜಾರಿಗಾಗಿ ಈ ಕಛೇರಿಗೆ ದಾಖಲಿಸಿರುತ್ತಾರೆ. ಪ್ರತಿವಾದಿಗಳಿಗೆ ಆರ್ ಪಿ ಎಡಿ ಮೂಲಕ ಫಾರಂ–2, 36(ಬಿ) ನೆಯ ರೂಲಿನ ಕೆಳಗೆ ತಗಾದೆ ಪತ್ರ (ಜಪ್ತಿ ಹುಕ್ಕುಂ) ನೋಟಿಸ್ ಜಾರಿ ಮಾಡಲಾಗಿದ್ದು, ಆರ್ ಪಿ ಎಡಿ ವಾಪಸ್ಸು ಬಂದಿದ್ದು ವಾದಿಯವರು ದಿನಪತ್ರಿಕೆಯಲ್ಲಿ ಪ್ರಕಟಿಸುವ ಮೂಲಕ ನೋಟಿಸ್ ಜಾರಿ ಮಾಡಲು ಕೋರಿರುತ್ತಾರೆ. ವಾದಿಯವರ ಕೋರಿಕೆ ಪರಿಗಣಿಸಿ ಅಮಲ್ಜಾರಿಯ ಫಾರಂ. 6 (38ನೇ ರೂಲು 2 (ಎ) ಮತ್ತು (ಬಿ) ನ್ನು ಪತ್ರಿಕಾ ಪ್ರಕಟಣೆಯ ಮೂಲಕ ಜಾರಿ ಮಾಡಿ ದಿನಾಂಕ: 01.07.2025 ರೊಳಗೆ ರೂ.11,28,610/– ಗಳನ್ನು ಬ್ಯಾಂಕಿಗೆ ಹಾಜರಾಗಿ ಸುಸ್ತಿ ಸಾಲದ ಹಣವನ್ನು ಪಾವತಿಸಲು ತಿಳಿಸಿದೆ. ಇಲ್ಲವಾದಲ್ಲಿ ನಿಮ್ಮ ಗೈರುಹಾಜರಿಯಲ್ಲೇ ಮುಂದಿನ ಕ್ರಮ ಕೈಗೊಳ್ಳಲಾಗುವುದೆಂದು ಈ ಮೂಲಕ ತಿಳಿಸಲಾಗಿದೆ.

ಸಹಿ/–
ಸಹಕಾರ ಸಂಘಗಳ ಸಹಾಯಕ ನಿಬಂಧಕರು (ನಿ.441)
ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾ ಮಂಡಳ ನಿ.
ನಂ. 132, ಕೆ ಹೆಚ್ ರಸ್ತೆ, ಬೆಂಗಳೂರು–560027
ಇವರ ಆದೇಶದ ಮೇರೆಗೆ ವಸೂಲಾಧಿಕಾರಿಗಳು

ALVA'S
Education Foundation®
ALVA'S
VIDYAGIRI, MOODUBIDIRE, D.K. – 574227
ACHIEVEMENTS IN
NEET
2025
ABOVE 600 MARKS 01 STUDENT
ABOVE 550 MARKS 21 STUDENTS
ABOVE 500 MARKS 117 STUDENTS
ABOVE 450 MARKS 401 STUDENTS
ABOVE 400 MARKS 596 STUDENTS
450+ STUDENTS
ENSURED THEIR MBBS ADMISSION
IN GOVT QUOTA FROM
ALVA'S VIDYAGIRI SINGLE CAMPUS
THROUGH CLASS ROOM TEACHING IN 2025
601 RAGHAVENDRA SHANKAR SUNNAL
597 AKSHAY M HEGDE
587 SHIVAPRASAD G.C
584 PANDURANGA G V
581 TUSHAR GHANASHYAM PATEL
580 PREKSHA M S
580 VAIBHAV M
579 ARUNGOUDA PATIL
568 ARUN JAMBIGI
567 SHASHANK UDUPA
567 MOHAN D
567 TUSHAR S AWATI
565 TUSHAR UDUPA
564 JESHWANTH C
561 SHRINIVASRADDI R T
559 VIKAS GOWDA B G
558 SRUJAN V A
557 GANESH
556 PRAJWAL S K
554 VARUN SHETTY
552 PAVAN MANJUNATH S
548 PRAMOD ARAKAL
548 SIDDARTH B KARALE
543 MANOHAR BASAPPA
542 MOHITH D GOWDA K
540 GANESH RAJU KARKI
540 ROHITH B M
540 VISHRUTHI
539 AKSHAY M
538 CHAITHANYA
538 PRANAAM N SHETTY
538 AVES HASAN ASIFALI MUJAWAR
537 NAGARAJ SHIVANAND MUGALI
537 HITHESH GOWDA
536 SUNIL S B
535 DHANUSH GOWDA C S
535 KISHORE V
533 AMINA IFFA
532 VIJET G GOWDA
532 SWALEHA SHAMIM SHAIKH
531 AKSHARA S
529 HARSH KHADE
529 NISARGA P
529 PRANJALI M BHAT
528 VINAYAK KHOT
528 VARSHA M
527 YASHAVANTH BANNAD
527 RAJA YADU VAMSHI YADAV
527 SHARAD S VADAGAVE
526 MADAGOND TUKARAM
525 KANDULA BANU PRASAD
525 PRAPURNA NAGAPPA BARIGIDAD
525 SAMARTH MAHABALESHWAR MASUTI
525 LAKHAN GOROBAL
524 HARSHA HANCHANALE
524 SAKSHI RAGHAVENDRA C
524 DHANYA
523 PREM KUMAR
523 TANISHA
522 MALLIKARJUN BHIMASHEN KANKANAWADI
522 SANJANA H C
522 SONALI BASAPPA CHANNAL
521 TARUN J
521 MEGHANA M Y
520 MANIKANTH
520 CHETAN S KUPPASHETTER
520 SHUBHA M
520 VEERU PATIL
520 ADARSH MOHAN SORI
519 SANGAMESH BG
519 PRADEEP SHAGANE
519 KEERTHAN KUMAR
518 GAGAN M B
518 UJWALA T N
517 SANJANA SHASHIKANT HALYAL
517 ATHARVA GOUNDADKAR
517 SANJANA MANJUNATH GOWDA
517 VISHAKHA
516 RAGHAVENDRA MK
515 NISHCHITH RAJ CE
515 SAMMED S SHETTY
515 JAYAVARDHANA H S
515 MAHAMMADSAMI TAPAL
515 NAMISH H N
514 AKASH V S
514 TEJASWI MJ
512 AKSHAY L
512 KIRAN KALLAPPA TAVATE
512 SANSKRUTHI G C
512 MURALI DEVARAJU A
511 SAGAR BALAPPA SHEGUNASI
511 SHIVAKUMAR C G
511 SWAMY PT
511 VINOD S NANDGAON
510 VIKAS SAJJAN
509 NETHRAPAL
509 MANOGNA N
509 H A ROHITH KUMAR YADAV
508 P SATYA SAI
508 MANJUNATHA T M
507 VIBHA
507 LIKHITH R
507 LIKHA TADAP
506 ARPITA SHANKAR BAGALI
506 MANASWIN SRI MURALI
505 PALLAV B S
505 SANDESH VR
504 SOUJANYA MALLAPPA GALABHI
504 SAMPADA J
504 REZEL VIOLA RODRIGUES
504 TANISHKA SHETTY
504 NISHCHITHA U H
501 ADITHI H N
501 GAGAN B V
501 AMRUTH KUMAR H
500 NIHAR D
500 CHETHAN BALAPPA H
ADMISSIONS OPEN 2025
SCIENCE ▸ PCMB | PCMC | PCMS | PCME
NEET | CET | JEE | NATA | NDA
COMMERCE ▸ EBAC | EBAS | EBAH | BASBm | BAEBm
CA | CS | NDA | CIVIL SERVICE
ARTS ▸ HEPS
CLAT | NDA | CIVIL SERVICE
63663 77825 | 63663 77827
WE HAVE NO BRANCHES
30+ YEARS EXPERIENCE IN COACHING FOR COMPETITIVE EXAMS
NEET LONG TERM 2026 ADMISSIONS OPEN
NEET RANK ENHANCEMENT PROGRAM
SPECIAL FEE CONCESSION AVAILABLE
FOR MERITORIOUS STUDENTS
8884477588, 8884499727

ಸಮಾಚಾರ ಸಣ್ಣದಲ್ಲ

ಕೆಆರ್‌ಎಸ್‌ನಲ್ಲಿ ರೀಲ್ಸ್: ಇಬ್ಬರ ಬಂಧನ

ಶ್ರೀರಂಗಪಟ್ಟಣ: ತಾಲೂಕಿನ ಕೆಆರ್‌ಎಸ್ ಅಣೆಕಟ್ಟೆಯೊಳಗೆ ರೀಲ್ಸ್ ಮಾಡಿ ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಟ್ಟಿದ್ದ ಮೂವರ ಪೈಕಿ ಇಬ್ಬರನ್ನು ಕೆಆರ್‌ಎಸ್ ಠಾಣೆ ಪೊಲೀಸರು ಬಂಧಿಸಿದ್ದಾರೆ. ಪಾಂಡವಪುರ ತಾಲೂಕಿನ ಚಿಕ್ಕಾಡೆಯ ಮೂರ್ತಿ ಮತ್ತು

ಜೀವನ್ ಬಂಧಿತರು. ಇವರ ಜತೆಗಿದ್ದ ದರ್ಶನ್ ಎಂಬಾತ ತಲೆ ಮರೆಸಿಕೊಂಡಿದ್ದಾನೆ. ಒಂದು ತಿಂಗಳ ಹಿಂದೆ ಅಣೆಕಟ್ಟೆಯ ದಕ್ಷಿಣ ದ್ವಾರದ ಸಮೀಪ ಒಳಕ್ಕೆ ಇಳಿದು ರೀಲ್ಸ್ ಮಾಡಿದ್ದರು. ಅಣೆಕಟ್ಟೆಯೊಳಗೆ, ಆರ್‌ಬಿಎಲ್‌ಎಲ್ ನಾಲೆ (ಬಲದಂಡೆ ನಾಲೆ)ಯ ದುರಸ್ತಿ ಕಾರ್ಯ ನಡೆಯುವ ಸಂದರ್ಭದಲ್ಲಿ ಕೂಲಿ ಕಾರ್ಮಿಕರ ಜತೆ ಮೂವರು ತೆರಳಿ ಜಲಾಶಯದಲ್ಲಿ ನೀರು ಖಾಲಿಯಾಗುತ್ತಿರುವುದನ್ನು ವಿಡಿಯೊ ಮಾಡಿದ್ದರು. ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದ್ದ ವಿಡಿಯೊ ಆಧರಿಸಿ, ಅಣೆಕಟ್ಟೆಯೊಳಕ್ಕೆ ಅಕ್ರಮ ಪ್ರವೇಶ ಮಾಡಿರುವವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಕಾವೇರಿ ನೀರಾವರಿ ನಿಗಮದ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಫಾರೂಕ್ ಅಬು ಕೆಆರ್‌ಎಸ್ ಠಾಣೆಗೆ 3 ದಿನಗಳ ಹಿಂದೆ ದೂರು ನೀಡಿದ್ದರು. ಅಣೆಕಟ್ಟೆಯೊಳಗೆ ಇಳಿದು ವಿಡಿಯೊ ಮಾಡಿದ್ದರು ಎಂದು ಕೆಆರ್‌ಎಸ್ ಠಾಣೆ ಪಿಎಸ್‌ಐ ರಮೇಶ್ ಕರ್ಕಿಕಟ್ಟಿ ತಿಳಿಸಿದ್ದಾರೆ.

ಪ್ರಧಾನಿ ಮೋದಿಗೆ ಬಡವರ ಬಗ್ಗೆ ಕಾಳಜಿ ಇಲ್ಲ

1350 ಕೋಟಿ ರು. ಮೊತ್ತದ ಅಭಿವೃದ್ಧಿ ಕಾಮಗಾರಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಶಂಕುಸ್ಥಾಪನೆ

ದಾವಣಗೆರೆ: ಅಭಿವೃದ್ಧಿಗೆ ರಾಜ್ಯ ಸರಕಾರದ ಬಳಿ ಹಣ ಇಲ್ಲ ಎನ್ನುವ ಬಿಜೆಪಿಯ ಹಸಿ ಸುಳ್ಳುಗಳಿಗೆ ತಕ್ಕ ಉತ್ತರ ನೀಡುವ ರೀತಿಯಲ್ಲಿ ಒಂದೇ ದಿನ 1350 ಕೋಟಿ ವೆಚ್ಚದ ಅಭಿವೃದ್ಧಿ ಕಾರ್ಯಗಳನ್ನು ಉದ್ಘಾಟಿಸಿ, ಶಂಕುಸ್ಥಾಪನೆ ನೆರವೇರಿಸಿದ್ದೇವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನುಡಿದರು.

ದಾವಣಗೆರೆ ಜಿಲ್ಲೆಯ 1350 ಕೋಟಿ ವಿವಿಧ ಅಭಿವೃದ್ಧಿ ಕಾರ್ಯಗಳ ಉದ್ಘಾಟನೆ, ಶಂಕುಸ್ಥಾಪನೆ ನೆರವೇರಿಸಿ ಹಲವು ಇಲಾಖೆಗಳ ಫಲಾನುಭವಿಗಳಿಗೆ ಸವಲತ್ತುಗಳನ್ನು ವಿತರಿಸಿ ಮಾತನಾಡಿ, ಪ್ರಧಾನಿ ಮೋದಿ ಅವರಿಗೆ 56 ಇಂಚಿನ ಎದೆಇದೆ ಎನ್ನುವುದು ಮುಖ್ಯವಲ್ಲ. ಆ ಎದೆಯ ಒಳಗೆ ಬಡವರ ಮತ್ತು ಮಧ್ಯಮ ವರ್ಗದವರ ಬಗ್ಗೆ ಎಷ್ಟು ಪ್ರೀತಿ, ಕಾಳಜಿ ಇದೆ ಎಂಬುದು ಮುಖ್ಯ ಎಂದರು. ಸರಕಾರದ ಬಳಿ ಹಣ ಇಲ್ಲ ಎನ್ನುವ ಬಿಜೆಪಿಯ ಕುರುಡು ಕಣ್ಣುಗಳಿಗೆ ಅಭಿವೃದ್ಧಿ ಕಾಣುತ್ತಿಲ್ಲ. ಜನರ ಮನೆ ಬಾಗಿಲಿಗೆ ನಮ್ಮ ಸರಕಾರದ ಅಭಿವೃದ್ಧಿ ಕಾರ್ಯಗಳು ತಲುಪುತ್ತಿವೆ. ನಮ್ಮ ಬಳಿ ಹಣ ಇಲ್ಲದೇ ಹೋಗಿದ್ದರೆ ಒಂದೇ ದಿನ 1350 ಕೋಟಿ ಮೊತ್ತದ ಅಭಿವೃದ್ಧಿ ಕಾರ್ಯಗಳ ಉದ್ಘಾಟನೆ ಸಾಧ್ಯವಿತ್ತೇ ಎಂದು ಪ್ರಶ್ನಿಸಿದರು.

ನಾವು ಗ್ಯಾರಂಟಿಗಳನ್ನು ಘೋಷಿಸಿದಾಗ ಬಿಜೆಪಿಯ ಪ್ರಧಾನಮಂತ್ರಿ ನರೇಂದ್ರ ಮೋದಿಯವರಿಂದ ಹಿಡಿದು ಸ್ಥಳೀಯ ಬಿಜೆಪಿ ನಾಯಕರವರೆಗೂ, ಗ್ಯಾರಂಟಿಗಳು ಜಾರಿಯೇ ಆಗುವುದಿಲ್ಲ ಎಂದು ಹಸಿ ಹಸಿ ಸುಳ್ಳು ಹೇಳಿದ್ದರು. ಈಗ ಐದೂ ಗ್ಯಾರಂಟಿಗಳೂ ಜಾರಿ ಆಗಿವೆ. ಬಿಜೆಪಿಯ ಮತದಾರರೂ ಸೇರಿ ಇಡೀ ರಾಜ್ಯದ ಜನತೆ ಗ್ಯಾರಂಟಿಗಳ ಫಲಾನುಭವಿಗಳಾಗಿದ್ದಾರೆ ಎಂದರು.

ಬಿಜೆಪಿ ಅಧಿಕಾರದಲ್ಲಿದ್ದಾಗ ರಾಜ್ಯದ ಜನರಿಗೆ ಒಂದೇ ಒಂದು ಮನೆ ಕೊಡಲಿಲ್ಲ. ಆದರೆ ನಾವು ಬರೀ ದಾವಣಗೆರೆ ಜಿಲ್ಲೆಯಲ್ಲಿ ಒಂದೇ ದಿನ ಪೌರ ಕಾರ್ಮಿಕ ವರ್ಗಕ್ಕೆ 1892 ಮನೆ ವಿತರಿಸಿದ್ದೇವೆ.



ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ರಾಷ್ಟ್ರಾಧ್ಯಕ್ಷ ಹಾಗೂ ಕಾಂಗ್ರೆಸ್‌ನ ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೇಕ್ ಕತ್ತರಿಸಿ ಜನುಮದಿನದ ಶುಭಾಶಯ ಕೋರಿದರು.

ಬಡವರ ಬದುಕಿಗಾಗಿ ಕಾರ್ಯಕ್ರಮ ರೂಪಿಸಿದೆ

ಕಾಂಗ್ರೆಸ್ ಅಧಿಕಾರಕ್ಕೆ ಬಂದಾಗೆಲ್ಲಾ ಬಡವರ ಬದುಕಿಗಾಗಿ ಕಾರ್ಯಕ್ರಮಗಳನ್ನು ರೂಪಿಸಿಕೊಂಡು ಬಂದಿದೆ. ಸಮಾಜದಲ್ಲಿ ಪುಟಾಣಿ ಮಕ್ಕಳಿಂದ ಹಿರಿಯ ನಾಗರೀಕರವರೆಗೆ, ಯುವಕರಿಂದ ಮಹಿಳೆಯರವರೆಗೆ ಎಲ್ಲರಿಗೂ ಕಾರ್ಯಕ್ರಮ ನೀಡಿರುವುದು ಕಾಂಗ್ರೆಸ್ ಸರಕಾರ ಮಾತ್ರ. ಇಂದು ಭೂ ಗ್ಯಾರಂಟಿ ಯೋಜನೆ ಮೂಲಕ ಹಟ್ಟಿ, ತಾಂಡಾಗಳ ಸಾವಿರಾರು ಜನರಿಗೆ ಭೂಮಿ ಹಕ್ಕು ಪತ್ರ ನೀಡಿದ್ದೇವೆ. ಈ ಹಿಂದೆ ಬೇರೆ ಯಾವುದೇ ಸರಕಾರ ಇಂತಹ ಕಾರ್ಯಕ್ರಮ ಮಾಡಿರಲಿಲ್ಲ. ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದಾಗೆಲ್ಲಾ ಬಡವರ ಬದುಕಿಗಾಗಿ, ಬಡವರ ಹೊಟ್ಟೆ ತುಂಬಿಸಲು ಕಾರ್ಯಕ್ರಮ ರೂಪಿಸುತ್ತಾ ಬಂದಿದೆ. ಬಿಜೆಪಿಯವರು ಅಧಿಕಾರ ನಡೆಸಿದ್ದಾರೆ. ಆದರೆ ಅವರು ಭಾವನೆ ಮೇಲೆ ರಾಜಕಾರಣ ಮಾಡಿದ್ದಾರೆ. ನಾವು ಜನರ ಬದುಕು ಕಟ್ಟಲು ರಾಜಕೀಯ ಮಾಡಿದ್ದೇವೆ. ನಮ್ಮ ಸರಕಾರ ಕೊಟ್ಟಿರುವ ಕೊಡುಗೆಗಳಿಗೆ ನಿಮ್ಮ ಕಣ್ಣುಗಳೇ ಸಾಕ್ಷಿ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ತಿಳಿಸಿದರು.

ಬೆಲೆ ಏರಿಕೆಯ ಕಾರಣಕರ್ತ ಪ್ರಧಾನಿ

ಮೋದಿಯವರ ಅಚ್ಛೇ ದಿನ್ ಆಯೆಗಾ ಬರೀ ಡೈಲಾಗ್. ಯಾರ ಕಣ್ಣಿಗಾದರೂ ಅಚ್ಛೆ ದಿನ ಕಂಡಿದೆಯಾ? ಮೋದಿ ಪ್ರಧಾನಿ ಆಗುವ ಮೊದಲು ಪೆಟ್ರೋಲ್, ಡೀಸೆಲ್, ಚಿನ್ನ, ರಸಗೊಬ್ಬರ ಬೆಲೆ ಎಷ್ಟಿತ್ತು. ಈಗ ಎಷ್ಟಿದೆ ಮೋದಿಯವರೇ ಎಂದು ಸಿಎಂ ಪ್ರಶ್ನಿಸಿದರು. ಬೆಲೆ ಏರಿಕೆಯ ಕಾರಣಕರ್ತ ಪ್ರಧಾನಿ ಮೋದಿಯವರೇ ಆಗಿದ್ದಾರೆ. ಹೀಗಾಗಿ ಬಿಜೆಪಿಯವರ ಸುಳ್ಳುಗಳಿಗೆ ರಾಜ್ಯದ ಜನತೆ ಸೊಪ್ಪು ಹಾಕುತ್ತಿಲ್ಲ. ಉಪ ಚುನಾವಣೆಯಲ್ಲಿ ಶಿಗ್ಗಾಂವಿ, ಚನ್ನಪಟ್ಟಣದಲ್ಲಿ ಮಾಜಿ ಸಿಎಂಗಳ ಮಕ್ಕಳನ್ನೇ ಜನ ಸೋಲಿಸಿ ಕಾಂಗ್ರೆಸ್‌ಗೆ ಶಕ್ತಿ ತುಂಬಿದರು. ಸಂಡೂರಿನಲ್ಲೂ ನಾವೇ ಗೆದ್ದೆವು. ಮುಂದಿನ ಚುನಾವಣೆಯಲ್ಲೂ ನಾವೇ ಮತ್ತೆ ಗೆದ್ದು ಬರ್ತೀವಿ ಎಂದು ಸಿಎಂ ಸಿದ್ದರಾಮಯ್ಯ ಭರವಸೆ ವ್ಯಕ್ತಪಡಿಸಿದರು.

ಅಭಿವೃದ್ಧಿ ವಿಚಾರದಲ್ಲಿ ನಾವು ಜಾತಿ, ಧರ್ಮ, ಪಕ್ಷ ನೋಡುವುದಿಲ್ಲ. ಎಲ್ಲಾ ಪಕ್ಷದವರೂ ನಮ್ಮ ಗ್ಯಾರಂಟಿಗಳ ಫಲಾನುಭವಿಗಳು. ಅಭಿವೃದ್ಧಿ ವಿಚಾರದಲ್ಲಿ, ಕೇಂದ್ರ ಸರಕಾರ ನಮಗೆ ಮಾಡಿದ ದ್ರೋಹದ ವಿಚಾರದಲ್ಲಿ ನಾನು ಸುಳ್ಳು ಹೇಳಿದ್ದರೆ ಮತ್ತೆ ಸಾರ್ವಜನಿಕವಾಗಿ ವೇದಿಕೆ ಹತ್ತೋದಿಲ್ಲ, ಭಾಷಣ ಮಾಡುವುದಿಲ್ಲ.

-ಸಿದ್ದರಾಮಯ್ಯ ಮುಖ್ಯಮಂತ್ರಿ

ಶಾಮನೂರು ಶಿವಶಂಕರಪ್ಪ ಅವರು ನಮ್ಮ ಹಿರಿಯರು. ಅವರು ವ್ಯಕ್ತಿಯಷ್ಟೇ ಅಲ್ಲ, ಕಾಂಗ್ರೆಸ್ ಪಕ್ಷಕ್ಕೆ ದೊಡ್ಡ ಶಕ್ತಿ. ಕೋವಿಡ್ ಸಮಯದಲ್ಲಿ ಬಿಜೆಪಿ ಸರಕಾರ ಜನರಿಗೆ ಸಹಾಯ ಮಾಡಿರಲಿಲ್ಲ. ಆದರೆ ಶಾಮನೂರು ಶಿವಶಂಕರಪ್ಪ ಅವರು 10 ಕೋಟಿ ವೆಚ್ಚ ಮಾಡಿ ಈ ಜಿಲ್ಲೆಯ ಜನರಿಗೆ ಉಚಿತ ಲಸಿಕೆ ಹಂಚಿದ್ದರು. ಅವರ ಕೆಲಸ ನೋಡಿ ನನ್ನ ಹೃದಯ ಕರಗಿತ್ತು. ಇದು ಶಾಮನೂರು ಶಿವಶಂಕರಪ್ಪ ಅವರ ಹೃದಯ ಶ್ರೀಮಂತಿಕೆ.

-ಡಿ.ಕೆ.ಶಿವಕುಮಾರ್ ಉಪಮುಖ್ಯಮಂತ್ರಿ

ಸಮಾಜದ ಎಲ್ಲಾ ಜಾತಿ, ವರ್ಗ, ಸಮುದಾಯಗಳಿಗೆ ಆರ್ಥಿಕ ಶಕ್ತಿ ನೀಡುವುದು ನಮ್ಮ ಸರ ಕಾರದ ಜವಾಬ್ದಾರಿ. ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಆಶಯದಂತೆ ನಾವು ಸಾಮಾಜಿಕ ನ್ಯಾಯದ ಕಾರ್ಯಗಳನ್ನು ಜಾರಿಗೊಳಿಸುತ್ತಾ ಸಮ ಸಮಾಜದ ಆಶಯವನ್ನು ಈಡೇರಿಸುತ್ತಿದ್ದೇವೆ ಎಂದರು.

ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ,
ಲೋಕೋಪಯೋಗಿ ಇಲಾಖೆ, ತುಮಕೂರು.
ಕ್ರ.ಸಂ:ಕಾಇಂ:ಲೋಇವಿ:ತುವು:ಸಇಂ-2:ಟೆಂಡರ್09/2025-26
ದಿನಾಂಕ : 11.06.2025

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂ.09/2025-26 ದಿನಾಂಕ: 11.06.2025

ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ: 09/2025-26 ದಿನಾಂಕ 11-06-2025 ರಂದು ತುಮಕೂರು ವಿಭಾಗದ ವ್ಯಾಪ್ತಿಯಲ್ಲಿ 8443 (ಠೇವಣಿ ವಂತಿಕೆ) ರಾಜ್ಯ ವಿಪತ್ತು ಉಪಶಮನ ನಿಧಿ ಹಾಗೂ 8443 (ಠೇವಣಿ ವಂತಿಕೆ) ಲೆಕ್ಕ ಶೀರ್ಷಿಕೆ ಅಡಿಯಲ್ಲಿ 02 ಕಾಮಗಾರಿಗೆ KPPP-Portal ಮೂಲಕ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಗರಿಷ್ಠ ಟೆಂಡರಿಗಿಟ್ಟ ಮೊತ್ತ ರೂ.80.78ಲಕ್ಷಗಳು ಹಾಗೂ ಕನಿಷ್ಠ ಟೆಂಡರಿಗಿಟ್ಟ ಮೊತ್ತ ರೂ.20.32ಲಕ್ಷಗಳು ಮತ್ತು ಗರಿಷ್ಠ ಇ.ಎಂ.ಡಿ ಮೊತ್ತ ರೂ.1,61,556/- ಹಾಗೂ ಕನಿಷ್ಠ ಇ.ಎಂ.ಡಿ ಮೊತ್ತ ರೂ.50,000/-, ಅರ್ಹ ಗುತ್ತಿಗೆದಾರರು 4 ನೇ ದರ್ಜೆ ಮೇಲ್ಪಟ್ಟು, ಕಾಲಾವಧಿ: 03 & 04 ತಿಂಗಳು, ಸಂಬಂಧಿಸಿದ ವಿಚಾರಣೆ ಮತ್ತು ಸ್ಪಷ್ಟೀಕರಣಗಳಿಗೆ ಕೊನೆ ದಿನಾಂಕ ಮತ್ತು ವೇಳೆ: 19-06-2025 ರ 17-30 ಗಂಟೆಗೆ, KPPP-Portal ಮೂಲಕ ಟೆಂಡರ್‌ಅನ್ನು ದಿನಾಂಕ 12-06-2025 ರಿಂದ 20-06-2025ರ 16.00 ಗಂಟೆವರೆಗೆ ಪಡೆಯಬಹುದಾಗಿದೆ. ಟೆಂಡರ್‌ಅನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ವೇಳೆ: 20-06-2025ರ 16-00 ಗಂಟೆವರೆಗೆ, ತಾಂತ್ರಿಕ ಬಿಡ್‌ಅನ್ನು ತೆರೆಯುವ ದಿನಾಂಕ ಮತ್ತು ವೇಳೆ: 21-06-2025 ರ 16-30 ಗಂಟೆಗೆ, ಆರ್ಥಿಕ ಬಿಡ್‌ಅನ್ನು ತೆರೆಯುವ ದಿನಾಂಕ ಮತ್ತು ವೇಳೆ: 23-06-2025 ರ 16-00 ಗಂಟೆಗೆ, ಹೆಚ್ಚಿನ ವಿವರಗಳನ್ನು ಸದರಿ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಪಡೆಯಬಹುದಾಗಿದೆ ಹಾಗೂ ವೆಬ್‌ಸೈಟ್ ಸಂ:https://kppp.karnataka.gov.in ರಲ್ಲಿ ಪಡೆಯಬಹುದಾಗಿದೆ.

ಸೂಚನೆ: ಆರ್ಥಿಕ ವಹಿವಾಟಿನ ಪತ್ರದಲ್ಲಿ ಯು.ಡಿ.ಐ ಸಂಖ್ಯೆಯನ್ನು ನಮೂದಿಸಿಲ್ಲದಿರುವ ಆರ್ಥಿಕ ವಹಿವಾಟನ್ನು ಪರಿಗಣಿಸುವುದಿಲ್ಲ. ಸದರಿ ಟೆಂಡರ್ ಪ್ರಕಟಣೆಯಲ್ಲಿ ಆಗುವಂತಹ ಮುಂದಿನ ಬದಲಾವಣೆಗಳನ್ನು ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ನೋಡಿಕೊಳ್ಳುವುದು

ಸಹಿ/-ಕಾರ್ಯಪಾಲಕ ಇಂಜಿನಿಯರ್,
ಲೋಕೋಪಯೋಗಿ ಇಲಾಖೆ ವಿಭಾಗ, ತುಮಕೂರು.
DIPR/TUM/154/KSMCA/2025-26

ನೀತಿ ಶಿಕ್ಷಣ ಜಾರಿಗೆ ಹೊರಟ್ಟಿ ಒತ್ತಾಯ

← ಮೊದಲಪುಟದಿಂದ

ಪರಿಷತ್ ಸದಸ್ಯರಾದ ಡಾ.ಧನಂಜಯ್ ಸರ್ಜಿ ಸೇರಿದಂತೆ ಹಲವು ಶಾಸಕರು ಹಾಗೂ ವೈದ್ಯರು ಮಕ್ಕಳ ಹಕ್ಕುಗಳ ರಕ್ಷಣೆ ಬಗ್ಗೆ ಸುದೀರ್ಘವಾಗಿ ಎರಡು ದಿನಗಳ ಅಧಿವೇಶನದಲ್ಲಿ ಚರ್ಚೆ ನಡೆಸಿ ನಂತರ ಹಲವು ಶಿಫಾರಸು ಮಾಡಿರುತ್ತದೆ. ಅಲ್ಲದೆ ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಹಾಗೂ ಚೈಲ್ಡ್ ಫಂಡ್ ಇಂಡಿಯಾ ರವರ ಸಹಯೋಗದಲ್ಲಿ ಕರ್ನಾಟಕ ಮಕ್ಕಳ ಆನ್‌ಲೈನ್ ಅಪಾಯಗಳ ಕುರಿತು, ವಿಶೇಷ ಅಧ್ಯಯನದ ವರದಿ ಬಿಡುಗಡೆ ಮಾಡಲಾಗಿದೆ.

ಈ ಸಭೆಯಲ್ಲಿ ಆನ್‌ಲೈನ್ ಮೂಲಕ ಶಿಕ್ಷಣ ಸರಿಯಾದ ಪದ್ಧತಿ ಅಲ್ಲ. ಎಲ್‌ಕೆಜಿ ಯಿಂದ ಪಿಯುಸಿ ಯವರೆಗೆ ಆನ್‌ಲೈನ್ ಶಿಕ್ಷಣ ರದ್ದುಗೊಳಿಸುವಂತೆ ಸಭೆ ನಿರ್ಣಯಿಸಿದೆ. ಇದು ಒಂದು ವಿನೂತನ ಪ್ರಯೋಗವಾಗಿದ್ದು ಕರ್ನಾಟಕ ವಿಧಾನ ಪರಿಷತ್ತಿನಲ್ಲಿ ನಡೆದಂತಹ ಮಕ್ಕಳ ಹಕ್ಕುಗಳ ರಕ್ಷಣೆ ಬಗ್ಗೆ ತೆಗೆಕೊಂಡಿರುವ ನಿರ್ಣಯಗಳು ಐತಿಹಾಸಿಕವಾಗಿದೆ.

ಹೀಗಾಗಿ ವಿದ್ಯಾರ್ಥಿಗೆ ಔಪಚಾರಿಕ ಶಿಕ್ಷಣ(ತರಗತಿಯಲ್ಲಿ ಬೋಧಿಸುವ ವಿಷಯಗಳು)ದ ಜೊತೆಗೆ ಅನೌಪಚಾರಿಕ ಶಿಕ್ಷಣ(ಪಠ್ಯವಸ್ತುವನ್ನು ಹೊರತು ಪಡಿಸಿ ಅನುಭವನ ಮೂಲಕ ಕಲಿಕೆ) ಕೂಡ ಬಹಳ ಮುಖ್ಯ. ಪಠ್ಯವನ್ನು ಅರಿತುಕೊಂಡು ಜೀವನ ನಡೆಸಲು ಸಾಧ್ಯವಿಲ್ಲ. ಅದರ ಜೊತೆಗೆ ಸಾಮಾನ್ಯ ಜ್ಞಾನವೂ ಬಹುಮುಖ್ಯ. ಇದೇ ಕಾರಣಕ್ಕೆ ಪಠ್ಯವಸ್ತುವಿನ ಜೊತೆಗೆ ಶಾರೀರಿಕ ಶಿಕ್ಷಣ, ಚಿತ್ರಕಲೆ, ಸಂಗೀತ, ನಾಟಕ-ನೃತ್ಯ ಹಾಗೂ ವೃತ್ತಿ ಶಿಕ್ಷಣ ಮೌಲ್ಯ ಶಿಕ್ಷಣ ಈ ಎಲ್ಲ ವಿಷಯಗಳಿಂದ ವಿದ್ಯಾರ್ಥಿಗಳು ತಮ್ಮ ವ್ಯಕ್ತಿತ್ವ ಪರಿಪೂರ್ಣವಾಗಿ ರೂಪಿಸಿಕೊಳ್ಳಲು ಸಹಾಯಕವಾಗಿದೆ ಎಂದಿದ್ದಾರೆ.

ಪ್ರಸ್ತುತ ಜಗತ್ತನ್ನು ಹಾಗೂ ಸಮಾಜವನ್ನು ಸೂಕ್ಷ್ಮವಾಗಿ ಅವಲೋಕನ ಮಾಡಿದಾಗ ಅನ್ಯಾಯ, ಕ್ರೌರ್ಯ, ಅಸಹನೆ, ದುರಾಚಾರ, ಹೊಂದಾಣಿಕೆ ಇಲ್ಲದಿರುವುದು ಃಆಗೂ ಇನ್ನಿತರ ಅಂಶಗಳನ್ನು ಕಾಣುತ್ತಿದ್ದೇವೆ. ಇದು ಮಕ್ಕಳಿಗೆ ಬೀಡುತ್ತಿರುವ ಶಿಕ್ಷಣದಲ್ಲಿನ ಮೌಲ್ಯ ಶಿಕ್ಷಣದ ಕೊರತೆಯೇ ಮುಖ್ಯ ಕಾರಣ. ಹೀಗಾಗಿ ಮಕ್ಕಳಿಗೆ ಒಳ್ಳೆಯ ಆಚಾರ-ವಿಚಾರ, ಸಂಸ್ಕಾರ ದೊರೆಯಬೇಕೆಂದರೆ ಮೌ್ಯ ಶಿಕ್ಷಣ ನೀಡುವುದು ಅವಶ್ಯಕ ಎನ್ನುವುದು ನನ್ನ ಅನಿಸಿಕೆಯಾಗಿದೆ.

ಈ ಹಿಂದೆ ನಾವು ಅಭ್ಯಾಸ ಮಾಡುವ ಸಮಯದಲ್ಲಿ ಪಠ್ಯವಸ್ತುವಿನಲ್ಲಿ ನೀತಿ ಕಥೆಗಳಿರುತ್ತಿದ್ದವು. ಇದರಿಂದ ಮಕ್ಕಳು ಪ್ರಾಮಾಣಿಕತೆ, ಸಮಗ್ರತೆ, ಸಹಾನುಭೂತಿ, ದಯೆ, ನ್ಯಾಯಸಮ್ಮತೆ, ಸಾಮಾಜಿಕ ಮತ್ತು ಭಾವನಾತ್ಮ ಕೌಶಲ್ಯ, ಜವಾಬ್ದಾರಿ, ತಾಳ್ಮೆ, ಶಿಸ್ತು, ಭ್ರಾತೃತ್ವ, ಪರಸ್ಪರರನ್ನು ಗೌರವಿಸುವುದು, ಹೊಂದಾಣಿಕೆ, ಕಠಿಣ ಪರಿಶ್ರಮ, ಕೃತಜ್ಞತೆ, ಹಂಚಿಕೊಳ್ಳುವಿಕೆ, ಉದಾರತೆ, ಜವಾಬ್ದಾರಿ ತೆಗೆದುಕೊಳ್ಳುವುದು ಈ ಎಲ್ಲ ಅಂಶ ಜೀವನದಲ್ಲಿ ರೂಢಿಸಿಕೊಂಡು ನಮ್ಮೆಲ್ಲ ಹಿರಿಯರು ಸಾತ್ವಿಕ ಹಾಗೂ ಆದರ್ಶ ಜೀವನ ನಡೆಸುತ್ತಿದ್ದರು. ಆದರೆ, ಈಗಿನ ಮಕ್ಕಳಲ್ಲಿ ಮೇಲಿನ ಯಾವುದೇ ಅಂಶಗಳು ಕಾಣಸಿಗುತ್ತಿಲ್ಲ. ಮೌಲ್ಯ ಶಿಕ್ಷಣದ ಕೊರತೆ ಹಾಗೂತ್ಯಾಧುನಿಕ ತಂತ್ರಜ್ಞಾನದ ಬಳಕೆಯೇ ಇದಕ್ಕೆ ಮುಖ್ಯ ಕಾರಣವಾಗಿದೆ. ಹೀಗಾಗಿ ಅಗತ್ಯ ಕ್ರಮವಹಿಸುವಂತೆ ಪತ್ರದಲ್ಲಿ ಮನವಿ ಮಾಡಿದ್ದಾರೆ.

ಬೈಕ್ ಟ್ಯಾಕ್ಸಿ ಸ್ಥಗಿತ: ಗ್ರಾಹಕರ ಪರದಾಟ

← ಮೊದಲಪುಟದಿಂದ

ಪ್ರಸ್ತುತ ನಡೆಯುತ್ತಿರುವ ಈ ಪ್ರಕರಣದಲ್ಲಿ ನಾವು ನೇರ ಪಕ್ಷಗಾರರಲ್ಲದಿದ್ದರೂ, ರಾಜ್ಯದ ಸಾರಿಗೆ ಪರಿಸರ ವ್ಯವಸ್ಥೆಯಲ್ಲಿ ಜವಾಬ್ದಾರಿಯುತ ಪಾಲುದಾರರಾಗಿ ನಾವು ಈ ಬೆಳವಣಿಗೆಯನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದೇವೆ. ಈ ಸಂದರ್ಭವು ನಮ್ಮ ಕ್ಯಾಪ್ಟನ್‌ಗಳಿಗೆ ಸವಾಲಿನಿಂದ ಕೂಡಿದ್ದು, ಅನೇಕರು ಬೈಕ್ ಟ್ಯಾಕ್ಸಿಗಳನ್ನು ತಮ ಪ್ರಮುಖ ಆದಾಯದ ಮೂಲವಾಗಿ ಅವಲಂಬಿಸಿದ್ದಾರೆ. ಕರ್ನಾಟಕದಾದ್ಯಂತ ಲಕ್ಷಾಂತರ ಪ್ರಯಾಣಿಕರಿಗೆ ಕೈಗೆಟುಕುವ, ಕೊನೆಯ ಮೈಲಿ ಸಂಪರ್ಕವನ್ನು ಒದಗಿಸುವಲ್ಲಿ ಅವರು ಮಹತ್ವದ ಪಾತ್ರ ವಹಿಸಿದ್ದಾರೆ ಎಂದು ಹೇಳಿದೆ.

ಈಗಾಗಲೇ ಹಲವು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಅಸ್ತಿತ್ವದಲ್ಲಿದೆ. ಎಲ್ಲಾ ಪಾಲುದಾರರ ಹಿತದೃಷ್ಟಿಯಿಂದ ನಾವು ಅಧಿಕಾರಿಗಳೊಂದಿಗೆ ನಮ ರಚನಾತ್ಮಕ ಸಂವಾದವನ್ನು ಮುಂದುವರಿಸುವಾಗ, ಕ್ಯಾಪ್ಟನ್‌ಗಳು ಮತ್ತು ಬಳಕೆದಾರರು ನಮ್ಮೊಂದಿಗೆ ಸಹಕರಿಸಬೇಕು. ಸಾರಿಗೆ ಇಲಾಖೆ ಮತ್ತು ಕರ್ನಾಟಕ ಸರಕಾರದೊಂದಿಗೆ ಸಹಕರಿಸಿ, ನಿಯಮಾನುಸಾರ, ಸುಸ್ಥಿರ ಮತ್ತು ಭವಿಷ್ಯಕ್ಕೆ ಸಿದ್ಧವಾಗಿರುವ ನಿಯಂತ್ರಣ ಚೌಕಟ್ಟನ್ನು ರೂಪಿಸಲು ನಾವು ಬದ್ಧರಾಗಿದ್ದೇವೆ. ಗಿಗ್ ವರ್ಕರ್‌ಗಳ ಹಿತಾಸಕ್ತಿಗಳನ್ನು ರಕ್ಷಿಸುವುದರ ಜತೆಗೆ ಪ್ರಯಾಣಿಕರ ಸುರಕ್ಷತೆ ಆದ್ಯತೆಯಾಗಿಡುವುದು ನಮ ಮುಖ್ಯ ಗುರಿಯಾಗಿದೆ ಎಂದು ಹೇಳಿದೆ.

ವಿರಾಮ
ಪ್ರತಿ ಭಾನುವಾರ

ಬ್ಯಾನ್ ಮಾಡದಂತೆ ಪತ್ರ ಬರೆದ ಸವಾರರು

ಬೈಕ್ ಟ್ಯಾಕ್ಸಿಯನ್ನು ನಿರ್ಬಂಧಿಸಿರುವ ಬೆನ್ನಲ್ಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕಾಂಗ್ರೆಸ್ ವರಿಷ್ಠ ರಾಹುಲ್ ಗಾಂಧಿಗೆ ಪತ್ರ ಬರೆದಿರುವ ಬೈಕ್ ಟ್ಯಾಕ್ಸಿ ಸಂಘ, ವಿದ್ಯಾರ್ಥಿಗಳು, ದಿನಗೂಲಿ ಮಾಡುವವರು, ಪೋಷಕರು ಹೀಗೆ ನಮ್ಮಲ್ಲಿ ಅನೇಕರು ಯಾವುದೇ ಕೆಲಸ ಸಿಗದಿದ್ದಾಗ ಅಥವಾ ತಮ್ಮ ಫ್ರೀ ಸಮಯದಲ್ಲಿ ಬೈಕ್ ಟ್ಯಾಕ್ಸಿ ಸೇವೆಯನ್ನು ಆರಂಭಿಸಿರುತ್ತಾರೆ. ವಿಶೇಷವಾಗಿ ಕೋವಿಡ್ ನಂತರ ಈ ಕೆಲಸಕ್ಕೆ ಹೆಚ್ಚಾಗಿ ಜನರು ಬರಲಾರಂಭಿಸಿದರು. ನಮ್ಮ ಕುಟುಂಬಗಳನ್ನು ಪೋಷಿಸಲು ದಿನಕ್ಕೆ 10 ರಿಂದ 12 ಗಂಟೆಗಳ ಕಾಲ ಕೆಲಸ ಮಾಡುತ್ತೇವೆ. ನಾವು ಬಿಸಿಲು, ಮಳೆ ಮತ್ತು ಟ್ರಾಫಿಕ್‌ನಲ್ಲಿ ಸಂಚಾರ ಮಾಡುತ್ತೇವೆ. ಬಾಡಿಗೆ, ಶಾಲಾ ಶುಲ್ಕ ಮತ್ತು ವೈದ್ಯಕೀಯ ಬಿಲ್ಲಗಳನ್ನು ನಾವು ಹೀಗೆಯೇ ಪಾವತಿಸುತ್ತೇವೆ. ಬೈಕ್ ಟ್ಯಾಕ್ಸಿಗಳು ಒಂದು ಅಡ್ಡ ಆದಾಯವಲ್ಲ, ಆದ್ದರಿಂದ ಬೈಕ್ ಟ್ಯಾಕ್ಸಿಗಳನ್ನು ಬ್ಯಾನ್ ಮಾಡಬೇಡಿ ಎಂದು ಮನವಿ ಮಾಡಿದ್ದಾರೆ.

ರಾಹುಲ್ ಗಾಂಧಿ ಅವರ ನಾಯಕತ್ವದಲ್ಲಿ, ಕರ್ನಾಟಕ ಗಿಗ್ ಕೆಲಸಗಾರರಿಗೆ ಪ್ರಮುಖ ಕ್ರಮಗಳನ್ನು ತರಲಾಗಿದೆ. ಸಾಮಾಜಿಕ ಭದ್ರತಾ ನಿಯಮಗಳು, ಕಲ್ಯಾಣ ಮಂಡಳಿಗಳು, ವಿಮೆ ಇವು ನಮಗೆ ಭರವಸೆ ನೀಡಿವೆ. ಆದರೆ ಇಂದು, ಈ ಭರವಸೆಯನ್ನು ಮುರಿಯುತ್ತಿದೆ. ನಮಗೆ ಕೆಲಸ ಮಾಡಲು ಕೂಡ ಅವಕಾಶ ನೀಡದಿದ್ದರೆ ಪ್ರಯೋಜನವೇನು? ಇದರಿಂದ ಪ್ರಯಾಣಿಕರು ಸಹ ಬಳಲುತ್ತಿದ್ದಾರೆ. ಅನೇಕರು ತ್ವರಿತ, ಕಡಿಮೆ ವೆಚ್ಚದ ಸಂಚರಕ್ಕಾಗಿ ಬೈಕ್ ಟ್ಯಾಕ್ಸಿಗಳನ್ನು ಬಳಸುತ್ತಾರೆ. ವಿಶೇಷವಾಗಿ ಬಸ್ಸುಗಳು ಕಡಿಮೆ ಇರುವ ಸ್ಥಳಗಳಲ್ಲಿ ಸಾವಿರಾರು ಜನರಿಗೆ ಕೈಗೆಟುಕುವ ಸೇವೆಯಾಗಿದೆ. ನಾವು ಒಂದು ವರ್ಷದಲ್ಲಿ ಸುಮಾರು 8 ಕೋಟಿ ಟ್ರಿಪ್‌ಗಳನ್ನು ಮಾಡುತ್ತೇವೆ. ಈಗ ಈ ಸವಾರರಿಗೆ ಯಾರು ಸಹಾಯ ಮಾಡುತ್ತಾರೆ ಎಂದು ಪ್ರಶ್ನೆ ಮಾಡಲಾಗಿದೆ.

Norican Group
Shaping Industry
ಡೀಸಾ ಇಂಡಿಯಾ ಲಿಮಿಟೆಡ್
ನೋಂದಾಯಿತ ಕಚೇರಿ: ವರ್ಲ್ಡ್ ಟ್ರೇಡ್ ಸೆಂಟರ್ (ಡಬ್ಲ್ಯೂಟಿಸಿ), 6ನೇ ಮಹಡಿ, ಯೂನಿಟ್ ಸಂ. ಎಸ್-604, ಬ್ರಿಗೇಡ್ ಗೇಟ್‌ವೇ ಕ್ಯಾಂಪಸ್, 26/1, ಡಾ. ರಾಜ್‌ಕುಮಾರ್ ರಸ್ತೆ, ಮಲ್ಲೇಶ್ವರಂ-ರಾಜಾಜಿನಗರ, ಬೆಂಗಳೂರು-560055.
ಫೋನ್: +91 80 2249 6701, ಫ್ಯಾಕ್ಸ್: +91 80 2249 6750.
ಇ-ಮೇಲ್: investor.relations@noricangroup.com www.disagroup.com
CIN No: L85110KA1984PLC006116

ಸೂಚನೆ
ಸಂಸ್ಥೆಯ ಸಾಮಾನ್ಯ ಷೇರುಗಳನ್ನು ಹೂಡಿಕೆದಾರರ ರಕ್ಷಣೆ ಮತ್ತು ಶಿಕ್ಷಣ ನಿಧಿಗೆ ವರ್ಗಾವಣೆ (ಐಇಪಿಎಫ್) ಕುರಿತು

ಹೂಡಿಕೆದಾರರ ರಕ್ಷಣೆ ಮತ್ತು ಶಿಕ್ಷಣ ನಿಧಿ ಪ್ರಾಧಿಕಾರ (ಲೆಕ್ಕ ಪತ್ರ ಪರಿಶೋಧನೆ, ವರ್ಗಾವಣೆ ಮತ್ತು ಮರುಪಾವತಿ) ನಿಯಮಾವಳಿಗಳು 2016 (''ನಿಯಮಾವಳಿಗಳು'') ಮತ್ತು ಇಂದಿನವರೆಗಿನ ತಿದ್ದುಪಡಿಯ ಅನುಸಾರ **2017-18 ಆರ್ಥಿಕ ವರ್ಷದಲ್ಲಿ ಘೋಷಿಸಲಾದ ಅಂತಿಮ ಲಾಭಾಂಶ,** ಯಾವುದು ಏಳು ವರ್ಷಗಳ ಕಾಲ ನಗದೀಕರಿಸಿಕೊಳ್ಳದೆ ಉಳಿದಿದೆಯೋ ಅದನ್ನು ದಿನಾಂಕ **ಅಕ್ಟೋಬರ್ 9, 2025** ರಂದು ಐಇಪಿಎಫ್‌ಗೆ ವರ್ಗಾಯಿಸಲಾಗುವುದು. ಇದಕ್ಕೆ ಅನುಗುಣವಾಗಿ ಸತತ ಏಳು ವರ್ಷಗಳ ಕಾಲ ನಗದೀಕರಿಸದೆ ಉಳಿದ ಲಾಭಾಂಷಕ್ಕೆ ಸಂಬಂಧಿಸಿದ ಷೇರುಗಳನ್ನೂ ನಿಯಾವಳಿಗಳಲ್ಲಿ ಸೂಚಿಸಿರುವ ಪ್ರಕ್ರಿಯೆಗನುಸಾರ ಐಇಪಿಎಫ್‌ಗೆ ವರ್ಗಾಯಿಸಲಾಗುವುದು.

ನ್ಯಾಯಾಲಯ/ಟ್ರಿಬ್ಯೂನಲ್‌ಗಳು ವರ್ಗಾಯಿಸಬಾರದೆಂದು ನಿರ್ದಿಷ್ಟವಾಗಿ ಸೂಚಿಸಿದ ಷೇರುಗಳನ್ನು ಅಥವಾ ಡಿಪಾಸಿಟರೀಸ್ ಕಾಯಿದೆ 1996ರ ಅನುಸಾರ ಆಧಾರಮಾಡಿದ/ಅಡವಿಟ್ಟ ಷೇರುಗಳನ್ನು ಸಂಸ್ಥೆಯು ಐಇಪಿಎಫ್‌ಗೆ ವರ್ಗಾಯಿಸುವುದಿಲ್ಲ.

ನಿಯಮಾವಳಿಗಳಿಗನುಸಾರವಾಗಿ ಸಂಸ್ಥೆಯು ಐಇಪಿಎಫ್‌ಗೆ ವರ್ಗಾವಣೆಯಾಗಲು ಅರ್ಹವಾದ ಷೇರುಗಳ ವಿವರಗಳನ್ನು ಆಯಾ ಷೇರುದಾರರ ಅವಗಾಹನೆಗೆ ವೈಯಕ್ತಿಕವಾಗಿ ತಂದಿದೆ ಹಾಗೂ ತನ್ನ ಜಾಲತಾಣದಲ್ಲಿ ನೀಡಿದೆ. ಸದರಿ ಷೇರುದಾರರು ಕಂಪನಿಯ ಜಾಲತಾಣದ ಈ ಕೊಂಡಿಯನ್ನು https://www.disagroup.com/en-in/investor-relations/investor-grievances ಬಳಸಿಕೊಂಡು ನಗದೀಕರಿಸದ ಲಾಭಾಂಶ ಮತ್ತು ವರ್ಗಾವಣೆಯಾಗುವ ಷೇರುಗಳ ವಿವರಗಳನ್ನು ಪರಿಶೀಲಿಸಬಹುದು.

ಷೇರುದಾರರು 2017-18 ಆರ್ಥಿಕ ವರ್ಷದ ಹಾಗೂ ಆನಂತರದ ವರ್ಷಗಳ ಅಂತಿಮ ಲಾಭಾಂಶವನ್ನು ಐಇಪಿಎಫ್‌ಗೆ ವರ್ಗಾಯಿಸುವ ಮೊದಲು ನಗದೀಕರಿಸಿಕೊಳ್ಳಲು ವಿನಂತಿಮಾಡಲಾಗಿದೆ.

ಐಇಪಿಎಫ್‌ಗೆ ವರ್ಗಾವಣೆಯಾಗಲು ಅರ್ಹವಾಗಿರುವ ಭೌತಿಕ ಷೇರುಗಳನ್ನು ಸಂಸ್ಥೆಯು ಮೂಲ ಷೇರುಗಳ ಬದಲಿಗೆ ದ್ವಿಪ್ರತಿ ಷೇರು ಪ್ರಮಾಣ ಪತ್ರ(ಗಳನ್ನು)ವನ್ನು ಐಇಪಿಎಫ್‌ಗೆ ವರ್ಗಾವಣೆ ಮಾಡುವ ಸಲುವಾಗಿ ಒದಗಿಸುತ್ತದೆ ಮತ್ತು ಸಂಸ್ಥೆಯು ಡಿಪಾಸಿಟರಿಗೆ ಕಾರ್ಪೊರೇಟ್ ಪ್ರಕ್ರಿಯೆಯ ಮೂಲಕ ದ್ವಿಪ್ರತಿ ಷೇರು ಪ್ರಮಾಣಪತ್ರಗಳನ್ನು ಡಿಮ್ಯಾಟ್ ರೂಪಕ್ಕೆ ಬದಲಿಸಿ ಐಇಪಿಎಫ್‌ಗೆ ವರ್ಗಾಯಿಸಲು ತಿಳಿಸುತ್ತದೆ ಎಂಬುದನ್ನು ಗಮನಿಸಬಹುದು. ಮೂಲ ಷೇರುದಾರರ ಹೆಸರಿನಲ್ಲಿ ನೋಂದಾಯಿಸಲಾಗಿರುವ ಮೂಲ ಷೇರು ಪ್ರಮಾಣ ಪತ್ರಗಳು ಸ್ವಯಂಚಾಲಿತವಾಗಿ ರದ್ದುಗೊಳ್ಳುತ್ತವೆ ಮತ್ತು ವಹಿವಾಟಿಗೆ ಅನರ್ಹವಾಗುತ್ತವೆ. ಐಇಪಿಎಫ್‌ಗೆ ವರ್ಗಾವಣೆಯಾಗಲು ಅರ್ಹವಾಗಿರುವ ಡಿಮ್ಯಾಟ್ ರೂಪದಲ್ಲಿರುವ ಷೇರುಗಳನ್ನು ಐಇಪಿಎಫ್ ಡಿಮ್ಯಾಟ್ ಖಾತೆಗೆ ವರ್ಗಾಯಿಸುವಂತೆ ಸಂಸ್ಥೆಯು ಡಿಪಾಸಿಟರಿಗೆ ಕಾರ್ಪೊರೇಟ್ ಪ್ರಕ್ರಿಯೆ ಮೂಲಕ ತಿಳಿಸುತ್ತದೆ.

ಸಂಸ್ಥೆಯು ತನ್ನ ಜಾಲತಾಣದಲ್ಲಿ ಐಇಪಿಎಫ್‌ಗೆ ವರ್ಗಾಯಿಸುವ ಸಲುವಾಗಿ ಒದಗಿಸಿರುವ ಮಾಹಿತಿಯು ಅಗತ್ಯಕ್ಕೆ ಪೂರೈಸುವಷ್ಟಿದೆ ಮತ್ತು ಸಾಕಷ್ಟಿದೆ ಎಂದು ಪರಿಗಣಿಸಿದೆ ಎಂಬುದನ್ನು ಷೇರುದಾರರು ಗಮನಿಸಬಹುದು.

ಒಂದು ವೇಳೆ ಸದರಿ ಷೇರುದಾರರಿಂದ ದಿನಾಂಕ ಸೆಪ್ಟಂಬರ್ 20, 2025ರ ಒಳಗೆ ಯಾವುದೇ ಮಾಹಿತಿ ಬರದಿದ್ದಲ್ಲಿ ನಿಯಮಾವಳಿಯನ್ನು ಅನುಸರಿಸುವ ದೃಷ್ಟಿಯಿಂದ ಸಂಸ್ಥೆಯು ಲಾಭಾಂಶವನ್ನು ಐಇಪಿಎಫ್‌ಗೆ ನಿಗದಿತ ದಿನಾಂಕ ಅಂದರೆ ಅಕ್ಟೋಬರ್ 9, 2025ಕ್ಕೆ ವರ್ಗಾಯಿಸುತ್ತದೆ.

ಸತತ ಏಳು ವರ್ಷಗಳ ಕಾಲ ಯಾವ ಷೇರುಗಳ ಲಾಭಾಂಶಗಳನ್ನು ನಗದೀಕರಿಸಿಲ್ಲವೋ ಅದಕ್ಕೆ ಸಂಬಂಧಿಸಿದ ಷೇರುಗಳನ್ನು ಸಹ ಮುಂದಿನ ಯಾವ ಸೂಚನೆಗಳನ್ನೂ ನೀಡದೆ ಐಇಪಿಎಫ್‌ಗೆ ವರ್ಗಾಯಿಸಲಾಗುವುದು.

ಐಇಪಿಎಫ್‌ಗೆ ವರ್ಗಾವಣೆಯಾದ ನಗದೀಕರಿಸಿಲ್ಲದ ಲಾಭಾಂಶ ಮತ್ತು ಷೇರುಗಳನ್ನು ಕುರಿತು ಯಾವ ಹಕ್ಕು/ಬಾಧ್ಯತೆಗಳೂ ಸಂಸ್ಥೆಯ ವಿರುದ್ಧ ನಿಲ್ಲುವುದಿಲ್ಲ. ಷೇರುದಾರರು ನಿಯಮಾವಳಿಗಳಲ್ಲಿ ಸೂಚಿಸಿರುವ ಪ್ರಕ್ರಿಯೆಯನ್ನು ಅನುಸರಿಸಿ ಐಇಪಿಎಫ್‌ಗೆ ವರ್ಗಾವಣೆಗೊಂಡ ಷೇರುಗಳು, ಲಾಭಾಂಶ ಮತ್ತು ಒಟ್ಟಾಗಿರುವ ಸವಲತ್ತುಗಳು, ಏನಾದರೂ ಇದ್ದಲ್ಲಿ ಐಇಪಿಎಫ್‌ನಿಂದ ಪಡೆದುಕೊಳ್ಳಬಹುದಾಗಿರುತ್ತದೆ.

ಸದರಿ ವಿಷಯ ಕುರಿತಾದ ಯಾವುದೇ ಆಕ್ಷೇಪಗಳಿದ್ದಲ್ಲಿ ಷೇರುದಾರರು ಸಂಸ್ಥೆಯ ರಿಜಿಸ್ಟ್ರಾರ್ ಮತು ಷೇರು ವರ್ಗಾವಣೆ ಏಜೆಂಟ್, ಶ್ರೀ ಹರೀಶ್, ವ್ಯವಸ್ಥಾಪಕರು, ಇಂಟೆಗ್ರೇಟೆಡ್ ರಿಜಿಸ್ಟರಿ ಮ್ಯಾನೇಜ್‌ಮೆಂಟ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್, ನಂ.30, ರಮಣಾ ರೆಸಿಡೆನ್ಸಿ, 4ನೇ ಅಡ್ಡ ರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560003, (ದೂರವಾಣಿ: +91-80-23460815-818, ಫ್ಯಾಕ್ಸ್: +91-80-23460819 ಅಥವಾ ಇ-ಮೇಲ್ irg@integratedindia.in) ಮೂಲಕ ಸಂಪರ್ಕಿಸಬಹುದು.

ಡೀಸಾ ಇಂಡಿಯಾ ಲಿಮಿಟೆಡ್ ಪರವಾಗಿ
ಶ್ರೀತಿ ಎಂ ಎಸ್
ಸಂಸ್ಥೆಯ ಕಾರ್ಯದರ್ಶಿ
ಸ್ಥಳ : ಬೆಂಗಳೂರು
ದಿನಾಂಕ : ಜೂನ್ 16, 2025

ಗದಗ-ಬೆಟಗೇರಿ ನಗರಸಭೆ ಕಾರ್ಯಾಲಯ-582101
ಜಿಲ್ಲಾ : ಗದಗ ರಾಜ್ಯ : ಕರ್ನಾಟಕ
ದೂ : 08372-259932 ಇ-ಮೇಲ್ : ka.gadag.betageri.cmc@gmail.com
ನಂ.ಗಬೆನಸ/ತಾಂ.ವಿ/ವಹಿ/ಟೆಂಡರ್/2025-26 ದಿನಾಂಕ: 13-06-2025

ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕತೆ ಅಧಿನಿಯಮ 1999-2000ರ ಪ್ರಕಾರ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ಸ್ ನಿಯಮದನ್ವಯ ಸನ್ 2025-26ನೇ ಸಾಲಿನ ನಗರಸಭೆ ಅನುದಾನ ಹಾಗೂ ಸನ್ 2024-25ನೇ ಸಾಲಿನ ರೇಲ್ವೆ ಇಲಾಖೆಯ ವಿಶೇಷ ಅನುದಾನದಲ್ಲಿ 02 ಕಾಮಗಾರಿಗಳಿಗೆ ಟೆಂಡರ್‌ಗಿಟ್ಟ ಮೊತ್ತ **ರೂ.21.55ಲಕ್ಷ**ಗಳಿಗೆ ಟೆಂಡರ್ ಆಹ್ವಾನಿಸಿದ್ದು, ಆಸಕ್ತರು ಇ-ಸಂಗ್ರಹಣಾ ವೇದಿಕೆಯಡಿ, **ಇಂಡೆಂಟ್ ನಂ: (1)** DMA/2024-25/OW/WORK_INDENT-36161 (Call-3) ಕುಡಿಯುವ ನೀರಿನ ಕೊಳವೆ ಮಾರ್ಗಗಳನ್ನು ಸ್ಥಳಾಂತರಗೊಳಿಸುವ ಕಾಮಗಾರಿ. **ಇಂಡೆಂಟ್ ನಂ: (2)** DMA/2025-26/OW/WORK_INDENT-40727 (Call-2) ಕೆ.ಎಚ್.ಪಾಟೀಲ ಬಡಾವಣೆಯಲ್ಲಿ ನೀರಿನ ಪೈಪ್‌ಲೈನ್ ಹಾಕುವುದು. **http://kppp.karnataka.gov.in** ರಲ್ಲಿ ಸಂಪರ್ಕಿಸಿ ಟೆಂಡರ್ ಸಲ್ಲಿಸಬಹುದಾಗಿದೆ.

ಬಿಡ್‌ದಾರರು ಟೆಂಡರ್ ವಿವರಗಳನ್ನು ಕೆ.ಪಿ.ಪಿ. ಪೋರ್ಟಲ್‌ನಲ್ಲಿ ಪಡೆದು, ಸಂಬಂಧಿಸಿದ ಇಎಂಡಿ ಟೆಂಡರ್ ಫೀಗಳನ್ನು ಎಲೇಕ್ಟ್ರಾನಿಕ್ ಪದ್ಧತಿಯಲ್ಲಿ ತುಂಬಿ ಈ ಕೆಳಗೆ ನಿಗಧಿ ಪಡಿಸಿದ ದಿನಾಂಕಗಳಂದು ಟೆಂಡರ್ ಸಲ್ಲಿಸಬಹುದಾಗಿದೆ.

ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ	**23-06-2025 Up to 16.00 Hours**
ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ (Technical Bids)	**24-06-2025 Up to 16.30 Hours**

ಸದರಿ ಟೆಂಡರ್‌ಗೆ ಸಂಬಂಧಿಸಿದ ದಿನಾಂಕ ಹಾಗೂ ಇತರೆ ಬದಲಾವಣೆಗಳಾದಲ್ಲಿ KPPP Portal ನಲ್ಲಿ ಪ್ರಕಟಿಸಲಾಗುವುದು, ಪತ್ರಿಕಾ ಪ್ರಕಟಣೆಯಲ್ಲಿ ಪ್ರಕಟಿಸಲಾಗುವುದಿಲ್ಲ.

ಸಹಿ/-ಪೌರಾಯುಕ್ತರು
ಗದಗ-ಬೆಟಗೇರಿ ನಗರಸಭೆ
ವಾ.ಸಾ.ಇ/ಗದಗ/110/ದೇಶಪಾಂಡೆಪಬ್ಲಿಸಿಟಿ/2025-26

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು
NAAC A+ Accredited
ಆಸ್ತಿ ಅಧಿಕಾರಿಗಳ ಕಛೇರಿ, ನಾಯಕ್ ಭವನ, ಜಿಕೆವಿಕೆ, ಬೆಂಗಳೂರು-560 065.
GKVK : 2330153-250 / Direct : 23332765.
Website: www.uasbangalore.edu.in. Email : eo@uasbangalore.edu.in
ಸಂಖ್ಯೆ.ಆಅ/ಟಿ.ಎನ್/2/2025-26, ದಿನಾಂಕ : 12-06-2025

ಟೆಂಡರ್ ಪ್ರಕಟಣೆ
(ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ)

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯಕ್ಕೆ ಕಾಮಗಾರಿ ಕೆಲಸಗಳನ್ನು ಮಾಡಲು ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆಡಬ್ಲ್ಯೂ-1, ಕೆಡಬ್ಲ್ಯೂ-2ರಂತೆ ನೋಂದಣಿ ಪಡೆದ ಕೆಪಿಡಬ್ಲ್ಯೂಡಿ/ಪಿಡಬ್ಲ್ಯೂಡಿ/ಗುತ್ತಿಗೆದಾರರುಗಳಂದ ಹಾಗೂ ನೋಂದಣಿ ಪಡೆದ ಸಂಸ್ಥೆಯಿಂದ **ಕ್ರಮ ಸಂಖ್ಯೆ.1 ರಿಂದ 5 ರವರೆಗಿನ ಕಾಮಗಾರಿಗಳಿಗೆ ಟೆಂಡರನ್ನು ಕರೆಯಲಾಗಿದೆ**. ಟೆಂಡರ್ ಪ್ರಕಟಣೆಯ ವಿವರ, ಟೆಂಡರ್ ದಾಖಲಾತಿ, ಕಾಮಗಾರಿಯ ವಿವರಗಳು ವೆಬ್‌ಸೈಟ್ **https://www.kppp.karnataka.gov.in** ರಲ್ಲಿ ದೊರೆಯುತ್ತದೆ. ಟೆಂಡರ್ ಡಾಕ್ಯುಮೆಂಟ್‌ನ ಶುಲ್ಕ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನಮೂದಿಸಿರುವಂತೆ ಮತ್ತು ಇ.ಎಂ.ಡಿಯನ್ನು ಇ-ಪ್ರೊಕ್ಯೂರ್‌ಮೆಂಟ್ ಮಾದರಿಯಂತೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸಲ್ಲಿಸುವುದು.

ಮೇಲಿನ ಕಾಮಗಾರಿಯು ದ್ವಿಲಕೋಟೆ ಪದ್ಧತಿಯಲ್ಲಿರುತ್ತದೆ. ದ್ವಿಲಕೋಟೆ ಪದ್ಧತಿಯ ಷರತ್ತುಗಳ ವಿವರಗಳನ್ನು ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್‌ರಂತೆ ಅಪ್‌ಲೋಡ್ ಮಾಡಲಾಗಿದೆ.

ಖಾಲಿ ಟೆಂಡರ್ ಡಾಕ್ಯುಮೆಂಟ್‌ಗಳನ್ನು **www.kppp.karnataka.gov.in** ಇಂದ ಪಡೆಯಬಹುದು. ಟೆಂಡರ್ ಸಲ್ಲಿಸುವ ಕೊನೆಯ **ದಿನಾಂಕ: 25-06-2025 ರಂದು ಸಾಯಂಕಾಲ 4.00 ಗಂಟೆಯವರೆಗೆ** ಆಗಿರುತ್ತದೆ. ತಾಂತ್ರಿಕ ಬಿಡ್ಡನ್ನು **ದಿನಾಂಕ: 27-06-2025 ರಂದು ಬೆಳಗ್ಗೆ 10.30ಕ್ಕೆ** ತೆರೆಯಲಾಗುವುದು ಮತ್ತು ಹಣಕಾಸಿನ ಬಿಡ್ಡನ್ನು **ದಿನಾಂಕ: 30-06-2025 ರಂದು ಬೆಳಗ್ಗೆ 10.30ಕ್ಕೆ** ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ದೂರವಾಣಿ **ಸಂಖ್ಯೆ: 080-23332765 ರಲ್ಲಿ** ಸಂಪರ್ಕಿಸುವುದು. ಇ-ಪ್ರೊಕ್ಯೂರ್‌ಮೆಂಟ್‌ನ ಸಹಾಯವಾಣಿ: **support@eprochelpdesk.com** ಅಥವಾ 80460 10000 ಮತ್ತು 8068948777.

ಸಹಿ/-
ಆಸ್ತಿ ಅಧಿಕಾರಿಗಳು
DIPR/CP/RO1258/2025-26

ತೆರಿಗೆ ವಂಚನೆ: 3.02 ಕೋಟಿ ರುಪಾಯಿ ದಂಡ ವಸೂಲಿ

ಐಷಾರಾಮಿ ವಾಹನಗಳ ವಿರುದ್ಧ ಕಾರ್ಯಾಚರಣೆ

ದುಬಾರಿ ಕಾರುಗಳ ವಿರುದ್ಧ ಕಾರ್ಯಾಚರಣೆ ನಡೆಸಿ ಆರ್‌ಟಿಒ ಅಧಿಕಾರಿಗಳು ಹಲವು ವಾಹನಗಳನ್ನು ವಶಪಡೆದಿರುವುದು.

ಬೆಂಗಳೂರು: ತೆರಿಗೆ ವಂಚನೆ ಮತ್ತು ನಕಲಿ ನೋಂದಣಿ ಮೂಲಕ ರಾಜ್ಯ ಸರಕಾರದ ಬೊಕ್ಕಸಕ್ಕೆ ಕೋಟ್ಯಂತರ ರೂಪಾಯಿ ವಂಚಿಸಿದ ಆರೋಪಕ್ಕೆ ಸಂಬಂಧಿಸಿದಂತೆ ದುಬಾರಿ ಕಾರುಗಳ ವಿರುದ್ಧ ಕಾರ್ಯಾಚರಣೆ ನಡೆಸಿದ ಆರ್‌ಟಿಒ ಅಧಿಕಾರಿಗಳು ಹಲವು ವಾಹನಗಳನ್ನು ವಶಕ್ಕೆ ಪಡೆದು ಸುಮಾರು 3.02 ಕೋಟಿ ರು. ದಂಡ ವಸೂಲಿ ಮಾಡಿದ್ದಾರೆ.

ಬೆಂಗಳೂರು ಕೇಂದ್ರದ ಅಪರ ಸಾರಿಗೆ ಆಯುಕ್ತ ಮಲ್ಲಿಕಾರ್ಜುನ್ ನೇತೃತ್ವದಲ್ಲಿ ಮೈಸೂರಿನಲ್ಲಿ ಕಾರ್ಯಾಚರಣೆ ನಡೆಸಿದ ಆರ್‌ಟಿಒ ಅಧಿಕಾರಿಗಳು, ರೋಲ್ಸ್ ರಾಯ್ಸ್ ಕುಲಿನನ್, ಎರಡು ಮರ್ಸಿಡಿಸ್ ರಜಿ63, ಪೋರ್ಷೆ ಕೇಮನ್ ಹಾಗೂ ಆಡಿ ಎ4 ವಾಹನಗಳನ್ನು ವಶಪಡಿಸಿಕೊಡಿದ್ದಾರೆ. ಈ ವಾಹನಗಳ ಒಟ್ಟು ಮೌಲ್ಯ 14.95 ಕೋಟಿ ರೂ. ಎಂದು ಅಂದಾಜಿಸಲಾಗಿದೆ.

ಈ ವಾಹನಗಳು ನಕಲಿ ನೋಂದಣಿ ಮತ್ತು ತೆರಿಗೆ ವಂಚನೆ ಮಾಡಿ ಮೈಸೂರಿನಲ್ಲಿ ಓಡಾಡುತ್ತಿದ್ದವು. ಈ ಕುರಿತು ಖಚಿತ ಮಾಹಿತಿ ಪಡೆದ ಆರ್‌ಟಿಒ ಅಧಿಕಾರಿಗಳು ಕಾರ್ಯಾಚರಣೆ ನಡೆಸಿ ವಾಹನಗಳನ್ನು ವಶಡಿಸಿಕೊಂಡಿದ್ದಲ್ಲದೆ, ವಾಹನ ಮಾಲೀಕರಿಂದ 3.02 ಕೋಟಿ ರು. ದಂಡ ವಸೂಲಿ ಮಾಡಿದ್ದಾರೆ.

ಕಾರ್ಯಾಚರಣೆಯಲ್ಲಿ ಬೆಂಗಳೂರು ದಕ್ಷಿಣ ಹಿರಿಯ ಮೋಟಾರು ನಿರೀಕ್ಷಕ ಎನ್. ರಂಜಿತ್, ಆರ್‌ಟಿಒ 55ರ ಹಿರಿಯ ಮೋಟಾರು ನಿರೀಕ್ಷಕ ಇಮ್ತಿಯಾಜ್ ಪಾಷ, ಪಶ್ಚಿಮ ವಿಭಾಗದ ಮೋಟಾರು ನಿರೀಕ್ಷಕ ವಿಜಯ್ ಕುಮಾರ್, ವಲಯ 9ರ ಆರ್‌ಟಿಒ ರಾಮಚಂದ್ರ ಮತ್ತು ಮೋಟಾರು ನಿರೀಕ್ಷಕ ಅಲಿ ಉದ್ದೀನ್ ಪಾಲ್ಗೊಂಡಿದ್ದರು.

ವಾರಕ್ಕೆರಡು ನೀತಿ ವಿಜ್ಞಾನ ತರಗತಿ

ಬಳ್ಳಾರಿ: ಪ್ರಸಕ್ತ ವರ್ಷದಿಂದ ಎಲ್ಲಾ ಶಾಲೆಗಳಲ್ಲಿ ನೀತಿ ವಿಜ್ಞಾನ ವಿಷಯ ಆರಂಭವಾಗಲಿದೆ. ವಾರದಲ್ಲಿ ಎರಡು ತರಗತಿಗಳು ನಡೆಯಲಿದ್ದು, ಈ ವಿಷಯಕ್ಕೆ ಯಾವುದೇ ಪರೀಕ್ಷೆ ಇರುವುದಿಲ್ಲ ಎಂದು ಶಿಕ್ಷಣ ಸಚಿವ ಮಧು ಬಂಗಾರಪ್ಪ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸರಕಾರಿ ಶಾಲೆಗಳ 50 ಸಾವಿರ ಶಿಕ್ಷಕರಿಗೆ ಅಜೀಮ್ ಪ್ರೇಮ್ ಜೀ ಫೌಂಡೇಶನ್ ನಿಂದ ತರಬೇತಿ ನೀಡಲಾಗುವುದು ಎಂದರು.

ಹತ್ತನೇ ತರಗತಿ ವಿದ್ಯಾರ್ಥಿಗಳನ್ನು ಫೇಲ್ ಎಂದು ಕರೆಯಬಾರದು ಎಂಬ ಉದ್ದೇಶದಿಂದ ಪ್ರಸಕ್ತ ಸಾಲಿನಿಂದ ಎಸ್‌ಎಸ್‌ಎಲ್ ಸಿ ಮೂರು ಪರೀಕ್ಷೆಯನ್ನು ಆಯೋಜಿಸಲಾಗುತ್ತಿದ್ದು, ಪ್ರಸಕ್ತ ಸಾಲಿಗೆ ನಡೆದ ಎಸ್‌ಎಸ್‌ಎಲ್ ಸಿ 2 ಪರೀಕ್ಷೆಯಲ್ಲಿ 84 ಸಾವಿರ ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ. ಒಂದು ವೇಳೆ ಮೂರು ಪರೀಕ್ಷೆಯಲ್ಲಿ ಫೇಲ್ ಆದಲ್ಲಿ ಅಂತಹ ವಿದ್ಯಾರ್ಥಿಗಳನ್ನು ಶಾಲೆಗಳಲ್ಲಿ ಮರು ದಾಖಲಾತಿ ನೀಡಲಾಗುವುದು ಎಂದರು.

ಕಲ್ಯಾಣ ಕರ್ನಾಟಕ ಭಾಗದಲ್ಲಿ ನಾಲ್ಕು ಸಾವಿರ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲು ಕ್ರಮ ಕೈಗೊಳ್ಳಲಾಗುವುದು ಎಂದು ಸಚಿವ ಮಧು ಬಂಗಾರಪ್ಪ ಹೇಳಿದರು.

ಸಂಪುಟ ವಿಸ್ತರಣೆ ಬಗ್ಗೆ ಮಾತನಾಡಲ್ಲ: ಸಿಎಂ ಬದಲಾವಣೆ, ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಬಗ್ಗೆ ಕೇವಲ ಮಾಧ್ಯಮಗಳಲ್ಲಿ ಚರ್ಚೆ ನಡೆಯುತ್ತಿದೆ. ಸಚಿವ ಸಂಪುಟ ವಿಸ್ತರಣೆ ವಿಚಾರದಲ್ಲಿ ಮಾತನಾಡುವಷ್ಟು ದೊಡ್ಡವನಲ್ಲ, ತುಂಬಾ ಚಿಕ್ಕವನು. ನಾನು ಹೈಕಮಾಂಡ್ ತೀರ್ಮಾನಕ್ಕೆ ಬದ್ಧವಾಗಿದ್ದೇನೆ. ಬದಲಾವಣೆ ಬಗ್ಗೆ ಮಾಧ್ಯಮಕ್ಕೆ ಯಾರು ಹೇಳಿದ್ದಾರೆ? ನಿಮ್ಮಷ್ಟಕ್ಕೆ ನೀವೇ ಬರೆದುಕೊಂಡಿದ್ದೀರಾ? ನನಗೆ ಯಾರು ಹೇಳಿಲ್ಲ. ಸಿಎಂ ಬದಲಾವಣೆ, ಸೇರಿದಂತೆ ಯಾವುದೇ ವಿಚಾರಕ್ಕೆ ನೀವು (ಮಾಧ್ಯಮದವರು) ಏನೇ ತಿಪ್ಪರಲಾಗ ಹೊಡೆದರೂ ಹೈಕಮಾಂಡ್ ಬಿಟ್ಟರೆ ಬೇರೆ ಯಾರೂ ಉತ್ತರ ಕೊಡಲು ಅಗಲ್ಲ. ಬದಲಾವಣೆ ಕೂಗು ಪಕ್ಷದಲ್ಲಿದ್ದರೆ ಆ ಕೂಗನ್ನು ಹೈಕಮಾಂಡ್ ಗಮನಿಸುತ್ತದೆ ಎಂದು ಮಧು ಬಂಗಾರಪ್ಪ ಹಾರಿಕೆ ಉತ್ತರ ನೀಡಿದರು.

ರಾಮನಗರ: ಹೃದಯಾಘಾತಕ್ಕೆ ಅಯ್ಯಪ್ಪ ಭಕ್ತ ಸಾವು

ರಾಮನಗರ: ಶಬರಿಮಲೆ ಅಯ್ಯಪ್ಪನ ದರ್ಶನ ಮುಗಿಸಿ ವಾಪಸ್ ಬರುವಾಗ ಕನಕಪುರ ಮೂಲದ 18 ವರ್ಷದ ಅಯ್ಯಪ್ಪನ ಭಕ್ತನೊಬ್ಬ ಹೃದಯಾಘಾತದಿಂದ ಸಾವನ್ನಪ್ಪಿದ್ದಾನೆ.

ಮೃತ ಯುವಕನನ್ನು ಪ್ರಜ್ವಲ್ (18) ಎಂದು ಗುರುತಿಸಲಾಗಿದೆ. ಮೂಲತಃ ಕನಕಪುರ ತಾಲೂಕಿನ ಕೋಡಿಹಳ್ಳಿ ಗ್ರಾಮದ ನಿವಾಸಿ ಪ್ರಜ್ವಲ್, ಕಳೆದ ಹಲವು ವರ್ಷಗಳಿಂದ ಬೆಂಗಳೂರಿನ ವಿಜಯನಗರದಲ್ಲಿ ವಾಸವಾಗಿದ್ದ.

ಕಳೆದ ಎರಡು ದಿನಗಳ ಹಿಂದೆ ತಂದೆ ಹಾಗೂ ಸ್ನೇಹಿತರ ಜೊತೆ ಅಯ್ಯಪ್ಪನ ದರ್ಶನಕ್ಕೆ ತೆರಳಿದ್ದ. ಅಯ್ಯಪ್ಪನ ದರ್ಶನ ಮುಗಿಸಿ, ಬೆಟ್ಟ ಇಳಿಯುವಾಗ ಪ್ರಜ್ವಲ್‌ಗೆ ಹೃದಯಾಘಾತವಾಗಿದೆ. ಕೂಡಲೇ ಸ್ಥಳೀಯರ ಸಹಾಯದಿಂದ ಯುವಕನನ್ನು ಆಸ್ಪತ್ರೆಗೆ ಕರೆದೊಯ್ಯುವ ವ್ಯವಸ್ಥೆ ಮಾಡಲಾಯಿತು. ಆದರೆ ಮಾರ್ಗ ಮಧ್ಯೆಯೇ ಸಾವನ್ನಪ್ಪಿದ್ದಾನೆ. ಸ್ಥಳಕ್ಕೆ ಶಬರಿಮಲೆ ಪೊಲೀಸರ ಭೇಟಿ ನೀಡಿ, ಪರಿಶೀಲನೆ ನಡೆಸಿದ್ದಾರೆ.

ಸಮಾಚಾರ ಸಣ್ಣದಲ್ಲ

ಕೀಟನಾಶಕ ಸೇವಿಸಿ ಇಬ್ಬರು ಸಾವು

ಕೋಲಾರ: ಜಿಲ್ಲೆಯ ಶ್ರೀನಿವಾಸಪುರ ತಾಲೂಕಿನ ಗುಂಟಪಲ್ಲಿ ಗ್ರಾಮದಲ್ಲಿ ಈ ದುರಂತ ನಡೆದಿದೆ. ಕೋಳಿ ಫಾರಂಗೆ ಸಿಂಪಡಿಸಲು ತಂದಿದ್ದ ಕೀಟನಾಶಕವನ್ನು ನೀರೆಂದು ತಿಳಿದು ಕುಡಿದು ಸಾವನ್ನಪ್ಪಿದ್ದಾರೆ. ದೇವಪ್ಪ (60) ಹಾಗೂ ದಾಸಪ್ಪ (62) ಮೃತ ದುರ್ದೈವಿಗಳು. ಕೋಳಿಫಾರಂ ಗೆ ಗೊಬ್ಬರ ತುಂಬಲು ಹೋಗಿದ್ದ ವೇಳೆ ಈ ಘಟನೆ ನಡೆದಿದೆ. ಸೋಮವಾರ ಮಧ್ಯಾಹ್ನ ಊಟದ ಬಳಿಕ ನೀರು ಎಂದು ಭಾವಿಸಿ ಕೀಟನಾಶಕವನ್ನು ಸೇವಿಸಿ ತೀವ್ರ ಅಸ್ವಸ್ಥರಾಗಿದ್ದರು. ತಕ್ಷಣ ಇಬ್ಬರನ್ನು ಆಸ್ಪತ್ರೆಗೆ ಕರೆದೊಯ್ಯುತ್ತಿದ್ದಾಗ ಮಾರ್ಗಮಧ್ಯೆಯೇ ಇಬ್ಬರೂ ಕಾರ್ಮಿಕರು ಕೊನೆಯುಸಿರೆಳೆದಿದ್ದಾರೆ.

ಎಟಿಎಂ ದರೋಡೆ: 27 ಲಕ್ಷ ರು. ಕಳವು

ಕೋಲಾರ: ಇಲ್ಲಿನ ಸಹಕಾರ ನಗರದ ಎಸ್‌ಬಿಐ ಬ್ಯಾಂಕ್‌ನ ಎಟಿಎಂನಲ್ಲಿದ್ದ ಸುಮಾರು 27 ಲಕ್ಷ ರು. ಹಣವನ್ನು ಕಳ್ಳರು ದೋಚಿದ್ದಾರೆ. ಕೋಲಾರ ನಗರದ ಗಲ್ ಪೇಟೆ ಪೊಲೀಸ್ ಠಾಣೆಯ ಸಮೀಪ ಈ ಘಟನೆ ನಡೆದಿದೆ. ಎಟಿಎಂನಲ್ಲಿ ಸುಮಾರು 27 ಲಕ್ಷ ರು. ಹಣ ಇತ್ತು. ಕಳ್ಳರು ಎಲ್ಲಾ ಹಣವನ್ನು ದೋಚಿದ್ದಾರೆ. ಸ್ಥಳಕ್ಕೆ ಕೋಲಾರ ಎಸ್ಪಿ ನಿಖಿಲ್ ಸೇರಿದಂತೆ ಬೆರಳಚ್ಚು ತಜ್ಞರು, ಶ್ವಾನದಳ ಸಿಬ್ಬಂದಿ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಈ ಸಂಬಂಧ ಗಲ್ ಪೇಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಿಜೆಪಿ ಮನೆ ಕೊಟ್ಟಿದ್ದರೆ ರಾಜಕೀಯ ನಿವೃತ್ತಿ

ಕೋಲಾರ: ಬಿಜೆಪಿ ಸರಕಾರದ ಅವಧಿಯಲ್ಲಿ ಕೊಳೆಗೇರಿ ಅಭಿವೃದ್ಧಿ ಮಂಡಳಿ ಅಥವಾ ರಾಜೀವ್ ಗಾಂಧಿ ವಸತಿ ನಿಗಮದ ಯೋಜನೆಗಳಡಿ ಕನಿಷ್ಠ ಒಂದು ಮನೆ ಕೊಟ್ಟಿದ್ದರೆ ನಾನು ರಾಜಕೀಯ ನಿವೃತ್ತಿ ಪಡೆಯುತ್ತೇನೆ. ಇದು ಬಿಜೆಪಿಗೆ ನನ್ನ ಸವಾಲು' ಎಂದು ವಸತಿ ಸಚಿವ ಜಮೀರ್ ಅಹ್ಮದ್ ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿ, ಸಿದ್ದರಾಮಯ್ಯ ಮೊದಲ ಅವಧಿಯಲ್ಲಿ ಮುಖ್ಯಮಂತ್ರಿ ಆಗಿದ್ದಾಗ ಕೊಳೆಗೇರಿ ಮಂಡಳಿಗೆ 1.8 ಲಕ್ಷ ಮನೆ ಹಾಗೂ ರಾಜೀವ್ ಗಾಂಧಿ ಯೋಜನೆಯಡಿ 47,860 ಮನೆ ನೀಡಲು ಅನುಮೋದನೆ ನೀಡಿದ್ದರು. ನಂತರ ಸಮ್ಮಿಶ್ರ ಸರಕಾರದಲ್ಲಿ ಕುಮಾರಸ್ವಾಮಿ, ಬಿಜೆಪಿ ಸರಕಾರದಲ್ಲಿ ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿಯಾಗಿ ಆಡಳಿತ ನಡೆಸಿದರು. ಒಂದು ಮನೆ ಕೊಡಲೂ ಅವರಿಗೆ ಸಾಧ್ಯವಾಗಲಿಲ್ಲ. ಅವರಿಗೆ ಬಡವರ ಬಗ್ಗೆ ಕಾಳಜಿ ಇಲ್ಲ ಎಂದರು. ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿ ಮನೆ ನಿರ್ಮಾಣಕ್ಕೆ ಕೇಂದ್ರ ಸರಕಾರದವರು 1.50ಲಕ್ಷ ಕೊಡುತ್ತಾರೆ. ಆದರೆ, ಜಿಎಸ್‌ಟಿ ಹಾಕಿ 1.38 ಲಕ್ಷ ವಾಪಸ್ ಪಡೆಯುತ್ತಾರೆ ಎಂದರು.

ಟ್ವೀಟೂ-ಖಾರಾ

ಕರ್ನಾಟಕ ಕಾಂಗ್ರೆಸ್

ಸುಳ್ಳು ಅಪಪ್ರಚಾರ, ತೇಜೋವಧೆಯೇ ತಮ್ಮ ಬಂಡವಾಳ ಎಂದು ಮತ್ತೆ ಮತ್ತೆ ಸಾಬೀತು ಪಡಿಸುತ್ತಲೇ ಇರುತ್ತದೆ. ರಾಜ್ಯ ಕಾಂಗ್ರೆಸ್ ಸರಕಾರದ ಜನಪ್ರಿಯತೆಯನ್ನು ಸಹಿಸದೆ ತಿರುಚಿದ, ಸತ್ಯವನ್ನು ಮುಚ್ಚಿಟ್ಟ ಸಂಗತಿಗಳ ಮೂಲಕ ಜನರ ದಿಕ್ಕು ತಪ್ಪಿಸಿ ಜನಪರ ಸರಕಾರದ ವಿರುದ್ಧ, ಸಿಎಂ – ಡಿಸಿಎಂ ವಿರುದ್ಧ ಎತ್ತಿ ಕಟ್ಟುವ ನಿಮ್ಮ ಪ್ರಯತ್ನ ಫಲಿಸುವುದಿಲ್ಲ. ಕಾಲೇಜಿನ ಪ್ರಾಂಶುಪಾಲರ ನಡೆಯ ಬಗ್ಗೆ ತಕ್ಷಣವೇ ಆಡಳಿತ ಮಂಡಳಿ ಗಮನ ವಹಿಸಿ ಶಿಕ್ಷಕನ ರಾಜೀನಾಮೆ ಹಿಂಪಡೆದು ಆದ ಅಚಾತುರ್ಯವನ್ನು ಸರಿಪಡಿಸಿದೆ. ಆ ಶಿಕ್ಷಕನಿಗೆ ಎಂದಿನಂತೆ ಕರ್ತವ್ಯ ನಿರ್ವಹಿಸುವಂತೆಯೂ ಸೂಚಿಸಿದೆ.

ಕೆ.ಪುಟ್ಟಸ್ವಾಮಿ

ಕಾಂಗ್ರೆಸ್, ಬಿಜೆಪಿ ಎರಡೂ ಪಕ್ಷಗಳು ಕನ್ನಡ ಭಾಷೆಗೆ ಕನ್ನಡ ನಾಡಿಗೆ ಕಂಟಕ. ಒಂದೇ ನಾಣ್ಯದ ಎರಡು ಮುಖಗಳು ಈ ಎರಡು ಹಿಂದಿಪಕ್ಷಗಳು.

ಮುಳ್ಳಯ್ಯನಗಿರಿ-ದತ್ತಪೀಠ ಮಾರ್ಗದಲ್ಲಿ ಮರ ಬಿದ್ದು ರಸ್ತೆ ಬಂದ್.

ಮಂಗಳೂರು ಸಮೀಪದ ಗುರುಪುರದಲ್ಲಿ ಫಲ್ಗುಣಿ ನದಿ ಉಕ್ಕಿ ಹರಿಯುತ್ತಿರುವುದು.

ನೇತ್ರಾವತಿ ನದಿ ನೀರಿನಿಂದ ಮುಳುಗಡೆ ಭೀತಿಯಲ್ಲಿರುವ ಧರ್ಮಸ್ಥಳದ ಸ್ನಾನಘಟ್ಟ.

ಕರಾವಳಿ, ಮಲೆನಾಡಲ್ಲಿ ಮುಂದುವರಿದ ಮಳೆ | ಮರ, ಗೋಡೆ ಬಿದ್ದು ಇಬ್ಬರು ಸಾವು | ಜಲಾಶಯಗಳಿಗೆ ಜೀವಕಳೆ

ರಾಜ್ಯದಲ್ಲಿ ನಿಲ್ಲದ ಮಳೆರಾಯನ ರಗಳೆ

ಬೆಂಗಳೂರು: ವರುಣನ ರೌದ್ರ ನರ್ತನಕ್ಕೆ ಕರಾವಳಿ, ಮಲೆನಾಡು ಜಿಲ್ಲೆಗಳು ನಲುಗಿ ಹೋಗಿವೆ. ಕಳೆದ ಮೂರ್ನಾಲ್ಕು ದಿನಗಳಿಂದ ಎಡೆಬಿಡದೇ ಸುರಿಯುತ್ತಿರುವ ಮಳೆಯಿಂದ ಕರಾವಳಿ, ಮಲೆನಾಡು ಸಂಚಾರ ದುಸ್ತರ ಆಗಿದೆ. ಗುಡ್ಡ ಕುಸಿತ, ಮರಗಳು ಧಾರಾಶಾಹಿ ಹಿನ್ನೆಲೆ ಹಲವೆಡೆ ರಸ್ತೆಗಳನ್ನು ಬಂದ್ ಮಾಡಲಾಗಿದೆ. ಚಿಕ್ಕಮಗಳೂರು ಹಾಗೂ ಶಿವಮೊಗ್ಗದಲ್ಲಿ ತಲಾ ಒಬ್ಬರು ಮಳೆ ಅವಾಂತರಕ್ಕೆ ಉಸಿರು ಚೆಲ್ಲಿದ್ದಾರೆ.

ಧರೆಗೆ ಬಿದ್ದ ಮರ, ಟ್ರಾಫಿಕ್ ಜಾಮ್: ಚಿಕ್ಕಮಗಳೂರಲ್ಲಿ ಮುಂದುವರಿದ ಬಿರುಗಾಳಿ ಮಳೆಗೆ ಹಲವೆಡೆ ಮರಗಳು ನೆಲಕ್ಕೆ ಉರುಳಿ ಬಿದ್ದಿವೆ. ಬಿರುಗಾಳಿಗೆ ಚಿಕ್ಕಮಗಳೂರು ತಾಲೂಕಿನ ಬಸರವಳ್ಳಿ ಬಳಿ ಬುಡ ಸಮೇತ ರಸ್ತೆಗೆ ಅಡ್ಡಲಾಗಿ ಬಿದ್ದ ಬೃಹತ್ ಮರದಿಂದ ಕಿಲೋಮೀಟರ್‌ಗಟ್ಟಲೇ ಟ್ರಾಫಿಕ್ ಜಾಮ್ ಉಂಟಾಗಿತ್ತು. ಚಿಕ್ಕಮಗಳೂರು-ಬಾಳೆಹೊನ್ನೂರು, ಶೃಂಗೇರಿ, ಕೊಪ್ಪ, ಎನ್.ಆರ್ ಪುರಕ್ಕೆ ತೆರಳುವ ವಾಹನ ಸವಾರರು ಪರದಾಡಿದರು.

ಸಂಚಾರ ನಿಷೇಧ: ಶೃಂಗೇರಿ-ಮಂಗಳೂರು ಸಂಪರ್ಕ ಕಲ್ಪಿಸುವ ರಾಷ್ಟ್ರೀಯ ಹೆದ್ದಾರಿ 169ರಲ್ಲಿ ನಿರಂತರವಾಗಿ ಮಣ್ಣು ಕುಸಿಯುತ್ತಿದೆ. ಇನ್ನು ಗುಡ್ಡ ಕುಸಿಯುವ ಆತಂಕ ಇದ್ದು, ಶೃಂಗೇರಿ-ಮಂಗಳೂರು ನಡುವೆ ಭಾರೀ ವಾಹನಗಳ ಸಂಚಾರ ನಿಷೇಧಿಸಲಾಗಿದೆ. ತನಿಕೋಡು ಚೆಕ್‌ಪೋಸ್ಟ್ ನಿಂದ ಎಸ್.ಕೆ ಬಾರ್ಡರ್ ವರೆಗೂ ವಾಹನಕ್ಕೆ ನಿಷೇಧ ಮಾಡಿದೆ. ಸೆಪ್ಟೆಂಬರ್ 30ರ ವರೆಗೆ ಭಾರೀ ವಾಹನಗಳ ಓಡಾಟ ಬಂದ್ ಮಾಡಲಾಗಿದೆ. ಬಾಳೆಹೊನ್ನೂರು, ಮಾಗುಂಡಿ, ಕಳಸ, ಕುದುರೆಮುಖ, ಎಸ್.ಕೆ ಬಾರ್ಡರ್ ಮೂಲಕ ಸಂಚರಿಸಲು ಜಿಲ್ಲಾಧಿಕಾರಿ ಮೀನಾ ನಾಗರಾಜ್ ಆದೇಶ ಹೊರಡಿಸಿದ್ದಾರೆ.

ಮೂಡಿಗೆರೆ-ಬೇಲೂರು ಸಂಚಾರ ಅಸ್ತವ್ಯಸ್ತ: ಮಾರ್ಗ ಮಧ್ಯದ ನಂದೀಪುರ ಗ್ರಾಮದ ಬಳಿ ಬೃಹತ್ ಮರ ಬಿದ್ದು ರಸ್ತೆ ಸಂಚಾರ ಸ್ಥಗಿತಗೊಂಡಿದೆ. ಮರ ತೆರವುಗೊಳಿಸಲು ಗೋಣಿಬೀಡು ಠಾಣೆ ಪೊಲೀಸರು ಹಾಗೂ ಸ್ಥಳೀಯರ ಹರಸಾಹಸಪಟ್ಟಿದ್ದಾರೆ. ಕಿ.ಮೀ.ಗಟ್ಟಲೇ ಟ್ರಾಫಿಕ್ ಜಾಮ್ ಉಂಟಾಗಿದೆ. ಮುಳ್ಳಯ್ಯನಗಿರಿ, ದತ್ತಪೀಠಕ್ಕೆ ತೆರಳುವ ರಸ್ತೆಯಲ್ಲಿನ ಕೈಮರ ಸಮೀಪ ರಸ್ತೆಗೆ ಭಾರಿ ಗಾತ್ರದ ಮರವೊಂದು ಉರುಳಿ ಬಿದ್ದಿದೆ. ಕೊಪ್ಪ ತಾಲೂಕಿನ ಮೇಗೂರು ಬಳಿಯೂ ಮರವೊಂದು ಧರೆಗುರುಳಿದೆ. ಅದೃಷ್ಟವಶಾತ್ ಯಾವುದೇ ಅನಾಹುತ ಸಂಭವಿಸಿಲ್ಲ. ಪೊಲೀಸರು ಹಾಗೂ ಸ್ಥಳೀಯರು ಮರ ತೆರವು ಮಾಡಿಸಿದ್ದಾರೆ.

ದಕ್ಷಿಣ ಕನ್ನಡದಲ್ಲಿ ಮುಂದುವರಿದ ಮಳೆ: ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ಕಳೆದ ಮೂರು ದಿನಗಳಿಂದ ಸುರಿಯುತ್ತಿರುವ ಧಾರಾಕಾರ ಮಳೆಯಿಂದಾಗಿ ವಿವಿಧೆಡೆ ಹಾನಿ ಸಂಭವಿಸಿದೆ. ಮಂಗಳೂರು ನಗರದ ಮಾಲೆಮಾರ್, ಕೊಟ್ಟಾರಚೌಕಿ, ಜೆಪ್ಪಿನಮೊಗರು, ಪಾಂಡೇಶ್ವರ, ಸುಭಾಶ್ ನಗರ ಸಹಿತ ಹಲವೆಡೆ ತಗ್ಗು ಪ್ರದೇಶಗಳಲ್ಲಿ ಕೃತಕ ನೆರೆ ಸೃಷ್ಟಿಯಾಗಿತ್ತು. ಕಾಮಗಾರಿ ಪ್ರಗತಿಯಲ್ಲಿರುವ ಮಹಾಕಾಳಿಪಡ್ಪು ರೈಲ್ವೆ ಅಂಡರ್ ಪಾಸ್, ಬಜಾಲ್ ರೈಲ್ವೆ ಅಂಡರ್ ಪಾಸ್‌ನಲ್ಲಿ ನೀರು ನಿಂತಿದೆ. ನಗರದಲ್ಲಿ ಹಲವೆಡೆ ವಿದ್ಯುತ್ ಕಂಬಗಳು, ಮರಗಳು ಅಪಾಯದ ಸ್ಥಿತಿಯಲ್ಲಿವೆ. ಪಂಪ್‌ವೆಲ್‌ನ ಮಜಿಕೋಡಿ, ಜೆಪ್ಪಿನಮೊಗರು, ಕೊಟ್ಟಾರಚೌಕಿ, ಮಾಲೆಮಾರ್ ಮೊದಲಾದ ಭಾಗಗಳಲ್ಲಿ ನೆರೆ ನೀರು ಮನೆಗೆ ನುಗ್ಗಿ ಅವಾಂತರ ಸೃಷ್ಟಿಸಿದೆ. ಈಗಾಗಲೇ ರಾಷ್ಟ್ರೀಯ ಹೆದ್ದಾರಿಯಲ್ಲಿರುವ ಕೆತ್ತಿಕಲ್‌ನಲ್ಲಿ ಗುಡ್ಡ ಕುಸಿದು ಆತಂಕ ಸೃಷ್ಟಿಯಾಗಿದ್ದು, ನಗರದ ಕದ್ರಿ, ಶಿವಭಾಗ್, ಕಂಕನಾಡಿಯಲ್ಲೂ ಬೃಹತ್ ತಡೆ ಗೋಡೆಗಳು ಉರುಳಿ ಬಿದ್ದು ಕೆಲ ಮನೆಗಳಿಗೆ ಹಾನಿಯಾಗಿದೆ. ಜಿಲ್ಲೆಯ ಹಲವೆಡೆ ತಗ್ಗು ಪ್ರದೇಶ ಗಳಲ್ಲಿರುವ ಹಲವು ಮನೆಗಳು ಜಲಾವೃತವಾಗಿದೆ.

ಕೆಲವೆಡೆ 200 ಮಿ.ಮೀ ದಾಟಿದ ಮಳೆಯ ಪ್ರಮಾಣ: ಕೆಎಸ್‌ಡಿಎಂಸಿ ವರದಿ ಪ್ರಕಾರ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಳೆದ 24 ಗಂಟೆಗಳಲ್ಲಿ ವ್ಯಾಪಕ ಮಳೆಯಾಗಿದ್ದು, ಕೆಲವೆಡೆ ಭಾರೀ ಮಳೆ ದಾಖಲಾಗಿದೆ. ಜಿಲ್ಲೆಯಾದ್ಯಂತ ವಿವಿಧ ಸ್ಥಳಗಳಲ್ಲಿ 54 ಮಿ.ಮೀ.ನಿಂದ 215.5 ಮಿ.ಮೀವರೆಗೂ ಮಳೆಯಾಗಿದೆ.

ಸಕಲೇಶಪುರದ ಬಳಿ ಗುಡ್ಡ ಕುಸಿತ: ಸಕಲೇಶಪುರ ತಾಲೂಕಿನ ಹೆಗ್ಗದ್ದೆ ಗ್ರಾಮದ ಬಳಿ ಭಾರೀ ಪ್ರಮಾಣದಲ್ಲಿ ಮಣ್ಣು ಹೆದ್ದಾರಿ ಮೇಲೆ ಕುಸಿದಿದೆ. ಪರಿಣಾಮ ಶಿರಾಡಿಘಾಟ್ ರಸ್ತೆ 75 ರಲ್ಲಿ ಸಂಚಾರ ದಟ್ಟಣೆ ಉಂಟಾಗಿತ್ತು. ಮೊದಲೇ ಒಂದು ಬದಿಯ ಸಂಚಾರಕ್ಕೆ ರಸ್ತೆ ಬಂದ್ ಮಾಡಿದ್ದರಿಂದ ಭಾರೀ ಅನಾಹುತ ತಪ್ಪಿದೆ. ಇಟಾಚಿಗಳ ಮೂಲಕ ಮಣ್ಣು ತೆರವು ಕಾರ್ಯಭರದಿಂದ ಸಾಗಿದ್ದು, ಅಧಿಕಾರಿಗಳು ಸ್ಥಳದಲ್ಲೇ ಬೀಡು ಬಿಟ್ಟಿದ್ದಾರೆ.

ಅವಘಡದಿಂದ ಯುವಕರು ಬಚಾವ್: ಭಾರೀ ಮಳೆಯಿಂದ ರಭಸವಾಗಿ ಹರಿಯುತ್ತಿದ್ದ ನದಿ ನೀರು ದಾಟಲು ಹೋಗಿ ಆಪತ್ತಿನಲ್ಲಿ ಸಿಲುಕಿದ್ದ ಇಬ್ಬರು ಯುವಕರು ಬಚಾವ್ ಆಗಿದ್ದಾರೆ. ದಕ್ಷಿಣಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲೂಕಿನ ಸವಣಾಲು ಗ್ರಾಮದಲ್ಲಿ ಘಟನೆ ನಡೆದಿದೆ. ಬೈಕ್ ಸಮೇತ ನೀರಿನಲ್ಲಿ ಕೊಚ್ಚಿ ಹೋಗುತ್ತಿದ್ದ ಸತೀಶ್, ಸಂಜೀವ ಪೂಜಾರಿ ಈಜಿ ಪ್ರಾಣಾಪಾಯದಿಂದ ಪಾರಾಗಿದ್ದು, ಬೈಕ್ ನದಿ ಪಾಲಾಗಿದೆ.

ಧರ್ಮಸ್ಥಳ ಸ್ನಾನಘಟ್ಟ ಮುಳುಗಡೆ: ಪಶ್ಚಿಮ ಘಟ್ಟ ಪ್ರದೇಶದಲ್ಲಿ ಧಾರಾಕಾರ ಮಳೆ ಸುರಿಯುತ್ತಿದ್ದು, ನೇತ್ರಾವತಿ ನದಿ ಧುಮ್ಮಿಕ್ಕಿ ಹರಿಯುತ್ತಿದೆ. ಪರಿಣಾಮ ಧರ್ಮಸ್ಥಳದಲ್ಲಿ ಸ್ನಾನಘಟ್ಟ ಮುಳುಗಡೆಯಾಗಿದೆ. ಯಾತ್ರಾರ್ಥಿಗಳು ನದಿಗೆ ಇಳಿಯದಂತೆ ದೇವಸ್ಥಾನ ಆಡಳಿತ ಮಂಡಳಿ ಹಾಗೂ ಬೆಳ್ತಂಗಡಿ ತಾಲೂಕು ಕಂದಾಯ ಅಧಿಕಾರಿಗಳು ಎಚ್ಚರಿಕೆ ನೀಡಿದ್ದಾರೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಧಾರಾಕಾರ ಮಳೆ ಸುರಿಯುತ್ತಿದ್ದು, ಜನಜೀವನ ಸಂಪೂರ್ಣ ಅಸ್ತವ್ಯಸ್ತಗೊಂಡಿದೆ. ಕೆಲವೆಡೆ ಗುಡ್ಡ ಕುಸಿತ ಹಾಗೂ ಮರಗಳು ಧರೆಗುರುಳಿ ಹೆದ್ದಾರಿ ಸಂಚಾರಕ್ಕೆ ಅಡಚಣೆಯಾಗಿದ್ದು, ಹಲವು ತಗ್ಗು ಪ್ರದೇಶಗಳು ಜಲಾವೃತವಾಗಿ ಜನ ಪರದಾಡುವ ಸ್ಥಿತಿ ನಿರ್ಮಾಣವಾಗಿದೆ.

ಹೊನ್ನಾವರದಲ್ಲಿ ಹೆದ್ದಾರಿ ಬಂದ್: ಹೊನ್ನಾವರ ತಾಲೂಕಿನ ಬಾಳೆಗದ್ದೆ ಗ್ರಾಮದ ಬಳಿ ಮಳೆ ಅಬ್ಬರಕ್ಕೆ ವಿದ್ಯುತ್ ಕಂಬದ ಸಮೇತ ಬೃಹತ್ ಗಾತ್ರದ ಮರವೊಂದು ಹೆದ್ದಾರಿಗೆ ಉರುಳಿದೆ. ಇದರಿಂದ ಬೆಂಗಳೂರು-ಹೊನ್ನಾವರ ಹೆದ್ದಾರಿಯಲ್ಲಿ ಸಂಚಾರ ಸಂಪೂರ್ಣವಾಗಿ ಬಂದ್ ಆಗಿತ್ತು. ರಸ್ತೆಯ ಎರಡೂ ಬದಿ ನೂರಾರು ವಾಹನಗಳು ಸಾಲುಗಟ್ಟಿ ನಿಂತಿದ್ದವು.

ಜೋಯಿಡಾದಲ್ಲಿ ಮನೆ ಮೇಲೆ ಬಿದ್ದ ಮರಗಳು: ಜೋಯಿಡಾ ತಾಲೂಕಿನ ಸಾಂಗ್ವೆ ಗ್ರಾಮದಲ್ಲಿ ಸೋಮವಾರ ನಸುಕಿನ 2 ಗಂಟೆ ಸುಮಾರಿಗೆ ಭಾರಿ ಗಾಳಿ ಮಳೆಗೆ ಪ್ರಭಾವತಿ ಶಿವಾ ವೆಳಿಪ್ ಎಂಬವರ ಮನೆ ಮೇಲೆ ಏಕಕಾಲದಲ್ಲಿ ಮೂರು ಮರಗಳು ಉರುಳಿ ಬಿದ್ದು ಅಪಾರ ಹಾನಿಯಾಗಿದೆ. ಮನೆಯಲ್ಲಿದ್ದವರು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಆರ್ಥಿಕವಾಗಿ ತೀರ ಬಡ ಕುಟುಂಬವಾಗಿರುವ ಇವರಿಗೆ ಸೂಕ್ತ ಪರಿಹಾರ ನೀಡಲು ಸಂಬಂಧಪಟ್ಟ ಇಲಾಖೆಗಳು ಕ್ರಮ ಕೈಗೊಳ್ಳುವಂತೆ ಮನವಿ ಮಾಡಲಾಗಿದೆ.

ಹಾರಂಗಿ ಡ್ಯಾಂ ಭರ್ತಿ

ಕೊಡಗಿನಲ್ಲಿ ಮುಂಗಾರು ಮಳೆ ಮುಂದುವರಿದಿದ್ದು, ಕುಶಾಲನಗರ ಸಮೀಪದ ಹಾರಂಗಿ ಜಲಾಶಯದಲ್ಲಿ ನೀರಿನ ಮಟ್ಟ ದಿನೆ ದಿನೇ ಹೆಚ್ಚಾಗುತ್ತಿದೆ. ಕಳೆದ 10 ವರ್ಷಗಳಲ್ಲಿ ಇದೇ ಮೊದಲ ಬಾರಿಗೆ ಜೂನ್ ತಿಂಗಳಿನಲ್ಲಿ 4000 ಕ್ಯೂಸೆಕ್ ಪ್ರಮಾಣದ ನೀರನ್ನು ಜಲಾಶಯದಿಂದ ಹೊರಗೆ ಬಿಡಲಾಗಿದೆ. ಜಲಾಶಯದ ನಾಲ್ಕು ಕ್ರೆಸ್ಟ್ ಗೇಟ್ ಗಳ ಮೂಲಕ ನೀರನ್ನು ಜಲಾಶಯದಿಂದ ಹೊರಗೆ ಬಿಡುಗಡೆ ಮಾಡಲಾಗುತ್ತಿದೆ.

ತುಂಗಾ ಜಲಾಶಯ ಭರ್ತಿ

ಶಿವಮೊಗ್ಗ ಜಿಲ್ಲೆಯಲ್ಲಿ ಸುರಿಯುತ್ತಿರುವ ಧಾರಾಕಾರ ಮಳೆಯಿಂದ ವಾಡಿಕೆಗಿಂತ ಪೂರ್ವದಲ್ಲೇ ತುಂಗಾ ಜಲಾಶಯ ಭರ್ತಿಯಾಗಿದ್ದು, 24 ಕ್ರಸ್ಟ್‌ಗೇಟ್‌ಗಳ ಮೂಲಕ ನದಿಗೆ ನೀರು ಹರಿಸಲಾಗುತ್ತಿದೆ. ಜಲಾಶಯಕ್ಕೆ 37 ಸಾವಿರ ಕ್ಯೂಸೆಕ್ ಒಳ ಹರಿವು ಇದ್ದು, 37 ಸಾವಿರ ಕ್ಯೂಸೆಕ್ ನೀರು ಹೊರಗೆ ಬಿಡಲಾಗುತ್ತಿದೆ. ಇನ್ನು ಹೆಚ್ಚಿನ ಪ್ರಮಾಣದಲ್ಲಿ ನೀರು ಹೊರ ಹರಿಸುವ ಸಾಧ್ಯತೆ ಇದ್ದು, ನದಿಗೆ ಇಳಿಯದಂತೆ ಜನರಿಗೆ ಶಿವಮೊಗ್ಗ ಜಿಲ್ಲಾಡಳಿತ ಎಚ್ಚರಿಕೆ ಕೊಟ್ಟಿದೆ.

ದೇವಿಮನೆ ಘಟ್ಟ ಕುಸಿತ

ಕುಮಟಾ-ಶಿರಸಿ ಹೆದ್ದಾರಿಯ ದೇವಿಮನೆ ಘಟ್ಟದಲ್ಲಿ ಪದೇ ಪದೆ ಗುಡ್ಡ ಕುಸಿತ ಸಂಭವಿಸುತ್ತಿದ್ದು, ವಾಹನ ಸವಾರರ ಸುರಕ್ಷತೆಯ ದೃಷ್ಟಿಯಿಂದ ಸಂಜೆ 6ರಿಂದ ಬೆಳಗ್ಗೆ 6 ಗಂಟೆಯವರೆಗೆ ವಾಹನ ಸಂಚಾರವನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ. ಹೆದ್ದಾರಿಯ ಎರಡೂ ಕಡೆ ಬ್ಯಾರಿಕೇಡ್‌ಗಳನ್ನು ಹಾಕಿ ಬಂದ್ ಮಾಡಲಾಗಿದೆ. ಜಿಲ್ಲಾಡಳಿತವು ಭಾನುವಾರ ಕುಸಿದಿದ್ದ ಮಣ್ಣು ತೆರವುಗೊಳಿಸಿದೆ. ಆದರೆ ಸೋಮವಾರ ಮತ್ತೆ ಗುಡ್ಡ ಕುಸಿದಿದೆ.

ಬಾಯ್ಬಿಟ್ಟ ಭೂಮಿ

ತೇವಾಂಶ ಹೆಚ್ಚಾಗಿ ಭೂಮಿ ಬಾಯಿಬಿಟ್ಟಿರುವ ಘಟನೆ ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲೂಕಿನ ಕುಂದಗಲ್ ಗ್ರಾಮದಲ್ಲಿ ನಡೆದಿದೆ. 200 ಅಡಿ ಉದ್ದ, ಒಂದು ಅಡಿಯಷ್ಟು ಕೆಳಗೆ ಭೂಮಿ ಕುಸಿದಿದೆ. ಕಳೆದ ವರ್ಷವೂ ಇದೇ ಜಾಗದಲ್ಲಿ ಭೂಮಿ ಕುಸಿದಿತ್ತು. ಪುನಃ ಕುಸಿದಿರುವುದು ಸ್ಥಳೀಯರಲ್ಲಿ ಆತಂಕ ಮೂಡಿಸಿದೆ. ಸಾಗರ ಎಸಿ, ಗಣಿ ಮತ್ತು ಭೂಜ್ಞಾನ ಇಲಾಖೆ ಮತ್ತು ಕಂದಾಯ ಇಲಾಖೆ ಅಧಿಕಾರಿಗಳು ಭೇಟಿ ನೀಡಿ, ಪರಿಶೀಲನೆ ನಡೆಸಿದ್ದಾರೆ.

ಹೊಸನಗರ ತಾಲೂಕಿನ ಕುಂದಗಲ್ ಸಮೀಪ ಬಾಯಿ ತೆರೆದ ಭೂಮಿ.

ರಭಸವಾಗಿ ಹರಿಯುತ್ತಿರುವ ಜೋಗದ ಜಲಪಾತ.

ಜೋಗದ ಸಿರಿ

ಶರಾವತಿ ನದಿಗೆ ಅಪಾರ ಪ್ರಮಾಣದ ನೀರು ಹರಿದು ಬರುತ್ತಿದೆ. ಶಿವಮೊಗ್ಗ ಜಿಲ್ಲೆಯ ಜೋಗ ಜಲಪಾತ ಧುಮ್ಮಿಕ್ಕುತ್ತಿದ್ದು, ರಾಜ, ರಾಣಿ, ರೋರಾರ್, ರಾಕೆಟ್ ಪಥಗಳು ಕಾಣುತ್ತಿವೆ. ಜೋಗದ ರೌದ್ರ, ರಮಣೀಯ ದೃಶ್ಯ ಕಣ್ತುಂಬಿಕೊಳ್ಳಲು ಪ್ರವಾಸಿಗರ ದಂಡೇ ಹರಿದು ಬರುತ್ತಿದೆ.

ಗೋಡೆ ಕುಸಿದು ಅಜ್ಜಿ ಸಾವು

ನಿರಂತರ ಮಳೆಗೆ ಮನೆಯ ಗೋಡೆ ಕುಸಿದು ಶತಾಯುಷಿ ವೃದ್ಧೆ ಸಾವನ್ನಪ್ಪಿದ ಘಟನೆ ಶಿವಮೊಗ್ಗ ತಾಲೂಕಿನ ಅಡಗಡಿ ಗ್ರಾಮದಲ್ಲಿ ಭಾನುವಾರ ತಡರಾತ್ರಿ ನಡೆದಿದೆ. ಮನೆಯಲ್ಲಿದ್ದ ಇನ್ನು ನಾಲ್ವರಿಗೆ ಸಣ್ಣಪುಟ್ಟ ಗಾಯಗಳಾ ಗಿದ್ದು, ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಸಿದ್ದಮ್ಮ (100) ಮೃತ ದುರ್ದೈವಿ. ಹೇಮಾವತಿ ಅನ್ನೋರ ಮನೆಗೆ ಮೃತ ಸಿದ್ದಮ್ಮ ಬಂದಿದ್ದರು. ಸಿದ್ದಮ್ಮ ದಾವಣಗೆರೆ ಜಿಲ್ಲೆ ಹೊನ್ನಾಳಿಯ ಕುಂಕುವ ಗ್ರಾಮದವರಾ ಗಿದ್ದು, ಮನೆಯೊಡತಿ ಹೇಮಾವತಿ ಅವರ ಸಂಬಂಧಿಕರಾಗಿದ್ದರು. ಸೂಕ್ತ ಪರಿಹಾರ ಹಾಗೂ ಮನೆ ಕಟ್ಟಿಸಿಕೊಡಲು ಮೃತರ ಸಂಬಂಧಿಕರು ಸರಕಾರಕ್ಕೆ ಮನವಿ ಮಾಡಿದ್ದಾರೆ.

ಮರ ಬಿದ್ದು ಬೈಕ್ ಸವಾರ ಸಾವು

ಚಲಿಸುತ್ತಿದ್ದ ಬೈಕ್ ಮೇಲೆ ಏಕಾಏಕಿ ಮರ ಬಿದ್ದು ವ್ಯಕ್ತಿ ಸಾವನ್ನಪ್ಪಿರುವ ಘಟನೆ ಚಿಕ್ಕಮಗಳೂರು ಜಿಲ್ಲೆಯ ಎನ್.ಆರ್.ಪುರ ತಾಲೂಕಿನ ಎಲೆಕಲ್ ಘಾಟಿಯಲ್ಲಿ ಸೋಮವಾರ ನಡೆದಿದೆ. ಅನಿಲ್ (55) ಮೃತಪಟ್ಟ ಬೈಕ್ ಸವಾರ. ಮಳೆಯಲ್ಲಿ ಬೈಕ್ ಚಾಲನೆ ಮಾಡುತ್ತಿದ್ದ ವೇಳೆ ಮರ ಮೈಮೇಲೆ ಬಿದ್ದು ಗಂಭೀರವಾಗಿ ಗಾಯಗೊಂಡಿದ್ದ ಅನಿಲ್ ಅವರನ್ನು ಸ್ಥಳೀಯರು ಕೂಡಲೇ ಆಸ್ಪತ್ರೆಗೆ ದಾಖಲು ಮಾಡಿದರು. ದುರಾದೃಷ್ಟವಶಾತ್ ಆಸ್ಪತ್ರೆಗೆ ಸಾಗಿಸುವ ಮಾರ್ಗ ಮಧ್ಯೆ ಅನಿಲ್ ಸಾವನ್ನಪ್ಪಿದ್ದಾರೆ. ಈ ವರ್ಷದ ಮಳೆ ಅವಾಂತರಕ್ಕೆ ಚಿಕ್ಕಮಗಳೂರು ಜಿಲ್ಲೆಯಲ್ಲಿ ಒಟ್ಟು ನಾಲ್ವರು ಮೃತಪಟ್ಟಿದ್ದಾರೆ.

ರಾಜ್ಯದ ಹಿತಕ್ಕಾಗಿ ಬಿಜೆಪಿ, ಜೆಡಿಎಸ್ ಹೊಂದಾಣಿಕೆ: ನಿಖಿಲ್ ಕುಮಾರಸ್ವಾಮಿ

ಜೆಡಿಎಸ್ ಮುಳುಗುತ್ತಿರುವ ಹಡಗಲ್ಲ

ತುಮಕೂರು: ಜೆಡಿಎಸ್ ಪಕ್ಷ ಮುಳುಗುತ್ತಿರುವ ಹಡಗಲ್ಲ, ಕಾಂಗ್ರೆಸ್ ಪಕ್ಷ ಮುಳುಗುತ್ತಿರುವ ಹಡಗು ಎಂದು ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ವ್ಯಂಗ್ಯವಾಡಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಡಿಸಿಎಂ ಡಿಕೆಶಿ ಅವರು ಹೇಳಿದಂತೆ ನಮ್ಮ ಪಕ್ಷದ ಯಾವೊಬ್ಬ ಶಾಸಕರು ಆ ಪಕ್ಷಕ್ಕೆ ಹೋಗುವ ಮನಸ್ಥಿತಿ ಹೊಂದಿಲ್ಲ. ಡಿಕೆಶಿ ಬರೀ ಸುಳ್ಳು ಹೇಳುತ್ತಿದ್ದಾರೆ. ರಾಜ್ಯದ ಸಮಗ್ರ ಅಭಿವೃದ್ಧಿ ದೃಷ್ಟಿಯಿಂದ ಜೆಡಿಎಸ್-ಬಿಜೆಪಿ ಪಕ್ಷಗಳು ಹೊಂದಾಣಿಕೆ ಮಾಡಿಕೊಂಡಿವೆ. ರಾಜ್ಯದ ಹಿತಕ್ಕಾಗಿ ಈ ಹೊಂದಾಣಿಕೆ ಮುಂದುವರೆಯಲಿದೆ ಎಂದು ಹೇಳಿದರು.

ನವೆಂಬರ್-ಡಿಸೆಂಬರ್‌ನಲ್ಲಿ ನಡೆಯುತ್ತೆ ಎಂದು ಹೇಳಲಾಗುತ್ತಿರುವ ಜಿಲ್ಲಾ ಮತ್ತು ತಾ. ಪಂ. ಚುನಾವಣೆಗೂ ಹೊಂದಾಣಿಕೆ ಮುಂದುವರೆಯುತ್ತಾ ಎಂಬ ಪ್ರಶ್ನೆಗೆ ನವೆಂಬರ್ ನಂತರ ಏನು ಬೆಳವಣಿಗೆ ಆಗತ್ತದೆ ಎಂಬುದನ್ನು ನೋಡೋಣ ಎಂದು ಉತ್ತರಿಸಿದರು. ಮಾಜಿ ಪ್ರಧಾನಿ ದೇವೇಗೌಡರು ಹಾಗೂ ಮಾಜಿ ಮುಖ್ಯಮಂತ್ರಿ ಕುಮಾರ ಸ್ವಾಮಿ ಅವರು ಜೆ.ಪಿ. ಭವನದಲ್ಲಿ ಅಧಿಕೃತ ವಾಗಿ ರಾಜ್ಯ ಪ್ರವಾಸಕ್ಕೆ ಚಾಲನೆ ಕೊಟ್ಟಿದ್ದಾರೆ. ಹಾಗಾಗಿ ಮುಂದಿನ 60 ದಿನಗಳ ಕಾಲ ರಾಜ್ಯಾದ್ಯಂತ ಪ್ರವಾಸ ನಡೆಸಿ ಪಕ್ಷದ ಸದಸ್ಯತ್ವ ನೋಂದಣಿ ಕಾರ್ಯ ನಡೆಸಲಾಗುವುದು ಎಂದರು. ರಾಜ್ಯದಲ್ಲಿ ಹಲವಾರು ವಿಧಾನಸಭಾ ಕ್ಷೇತ್ರಗಳನ್ನು ಆಯ್ಕೆ ಮಾಡಿಕೊಂಡಿದ್ದು, ಸಂಘಟನೆ ಮಾಡಿ ಕ್ಷೇತ್ರಗಳನ್ನು ಗೆಲ್ಲಲು ನಿರ್ಧರಿಸಲಾಗಿದೆ. ಮುಂಬರುವ ಜಿಲ್ಲಾ ಪಂಚಾಯ್ತಿ, ತಾಪಂ ಅಥವಾ ಗ್ರಾಪಂ ಚುನಾವಣೆಯನ್ನು ಸಮರ್ಥವಾಗಿ ಎದುರಿಸಲು ಸಂಘಟನೆ ಮಾಡುತ್ತಿದ್ದೇವೆ ಎಂದರು.

ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಸಿದ್ದಗಂಗಾ ಮಠಕ್ಕೆ ಭೇಟಿ ನೀಡಿ ಶ್ರೀಗಳ ಆಶೀರ್ವಾದ ಪಡೆದರು.

ನಕಲಿ ಎನ್‌ಕೌಂಟರ್ ಕೇಸ್: ಜು.1ಕ್ಕೆ ವಿಚಾರಣೆ

ವಿಜಯಪುರ: ಭೀಮಾತೀರದ ನಟೋರಿಯಸ್ ಹಂತಕರಾದ ಧರ್ಮರಾಜ್ ಚಡಚಣ ಹಾಗೂ ಆತನ ಸಹೋದರ ಗಂಗಾಧರನ ನಕಲಿ ಎನ್‌ಕೌಂಟರ್ ಪ್ರಕರಣದ ವಿಚಾರಣೆಯನ್ನು ವಿಜಯಪುರ ಜಿಲ್ಲಾ ನ್ಯಾಯಾಲಯ ಜು.1ಕ್ಕೆ ಮುಂದೂಡಿದೆ. ಸೋಮವಾರ ನ್ಯಾಯಾಲಯ ಈ ಪ್ರಕರಣದ ವಿಚಾರಣೆ ನಡೆಸಿತು.

ಈ ವೇಳೆ ಆರೋಪಿಗಳಾದ ಮಹಾದೇವ ಭೈರಗೊಂಡ ಹಾಗೂ ಇತರೆ 16 ಜನರು ಹಾಜರಿದ್ದರು. ಹಂತಕ ಧರ್ಮರಾಜ್ ನಕಲಿ ಎನ್‌ಕೌಂಟರ್ ನಡೆಸಿದ್ದು, ಆಗಿನ ಚಡಚಣ ಪಿಎಸ್‌ಐ ಆಗಿ ಇದೇ ಗೋಪಾಲ್ ಹಳ್ಳೂರ್ ಕಾರ್ಯನಿರ್ವಹಿಸುತ್ತಿದ್ದರು. ಈ ಇಬ್ಬರು ಭೀಮಾತೀರದ ಚಡಚಣ ಸಹೋದರರ ಹತ್ಯೆ ಪ್ರಕರಣದ ಮುಖ್ಯ ಆರೋಪಿಗಳಾಗಿದ್ದಾರೆ. ಈ ಇಬ್ಬರು ಸಹ ನ್ಯಾಯಾಲಯಕ್ಕೆ ಹಾಜರಾಗಿದ್ದರು.

ಸುದೀರ್ಘ ವಿಚಾರಣೆ ನಡೆಸಿದ ನ್ಯಾಯಾಧೀಶರು ವಿಚಾರಣೆಯನ್ನು ಜು.1ಕ್ಕೆ ಮುಂದೂಡಿದರು. ಭೀಮಾತೀರದ ನಟೋರಿಯಸ್‌ಗಳ ವಿಚಾರಣೆ ಹಿನ್ನೆಲೆ ನ್ಯಾಯಾಲಯದ ಆವರಣ ದಲ್ಲಿ ಪೊಲೀಸ್ ಬಿಗಿಭದ್ರತೆ ನಿಯೋಜನೆ ಮಾಡಲಾಗಿತ್ತು.

ಕೇಂದ್ರಕ್ಕಿಂತ ರಾಜ್ಯದ ಜಾತಿ ಗಣತಿ ಭಿನ್ನ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆ

ದಾವಣಗೆರೆ: ಕೇಂದ್ರ ಸರಕಾರ ಕೇವಲ ಜಾತಿಯ ಜನಸಂಖ್ಯೆಯನ್ನು ಲೆಕ್ಕಹಾಕುತ್ತಿದೆ. ರಾಜ್ಯ ಸರಕಾರ ಜಾತಿ ಗಣತಿಯ ಜತೆಗೆ ಸಾಮಾಜಿಕ ಶೈಕ್ಷಣಿಕ ಸಮೀಕ್ಷೆ ನಡೆಸುತ್ತಿದೆ. ಕೇಂದ್ರಕ್ಕಿಂತ ರಾಜ್ಯದ ಜಾತಿ ಗಣತಿ ಭಿನ್ನ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಸಾಮಾಜಿಕ ನ್ಯಾಯಕ್ಕೆ ಜಾತಿಗಳ ಸ್ಥಿತಿ-ಗತಿ ಅರ್ಥ ಮಾಡಿಕೊಳ್ಳುವುದು ಮುಖ್ಯ. ಇದಕ್ಕೆ ಜಾತಿಗಳ ಶೈಕ್ಷಣಿಕ, ಆರ್ಥಿಕ ಹಾಗೂ ಸಾಮಾಜಿಕ ಪರಿಸ್ಥಿತಿ ಗೊತ್ತಾಗಬೇಕು. ಇಲ್ಲವಾದರೆ ಸಾಮಾಜಿಕ ನ್ಯಾಯ ನೀಡುವುದು ಕಷ್ಟ' ಎಂದು ಹೇಳಿದರು.

ಕೇಂದ್ರ ಸರಕಾರ 2027ರಿಂದ ಜಾತಿ ಗಣತಿ ಶುರು ಮಾಡುವುದಾಗಿ ಹೇಳಿದೆ. ಕೇಂದ್ರದ ಜಾತಿ ಗಣತಿಗೆ ರಾಜ್ಯ ಸರಕಾರದ ತಕರಾರು ಇಲ್ಲ. ಜಾತಿ ಗಣತಿಯ ಜತೆಗೆ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಮಾಡುವುದಾಗಿ ಕೇಂದ್ರ ಸರಕಾರ ಈವರೆಗೆ ಸ್ಪಷ್ಟಪಡಿಸಿಲ್ಲ' ಎಂದರು. ಎಚ್.ಕಾಂತರಾಜ ಆಯೋಗ ನಡೆಸಿದ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆಗೆ ಸಂಬಂಧಿಸಿದಂತೆ ಪ್ರಬಲ ಮತ್ತು ದುರ್ಬಲ ವರ್ಗಗಳಿಂದ ಆಕ್ಷೇಪ ವ್ಯಕ್ತವಾಗಿತ್ತು. ಅಲ್ಲದೇ ಈ ಸಮೀಕ್ಷೆ ನಡೆದು 10 ವರ್ಷ ಕಳೆದಿದೆ. ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ ಕಾಯ್ದೆ-1995ರ ಕಲಂ 11ರ ಪ್ರಕಾರ 10 ವರ್ಷದ ಬಳಿಕ ಹೊಸ ವರದಿ ತರಿಸಿಕೊಳ್ಳಲು ಅವಕಾಶವಿದೆ. ಹೀಗಾಗಿ, ಹೊಸ ಜಾತಿ ಗಣತಿಗೆ ನಿರ್ಧರಿಸಲಾಗಿದೆ ಎಂದು ಹೇಳಿದರು.

ಹನಿಟ್ರ್ಯಾಪ್: ಪೊಲೀಸ್ ಪೇದೆ ಸೆರೆ

ಮೈಸೂರು: ಹನಿಟ್ರ್ಯಾಪ್ ಮಾಡಿಸಿದ್ದ ಪೊಲೀಸ್ ಪೇದೆ ಬಂಧನ ಆಗಿದ್ದು, ಮೂವರ ವಿರುದ್ಧ ಮೈಸೂರಿನ ಬೆಟ್ಟದಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಪಿರಿಯಾಪಟ್ಟಣದ ಪೊಲೀಸ್ ಪೇದೆ ಶಿವಣ್ಣ ಎಂಬಾತನನ್ನು ಬಂಧಿಸಲಾಗಿದೆ. ಕಂಪಲಾಪುರದ ದಿನೇಶ್ ಕುಮಾರ್ ಅನ್ನೋರನ್ನ ಹನಿಟ್ರ್ಯಾಪ್ ಜಾಲಕ್ಕೆ ಬೀಳಿಸಿ 10 ಲಕ್ಷ ಹಣಕ್ಕೆ ಬೇಡಿಕೆ ಇಟ್ಟಿದ್ದರು ಎನ್ನಲಾಗಿದೆ. ಈ ಸಂಬಂಧ ಪೊಲೀಸ್ ಪೇದೆ ಶಿವಣ್ಣ, ಮೂರ್ತಿ, ಹನಿಟ್ರ್ಯಾಪ್ ಮಾಡಿದ್ದ ಯುವತಿಯ ವಿರುದ್ಧ ಪ್ರಕರಣ ದಾಖಲಾಗಿದೆ.

ಏನಿದು ಪ್ರಕರಣ?: ಮೈಸೂರು, ಪಿರಿಯಾಪಟ್ಟಣದಲ್ಲಿ ಆ್ಯಕ್ಟಿವ್ ಆಗಿದ್ದ ಹನಿಟ್ರ್ಯಾಪ್ ಜಾಲ. ಶ್ರೀಮಂತರು, ವ್ಯಾಪಾರಿಗಳನ್ನು ಖೆಡ್ಡಾಗೆ ಬೀಳಿಸಿ ಹಣ ಪೀಕುವುದನ್ನೇ ಚಾಳಿ ಮಾಡಿಕೊಂಡಿತ್ತು. ಇದಕ್ಕೆ ಪೊಲೀಸ್ ಪೇದೆ ಶಿವಣ್ಣ ಎಂಬಾತ ಸಹಕಾರ ನೀಡಿದ ಆರೋಪವಿದೆ. ಪೇದೆ, ಯುವತಿ ಹಾಗೂ ಮೂರ್ತಿ ಸೇರಿ ಇನ್ನೊಬ್ಬ ಕಂಪಲಾಪುರದ ಬಟ್ಟೆ ವ್ಯಾಪಾರಿ ದಿನೇಶ್ ಕುಮಾರ್ ಅವರನ್ನು ಹನಿ ಜಾಲಕ್ಕೆ ಬೀಳಿಸಿದ್ದಾರೆ. ಪೂರ್ವ ನಿಯೋಜಿತ ಸಂಚಿನಂತೆ ದಿನೇಶ್ ಕುಮಾರ್‌ಗೆ ವಾಟ್ಸಾಪ್‌ನಲ್ಲಿ ಮೆಸೇಜ್ ಮಾಡಿದ ಯುವತಿ, ಮನೆಗೆ ಬರಲು ಒತ್ತಾಯಿಸಿದ್ದಾಳೆ. ಮನೆಗೆ ತೆರಳಿದ ದಿನೇಶ್ ರೂಮ್‌ನಲ್ಲಿ ಇರುವ ವೇಳೆ ಬೀಗ ಮುರಿದು ಏಕಾಏಕಿ ನುಗ್ಗಿದ ಆರೋಪಿಗಳು ದಿನೇಶ್‌ನನ್ನು ಈಡಿದು ಹಿಗ್ಗಾಮುಗ್ಗಾ ಥಳಿಸಿದ್ದಾರೆ. ಬಳಿಕ 10 ಲಕ್ಷ ರು. ಹಣಕ್ಕೆ ಬೇಡಿಕೆ ಇಟ್ಟಿದ್ದಾರೆ. ಪೇದೆಯನ್ನು ಬಂಧಿಸಲಾಗಿದ್ದು, ಯುವತಿ ಹಾಗೂ ಮೂರ್ತಿ ತಲೆಮರೆಸಿಕೊಂಡಿದ್ದಾರೆ.

ಸ್ಥಾನ ಉಳಿಸಿಕೊಳ್ಳುವುದೇ ಸಾಕಾಗಿದೆ: ಜಾರಕಿಹೊಳಿ

ರಾಯಚೂರು: ಪಕ್ಷದ ವರಿಷ್ಠರ ಮೇಲೆ ಹಿರಿಯ ಶಾಸಕರ ಒತ್ತಡ ಇದೆ. ಪಕ್ಷದಲ್ಲಿ ಐದು ಬಾರಿ ಗೆದ್ದವರೂ ಇದ್ದಾರೆ. ನಮಗೂ ಅವಕಾಶ ಕೊಡಿ ಎಂದು ಕೆಲವರು ಕೇಳಿದ್ದಾರೆ. ಹೀಗಾಗಿ ಸಚಿವ ಸಂಪುಟದಲ್ಲಿ ಬದಲಾವಣೆ ಆದರೂ ಆಗಬಹುದು ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು. ಸಚಿವ ಸಂಪುಟ ವಿಸ್ತರಣೆ ಮಾಡುವುದು ಬಿಡುವುದು ವರಿಷ್ಠರಿಗೆ ಬಿಟ್ಟ ವಿಚಾರ. ಸಂಪುಟ ವಿಸ್ತರಣೆ ಆಗುತ್ತೋ, ಪುನರ್ ರಚನೆ ಆಗುತ್ತೊ ಎರಡೂ ಗೊತ್ತಿಲ್ಲ. ಯಾವ ವಿಷಯವನ್ನೂ ಮೈಮೇಲೆ ಎಳೆದುಕೊಳ್ಳುವುದಿಲ್ಲ. ನಮ್ಮ ಸ್ಥಾನ ಉಳಿಸಿಕೊಳ್ಳುವುದೇ ಸಾಕಾಗಿದೆ' ಎಂದು ನಗರದಲ್ಲಿ ಮಂಗಳವಾರ ಮಾಧ್ಯಮ ಪ್ರತಿನಿಧಿಗಳ ಪ್ರಶ್ನೆಗೆ ಪ್ರತಿಕ್ರಿಯಿಸಿದರು.

ವಿಶ್ವವಾಣಿ

ಸಂಪಾದಕೀಯ

ದುರಂತಗಳ ಸರಪಳಿ ತುಂಡಾಗಲಿ

ದೇಶದ ವಿವಿಧೆಡೆ ಸಂಭವಿಸಿದ ದುರಂತಗಳು, ಆ ವೇಳೆ ಆದ ಸಾವುಗಳು ಮತ್ತು ಜನರು ತೀವ್ರವಾಗಿ ಗಾಯಗೊಂಡ ನಿದರ್ಶನಗಳು ಮನವನ್ನು ವಿಹ್ವಲಗೊಳಿಸಿವೆ. ಮಹಾರಾಷ್ಟ್ರದ ಪುಣೆಯ ಮಾವಲ್ ತಾಲೂಕಿನ ಕುಂದಾಮಲ ಬಳಿ ಇಂದ್ರಾಣಿ ನದಿಗೆ ನಿರ್ಮಿಸಲಾಗಿದ್ದ ಕಬ್ಬಿಣದ ಸೇತುವೆ ಮುರಿದು ಇಬ್ಬರು ಅಸುನೀಗಿರುವುದು, ಉತ್ತರಾಖಂಡದ ಡೆಹ್ರಾಡೂನ್‌ನಿಂದ ಕೇದಾರನಾಥ ಪುಣ್ಯಕ್ಷೇತ್ರಕ್ಕೆ ಯಾತ್ರಿಗಳನ್ನು ಒಯ್ಯುತ್ತಿದ್ದ ಹೆಲಿಕಾಪ್ಟರ್ ಪತನಗೊಂಡು ಪೈಲಟ್ ಸೇರಿದಂತೆ 7 ಮಂದಿ ಸಾವನ್ನಪ್ಪಿರುವುದು, ತೆಲಂಗಾಣದಲ್ಲಿ ಗೋದಾವರಿ ನದಿಯಲ್ಲಿ ಐವರು ಯುವಕರು ಮುಳುಗಿ ಬದುಕನ್ನು ಕೊನೆಗೊಳಿಸಿಕೊಂಡಿರುವುದು ಹೀಗೆ ಒಂದೇ ದಿನದಲ್ಲಿ ಸರಣಿ ದುರ್ಘಟನೆಗಳು ವರದಿಯಾಗಿವೆ. ಮನುಷ್ಯನ ಕೈಮೀರಿದ ಪರಿಸ್ಥಿತಿಗಳನ್ನು ನಿಭಾಯಿಸಲಾಗದು ಎನ್ನುವುದು ಕಠೋರ ಸತ್ಯವೇ. ಆದರೆ, 'ಜೀವ' ಎಂಬುದು ಎಷ್ಟೊಂದು ಅಮೂಲ್ಯವಾದುದು, ಅದನ್ನು ಕಾಪಿಟ್ಟುಕೊಳ್ಳಲು ಎಷ್ಟೆಲ್ಲಾ ಮುಂಜಾಗ್ರತೆ ಕೈಗೊಳ್ಳಬೇಕು ಎಂಬುದನ್ನು ಇಂಥ ನಿದರ್ಶನಗಳು ತಿಳಿಹೇಳಬಲ್ಲವು. 'ಈ ಭೂಮಿ ಮೇಲೆ ನಮ್ಮದು ನಾಲ್ಕು ದಿನದ ಬಾಳು' ಎಂಬ 'ದಾರ್ಶನಿಕತೆಯ ಲೇಪದ' ಮಾತು ನಿಷ್ಠುರ ಸತ್ಯವೇ ಆದರೂ, ಆ ನಾಲ್ಕು ದಿನದ ಬಾಳು ಅಪಾಯಗಳಿಗೆ ಈಡಾಗದಂತೆ ನೋಡಿಕೊಳ್ಳುವುದೇ ಸವಾಲಿನ ಸಂಗತಿಯಾಗಿದೆ. ಆಯುಷ್ಯ ಮುಗಿದ ನಂತರ ಸಂಭವಿಸುವ ವ್ಯಕ್ತಿಯ ಸಹಜ ಸಾವು ಪ್ರಾಯಶಃ ಅಷ್ಟಾಗಿ ಕಾಡಲಾರದು; ಆದರೆ ಅಕಾಲಿಕ ಸಾವು, ಅಪಘಾತದಿಂದ ಒದಗುವ ಸಾವುಗಳು ಮೃತರ ಕುಟುಂಬಿಕರನ್ನು ಬಹಳ ಕಾಲ ಕಾಡುವುದು ಖರೆ. ಹೀಗಾಗಿ, ದೇಶವನ್ನು ಕಾಡುತ್ತಿರುವ ದುರಂತಗಳು/ದುರ್ಘಟನೆಗಳ ಸರಪಳಿ ಇನ್ನಾದರೂ ತುಂಡಾಗಲಿ, ಜನರ ಶಾಂತಿ-ನೆಮ್ಮದಿ ಕಲಕದಿರಲಿ ಎಂದು ಹಾರೈಸುವುದು ಮಾತ್ರ ನಮ್ಮ ಕೈಯಲ್ಲಿದೆ. ಮಿಕ್ಕಿದ್ದು ಈ ಬ್ರಹ್ಮಾಂಡದ 'ನಿಯಂತ್ರಕ ಶಕ್ತಿ'ಗೆ ಬಿಟ್ಟ ಸಂಗತಿ. ಈ ಭೂಮಿ ಮೇಲೆ ಇರುವ 'ನಾಲ್ಕು' ದಿನವಾದರೂ ಸುಖ-ಶಾಂತಿಯಿಂದ ಇರುವಂತಾಗುವ ಚಿತ್ತಸ್ಥಿತಿ ಎಲ್ಲರಲ್ಲೂ ರೂಪುಗೊಳ್ಳಬೇಕಿದೆ.

ಸೊಂಪಾದಕೀಯ

ನಿಲ್ಸೀ ಯುದ್ಧನಾ..

ನಮ್ಮ ಹಳೆಯ ಕನ್ನಡ ಸಿನಿಮಾಗಳಲ್ಲಿ ಇದ್ದ ಒಂದು ಕ್ಲೀಷೆ ಸೀನ್ ಅಂದ್ರೆ, ಮದುವೆ ನಡಿಯೋವಾಗ ಯಾರೋ ಒಬ್ರು ಬಂದು, 'ನಿಲ್ಸೀ ಮದ್ವೇನಾ' ಅಂತ ಕೂಗ್ತಾ ಇದ್ದುದು. ಕಾರಣ ಏನೇ ಇರ್ಲಿ, ಅಷ್ಟಕ್ಕೇ ಆ ಮದುವೆ ಬಹುತೇಕ ಸಂದರ್ಭಗಳಲ್ಲಿ ನಿಲ್ಲುತ್ತಿತ್ತು. ಈಗ ಅಮೆರಿಕದ ಅಧ್ಯಕ್ಷ ಟ್ರಂಪ್ ಅವರು ಇದೇ ರೀತಿ 'ನಿಲ್ಸೀ ಯುದ್ಧನಾ' ಅಂತ ಹೇಳಿಯೇ ಯುದ್ಧಗಳನ್ನು ನಿಲ್ಲಿಸುವ ಮಹಾಶೂರ ಎನಿಸಿಕೊಳ್ಳಲು ಹೊರಟಿದ್ದಾರೆ. ಇತ್ತೀಚೆಗೆ ಭಾರತ-ಪಾಕಿಸ್ತಾನಗಳು ಯುದ್ಧದ ರೀತಿಯಲ್ಲೇ ಹೊಡೆದಾಡಿಕೊಂಡಿದ್ದು ಎಲ್ಲರಿಗೂ ಗೊತ್ತು. ಕೆಲವು ದಿನಗಳ ನಂತರ ಕದನವಿರಾಮವನ್ನೂ ಘೋಷಿಸಲಾಯಿತು. ಆದರೆ ಅಂದಿನಿಂದ ಇಂದಿನವರೆಗೂ ಟ್ರಂಪ್ ಮಾತ್ರ 'ನಾನೇ ಭಾರತ ಮತ್ತು ಪಾಕಿಸ್ತಾನಗಳ ನಡುವಿನ ಯುದ್ಧ ನಿಲ್ಲಿಸಿದ್ದು' ಅಂತ ಕಂಡ ಕಂಡ ವೇದಿಕೆಗಳಲ್ಲಿ ಹೇಳಿಕೊಂಡು ಬರುತ್ತಿದ್ದಾರೆ. ಮಾಧ್ಯಮವೊಂದರ ಪ್ರಕಾರ ಮೊನ್ನೆ ಕೂಡಾ ವ್ಯಾಪಾರ ನಿಲ್ಲಿಸುವ ಬೆದರಿಕೆ ಒಡ್ಡಿ 'ಭಾರತ, ಪಾಕಿಸ್ತಾನದ ಯುದ್ಧ ನಿಲ್ಲಿಸಿದ್ದು ನಾನೇ' ಅಂತ 12ನೇ ಬಾರಿಗೆ ಹೇಳಿದರಂತೆ ಟ್ರಂಪ್. ಅವರೇನೋ ಹೇಳ್ತಾರೆ, ಆದರೆ ನಮ್ಮ ಮಾಧ್ಯಮಗಳು ಅದನ್ನು ಎಣಿಸಿಕೊಂಡು ಕೂತಿರೋದ್ಯಾಕೆ ಅನ್ನೋ ಅನುಮಾನ ನಮ್ಮನ್ನು ಕಾಡುತ್ತಿರುವಾಗಲೇ ಇನ್ನೊಂದು ಯುದ್ಧ ನಿಲ್ಲಿಸಿದ ಕ್ರೆಡಿಟ್ ತೆಗೆದುಕೊಳ್ಳಲು ಹೊರಟಿದ್ದಾರೆ ಟ್ರಂಪ್. ಈಗ ಇಸ್ರೇಲ್-ಇರಾನ್ ನಡುವಿನ ಯುದ್ಧದ ಬಗ್ಗೆ ಟ್ವೀಟ್ ಮಾಡಿ ಇಬ್ಬರೂ ಮಾತುಕತೆ ಮೂಲಕ ಸಮಸ್ಯೆ ಬಗೆಹರಿಸಿಕೊಳ್ಳಿ ಅಂತ ಸಲಹೆ ಕೊಟ್ಟಿದ್ದಾರೆ. ಈಗ ಯುದ್ಧ ಸಾಕು ಅನ್ನಿಸಿ ಇಸ್ರೇಲ್-ಇರಾನ್ ಯುದ್ಧ ನಿಲ್ಲಿಸಿದರೆ, ಈ ಯುದ್ಧವನ್ನೂ ನಾನೇ ನಿಲ್ಲಿಸಿದ್ದು ಅಂತ ಟ್ರಂಪ್ ಹೇಳಿಕೊಂಡು ಓಡಾಡುವುದರಲ್ಲಿ ಅನುಮಾನವಿಲ್ಲ. ಈ ಮನುಷ್ಯನನ್ನು ಅಮೆರಿಕದ ಅಧ್ಯಕ್ಷ ಮಾಡಿರೋದು ಅಮೆರಿಕಾದ ಆಡಳಿತ ನಡೆಸಲಿ ಅಂತಾನಾ ಇಲ್ಲಾ ಜಾಗತಿಕ ಮಟ್ಟದ ಯುದ್ಧಗಳನ್ನು ನಿಲ್ಲಿಸಲಿ ಅಂತಾನಾ ಅನ್ನೋ ಅನುಮಾನ ಅಮೆರಿಕನ್ನರನ್ನೂ ಕಾಡುತ್ತಿದೆ. ಆದರೆ, ಟ್ರಂಪ್ ಮಾತ್ರ ಮಾಡದೇ ಇರೋ ಕೆಲಸಕ್ಕೆ ಕ್ರೆಡಿಟ್ ತೆಗೆದುಕೊಳ್ಳುತ್ತಾ ಯುದ್ಧಗಳನ್ನು ನಿಲ್ಲಿಸುವ ಕಂಟ್ರಾಕ್ಟರ್‌ನಂತೆ ವರ್ತಿಸುತ್ತಿರೋದು ಮಾತ್ರ ಸತ್ಯ.

ಸಂಪಾದಕರ ಸದ್ಯಶೋಧನೆ

ಇದು ವಿಮಾನದ ಟೈರಿನ ಕಥೆ

ವೈಮಾನಿಕ ಉದ್ಯಮವು, ಉನ್ನತ ತಂತ್ರಜ್ಞಾನ ಆಧರಿತ ಮತ್ತು ಸುರಕ್ಷತೆಗೆ ವಿಶೇಷ ಆದ್ಯತೆ ನೀಡುವ ಪ್ರಪಂಚದ ಕ್ಷೇತ್ರಗಳಲ್ಲಿ ಒಂದು. ಇಲ್ಲಿ ತಂತ್ರಜ್ಞಾನ ಮತ್ತು ಸುರಕ್ಷತೆ ಎರಡೂ ಒಟ್ಟಿಗೇ ಹೆಜ್ಜೆ ಹಾಕುತ್ತವೆ. ವಿಮಾನದ ಟೈರುಗಳನ್ನೇ ಗಮನಿಸೋಣ. ಅವುಗಳಲ್ಲಿ ಸಾಮಾನ್ಯ ಗಾಳಿಯ ಬದಲು ನೈಟ್ರೋಜನ್ (Nitrogen) ಅನಿಲವನ್ನು ತುಂಬಲಾಗುತ್ತದೆ. ನೈಟ್ರೋಜನ್ ಅನ್ನೇ ಬಳಸುವುದೇಕೆ? ಅದರ ವೈಜ್ಞಾನಿಕ ಹಿನ್ನೆಲೆ ಏನು? ಗಾಳಿಯಿಂದ ಉಂಟಾಗುವ ತೊಂದರೆಗಳೇನು? ಮತ್ತು ನೈಟ್ರೋಜನ್ ಬಳಕೆ ಮಾಡುವುದರಿಂದ ಏನು ಲಾಭವಾಗುತ್ತದೆ? ಇದಕ್ಕೆ ಹಲವು ವೈಜ್ಞಾನಿಕ, ತಾಂತ್ರಿಕ ಹಾಗೂ ಭದ್ರತಾ ಕಾರಣಗಳಿವೆ. ವಿಮಾನಗಳ ಟೈರುಗಳು ಸಾಮಾನ್ಯ ವಾಹನಗಳ ಟೈರುಗಳಿಗಿಂತ ತುಂಬಾ ಭಿನ್ನವಾಗಿವೆ. ಅವನ್ನು ಬಹುಮಟ್ಟಿನ ರಬ್ಬರ್ ಮತ್ತು ಶಕ್ತಿಶಾಲಿ ಪದರಗಳಿಂದ ತಯಾರಿಸಿರುತ್ತಾರೆ. ಅವು ಗಂಟೆಗೆ ಸುಮಾರು 200 ಮೈಲು (322 ಕಿ.ಮೀ./ಗಂಟೆ) ವೇಗದಲ್ಲಿ ಭೂಮಿಯನ್ನು ಸ್ಪರ್ಶಿಸುತ್ತವೆ. ತೀವ್ರವಾದ ಶಾಕ್, ಉಷ್ಣತೆಯ ಬದಲಾವಣೆ ಮತ್ತು ಭಾರಿ ತೂಕವನ್ನು ಅವು ಸಹಿಸಿಕೊಳ್ಳಬೇಕಾಗುತ್ತದೆ. ಉದಾಹರಣೆಗೆ, ಬೋಯಿಂಗ್ 747 ವಿಮಾನಿನ ಪ್ರತಿ ಟೈರು ತಲಾ 30 ಟನ್‌ಗಳಷ್ಟು ತೂಕವನ್ನು ತಾಳಿಕೊಳ್ಳಬಲ್ಲದು. ಇಂಥ ಪರಿಸ್ಥಿತಿಯಲ್ಲಿ ಟೈರುಗಳು ವಿಶ್ವಾಸಾರ್ಹವಾಗಿ ಕಾರ್ಯನಿರ್ವಹಿಸಬೇಕಾದರೆ, ಅವುಗಳಲ್ಲಿ ತುಂಬುವ ಅನಿಲವೂ ವಿಶೇಷವಾಗಿರಬೇಕು. ಸಾಮಾನ್ಯವಾಗಿ ನಾವು ಉಸಿರಾಡುವ ಗಾಳಿಯಲ್ಲಿರುವ ಪ್ರಮುಖ ಅನಿಲಗಳೆಂದರೆ, ನೈಟ್ರೋಜನ್ (ಶೇ.78), ಆಕ್ಸಿಜನ್ (ಶೇ.21) ಹಾಗೂ ಇತರ ಅನಿಲಗಳು (ಕಾರ್ಬನ್ ಡೈಆಕ್ಸೈಡ್- ಶೇ.1). ಆದರೆ, ಈ ಗಾಳಿಯಲ್ಲಿ ಇರುವ ಆಕ್ಸಿಜನ್ ಟೈರುಗಳಲ್ಲಿ ತುಂಬಲು ಸೂಕ್ತವಲ್ಲ. ಏಕೆಂದರೆ ಅದು ಸುಲಭವಾಗಿ ಅಗ್ನಿಗೆ ಆಹಾರದಂತೆ ಕಾರ್ಯನಿರ್ವಹಿಸುತ್ತದೆ. ಬಿಸಿ ತಾಪಮಾನದಲ್ಲಿ ರಾಸಾಯನಿಕ ಕ್ರಿಯೆಗಳಿಗೆ ಕಾರಣವಾಗುತ್ತದೆ ಹಾಗೂ ಶಾಖಕ್ಕೆ ತೀವ್ರವಾಗಿ ಪ್ರತಿಕ್ರಿಯಿಸುತ್ತದೆ. ಅದರ ಬದಲು ಶುದ್ಧ ನೈಟ್ರೋಜನ್ ಅನಿಲವನ್ನು ಉಪಯೋಗಿಸುವುದು ತಾಂತ್ರಿಕವಾಗಿ ಹಾಗೂ ಸುರಕ್ಷತೆ ದೃಷ್ಟಿಯಿಂದ ಕ್ಷೇಮ ಎಂಬುದು ಸಾಬೀತಾಗಿದೆ. ನೈಟ್ರೋಜನ್ ಅನಿಲದ ವಿಶೇಷ ಲಕ್ಷಣಗಳು ಇದುವರೆಗೆ ವಿಮಾನ ಉದ್ಯಮದಲ್ಲಿ ಅದನ್ನು ಅವಿಭಾಜ್ಯವಾಗಿಸಿವೆ. ಗಾಳಿಯ ತಾಪಮಾನದಿಂದಾಗಿ ಆವರ್ತಿತವಾಗಿ ವಿಸ್ತಾರ ಮತ್ತು ಸಂಕುಚನಗೊಳ್ಳುತ್ತದೆ. ನೈಟ್ರೋಜನ್, ಸ್ಥಿತಿಸ್ಥಾಪಕ ಅನಿಲವಾಗಿದ್ದು, ತಾಪಮಾನ ಹೆಚ್ಚಿದರೂ ಕಡಿಮೆಯಾದರೂ ಒಟ್ಟಿನಲ್ಲಿ ಅದರ ಒತ್ತಡದ ಬದಲಾವಣೆ ಕಡಿಮೆ ಇರುತ್ತದೆ. ಟೈರಿನಲ್ಲಿ ಆಮ್ಲಜನಕ ಇಲ್ಲದಿರುವುದರಿಂದ ಬೆಂಕಿಯ ಅಪಾಯ ಕಡಿಮೆ. ಸಾಮಾನ್ಯ ಗಾಳಿಯಲ್ಲಿ ಆಕ್ಸಿಜನ್ ಇರುವುದರಿಂದ ಟೈರು ಬಿರುಕು ಬಿಟ್ಟರೂ ಬೆಂಕಿಯ ಸಂಭವ ಹೆಚ್ಚು. ನೈಟ್ರೋಜನ್ ರಾಸಾಯನಿಕವಾಗಿ ನಿಷ್ಕ್ರಿಯ ಅನಿಲ (inert gas) ಆಗಿದ್ದು, ಬೆಂಕಿಗೆ ಪ್ರಚೋದನೆ ನೀಡುವುದಿಲ್ಲ. ಅಷ್ಟೇ ಅಲ್ಲ, ಸಾಮಾನ್ಯ ಗಾಳಿಯಲ್ಲಿರುವ ತೇವಾಂಶವು ಟೈರ್ ಒಳಗೆ ಸಂಗ್ರಹವಾಗುತ್ತದೆ. ಇದು ದೀರ್ಘಾವಧಿಯಲ್ಲಿ ಟೈರ್ ಒಳಗಿನ ಪದರಗಳ ಗುಣಮಟ್ಟವನ್ನು ಹಾಳುಮಾಡಬಹುದು. ನೈಟ್ರೋಜನ್ ಹೈಡ್ರಸ್ಕೋಪಿಕ್ ಅಲ್ಲದಿರುವುದರಿಂದ (ತೇವಾಂಶವನ್ನು ಆಕರ್ಷಿಸದಿರುವುದರಿಂದ), ಟೈರುಗಳ ಆಯುಷ್ಯ ವೃದ್ಧಿಯಾಗುತ್ತದೆ. ಲ್ಯಾಂಡಿಂಗ್ ಸಮಯದಲ್ಲಿ ವಿಮಾನವು ಭೂಮಿಯನ್ನು ಸ್ಪರ್ಶಿಸುವಾಗ, ಟೈರುಗಳ ಉಷ್ಣಾಂಶ ತಕ್ಷಣ 250 ಡಿಗ್ರಿ ಸೆಲ್ಸಿಯಸ್ ಅಥವಾ ಅದಕ್ಕಿಂತ ತುಸು ಹೆಚ್ಚಾಗಬಹುದು. ಹಠಾತ್ ವೇಗದ ಪರಿಣಾಮವಾಗಿ ಉಂಟಾಗುವ ಘರ್ಷಣೆ ಟೈರಿಗೆ ಶಾಕ್ ನೀಡುತ್ತದೆ. ಇಂಥ ಸಂದರ್ಭದಲ್ಲಿ ಸಾಮಾನ್ಯ ಗಾಳಿ ಇದ್ದರೆ ಅದು ವಿಸ್ತಾರವಾಗುವ ಸಾಧ್ಯತೆ ಇರುತ್ತದೆ ಮತ್ತು ಟೈರ್ ಒತ್ತಡ ಅತಿಯಾದ ಮಟ್ಟದಲ್ಲಿ ಏರಬಹುದು. ಇದರಿಂದ ಟೈರು ಸ್ಫೋಟವಾಗಬಹುದು. ನೈಟ್ರೋಜನ್‌ನ ಗುಣ ಈ ಒತ್ತಡ ಬದಲಾವಣೆಗಳನ್ನು ನಿಯಂತ್ರಿಸುತ್ತದೆ. ಅಂತಾರಾಷ್ಟ್ರೀಯ ನಾಗರಿಕ ವಿಮಾನ ಸಂಸ್ಥೆ (ICAO), ಫೆಡರಲ್ ಏವಿಯೇಷನ್ ಆಡಳಿತ (FAA) ಮತ್ತು ಇತರ ಸಂಸ್ಥೆಗಳು ವಿಮಾನ ಟೈರುಗಳಲ್ಲಿ ನೈಟ್ರೋಜನ್ ಬಳಸಲೇಬೇಕು ಎಂಬ ಷರತ್ತನ್ನು ವಿಧಿಸಿವೆ. ವಿಮಾನ ಹ್ಯಾಂಗರಿನಲ್ಲಿ ಅಥವಾ ಗ್ರೌಂಡ್ ಎಂಜಿನಿಯರಿಂಗ್ ವಿಭಾಗದಲ್ಲಿ ನೈಟ್ರೋಜನ್ ಶುದ್ಧ ಗ್ಯಾಸ್ ಸಿಲಿಂಡರ್‌ಗಳನ್ನು ಬಳಸಲಾಗುತ್ತದೆ. ಆ ಮೂಲಕ ಟೈರುಗಳನ್ನು ಪೂರ್ವ ಪರೀಕ್ಷೆಗೊಳಪಡಿಸಿ, ಯಾವುದೇ ಬಿರುಕು ಅಥವಾ ಲೀಕ್ ಇಲ್ಲವೇ ಎಂಬುದನ್ನು ಪರೀಕ್ಷಿಸಲಾಗುತ್ತದೆ. ಬಳಿಕ ಶುದ್ಧ ನೈಟ್ರೋಜನ್ ಅನ್ನು ನಿರ್ದಿಷ್ಟ ಒತ್ತಡಕ್ಕೆ ಅನುಗುಣವಾಗಿ ತುಂಬಲಾಗುತ್ತದೆ. ಕೆಲವೊಮ್ಮೆ ಡ್ಯೂಯಲ್ ಇನ್ಫ್ಲೇಷನ್ ಸಿಸ್ಟಂ ಬಳಸಿ, ಮೊದಲಿಗೆ ಗಾಳಿಯನ್ನು ಹೊರಹಾಕಿ ನಂತರ ನೈಟ್ರೋಜನ್ ತುಂಬುತ್ತಾರೆ.

ದಳಗಳನ್ನು ಒಗ್ಗೂಡಿಸುವುದು ಸುಲಭವೇ?

ಅಶ್ವತ್ಥಕಟ್ಟೆ

ರಂಜಿತ್ ಎಚ್. ಅಶ್ವತ್ಥ

vveditoped@gmail.com

ranjith.hoskere@gmail.com

ರಾಜಕೀಯದಲ್ಲಿ ಆಡಳಿತಪಕ್ಷ-ಪ್ರತಿಪಕ್ಷದ ಸ್ಥಾನದಲ್ಲಿ ಕೂರುವುದು, ಸೋಲು-ಗೆಲುವುಗಳನ್ನು ನೋಡುವುದು ಸರ್ವೇ ಸಾಮಾನ್ಯ. ಪ್ರತಿ ಚುನಾವಣೆಯಲ್ಲಿಯೂ 'ಬದಲಾವಣೆ'ಯ ನಿರೀಕ್ಷೆಯೊಂದಿಗೆ ಮತದಾನಕ್ಕೆ ಹೋಗುವ ಮತದಾರರಿರುವ ಕಡೆ ಶಾಶ್ವತವಾಗಿ ಆಡಳಿತದಲ್ಲಿರುವುದು ಅಸಾಧ್ಯ. ಆದರೆ ಅಧಿಕಾರ ಹಾಗೂ ಚುನಾವಣೆ ಎರಡೂ ಇಲ್ಲದಿರುವಾಗಲೂ ಪಕ್ಷದ ಕಾರ್ಯಕರ್ತರ ಉತ್ಸಾಹ ಕುಗ್ಗದಂತೆ ನೋಡಿಕೊಳ್ಳುವ, ಚುನಾವಣೆಯ ದೃಷ್ಟಿಯ ಹೊರತಾಗಿ ಕೇಡರ್ ಕಟ್ಟಲು ಬಯಸುವ ಪಕ್ಷಗಳು ದೀರ್ಘಾವಧಿಯಲ್ಲಿ ನೆಲೆ ಕಂಡುಕೊಳ್ಳುವುದು ಸತ್ಯ.

ಅಧಿಕಾರದಲ್ಲಿರಲಿ ಇಲ್ಲದಿರಲಿ ಸುದ್ದಿಯಲ್ಲಿರಬೇಕು, ಪಕ್ಷದ ಕೇಡರ್ ಅನ್ನು ಗಟ್ಟಿಗೊಳಿಸಿಕೊಳ್ಳುತ್ತಾ ಸಾಗಬೇಕು ಎನ್ನುವ ಮನಸ್ಥಿತಿಯನ್ನು ಬಿಜೆಪಿ-ಕಾಂಗ್ರೆಸ್ ಸದಾ ಹೊಂದಿರುತ್ತವೆ. ಆದರೆ ಕರ್ನಾಟಕದಲ್ಲಿರುವ ಮೂರನೇ ಪ್ರಮುಖ ಪಕ್ಷವೆನಿಸಿರುವ ಜೆಡಿಎಸ್ ಈ ವಿಷಯದಲ್ಲಿ ಪ್ರತಿಬಾರಿಯೂ ಹಿಂದೆ ಬಿದ್ದಿದೆ. ಅಧಿಕಾರದಲ್ಲಿದ್ದಾಗ 'ಸದ್ದು' ಮಾಡುವ ಅಥವಾ ಚುನಾವಣೆಗೆ ಆರು ತಿಂಗಳಿರುವಾಗ ಹೊರಬರುವ ಜೆಡಿಎಸ್ ನಾಯಕರು ಚುನಾವಣೆ ಮುಗಿಯುತ್ತಿದ್ದಂತೆ 'ಬೆಚ್ಚಗೆ ಮನೆಯಲ್ಲಿ ಮಲಗುತ್ತಾರೆ'. ಈ ಮಾತನ್ನು ಸ್ವತಃ ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡರು ಹಾಗೂ ಕುಮಾರಸ್ವಾಮಿ ಅವರೇ ಒಪ್ಪಿಕೊಂಡಿದ್ದಾರೆ. ಹೀಗಿರುವಾಗ ವಿಧಾನಸಭಾ ಚುನಾವಣೆಗೆ ಮೂರು ವರ್ಷಗಳಿರುವಾಗಲೇ, ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಸಂಘಟನಾತ್ಮಕ ಪ್ರವಾಸ ಆರಂಭಿಸಿರುವುದು ಜೆಡಿಎಸ್ ಪಾಲಿಗೆ 'ವಿಚಿತ್ರ' ಬೆಳವಣಿಗೆ. ನಿಖಿಲ್ ಪ್ರವಾಸ ಆರಂಭಿಸಿರುವ 'ಉದ್ದೇಶ' ಉತ್ತಮವಾಗಿದ್ದರೂ, ಪಕ್ಷದ ಕಾರ್ಯಕರ್ತರು ನಿಖಿಲ್‌ರನ್ನು ಎಷ್ಟರ ಮಟ್ಟಿಗೆ ಒಪ್ಪಿಕೊಳ್ಳುತ್ತಾರೆ ಎನ್ನುವುದು ಈಗಿರುವ ಬಹುದೊಡ್ಡ ಪ್ರಶ್ನೆಯಾಗಿದೆ.

ಉತ್ತರ ಪ್ರದೇಶಕ್ಕೆ ಹೋಲಿಸಿದರೆ ದಕ್ಷಿಣ ಭಾರತದಲ್ಲಿ ಪ್ರಾದೇಶಿಕ ಪಕ್ಷಗಳ ಮೇಲೆ ತುಸು ಹೆಚ್ಚಿನ ಪ್ರೇಮವಿದೆ. ತಮಿಳುನಾಡು, ಆಂಧ್ರಪ್ರದೇಶ, ತೆಲಂಗಾಣದಂಥ ರಾಜ್ಯಗಳಲ್ಲಿ ಅಧಿಕಾರ ಗದ್ದುಗೆ ಹಿಡಿಯಲು ಈಗಲೂ ರಾಷ್ಟ್ರೀಯ ಪಕ್ಷಗಳು ಪ್ರಾದೇಶಿಕ ಪಕ್ಷಗಳ ಆಸರೆಯನ್ನು ಬಯಸುತ್ತಿವೆ. ಆದರೆ ಕರ್ನಾಟಕದ ರಾಜಕೀಯ ಮಾತ್ರ ಈ ವಿಷಯದಲ್ಲಿ ಭಿನ್ನ ಎಂದರೆ ತಪ್ಪಾಗುವುದಿಲ್ಲ. ಕಳೆದ 15 ವರ್ಷಗಳಲ್ಲಿ ಜೆಡಿಎಸ್‌ನ ಚುನಾವಣಾ ಅಂಕಿ-ಅಂಶವನ್ನು ನೋಡಿದರೆ, ದಿನದಿಂದ ದಿನಕ್ಕೆ ಜೆಡಿಎಸ್‌ನ ಗ್ರಾಫ್ ಯಾವ ರೀತಿಯಲ್ಲಿ ಇಳಿಮುಖವಾಗುತ್ತಿದೆ ಎನ್ನುವುದು ತಿಳಿಯುತ್ತದೆ. ಪ್ರಜ್ವಲ್ ರೇವಣ್ಣ ಪ್ರಕರಣದ ಬಳಿಕ ರೇವಣ್ಣ ಕುಟುಂಬ ರಾಜಕೀಯದಿಂದ ದೂರ ಉಳಿದಿದ್ದರೆ, ದೇವೇಗೌಡರಿಗೆ ಪಕ್ಷವನ್ನು ಸಂಘಟಿಸಬೇಕೆಂಬ ಹಂಬಲ ಈ ಇಳಿವಯಸ್ಸಿನಲ್ಲಿದ್ದರೂ ಅವರ ದೇಹ ಅದಕ್ಕೆ ಸ್ಪಂದಿಸುತ್ತಿಲ್ಲ. ಅದರಲ್ಲಿಯೂ ಚನ್ನಪಟ್ಟಣ ಉಪಚುನಾವಣೆಯಲ್ಲಿ ನಿಖಿಲ್ ಕುಮಾರಸ್ವಾಮಿಯ ಸೋಲು ದೇವೇಗೌಡರಿಗೆ ಇನ್ನಷ್ಟು ಪೆಟ್ಟು ಕೊಟ್ಟಿದ್ದು ಸುಳ್ಳಲ್ಲ. ಇನ್ನು ಅನಾರೋಗ್ಯದ ಹೊರತಾಗಿಯೂ ಕೆಲ ವರ್ಷಗಳಿಂದ ರಾಜ್ಯಾದ್ಯಂತ ಪಕ್ಷ ಸಂಘಟಿಸಿದ್ದ ಕುಮಾರಸ್ವಾಮಿ, ಬಿಜೆಪಿಯೊಂದಿಗೆ ಜೆಡಿಎಸ್ ಮೈತ್ರಿ ಮಾಡಿಕೊಂಡು ಅವರು ಕೇಂದ್ರ ಸಚಿವರಾಗಿ ದೆಹಲಿಗೆ ತೆರಳಿದ ಬಳಿಕ ರಾಜ್ಯ ಜೆಡಿಎಸ್ ಅನ್ನು ಮುನ್ನಡೆಸುವವರು ಯಾರು ಎನ್ನುವ ಪ್ರಶ್ನೆ ಕಾಡುತ್ತಿದೆ.

ಅಂಥ ಹಲವು ಪ್ರಶ್ನೆಗಳಿರುವ ಸಮಯದಲ್ಲಿಯೇ ದೇವೇಗೌಡರ ಮೊಮ್ಮಗ, ಕುಮಾರಸ್ವಾಮಿ ಅವರ ಪುತ್ರ, ಜೆಡಿಎಸ್ ಯುವಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ 'ಸಂಘಟನಾ ಪ್ರವಾಸ'ವನ್ನು ಸೋಮವಾರದಿಂದ ಆರಂಭಿಸಿದ್ದಾರೆ. ತಾತ-ಅಪ್ಪನ ಬಳಿಕ ಪಕ್ಷದ 'ಮಾಸ್ ನಾಯಕ'ನಾಗಿ ಕಾಣಿಸಿಕೊಳ್ಳಲು ಈ ಪ್ರವಾಸವನ್ನು 'ಬೇಸ್' ಮಾಡಿಕೊಳ್ಳುವ ಲೆಕ್ಕಾಚಾರದಲ್ಲಿದ್ದಾರೆ. ಈ ಪ್ರವಾಸದಲ್ಲಿ ಎಷ್ಟರ ಮಟ್ಟಿಗೆ ನಿಖಿಲ್‌ಗೆ ಯಶ ಸಿಗುತ್ತದೆ ಎನ್ನುವುದಕ್ಕಿಂತ ಕುಮಾರಸ್ವಾಮಿ ದೆಹಲಿಗೆ ತೆರಳಿದ ಬಳಿಕ ಸಂಘಟನೆಯನ್ನೇ ಮರೆದಿದ್ದ ಜೆಡಿಎಸ್ ಪಾಲಿಗೆ ಇದು ಉತ್ತಮ ಸಮಾಚಾರ ಎಂದರೆ ತಪ್ಪಾಗುವುದಿಲ್ಲ.

ಸಂಘಟನೆಯಿಲ್ಲದೇ ನೇರವಾಗಿ ಜನಪ್ರತಿನಿಧಿಯಾಗುವ ಉತ್ಸಾಹದಲ್ಲಿದ್ದ ನಿಖಿಲ್ ಕುಮಾರಸ್ವಾಮಿ, ಸತತ ಮೂರು ಸೋಲುಗಳ ಬಳಿಕ ಇದೀಗ ಸಂಘಟನೆಯ ಮೂಲಕ ಪಕ್ಷದ ರಾಜಕೀಯದಲ್ಲಿ ಆಯಕಟ್ಟಿನ ಸ್ಥಾನದಲ್ಲಿ ಕೂರಬೇಕೆನ್ನುವ ಲೆಕ್ಕಾಚಾರ ಆರಂಭಿಸಿದ್ದಾರೆ. ಇದರ ಭಾಗವಾಗಿ 'ಜನರೊಂದಿಗೆ ಜನತಾದಳ' ಎನ್ನುವ ಅಭಿಯಾನ ಆರಂಭಿಸಿ 'ಮಿಸ್ಡ್ ಕಾಲ್' ಅಭಿಯಾನ ಹಾಗೂ ರಾಜ್ಯಾದ್ಯಂತ ಸಂಘಟನಾತ್ಮಕ ಪ್ರವಾಸ ಮಾಡಲು ಮುಂದಾಗಿದ್ದಾರೆ. ಸತತ ಸೋಲುಗಳ ಬಳಿಕವೂ ಅವರನ್ನು ಯುವ ಘಟಕದ ರಾಜ್ಯಾಧ್ಯಕ್ಷರನ್ನಾಗಿ ಮಾಡಲಾಗಿತ್ತು; ಇದೀಗ ಪಕ್ಷದ ರಾಜ್ಯಾಧ್ಯಕ್ಷರನ್ನಾಗಿ ನಿಖಿಲ್‌ರನ್ನು ನೇಮಿಸುವ ಬಗ್ಗೆ ಸ್ವಪಕ್ಷದಲ್ಲಿಯೇ ಶುರುವಾಗಿದ್ದ ಆಕ್ಷೇಪಗಳಿಗೆ 'ಕಾರ್ಯಕರ್ತರ ಬಲ'ವನ್ನು ತೋರಿಸಿ ಪಟ್ಟಕಟ್ಟುವ ಲೆಕ್ಕಾಚಾರವೂ ಈ ಅಭಿಯಾನದ ಹಿಂದಿದೆ.

ಹಾಗೆ ನೋಡಿದರೆ, ಜೆಡಿಎಸ್‌ಗೆ ಕಾರ್ಯಕರ್ತರ ಅಥವಾ ಸಾಂಪ್ರದಾಯಿಕ ಮತದಾರರ ಕೊರತೆಯಿಲ್ಲ. ಕೇವಲ ಹಳೇ ಮೈಸೂರು ಭಾಗ ಮಾತ್ರವಲ್ಲದೇ, ದೇವೇಗೌಡರು ನೀಡಿರುವ ನೀರಾವರಿ ಯೋಜನೆ ಹಾಗೂ ಜನತಾದಳದ ಮೂಲಬೇರುಗಳಿಗಾಗಿ ಉತ್ತರ ಕರ್ನಾಟಕದಲ್ಲಿ ಈಗಲೂ ಸಾಂಪ್ರದಾಯಿಕ ಮತದಾರರಿದ್ದಾರೆ. ಆದರೆ ಅವರನ್ನು ಮಾತನಾಡಿಸುವವರು ಇಲ್ಲದಿರುವುದು, ಜೆಡಿಎಸ್‌ನ ಇಂದಿನ ಸಂಘಟನಾ ವೈಫಲ್ಯಕ್ಕೆ ಕಾರಣ. ಆದರೆ ನಿಖಿಲ್ ಕುಮಾರಸ್ವಾಮಿ ಅವರು ಆರಂಭಿಸಿರುವ ಈ ಎರಡು ತಿಂಗಳ ಪ್ರವಾಸದಲ್ಲಿ ಎಲ್ಲಿಯೂ ಕುಮಾರಸ್ವಾಮಿ ಅವರಾಗಲಿ, ದೇವೇಗೌಡರಾಗಲಿ ಭಾಗವಹಿಸುತ್ತಿಲ್ಲ. ಹೀಗಿರುವಾಗ, ದೇವೇಗೌಡರಿಗಾಗಿ ಪಕ್ಷದೊಂದಿಗೆ ಉಳಿದುಕೊಂಡಿರುವ ಕಾರ್ಯಕರ್ತರು, ನಿಖಿಲ್‌ರನ್ನು ನೋಡಿಕೊಂಡು ಮತ್ತೆ ಸಕ್ರಿಯರಾಗುವರೇ ಎನ್ನುವ ಪ್ರಶ್ನೆಗೆ ಮುಂದಿನ ಎರಡು ತಿಂಗಳಲ್ಲಿ ಉತ್ತರ ಸಿಗಲಿದೆ.

ವರ್ಷದಿಂದ ವರ್ಷಕ್ಕೆ ಜೆಡಿಎಸ್‌ನ ಪ್ರಭಾವ ಕುಸಿಯುತ್ತಿದ್ದರೂ, ಬಿಜೆಪಿಯೊಂದಿಗೆ ಮೈತ್ರಿ ಮಾಡಿಕೊಂಡ ಬಳಿಕ ರಾಷ್ಟ್ರಮಟ್ಟದಲ್ಲಿ ತನ್ನ ಸ್ಥಾನವನ್ನು ಅದು ಭದ್ರಪಡಿಸಿಕೊಳ್ಳುತ್ತಿದೆ. ಎನ್‌ಡಿಎಗೆ ಜೆಡಿಎಸ್‌ನ ಕೊಡುಗೆ ಎಷ್ಟಿದೆ ಎನ್ನುವುದಕ್ಕಿಂತ, ದೇವೇಗೌಡರು, ಕುಮಾರಸ್ವಾಮಿ ಬಗ್ಗೆ ಮೋದಿ ಹಾಗೂ ಅಮಿತ್ ಶಾಗಿರುವ ಅಭಿಪ್ರಾಯ ಹಾಗೂ ರಾಜ್ಯದಲ್ಲಿರುವ ಬಿಜೆಪಿಯ ಆಂತರಿಕ ಸಂಘರ್ಷಗಳು ಜೆಡಿಎಸ್‌ಗೆ ಲಾಭ ಮಾಡಿಕೊಟ್ಟಿವೆ. ಇದರೊಂದಿಗೆ ಕಳೆದ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯ ಕನಿಷ್ಠ ಐದು ಅಭ್ಯರ್ಥಿಗಳು ಗೆಲ್ಲುವುದರಲ್ಲಿ ಜೆಡಿಎಸ್‌ನ ಸಾಂಪ್ರದಾಯಿಕ ಮತಗಳು ಪ್ರಮುಖ ಪಾತ್ರವಹಿಸಿವೆ ಎನ್ನುವುದು ಜೆಡಿಎಸ್‌ಗಿರುವ ಬಹುದೊಡ್ಡ ಲಾಭ. ಆದ್ದರಿಂದ ಮುಂದಿನ ವಿಧಾನಸಭಾ ಚುನಾವಣೆಯಲ್ಲಿಯೂ ಮೈತ್ರಿ ಬಲದೊಂದಿಗೆ ಜೆಡಿಎಸ್ ಹೋಗುವುದರಿಂದ, 'ಟಿಕೆಟ್ ಯಾರಿಗೇ ಸಿಗಲಿ ಮೈತ್ರಿ ಅಭ್ಯರ್ಥಿ ಪರ ಕೆಲಸ ಮಾಡಬೇಕು' ಎನ್ನುವ ಸಂದೇಶವನ್ನು ಕಾರ್ಯಕರ್ತರಿಗೆ ಈ ಪ್ರವಾಸದಲ್ಲಿ ತಲುಪಿಸುವುದಾಗಿ ನಿಖಿಲ್ ಹೇಳಿಕೊಂಡಿದ್ದಾರೆ. ನಿಖಿಲ್ ನೀಡುವ ಈ ಸಂದೇಶ ಬಿಜೆಪಿ ಹಾಗೂ ಜೆಡಿಎಸ್‌ನ ನಾಯಕರಿಗೆ ಖುಷಿ ತರಿಸಬಹುದು. ಆದರೆ ತಳಮಟ್ಟದಲ್ಲಿರುವ ಕಾರ್ಯಕರ್ತರ ನಡುವಿನ ಸಂಘರ್ಷಗಳು ಈ ಒಂದು ಹೇಳಿಕೆಯಿಂದ ಸರಿಹೋಗುವುದೇ?

ಮೇಲ್ನೋಟಕ್ಕೆ ರಾಜ್ಯ ಬಿಜೆಪಿ ನಾಯಕರೊಂದಿಗೆ ಕುಮಾರಸ್ವಾಮಿ ಹಾಗೂ ನಿಖಿಲ್ ಅನ್ಯೋನ್ಯವಾಗಿದ್ದರೂ, ಚನ್ನಪಟ್ಟಣದ ಉಪಚುನಾವಣೆಯಲ್ಲಿ ನಿಖಿಲ್ ಸೋಲಿಗೆ ಕಾರಣರ್ಯಾರು? ಸಿ.ಪಿ.ಯೋಗೇಶ್ವರ ಬಿಜೆಪಿಯಿಂದ ಕಾಂಗ್ರೆಸ್ ಹೋಗಿ, ಗೆಲುವು ಸಾಧಿಸಿದ್ದು ಹೇಗೆ? ಎನ್ನುವುದರ ಅರಿವಿದೆ. ರಾಜ್ಯ ಬಿಜೆಪಿ ನಾಯಕರಿಂದ ಜೆಡಿಎಸ್‌ಗೆ ಬಿದ್ದಿರುವ 'ಒಳಯೇಟಿ'ಗೆ ಪ್ರತಿಯೇಟು ನೀಡುವುದಕ್ಕಾಗಿ ಸ್ವತಃ ಎಚ್‌ಡಿಕೆ ಕಾಯುತ್ತಿರುವಾಗ, ಪಕ್ಷದ ಕಾರ್ಯಕರ್ತರು ತಳಮಟ್ಟದಲ್ಲಿ ಸರಿಹೋಗಲು ಸಾಧ್ಯವೇ? ಹೋದ ಕಡೆಯಲ್ಲಿ ಟಿಕೆಟ್ ಜೆಡಿಎಸ್‌ಗೆ ಸಿಗುವುದಾ ಎನ್ನುವ ಪ್ರಶ್ನೆಗೆ ಈ ಹಂತದಲ್ಲಿ ಯಾವುದೇ 'ಆಶ್ವಾಸನೆ' ಕೊಡುವ ಪರಿಸ್ಥಿತಿಯಲ್ಲಿ ನಿಖಿಲ್ ಇಲ್ಲದಿರುವಾಗ ಯಾವ ರೀತಿಯಲ್ಲಿ ಕಾರ್ಯಕರ್ತರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುತ್ತಾರೆ ಎನ್ನುವ ಕುತೂಹಲವಿದೆ.

ನಿಖಿಲ್ ಕುಮಾರಸ್ವಾಮಿ ಆರಂಭಿಸಿರುವ ಈ ಸಂಘಟನಾ ಪ್ರವಾಸದ ಸಮಯದಲ್ಲಿ ಬಹಿರಂಗ ಸಮಾವೇಶಗಳಿರುವುದಿಲ್ಲ. ಬದಲಿಗೆ ಕೇಡರ್ ಅನ್ನು ಗಟ್ಟಿಗೊಳಿಸುವ ನಿಟ್ಟಿನಲ್ಲಿ ಸಭೆಗಳನ್ನು ನಡೆಸಲಾಗುತ್ತದೆ ಎನ್ನುವುದು ಜೆಡಿಎಸ್ ಮೂಲಗಳ ಮಾತಾಗಿದೆ. ಮುಂದಿನ ಮೂರು ವರ್ಷಗಳ ಚುನಾವಣೆಯನ್ನು ಗಮನದಲ್ಲಿರಿಸಿಕೊಂಡು, ಈಗಿನಿಂದಲೇ ಕ್ಷೇತ್ರಗಳಲ್ಲಿ ಪಕ್ಷವನ್ನು ಸಂಘಟಿಸಲಾಗುತ್ತದೆ, ಅಗತ್ಯವಿರುವಲ್ಲಿ ಜಿಲ್ಲಾಧ್ಯಕ್ಷರ, ತಾಲೂಕು ಅಧ್ಯಕ್ಷರ ಬದಲಾವಣೆಗೆ ಅಭಿಪ್ರಾಯ ಸಂಗ್ರಹಿಸಲಾಗುತ್ತದೆ ಎನ್ನಲಾಗುತ್ತಿದೆ. ನಿಖಿಲ್ ಇನ್ನೊಂದು ಹೆಜ್ಜೆ ಮುಂದೆ ಹೋಗಿ ಮುಂದಿನ ಚುನಾವಣೆಗೆ ಅಭ್ಯರ್ಥಿಗಳಾಗಲು ಬಯಸುವ ಆಕಾಂಕ್ಷಿಗಳ ಮೊದಲ ಹಂತದ 'ಸಂದರ್ಶನ'ವನ್ನೂ ಇದೇ ಸಮಯದಲ್ಲಿ ಮಾಡುತ್ತಾರೆ ಎನ್ನಲಾಗುತ್ತಿದೆ.

ಆದರೆ ಬಹುತೇಕರಲ್ಲಿರುವ ಪ್ರಶ್ನೆ, ಆಕಾಂಕ್ಷಿಗಳ ಸಂದರ್ಶನವನ್ನು ಯಾವ ಆಧಾರದಲ್ಲಿ ಮಾಡುತ್ತಾರೆ? ರಾಜ್ಯದ ಕೆಲ ಕ್ಷೇತ್ರಗಳನ್ನು ಹೊರತುಪಡಿಸಿ ಇನ್ನುಳಿದ ಕ್ಷೇತ್ರಗಳಲ್ಲಿ ಜೆಡಿಎಸ್‌ಗೆ ಟಿಕೆಟ್ ಸಿಗುವುದು 'ಸುಲಭ'. ಆದರೆ ಮೈತ್ರಿಪಕ್ಷ ಬಿಜೆಪಿಗೆ ಬಹುತೇಕ ಕ್ಷೇತ್ರದಲ್ಲಿ ಒಂದು ಟಿಕೆಟ್‌ಗೆ 10 ಆಕಾಂಕ್ಷಿಗಳು ಟವೆಲ್ ಹಾಕಿರುವ ಉದಾಹರಣೆಯಿದೆ. ಅದರಲ್ಲಿಯೂ ಮೊದಲ ಹಂತದಲ್ಲಿ ನಿಖಿಲ್ ನಡೆಸುತ್ತಿರುವ ಪ್ರವಾಸದಲ್ಲಿ ಬರುವ ಬಹುತೇಕ ಕ್ಷೇತ್ರಗಳು ಬಿಜೆಪಿಯ ಭದ್ರಕೋಟೆಗಳ ರೀತಿಯಲ್ಲಿವೆ. ಹೀಗಿರುವಾಗ, ನಿಖಿಲ್ ಕುಮಾರಸ್ವಾಮಿ ಹೋಗಿ, ಆಕಾಂಕ್ಷಿಗಳ ಪಟ್ಟಿಯನ್ನು ಕೇಳಿದರೆ ಮೈತ್ರಿಪಕ್ಷ ಬಿಜೆಪಿಯ ನಾಯಕರು ಸುಮ್ಮನಿರುವರೇ? ಈ ಪ್ರವಾಸ ಜೆಡಿಎಸ್‌ನ ಆಂತರಿಕ ವಿಷಯ ಎಂದಾದರೂ, ಮೈತ್ರಿಪಕ್ಷದ ಟಿಕೆಟ್ ವಿಷಯ ಎನ್ನುವುದು ಮುನ್ನೆಲೆಗೆ ಬಂದಾಗ ಸಹಜವಾಗಿಯೇ ಸ್ಥಳೀಯ ಬಿಜೆಪಿಗರಿಗೆ 'ಕಿರಿಕಿರಿ'ಯಾಗುವುದು ಸಹಜ. ಈ ಕಿರಿಕಿರಿಯನ್ನು ರಾಜ್ಯ ನಾಯಕರಿಗೆ ಸ್ಥಳೀಯರು ವರ್ಗಾಯಿಸಿದರೆ ದೆಹಲಿಯಲ್ಲಿ ಅದರ ಪರಿಣಾಮ ಬೀರುವ ಸಾಧ್ಯತೆಯಿರುತ್ತದೆ.

ಒಂದು ವೇಳೆ ಕೇವಲ ಅಭಿಪ್ರಾಯ ಸಂಗ್ರಹಕ್ಕೆ ಮಾತ್ರ ಈ ಪ್ರವಾಸವೆಂದು ಜೆಡಿಎಸ್ ಹೇಳಿದರೆ, ಜೆಡಿಎಸ್‌ನಲ್ಲಿರುವ ಆಕಾಂಕ್ಷಿಗಳು ಭ್ರಮನಿರಸನವಾಗುವ ಸಾಧ್ಯತೆಯಿದೆ. ಟಿಕೆಟ್ ಸಿಗದಿದ್ದರೂ ಮೈತ್ರಿಧರ್ಮ ಪಾಲಿಸಲು ಪಕ್ಷವನ್ನು ಸಂಘಟಿಸಿ ಎನ್ನುವ ವಾದವನ್ನು ಅನೇಕರು ಒಪ್ಪುವುದಿಲ್ಲ. ಇನ್ನೊಬ್ಬರಿಗೆ ಟಿಕೆಟ್ ಕೊಡಿಸಲು ಅಥವಾ ಬಿಜೆಪಿಯಿಂದ ನಿಲ್ಲುವ ಅಭ್ಯರ್ಥಿಯನ್ನು ಗೆಲ್ಲಿಸುವುದಕ್ಕಾಗಿ ಮೂರು ವರ್ಷ ಸಂಘಟನೆ ಏಕೆ ಮಾಡಬೇಕು? ಅದರಲ್ಲಿಯೂ ಯಾವುದೇ ಪ್ರತಿಫಲವಿಲ್ಲದೇ ಮೂರು ವರ್ಷಗಳ ಕಾಲ ಕ್ಷೇತ್ರಗಳಲ್ಲಿ 'ಕಾರ್ಯಕರ್ತ'ರನ್ನು ಸಾಕುವುದು 'ಆರ್ಥಿಕ'ವಾಗಿಯೂ ಹೇಳಿದಷ್ಟು ಸುಲಭವಲ್ಲ. ಹೀಗಿರುವಾಗ ಪ್ರವಾಸದ ಮೂಲಕ ಸಂಘಟನೆ ಮಾಡಲು ಹೊರಟಿರುವ ನಿಖಿಲ್ ಸ್ಥಳೀಯ ನಾಯಕರನ್ನು ಯಾವ ರೀತಿ ನಿಭಾಯಿಸುತ್ತಾರೆ ಎನ್ನುವುದು ಈಗಿರುವ ಬಹುದೊಡ್ಡ ಪ್ರಶ್ನೆ ಹಾಗೂ ಕುತೂಹಲ.

ದೇವೇಗೌಡರು ಹಾಗೂ ಕುಮಾರಸ್ವಾಮಿ ಅವರ 'ವರ್ಚಸ್ಸಿ'ನ ಮೇಲೆ ನಡೆದುಕೊಂಡು ಹೋಗುತ್ತಿರುವ ಜೆಡಿಎಸ್‌ನ ಭವಿಷ್ಯದ ನಾಯಕ ಯಾರು ಎನ್ನುವ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವ ಹೊರತು ಸಂಘಟನೆಯಲ್ಲಿ ಬಹುದೊಡ್ಡ ಪ್ರಮಾಣದಲ್ಲಿ ಬದಲಾವಣೆಯಾಗುತ್ತದೆ ಎನ್ನುವ ನಂಬಿಕೆಯಿಲ್ಲ. ಹೀಗಿರುವಾಗ, ಗೌಡರ ಕುಟುಂಬದ ಮೂರನೇ ಕುಡಿ ನಿಖಿಲ್ ಕುಮಾರಸ್ವಾಮಿ, ತಂದೆ-ತಾತನ ನೆರವಿಲ್ಲದೇ ಸಂಘಟನೆ ಪ್ರವಾಸ ಆರಂಭಿಸಿದ್ದಾರೆ. ಇದು ಪಕ್ಷದ ಸಂಘಟನೆಗೆ ಎಷ್ಟರ ಮಟ್ಟಿಗೆ 'ನೆರವಾಗಲಿದೆ' ಎನ್ನುವುದಕ್ಕೆ ಕಾಲವೇ ಉತ್ತರಿಸಬೇಕಿದೆ.

ಓದುಗರ ಒಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಅಭಿಮಾನ ಅತಿರೇಕವಾದರೆ..

ನಮಗೆ ತಿಳಿದೋ ತಿಳಿಯದೆಯೋ ಕೆಲವರ ಅಭಿಮಾನಿಗಳಾಗಿಬಿಡುತ್ತೇವೆ. ಒಂದು ವಿಷಯ ಅಥವಾ ವ್ಯಕ್ತಿಯ ಬಗ್ಗೆ ಅತಿಯಾದ ಅಭಿಮಾನವನ್ನು ತೋರುವವರಿಗೆ fanatic ಎನ್ನುತ್ತಾರೆ. ಇದು ತುಂಡಾಗಿ ನಾವು ಉಪಯೋಗಿಸುವ fan ಪದವಾಗಿದೆ. ಕ್ರೀಡೆ, ಮನರಂಜನೆ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ಇರುವವರಿಗೆ ಅಭಿಮಾನಿಗಳ ದಂಡು ಕೊಂಚ ಹೆಚ್ಚೇ ಎನ್ನಬಹುದು. ಅವರು ಮಾಧ್ಯಮಗಳಲ್ಲಿ/ತೆರೆಯ ಮೇಲೆ ಹೆಚ್ಚಾಗಿ ಕಾಣಿಸಿಕೊಳ್ಳುವುದೇ ಇದಕ್ಕೆ ಮುಖ್ಯ ಕಾರಣ.

ಸೈನಿಕರು, ವಿಜ್ಞಾನಿಗಳು, ನೊಬೆಲ್ ಪ್ರಶಸ್ತಿ ಪುರಸ್ಕೃತರು ಹೀಗೆ ಅನೇಕರಿಗೆ ನಾವು ಗೌರವವನ್ನು ತೋರುತ್ತೇವೆಯೇ ಹೊರತು, ಅವರ 'ಅಭಿಮಾನಿಗಳು' ಎಂಬ ಹಣೆಪಟ್ಟಿಯನ್ನು ಕಟ್ಟಿಕೊಳ್ಳುವುದಿಲ್ಲ. ಇನ್ನು ಅಭಿಮಾನವನ್ನು ವ್ಯಕ್ತಪಡಿಸುವ ವಿಷಯಕ್ಕೆ ಬಂದರೆ, ಅದು ವ್ಯಕ್ತಿಗತವಾದದ್ದು. ಕೆಲವರು ಮೂಕಾಭಿಮಾನವನ್ನು ಮೆರೆದರೆ, ಮತ್ತೆ ಕೆಲವರು ತಮ್ಮ ಸ್ವಾಭಿಮಾನಕ್ಕೆ ಧಕ್ಕೆ ತರುವಂಥ ಅಂಧಾಭಿಮಾನವನ್ನು ಮೆರೆಯುವವರು. ಇತಿ-ಮಿತಿಯಲ್ಲಿದ್ದರೆ ಎಲ್ಲವೂ ಚಂದ ಎಂದ ಮೇಲೆ, ಅತಿರೇಕದ ಅಭಿಮಾನವೇಕೆ? ಹಿಂದಿದ್ದ ಅಭಿಮಾನಿ ಸಂಘಗಳು ಈಗ 'ಫ್ಯಾನ್ ಪೇಜ್'ಗಳಾಗಿವೆ, ಅದನ್ನು ಫಾಲೋ ಮಾಡುವುದಕ್ಕೆ ಲಕ್ಷಗಟ್ಟಲೆ ಜನ! ಫ್ಯಾನ್ ಪೇಜ್‌ಗಳಲ್ಲಿ ತಾವು ಎಂಥಾ ಅಭಿಮಾನಿ ಎಂದು ತೋರಿಸಿಕೊಳ್ಳುವ ಭರಾಟೆ, ಒಬ್ಬರ ಫ್ಯಾನ್ಸ್ ಮತ್ತೊಬ್ಬರ ಫ್ಯಾನ್ಸ್ ಮೇಲೆ ನಡೆಸುವ ಪೈಪೋಟಿ... ಹೀಗೆ ಮೊಬೈಲ್, ಅದರಲ್ಲಿರೋ ಕ್ಯಾಮರಾ, ನೂರಾರು ಆ್ಯಪ್‌ಗಳಲ್ಲೇ ಅರ್ಧ ಯುವಜನರು ಕಳೆದುಹೋಗಿದ್ದಾರೆ.

ಮೊಬೈಲ್‌ಗಳ ಕಾಲಘಟ್ಟಕ್ಕೂ ಮುನ್ನ ಅಭಿಮಾನಿಗಳೆನಿಸಿಕೊಂಡವರು ಸಿನಿಮಾ ತಾರೆಯರಿಗೆ ಆಲಯ ಕಟ್ಟಿಸಿರುವ, ಹೀರೋಗಳ ಕಟೌಟುಗಳಿಗೆ ಲೀಟರುಗಟ್ಟಲೆ ಹಾಲಿನ ಅಭಿಷೇಕ ಮಾಡಿರುವ ಉದಾಹರಣೆಗಳು ನಮ್ಮಲ್ಲಿವೆ. ಕೆಲವು ಅಭಿಮಾನಿ ಸಂಘಗಳಿಂದ ಜನರಿಗೆ ಉಪಯೋಗವಾಗುವ ಕೆಲಸಗಳು ನಡೆದಿವೆಯಾದರೂ, ಯಾರದ್ದೋ ಫ್ಯಾನ್ ಆಗಲು ಹೋಗಿ ತಮ್ಮ ಕುಟುಂಬ ಜೀವನವನ್ನೇ ಹಾಳುಮಾಡಿಕೊಂಡಿರುವವರೂ ಸಾಕಷ್ಟಿದ್ದಾರೆ. ಕಟೌಟ್ ನಿಲ್ಲಿಸುವ ಸಂದರ್ಭದಲ್ಲಿ ವಿದ್ಯುತ್ ಶಾಕ್ ಹೊಡೆದು ಸತ್ತವರು, ಸಿನಿಮಾದ ಮೊದಲ ದಿನದ ಮೊದಲ ಪ್ರದರ್ಶನ ನೋಡಲೆಂದು ತೆರಳಿ ಜನದಟ್ಟಣೆಯಲ್ಲಿ ಕಾಲ್ತುಳಿತಕ್ಕೆ ಸಿಕ್ಕಿ ಸತ್ತವರು, ಇತ್ತೀಚಿನ ಆರ್‌ಸಿಬಿ ವಿಜಯೋತ್ಸವದ ವೇಳೆ ನಡೆದ ದುರಂತ ಇವನ್ನೆಲ್ಲಾ ನೋಡಿದಾಗ ಅಭಿಮಾನ ಎಲ್ಲೆಮೀರುತ್ತಿದೆ ಎನಿಸಿಬಿಡುತ್ತದೆ.

ಸಾಧಕರೊಬ್ಬರ ಅಭಿಮಾನಿಯಾಗಿ ಅವರ ಒಳ್ಳೆಯ ಗುಣ-ವೈಶಿಷ್ಟ್ಯಗಳನ್ನು ಕಲಿಯೋಣ, ಅವರು ಕಷ್ಟಪಟ್ಟು ಬಂದ ಹಾದಿಯನ್ನು ಗೌರವಿಸೋಣ. ಅವರ ಕಾರ್ಯಶೈಲಿಯನ್ನು ನಾವೂ ಕಲಿಯೋಣ. ಅವರು ಬರೆದ ಪುಸ್ತಕವನ್ನೋ, ನಟಿಸಿದ ಚಲನಚಿತ್ರವನ್ನೋ ಒಂದಲ್ಲ ಎರಡು ಬಾರಿ ಅವಲೋಕಿಸೋಣ. ಆದರೆ ಜತೆಜತೆಗೆ, ಹುಚ್ಚು ಅಭಿಮಾನ ಹೆಚ್ಚು ಅಪಾಯಕಾರಿ ಎಂಬುದನ್ನೂ ಅರಿಯೋಣ. ಈ 'ಫ್ಯಾನ್‌ಡಮ್' ನಮ್ಮ ದೇಶದಲ್ಲಷ್ಟೇ ಇದೆ ಎಂದೇನಲ್ಲ; ಕೆಲ ವರ್ಷಗಳ ಹಿಂದೆ ಫುಟ್‌ಬಾಲ್ ಕ್ರೇಜ್‌ಗೆ, ಮೈಕಲ್ ಜಾಕ್ಸನ್‌ನ ನೃತ್ಯಕ್ಕೆ ವಿದೇಶಗಳಲ್ಲಿ ಅನೇಕ ಫ್ಯಾನ್‌ಗಳು ಹುಚ್ಚು ಅಭಿಮಾನ ತೋರಲು ಹೋಗಿ ಪ್ರಾಣಾಪಾಯಕ್ಕೆ ಗುರಿಯಾಗಿದ್ದಾರೆ. ಇಷ್ಟವಾಗುವ ಸೆಲೆಬ್ರಿಟಿ ತರಹ ಹೇರ್‌ಸ್ಟೈಲ್ ಮಾಡಿಸುವುದು, ಅವರ ಅನುಕರಣೆ ಮಾಡುವುದು, ಅವರ ಹೆಸರಿನ ಟ್ಯಾಟೂ ಹಾಕಿಸಿಕೊಳ್ಳುವುದು ಇತ್ಯಾದಿಗಳು ಅವರ ಮೇಲಿನ ಪ್ರೀತಿಯ ತೋರ್ಪಡಿಕೆಯಾಗಬಹುದೇನೋ; ಆದರೆ ಅದರಿಂದ ನಮ್ಮ ವ್ಯಕ್ತಿತ್ವವೂ ಕುಸಿಯುತ್ತದೆ ಎಂಬುದು ನಮಗೆ ತಿಳಿದಿರಬೇಕು. ಅಭಿಮಾನಿಗಳಿಂದ ತಮಗೆ ಹಣ-ಹೆಸರು ಎಲ್ಲಾ ಸಿಕ್ಕ ಮೇಲೆ ಸೆಲೆಬ್ರಿಟಿಗಳು 'ಅಭಿಮಾನಿಗಳೇ ನನ್ನ ದೇವರು', Anything for fans ಎಂದೆಲ್ಲಾ ಹೇಳುವುದೇನೋ ಸರಿ; ಆದರೆ ಅಭಿಮಾನದ ಚೌಕಟ್ಟನ್ನು ಹಾಕಿಕೊಳ್ಳಬೇಕಾದವರು ನಾವು.

- ಶ್ರೀಲಕ್ಷ್ಮಿ, ಬೆಂಗಳೂರು

ಓದುಗರ ಒಣಿಗೆ ಭೇಟಿ ಕೊಡಿ

ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಇದು ಆತ್ಮವಿಶ್ವಾಸದ ಕೊರತೆಯೋ, ಮೈಗಳ್ಳತನವೋ?

ಯಕ್ಷಪ್ರಶ್ನೆ

ಸುರೇಂದ್ರ ಪೈ, ಭಟ್ಕಳ

vveditoped@gmail.com

psurendra898@gmail.com

ನಮ್ಮದು ಕೇಂದ್ರೀಯ ಪಠ್ಯಕ್ರಮವನ್ನು ಅನುಸರಿಸುವ ಸಿಬಿಎಸ್‌ಸಿ ಶಾಲೆ. ತಾಲೂಕಿನ ಸುತ್ತಮುತ್ತಲಿನ ಹತ್ತಾರು ಹಳ್ಳಿಯ ಮಕ್ಕಳು, ಅದರಲ್ಲೂ ಹಿಂದುಳಿದ ವರ್ಗಕ್ಕೆ ಸೇರಿದ ಮಕ್ಕಳೇ ಹೆಚ್ಚಿನ ಸಂಖ್ಯೆಯಲ್ಲಿ ಇರುವ ಶಾಲೆ. ಹೀಗಾಗಿ ಮಕ್ಕಳು, ಶಿಕ್ಷಕರು ಕನ್ನಡವನ್ನು ಸರಾಗವಾಗಿ ಮಾತನಾಡಬಹುದು. ಹಾಗಂತ, 'ಆಂಗ್ಲ ಮಾಧ್ಯಮ ಶಾಲೆ' ಎಂಬ ಫಲಕ ಹಾಕಿಕೊಂಡು ಕನ್ನಡದಲ್ಲೇ ಬೋಧನೆ ಮಾಡುವ ಇತರ ಶಾಲೆಯಂತಿರಬಹುದೇ ಅಂದುಕೊಳ್ಳುವುದು ಬೇಡ. ತರಗತಿ ಬೋಧನೆ ಆಂಗ್ಲಭಾಷೆಯಲ್ಲಿ ನಡೆದರೂ, ಪಾಠದ ಮಧ್ಯದಲ್ಲಿ ಮಕ್ಕಳಿಗೆ ವಿಷಯವನ್ನು ಇನ್ನಷ್ಟು ಮನವರಿಕೆ ಮಾಡಿಕೊಡಬೇಕಾಗಿ ಬಂದಾಗ ಶಿಕ್ಷಕರಿಗೆ ಕನ್ನಡವನ್ನು ಬಳಸುವ ಸಂಪೂರ್ಣ ಸ್ವಾತಂತ್ರ್ಯವಿದೆ. ಜತೆಗೆ ಮಕ್ಕಳೂ ತಮ್ಮ ಸಂದೇಹಗಳನ್ನು ಕನ್ನಡದಲ್ಲೇ ಕೇಳಿ ಪರಿಹರಿಸಿಕೊಳ್ಳುವ ಅವಕಾಶವೂ ಇದೆ. ಇಲ್ಲಿ ಕನ್ನಡ ಮಾತನಾಡಿದ್ದಕ್ಕೆ ಮಕ್ಕಳಿಗೆ ದಂಡ ವಿಧಿಸುವ ಪರಿಪಾಠವಿಲ್ಲ ಅಥವಾ ಕನ್ನಡ ಮಾತನಾಡಿದಾಕ್ಷಣ ಮಕ್ಕಳು ಆಂಗ್ಲಭಾಷೆಯ ಕಲಿಕೆಗೆ ಆಸಕ್ತಿ ತೋರುವುದಿಲ್ಲ ಎಂದೇನಿಲ್ಲ. ಇಷ್ಟೆಲ್ಲಾ ಹೇಳಿದ್ದು, ನಮ್ಮ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಕನ್ನಡಕ್ಕೆ ಎಷ್ಟು ಪ್ರಾಮುಖ್ಯವನ್ನು ನೀಡುತ್ತೇವೆ ಎಂಬುದನ್ನು ತಿಳಿಸುವುದಕ್ಕಲ್ಲ; ನಮ್ಮಲ್ಲಿರುವ ಸ್ವಾತಂತ್ರ್ಯದ ಬಗ್ಗೆ ಒಂದು ಕಲ್ಪನೆ ಒಡಮೂಡಲಿ ಎಂಬುದಕ್ಕಷ್ಟೇ.

ಈಗ ವಿಷಯಕ್ಕೆ ಬರೋಣ: ಶೈಕ್ಷಣಿಕ ವರ್ಷ ಈಗಷ್ಟೇ ಪ್ರಾರಂಭವಾಗಿದೆ, ಅದಾಗಲೇ ಈ ಬಾರಿ ಹೊಸದಾಗಿ ನೇಮಕಗೊಂಡ ಮೂವರು ಶಿಕ್ಷಕರು ಶಾಲೆಗೆ ಯಾವುದೇ ಮಾಹಿತಿ ನೀಡದೆ ಕೆಲಸ ಬಿಟ್ಟು ಹೋಗಿದ್ದಾರೆ. ಕಾರಣ ತಿಳಿಯಲು ಫೋನ್ ಮಾಡಿದರೆ ಅದಕ್ಕೂ ಉತ್ತರವಿಲ್ಲ; ಆದರೆ ವಾಟ್ಸ್ಯಾಪ್‌ನಲ್ಲಿ ಮಾತ್ರ ಸಕ್ರಿಯ ಭಾಗವಹಿಸುವಿಕೆ ಕಂಡುಬಂತು. ಎರಡು ದಿನದ ಬಳಿಕ ಯಾರೋ ಒಬ್ಬರು ಪ್ರಾಂಶುಪಾಲರಿಗೆ ಕರೆಮಾಡಿ, ''ನನ್ನ ಮಗಳಿಗೆ ಅನಾರೋಗ್ಯ, ಕ್ಷಮಿಸಿ ಅವರಿನ್ನು ಶಾಲೆಗೆ ಬರುವುದಿಲ್ಲ, ಅವರ ಅಂಕಪಟ್ಟಿ ಬೇಕಿತ್ತು'' ಎಂದರು. ಕರೆಮಾಡಿದ್ದು ಅಂಕಪಟ್ಟಿಯನ್ನು ಹಿಂತೆಗೆದುಕೊಳ್ಳಲೋ ಅಥವಾ ಇರುವ ವಿಚಾರ ತಿಳಿಸಲೋ ಎಂಬುದನ್ನು ಅರ್ಥಮಾಡಿಕೊಳ್ಳಲು ಹೆಚ್ಚು ಸಮಯ ಬೇಕಾಗಲಿಲ್ಲ. ಬಿಟ್ಟುಹೋದ ಮೂವರೂ ಅನಾರೋಗ್ಯ ಸಂಬಂಧಿತ 'ವೈದ್ಯಕೀಯ' ಕಾರಣವನ್ನೇ ನೀಡಿದರು. ಇದು ಕೇವಲ ಈ ವರ್ಷದ ಅಥವಾ ಒಂದು ಶಾಲೆಯ ಕಥೆಯಲ್ಲ; ಪ್ರತಿ ವರ್ಷವೂ, ಬಹುತೇಕ ಶಾಲೆಗಳಲ್ಲಿ ಕಾಣಬರುವ ಗೋಳು. ಕೆಲಸ ಕೇಳಿಕೊಂಡು ಬರುವಾಗ ಇರುವ ಶ್ರದ್ಧೆ, ವೃತ್ತಿಪರತೆ ಕುರಿತಾದ ದೃಢಸಂಕಲ್ಪ ಎರಡೇ ವಾರದಲ್ಲಿ ಕಾಣೆಯಾಗಿರುತ್ತದೆ. ನೇಮಕಾತಿಗೂ ಮುನ್ನ ಅವರ ಬೋಧನಾ ವೈಖರಿಯನ್ನು ವೀಕ್ಷಿಸಿಯೇ, ಶಾಲೆಯ ನಿಯಮಾವಳಿ, ಸಂಬಳ-ಸವಲತ್ತು ಇತ್ಯಾದಿಯನ್ನು ವಿವರಿಸಿಯೇ, ಒಂದು ವರ್ಷದ ಕರಾರಿನ ಮೂಲಕ ನೇಮಕ ಮಾಡಿಕೊಳ್ಳಲಾಗುತ್ತದೆ; ಆದರೂ ವೈದ್ಯಕೀಯ ಕಾರಣ ನೀಡಿ ಪಲಾಯನ ಮಾಡುವುದೇಕೆ?

ಇದರ ಹಿಂದೆ ಒಂದಷ್ಟು ಕಾರಣಗಳಿವೆ. ಅದಕ್ಕೂ ಮೊದಲು ನೇಮಕಾತಿ ವಿಧಾನವನ್ನೊಮ್ಮೆ ಅವಲೋಕಿಸೋಣ. ಮುಂದಿನ ಶೈಕ್ಷಣಿಕ ವರ್ಷದ ತಯಾರಿಯಾಗಿ ಜನವರಿಯಿಂದಲೇ ಎಲ್ಲೆಡೆ ಶಿಕ್ಷಕರ ನೇಮಕಾತಿ ನಡೆಯುತ್ತದೆ. ಅದಕ್ಕಾಗಿ ರಾಜ್ಯ ಮಟ್ಟದ ಪತ್ರಿಕೆ, ಸಾಮಾಜಿಕ ಜಾಲತಾಣ ಇತ್ಯಾದಿ ಕಡೆ ಜಾಹೀರಾತು ನೀಡಲಾಗುತ್ತದೆ. ತಾಲೂಕು ಭಾಗವಾದ್ದರಿಂದ ಗುಣಮಟ್ಟದ ಶಿಕ್ಷಕರು ದೊರಕುವುದು ಕಷ್ಟ. ಇತ್ತೀಚಿನ ಹಲವು ವರ್ಷಗಳಲ್ಲಿ, ನಗರ ಪ್ರದೇಶಗಳ ಬಹುತೇಕ ಖಾಸಗಿ ಶಾಲೆಗಳಲ್ಲೂ ಗುಣಮಟ್ಟದ ಶಿಕ್ಷಕರು ದೊರಕುವುದು ವಿರಳವಾಗಿದೆ. ಕಾರಣ, 'ಅರ್ಹತೆಗೆ ತಕ್ಕಂತೆ ಸಂಬಳ ಸಿಗದಿರುವುದು' ಅಲ್ಲ, ಬದಲಾಗಿ ಶಿಕ್ಷಕರಲ್ಲಿ ವಿಷಯ ಜ್ಞಾನ, ಬೋಧನಾ ಸಾಮರ್ಥ್ಯ ಹೀಗೆ ಹಲವು ವಿಚಾರಗಳಲ್ಲಿ ಕುಂದುಕೊರತೆಗಳಿರುತ್ತವೆ. ಸ್ಥಳೀಯವಾಗಿ ಅರ್ಹ ಶಿಕ್ಷಕರ ಅಲಭ್ಯತೆಯ ಕಾರಣ ಬಹುತೇಕ ಶಾಲೆಗಳ ಆಡಳಿತ ಮಂಡಳಿಯವರು ಈ ಕೊರತೆಯನ್ನು ನೀಗಲು ಪಕ್ಕದ ಕೇರಳ, ಆಂಧ್ರಪ್ರದೇಶ, ತಮಿಳುನಾಡುಗಳ ಶಿಕ್ಷಕರನ್ನು ನೆಚ್ಚುತ್ತಿದ್ದಾರೆ. ಅದಕ್ಕಾಗಿಯೇ ಇರುವ ಕನ್ಸಲ್ಟೆನ್ಸಿಗಳ ಸಹಾಯದಿಂದ ಆನ್‌ಲೈನ್ ಮೂಲಕ ಇಂಥ ಪ್ರತಿ ಶಿಕ್ಷಕರ ಐದಾರು ನಿಮಿಷದ ಬೋಧನಾ ವೈಖರಿಯನ್ನು (ಡೆಮೋ) ವೀಕ್ಷಿಸುತ್ತಾರೆ. ಇದೊಂಥರಾ ಆನ್‌ಲೈನ್ ವಧು-ವರರ ವೇದಿಕೆ ಇದ್ದಹಾಗೆ ಎನ್ನಬಹುದು!

ಐದಾರು ನಿಮಿಷದ 'ಡೆಮೊ' ಬೋಧನೆಯ ವೀಕ್ಷಣೆಯಿಂದ ಅಭ್ಯರ್ಥಿಗಳ ಅರ್ಹತೆಯು ಅಷ್ಟಾಗಿ ಗೊತ್ತಾಗದಿದ್ದರೂ, 'ಸಿಕ್ಕಿದ್ದೇ ಸೀರುಂಡೆ' ಎಂಬ ಮಾತಿನಂತೆ, ಇವರನ್ನು ಕೈಬಿಟ್ಟರೆ ಬೇರೆ ದಾರಿಯಿಲ್ಲ ಎಂದುಕೊಂಡೇ ಅನ್ಯ ರಾಜ್ಯದ ಶಿಕ್ಷಕರನ್ನು ಶಾಲೆಗಳ ಆಡಳಿತ ಮಂಡಳಿಯವರು ನೇಮಿಸಿಕೊಳ್ಳುತ್ತಿದ್ದಾರೆ. ಅವರಿಗೆ ಎಲ್ಲಾ ವಿಷಯಗಳಲ್ಲೂ ಸ್ಥಳೀಯ ಶಿಕ್ಷಕರಿಗಿಂತಲೂ ವಿಶೇಷ ಪ್ರಾಧಾನ್ಯ ನೀಡಲಾಗುತ್ತದೆ. ಇವರಲ್ಲಿ ಹೆಚ್ಚಿನವರಿಗೆ ಇಂಗ್ಲಿಷ್ ವಾಕ್ಚಾತುರ್ಯ ಬಿಟ್ಟರೆ, ಬೋಧನಾ ವಿಷಯದಲ್ಲಿ ಹೆಚ್ಚಿನ ಕೌಶಲವೇನೂ ಇರುವುದಿಲ್ಲ. ಹಾಗಂತ ಅನ್ಯರಾಜ್ಯಗಳ ಇಂಥ ಶಿಕ್ಷಕರೆಲ್ಲರೂ 'ಅನರ್ಹರು' ಎಂದರ್ಥವಲ್ಲ.

ಇಷ್ಟೆಲ್ಲಾ ಸಮಸ್ಯೆಗೆ ಕಾರಣ, ಸ್ಥಳೀಯವಾಗಿ ಅರ್ಹ 'ಶಿಕ್ಷಕ ಸಂಪನ್ಮೂಲಗಳು' ದೊರಕದಿರುವುದು. ಆದರೆ ತಾಲೂಕಿನಲ್ಲಿ ಒಂದೆರಡು ಬಿ.ಇಡಿ ಕಾಲೇಜುಗಳು ಇದ್ದೇ ಇರುತ್ತವೆ. ರಾಜ್ಯದಲ್ಲಿ ಶಿಕ್ಷಕರಿಗೆ ತರಬೇತಿ ನೀಡುವ 250ಕ್ಕೂ ಹೆಚ್ಚಿನ ಬಿ.ಇಡಿ ಕಾಲೇಜುಗಳಿವೆ. ಪ್ರಸ್ತುತ ರಾಜ್ಯದಲ್ಲಿ ಎರಡೂವರೆ ಲಕ್ಷಕ್ಕೂ ಮಿಕ್ಕ, ತರಬೇತಿ ಪಡೆದ ಶಿಕ್ಷಕ ಅಭ್ಯರ್ಥಿಗಳಿದ್ದು, ಪ್ರತಿ ತಾಲೂಕಿನಲ್ಲೂ ಕನಿಷ್ಠ 400-500 ಮಂದಿ ಸಿಕ್ಕೇ ಸಿಗುತ್ತಾರೆ. ಆದರೆ ಸ್ಥಳೀಯ 5-6 ಖಾಸಗಿ ಶಾಲೆಗಳಲ್ಲಿ ಶಿಕ್ಷಕರ ಹುದ್ದೆ ಖಾಲಿಯಿದ್ದರೂ, ಇವರು ಪ್ರಯತ್ನ ಮಾಡಿದರೂ ಆಯ್ಕೆಯಾಗುವುದಿಲ್ಲ. ಏಕೆಂದರೆ ಇವರ ಪೈಕಿ ಮೂರು ತೆರನಾದ ಮನಸ್ಥಿತಿಯುಳ್ಳ ಅಭ್ಯರ್ಥಿಗಳಿರುತ್ತಾರೆ. ಅವರೆಂದರೆ:

1) ಸರಕಾರಿ ಉದ್ಯೋಗಕ್ಕಾಗಿ ಮಾತ್ರ ಬಿ.ಇಡಿ ತರಬೇತಿ ಪಡೆದಿರುವವರು. ಇವರು ಹಾಗೆಲ್ಲಾ ಖಾಸಗಿ ಶಾಲೆಗಳಿಗೆ ಹೋಗಿ ಪಾಠ ಮಾಡುವುದಿಲ್ಲ. ಇವರಲ್ಲಿ ಬಹುತೇಕರು ಮಹಿಳೆಯರೇ ಇರುವುದರಿಂದ, ಮದುವೆಯಾಗಿ ಸಂಸಾರ ನಡೆಸುತ್ತಾ ಸರಕಾರಿ ನೇಮಕಾತಿಗಾಗಿ ಕಾಯುತ್ತಿರುತ್ತಾರೆ.

2) ಇವರಲ್ಲಿ ಆಂಗ್ಲಭಾಷಾ ಜ್ಞಾನ, ಪ್ರಾವೀಣ್ಯ ಹಾಗೂ ಸೂಕ್ತ ಅರ್ಹತೆ ಇರುವುದಿಲ್ಲ. ಹೀಗಾಗಿ ಇವರೆಲ್ಲಾ ಕನ್ನಡ ಮಾಧ್ಯಮ ಶಾಲೆಗಳಲ್ಲೋ, ಸರಕಾರಿ ಶಾಲೆಯಲ್ಲಿ ಅತಿಥಿ ಶಿಕ್ಷಕರಾಗಿಯೋ ಕಾರ್ಯನಿರ್ವಹಿಸುವ ಉದ್ದೇಶವನ್ನು ಹೊಂದಿರುತ್ತಾರೆ. ಕನ್ನಡ ವಿಷಯದ ಶಿಕ್ಷಕರು ಮಾತ್ರ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಪಾಠ ಮಾಡಲು ಸಿದ್ಧರಿರುತ್ತಾರೆ.

3) ಇವರು ಅರ್ಹ ಸ್ಥಳೀಯ (ತಾಲೂಕು, ಜಿಲ್ಲೆ ಹಾಗೂ ರಾಜ್ಯದ) ಅಭ್ಯರ್ಥಿಗಳು. ಅದರಲ್ಲೂ ನಿರ್ದಿಷ್ಟವಾಗಿ ಮೊದಲ ಬಾರಿಗೆ ಶಿಕ್ಷಕ ವೃತ್ತಿಗೆ ಇಳಿಯುವವರು. ಆದರೆ ಇವರದ್ದು ಕೆಲ ಸಮಸ್ಯೆಗಳಿರುತ್ತವೆ. ಖಾಸಗಿ ಶಾಲೆಯಲ್ಲಿನ ಕೆಲಸದ ವಿಚಾರದಲ್ಲಿ, ಬೋಧನೆಯ ಕುರಿತಾದ ಕಟ್ಟುನಿಟ್ಟಿನ ನಿಯಮಗಳ ಪಾಲನೆ ಮಾಡುವ ವಿಷಯ ಬಂದಾಗ ಮೈಗಳ್ಳತನ ತೋರುವುದು ಸೇರಿದಂತೆ, ಮೊಬೈಲ್ ಬಳಕೆಗೆ ಆಸ್ಪದವಿಲ್ಲದಿರುವಿಕೆ, ಸಮಯಪಾಲನೆ ಮಾಡಲಾಗದಿರುವಿಕೆ ಹಾಗೂ ತರಗತಿಯೊಂದರಲ್ಲಿನ 40 ವಿದ್ಯಾರ್ಥಿಗಳನ್ನು ಸಂಭಾವಳಿಸುವಲ್ಲಿನ ವೈಫಲ್ಯದ ಭಯ, ಆತ್ಮವಿಶ್ವಾಸದ ಕೊರತೆ, ಚಂಚಲ ಮನಸ್ಥಿತಿ, ಬಿ.ಇಡಿ ಕೋರ್ಸ್ ಅವಧಿಗೂ ವಾಸ್ತವಿಕ ತರಗತಿಗೂ ಬೋಧನಾ ವೈಖರಿ/ಸನ್ನಿವೇಶದಲ್ಲಿ ಇರುವ ವ್ಯತ್ಯಾಸ ಹೀಗೆ ಇಂಥವರದ್ದು ಒಂದಿಷ್ಟು ಸಮಸ್ಯೆಗಳಿವೆ. ಈ ಎಲ್ಲದರ ಪರಿಣಾಮವಾಗಿ, ಮೇಲೆ ಉಲ್ಲೇಖಿಸಿದಂತೆ 'ವೈದ್ಯಕೀಯ' ಕಾರಣದ ನೆಪವೊಡ್ಡಿ ಶಿಕ್ಷಕರು ಶಾಲೆಯಿಂದ ಪಲಾಯನ ಮಾಡುತ್ತಾರೆ.

ಇಂದು ಶಿಕ್ಷಣ ವ್ಯವಸ್ಥೆ ನಾವು ಅಂದುಕೊಂಡ ಹಾಗಿಲ್ಲ. ಪಾಲಕರು ಶಿಕ್ಷಣ ಸಂಸ್ಥೆಗಳಿಂದ ಹೆಚ್ಚಿನದನ್ನು/ವಿಶೇಷವಾದುದನ್ನು ನಿರೀಕ್ಷಿಸುತ್ತಾರೆ. ಈ ಸ್ಪರ್ಧಾತ್ಮಕ ಜಗತ್ತಿನಲ್ಲಿ ತಮ್ಮ ಮಕ್ಕಳಿಗೆ ಯಶಸ್ಸು ಸಿಗುವಂತಾಗಬೇಕು ಎಂಬುದು ಅವರ ಹಂಬಲವಾಗಿರುತ್ತದೆಯಾದ್ದರಿಂದ, ಸಾಲ ಮಾಡಿಯಾದರೂ ಲಕ್ಷಾಂತರ ರುಪಾಯಿಯಷ್ಟು ಶಾಲಾ ಶುಲ್ಕವನ್ನು ಕಟ್ಟುತ್ತಾರೆ. ಆದರೆ ವಾಸ್ತವದಲ್ಲಿ ಸ್ವಾಭಾವಿಕ ಶಿಕ್ಷಣ ಪದ್ಧತಿ ಕಾಣೆಯಾಗಿ, ಕೇವಲ ಅಂಕಗಳಿಕೆಗೆ ಪ್ರಾಮುಖ್ಯ ನೀಡುವ ವ್ಯವಸ್ಥೆ ಚಾಲ್ತಿಯಲ್ಲಿದೆ. ಇವೆಲ್ಲವನ್ನೂ ಸರಿದೂಗಿಸಲು ಸರಕಾರಿ ಶಾಲೆಗಳಲ್ಲಿ ಶಿಕ್ಷಕರೇ ಇಲ್ಲ, ಅವರ ನೇಮಕಾತಿಯೂ ಅಷ್ಟಾಗಿ ನಡೆಯುತ್ತಿಲ್ಲ. ಸಾವಿರಾರು ಹುದ್ದೆಗಳು ಖಾಲಿಯಿದ್ದರೂ, ಶಾಲೆಗಳಲ್ಲಿ ಶಿಕ್ಷಕರ ಕೊರತೆಯಿದ್ದರೂ ಗುಣಮಟ್ಟದ ಫಲಿತಾಂಶದ ಅಪೇಕ್ಷೆ ಮಾತ್ರ ನಿಂತಿಲ್ಲ!

ಇತ್ತ ಖಾಸಗಿ ಶಾಲೆಗಳಲ್ಲೂ ನುರಿತ/ಅನುಭವಿ ಹಾಗೂ ಕ್ರಿಯಾಶೀಲ ಶಿಕ್ಷಕರ ಕೊರತೆ ಮೊದಲಿನಿಂದಲೂ ಕಾಡುತ್ತಿದೆ. ಬಹುತೇಕ ಶಿಕ್ಷಕರ ತರಬೇತಿ ಸಂಸ್ಥೆಗಳು ಈಗಲೂ ಓಬೀರಾಯನ ಕಾಲದ ತರಬೇತಿಯನ್ನೇ ನೀಡುತ್ತಿವೆ. ಹೀಗಿರುವಾಗ ಗುಣಮಟ್ಟದ ಶಿಕ್ಷಕರು ಎಲ್ಲಿಂದ ಹೊಮ್ಮಬೇಕು! ಬದುಕಿನಲ್ಲಿ ಯಾವುದೇ ಕಠಿಣ ಸನ್ನಿವೇಶ ಎದುರಾದರೂ ಅದನ್ನು ಹೇಗೆ ಸಮರ್ಥವಾಗಿ ಎದುರಿಸಬೇಕೆಂದು ಮಕ್ಕಳಿಗೆ ತಿಳಿಹೇಳಿ ಆತ್ಮವಿಶ್ವಾಸ ತುಂಬಬೇಕಾದ ಶಿಕ್ಷಕರಲ್ಲೇ ಆತ್ಮವಿಶ್ವಾಸದ ಕೊರತೆ ಮತ್ತು ಮೈಗಳ್ಳತನ ಎದ್ದುಕಂಡರೆ, ಮಕ್ಕಳಲ್ಲಿ ಕ್ರಿಯಾಶೀಲತೆ, ಆತ್ಮವಿಶ್ವಾಸ ಹೇಗೆ ತಾನೇ ರೂಪುಗೊಂಡೀತು?

ವಾಸ್ತವದಲ್ಲಿ ಉದ್ಯೋಗಿಯೊಬ್ಬರು, 'ಇನ್ನು ಜೀವನದಲ್ಲಿ ಕೆಲಸ ಮಾಡಲು ಸಾಧ್ಯವಿಲ್ಲ, ವೈದ್ಯಕೀಯ ಚಿಕಿತ್ಸೆಯನ್ನು ಅವಲಂಬಿಸಿಯೇ ದಿನ ದೂಡಬೇಕಿದೆ' ಎಂದಾದಾಗ ಮಾತ್ರವೇ, ಅಂಥವರು ವೈದ್ಯರ ಪ್ರಮಾಣಪತ್ರದ ಮೇರೆಗೆ ಉದ್ಯೋಗದಿಂದ ಬಿಡುಗಡೆ ಹೊಂದುವಂತಾಗಬೇಕು; ಆದರೆ ಜ್ವರ-ವಾಂತಿ-ಬೇಧಿಯ ನೆಪವೊಡ್ಡಿ, ಆತ್ಮವಿಶ್ವಾಸದ ಕೊರತೆ ಮತ್ತು ಬೋಧನಾ ವೈಫಲ್ಯವನ್ನು ಮರೆಮಾಚಿ ಅರ್ಧದಲ್ಲೇ ತೊರೆಯುವುದು ವೃತ್ತಿಗೆ ಮಾಡುವ ಅಪಮಾನವಲ್ಲವೇ?

ಒಟ್ಟಾರೆ ಹೇಳುವುದಾದರೆ, ನಾವು ಆಯ್ದುಕೊಂಡ ವೃತ್ತಿ ಯಾವುದೇ ಇರಲಿ, ಅದು ನಮ್ಮ 'ಆಯ್ಕೆ' ಆಗಿರಬೇಕೇ ಹೊರತು, ಅದು 'ಅನಿವಾರ್ಯತೆ' ಮತ್ತು 'ಒತ್ತಾಯ'ದಿಂದ ಸೇರಿಕೊಂಡಿರುವಂಥದ್ದು ಆಗಬಾರದು. ಶಿಕ್ಷಕ ವೃತ್ತಿ ಕೂಡ By Choice ಆಗಿರಬೇಕೇ ವಿನಾ, By Chance ಆಗಿರಬಾರದು. ನಮ್ಮ 'ಆಯ್ಕೆ' ಆಗಿದ್ದಾಗ ಮಾತ್ರವೇ ವೃತ್ತಿಯು ನೆಮ್ಮದಿ ಮತ್ತು ತೃಪ್ತಿಯನ್ನು ನೀಡುತ್ತದೆ; ಒಂದೊಮ್ಮೆ ಅದು 'ಬಲವಂತದ ಮಾಘಸ್ನಾನ'ದಂತೆ ಒತ್ತಾಯದಿಂದ ಅಪ್ಪಿಕೊಂಡಿರುವಂಥದ್ದು ಆಗಿದ್ದರೆ, ಅಂಥ ವೃತ್ತಿಯಿಂದ ನಾವು ಯಾರಿಗೂ ನ್ಯಾಯ ಒದಗಿಸಲು ಸಾಧ್ಯವಾಗುವುದಿಲ್ಲ ಎಂಬುದನ್ನು ಮರೆಯಬಾರದು...

(ಲೇಖಕರು ಶಿಕ್ಷಕರು)

ಭಟ್ಟರ್ ಸ್ಕಾಚ್

- ರಾಘಣ್ಣ, ಮೈಸೂರು
ಭಟ್ರೇ, ವಿಶ್ವೇಶ್ವರ ಭಟ್ಟರಿಗೂ, ರಘುರಾಮ ಭಟ್ಟರಿಗೂ ಏನು ವ್ಯತ್ಯಾಸ?
– **ಒಬ್ಬರು ಕಾಲಿಗೆ 'ಚಕ್ರ' ಕಟ್ಟಿಕೊಂಡು ಎಲ್ಲೆಂದರಲ್ಲಿ ತಿರುಗುವವರು; ಮತ್ತೊಬ್ಬರು 'ಕಾಲಚಕ್ರ'ದ ತುಳಿತಕ್ಕೆ ಸಿಕ್ಕಿ ನರಳುತ್ತಿರುವವರು!**

- ಬೆಂ.ಮು.ಮಾರುತಿ, ಬೆಂಗಳೂರು
ಭಟ್ರೇ, ವಿಮಾನಯಾನಕ್ಕೂ, ಸಮುದ್ರಯಾನಕ್ಕೂ ಇರುವ ವ್ಯತ್ಯಾಸವೇನು?
– **ಸಮುದ್ರಯಾನದಲ್ಲಿ ಅಪಘಾತವಾದರೆ ಮೆಡಿಕಲ್ ಹಾಸ್ಟೆಲ್ ಮೇಲೆ ಹಡಗು ಹೋಗಿ ಕುಳಿತುಕೊಳ್ಳುವುದಿಲ್ಲ!**

- ಗುರುನಾರಾಯಣ ಪಾತಪಲ್ಲಿ, (ಇಮೇಲ್ ಮೂಲಕ)
ಭಟ್ರೇ, ರಾಜ್ಯ ಸರಕಾರ ಪ್ರಸಕ್ತ ಸಾಲಿನಿಂದ 8ರಿಂದ 12ನೇ ತರಗತಿಗಳಿಗೆ ಲೈಂಗಿಕ ಶಿಕ್ಷಣ ಪರಿಚಯಿಸುತ್ತಿದೆಯಂತೆ?
– **ಕಲಿಸಬಹುದು, ಆದರೆ ಪ್ರಾಕ್ಟಿಕಲ್ ಕಷ್ಟ ಅಂದ್ರಂತೆ ಟೀಚರುಗಳು!**

- ರವೀಂದ್ರ ಭಟ್, ಸಿದ್ದಾಪುರ
ಭಟ್ರೇ, ಕನ್ನಡ ಸಾಹಿತ್ಯ ಬರಡಾಗುತ್ತಿದೆ ಅಂತ ನನ್ನ ಸ್ನೇಹಿತ ಹೇಳ್ತಾನಲ್ಲ?
– **ಕನ್ನಡ ಸಾಹಿತ್ಯ ಅಕಾಡೆಮಿ ಅಧ್ಯಕ್ಷನ ಬುರುಡೆ ಬರಡಾಗಿದೆ ಎಂದು ಹೇಳಿದರೆ ಸಾಕಿತ್ತು!**

- ನಾಗವೇಣಿ ಎಂ., ಮದ್ದೂರು
ಭಟ್ರೇ, ಜೆಡಿಎಸ್ ಮುಗಿಸಲು ಯಾರಿಂದಲೂ ಸಾಧ್ಯವಿಲ್ಲ ಅಂತ ಕುಮಾರಣ್ಣ ಹೇಳಿದ್ದಾರಲ್ಲ?
– **ಆ ಕೆಲಸವನ್ನ ಅವರೇ ಮಾಡಬಹುದು!**

- ರಮೇಶ ಗೌಡ, ಮಳವಳ್ಳಿ
ಭಟ್ರೇ, ಹೆಂಗಸರಿಗೆ ಎಷ್ಟೇ ಶಾಪಿಂಗ್ ಮಾಡಿದರೂ ಸುಸ್ತಾಗುವುದಿಲ್ಲವಂತೆ?
– **ಅದಕ್ಕಿಂತ ಮುಖ್ಯ ಅಂದ್ರೆ, ಅದನ್ನು ಅವರು ದಿನವೂ ಮಾಡಲೂ ಸಿದ್ಧ!**

- ಶಾಂತಿ ವಿನಯಕುಮಾರ, ವಿಲ್ಸನ್ ಗಾರ್ಡನ್
ಭಟ್ರೇ, ಶಾಪಿಂಗ್ ಕೂಡ ಒಂದು ಕಲೆ ಅಂತಾರಲ್ಲ?
– **ಹಾಗಾದರೆ ಎಲ್ಲ ಹೆಂಗಸರೂ ಆರ್ಟಿಸ್ಟ್‌ಗಳೇ ಅನ್ನು!**

- ಸುಭಾಷ, (ಇಮೇಲ್ ಮೂಲಕ)
ಭಟ್ರೇ, ಎಲ್ಲರೂ ಪ್ರೀತಿಗೆ ಸೋಲುತ್ತಾರಲ್ಲ?
– **ಕ್ರಿಕೆಟ್ ಅಂತ ಆರ್‌ಸಿಬಿಯವರು ಗೆದ್ದರು, ಸದ್ಯ ಪ್ರೀತಿ ಅಂತ ಅವರಿಗೆ ಗೊತ್ತಾಗಲಿಲ್ಲ!**

- ಕೆ.ಮುನೀಶ, ಬೆಂಗಳೂರು
ಭಟ್ರೇ, ಬೆಂಗಳೂರು ಟ್ರಾಫಿಕ್ ಜಾಮ್‌ನ ವೈಶಿಷ್ಟ್ಯವೇನು?
– **ಇರುವೆಗಳೂ ಆರಾಮವಾಗಿ ರೋಡ್ ಕ್ರಾಸ್ ಮಾಡಬಹುದು!**

- ರುದ್ರೇಶ ಮಲಶೆಟ್ಟಿ, ತುಮಕೂರು
ಭಟ್ರೇ, ಹುಟ್ಟಿದ ಅವಳಿ ಗಂಡುಮಕ್ಕಳಿಗೆ ಸುಲಭವಾಗಿ ಕರೆಯಲು ಏನು ಹೆಸರಿಡಬಹುದು?
– **ರಾಜಾ–ರೋಷ!**

ಅಭಿವೃದ್ಧಿ ಎನ್ನುವ ಮಾಯಾಜಿಂಕೆಯ ಬೆನ್ನತ್ತಿ ಸಿಕ್ಕಿದ್ದು ಖಿನ್ನತೆ!

ವಿಶ್ವರಂಗ

ರಂಗಸ್ವಾಮಿ ಮೂಕನಹಳ್ಳಿ
vveditoped@gmail.com
mookanahalli@gmail.com

ನಾವು ಭಾರತೀಯರು ಪುನರ್ಜನ್ಮದಲ್ಲಿ ನಂಬಿಕೆಯಿಟ್ಟವರು. ಆದರೆ ನಮಗೆ ಜನ್ಮಾಂತರದ ನೆನಪುಗಳು ಇರುವುದಿಲ್ಲ. ಹೀಗಾಗಿ ಜನ್ಮಗಳ ಮಾತು ಬೇಡ. ಇಂದು ನಮ್ಮ ಕೈಲೇನಿದೆ ಅಷ್ಟೇ ನಮ್ಮದು. ಈ ನಿಟ್ಟಿನಲ್ಲಿ ನೋಡಿದಾಗ ಇರುವುದೊಂದು ಬದುಕು, ಅದನ್ನು ನಿನ್ನಿಚ್ಛೆಯಂತೆ ಬದುಕು ಎನ್ನಲಡ್ಡಿಯಿಲ್ಲ. ನಮ್ಮಿಚ್ಛೆ ಎಂದ ತಕ್ಷಣ ಬಿಡುಬೀಸಾಗಿ, ಸಮಾಜ ಹಾಕಿದ ಎಲ್ಲಾ ಕಟ್ಟಳೆಗಳನ್ನು ಧಿಕ್ಕರಿಸುತ್ತ ಬದುಕುವುದಲ್ಲ. ಬದುಕಿಗೊಂದು ಫ್ರೇಮ್‌ವರ್ಕ್ ಬೇಕು. ಅದಿಲ್ಲದ ಬಿಡುಬೀಸು ಬದುಕು ನಮ್ಮನ್ನು ಎಲ್ಲಿಗೂ ಒಯ್ಯುವುದಿಲ್ಲ. ಇಚ್ಛೆ ಬಂದಂತೆ ಬದುಕು ಎಂದರೆ, ನಮಗೇನಿಷ್ಟ ಅದನ್ನು ಮಾಡುವುದು. ನಮ್ಮಿಷ್ಟದ ಕೆಲಸವನ್ನು ಆಯ್ಕೆ ಮಾಡಿಕೊಳ್ಳುವುದು. ನಾವು ಯಾವಾಗ ನಮಗಿಷ್ಟವಾದ ಕೆಲಸವನ್ನು ಆಯ್ದುಕೊಳ್ಳುತ್ತೇವೆ ಆಗ ಅದು ಕೆಲಸ ಎನ್ನಿಸುವುದಿಲ್ಲ. ಮಾಡುವ ಕೆಲಸ ಮನಸ್ಸಿಗೆ ಆಪ್ತವಾಗಿದ್ದರೆ ಆಗ ಗಡಿಯಾರ ನೋಡಿ ಕೆಲಸ ಮಾಡುವ ಅವಶ್ಯಕತೆ ಬರುವುದಿಲ್ಲ. ಯಾವಾಗ ಆ ರೀತಿಯ ಸನ್ನಿವೇಶವನ್ನು ನಾವು ಸೃಷ್ಟಿಸಿಕೊಳ್ಳುತ್ತೇವೆ, ಆಗ ಫಲಿತಾಂಶಕ್ಕೂ ನಾವು ಹೆಚ್ಚು ಚಿಂತಿಸುವ ಅವಶ್ಯಕತೆ ಬರುವುದಿಲ್ಲ.

ಕಳೆದ ಎರಡು ದಶಕದಲ್ಲಿನ ಜನರ ಮನಸ್ಥಿತಿಗೂ ಇಂದಿನ ಜನರ ಮನಸ್ಥಿತಿಗೂ ಬಹಳಷ್ಟು ಬದಲಾವಣೆಯಾಗಿದೆ. ಹಿಂದೆ ಇಷ್ಟವಿರಲಿ ಬಿಡಲಿ ಸಿಕ್ಕ ಕೆಲಸವನ್ನು ಮಾಡಬೇಕಾಗಿತ್ತು. ಕೆಲಸ ಬಿಡುವುದು ಅಪರಾಧ ಎನ್ನುವಂತಾಗಿತ್ತು. ಇಂದಿಗೆ ಕಾಲ ಬದಲಾಗಿದೆ. ಚಿಕ್ಕ ವಯಸ್ಸಿನ ಹುಡುಗ/ಹುಡುಗಿಯರು ತಮ್ಮ 'ಪ್ಯಾಶನ್' ಹಿಂದೆ ಹೊರಟಿದ್ದಾರೆ. ತಾವು ಮಾಡುವ ಕೆಲಸದಿಂದ ಆರು ತಿಂಗಳು, ವರ್ಷ ಬ್ರೇಕ್ ತೆಗೆದುಕೊಂಡು ತಮ್ಮ ಮನಸ್ಸಿನ ಕೂಗಿಗೆ ಕಿವಿಯಾಗುತ್ತಿದ್ದಾರೆ. ಗೆಲುವು–ಸೋಲು ನಂತರದ ಮಾತು. ಪ್ರಯತ್ನ ಅತ್ಯಂತ ಮುಖ್ಯವಾಗಿ ಆಗಬೇಕಾದದ್ದು. ಅದಾಗುತ್ತಿದೆ.

'ಇರುವುದು ಒಂದೇ ಬದುಕು, ಆದ್ದರಿಂದ ಅದನ್ನು ಚೆನ್ನಾಗಿ ಅನುಭವಿಸಿ ಬಿಡಬೇಕು, ಮಜಾ ಮಾಡಬೇಕು' ಎನ್ನುವ ಒಂದು ದೊಡ್ಡ ವರ್ಗವಿದೆ. 'ನಾಳೆ ಕಂಡವರಿಲ್ಲ, ಕಾಣದ ನಾಳೆಗಾಗಿ ನಮ್ಮ ಇಂದನ್ನು ಅದೇಕೆ ಬಲಿ ಕೊಡಬೇಕು?' ಎನ್ನುವುದು ಇವರ ವಾದ. 'ಬದುಕು ಒಂದೇ ಸರಿ. ಆದರೆ ಅದನ್ನು ಸರಿಯಾಗಿ ಬದುಕಿದರೆ ನಾವು ಸತ್ತ ಮೇಲೂ ಬದುಕಿರುತ್ತೇವೆ' ಎನ್ನುವ ವರ್ಗವೂ ಉಂಟು. ನಾಳೆಗಾಗಿ, ಭವಿಷ್ಯಕ್ಕಾಗಿ, ದೀರ್ಘಕಾಲದ ಸ್ವಸುಖ ಮತ್ತು ಲೋಕಕಲ್ಯಾಣಕ್ಕಾಗಿ ಒಂದಷ್ಟು ಸ್ಯಾಕ್ರಿಫೈಸ್ ಮಾಡುವುದು ತಪ್ಪೇನಿಲ್ಲ ಎನ್ನುವ ಸಿದ್ಧಾಂತವಾದಿಗಳು ಇದ್ದಾರೆ. ಇವೆರಡರ ನಡುವೆ ಬ್ಯಾಲೆನ್ಸ್ ಮಾಡುತ್ತಾ ಬದುಕವರ ಸಂಖ್ಯೆಯೂ ಅಸಂಖ್ಯ.

'ಒಂದೇ ಬದುಕು' ಎಂದು ಅತ್ಯಂತ ಸುರಕ್ಷಿತವಾಗಿ ಬದುಕನ್ನು ನಡೆಸಬೇಕು. ಯಾವುದೇ ಜಂಜಾಟ, ರಿಸ್ಕ್ ಬೇಡ ಎನ್ನುವ ಜನರೂ ನಮ್ಮ ನಡುವೆ ಇದ್ದಾರೆ. ನಾವೆಲ್ಲರೂ ಒಬ್ಬರಂತೆ ಒಬ್ಬರಿಲ್ಲ, ಒಬ್ಬರಂತೆ ಒಬ್ಬರು ಚಿಂತಿಸುವುದಿಲ್ಲ. ಬದುಕನ್ನು ನಾವು ನೋಡುವ ದೃಷ್ಟಿಕೋನ ಬದಲಾಗುತ್ತಲೇ ಇರುತ್ತದೆ. ಒಟ್ಟಾರೆ ಅವರ ನಂಬಿಕೆ ಅವರ ತಲೆ ಕಾಯುತ್ತೆ. ಕೆಲಸ ಮಾಡುವುದು ಅಥವಾ ಬಿಡುವುದು, ವೇಳೆಯನ್ನು ಹೇಗೆ ಕಳೆಯುವುದು? ನಮ್ಮ ಬದುಕಿನ ಗುರಿಯೇನು? ಈ ಜಗತ್ತು, ಜನ ನಮ್ಮನ್ನು ಹೇಗೆ ನೆನಪಿಟ್ಟುಕೊಳ್ಳಬೇಕು? ಈ ಬದುಕಿನಿಂದ ನನ್ನ ನಿರೀಕ್ಷೆಗಳೇನು? ಬದುಕಿಗೆ ಏನಾದರೂ ಉದ್ದೇಶವಿದೆಯೇ? ನೆನಪಿರಲಿ, ಎಲ್ಲರೂ ಎಲ್ಲವನ್ನು ಸಾಧಿಸಲು ಬದುಕಬೇಕು ಎನ್ನುವ ನಿಯಮವಿಲ್ಲ. ನನಗೇನೂ ಹೆಚ್ಚಿನ ಆಕಾಂಕ್ಷೆಯಿಲ್ಲ, ಸುಖವಾಗಿ, ಖುಷಿಯಾಗಿ ಬದುಕಿ ಜೀವನ ಸವೆಸಬೇಕು ಎನ್ನುವುದು ಕೂಡ ಒಂದು ಉದ್ದೇಶವೇ? ಏನೂ ಮಾಡುವುದಿಲ್ಲ, ಸುಮ್ಮನೆ ಓಡಾಡಿಕೊಂಡಿರುತ್ತೇವೆ ಎನ್ನುವುದು ಕೂಡ ಒಂದು ಆಯ್ಕೆ, ಅದೂ ಕೂಡ ಒಂದು ಉದ್ದೇಶ. ಒಟ್ಟಿನಲ್ಲಿ ಬದುಕಿಗೊಂದು ಉದ್ದೇಶ ಬೇಕು. ಅದು ಬಹುತೇಕರ ಜೀವನದ ಉದ್ದೇಶದ ಜತೆಗೆ ತಾಳೆಯಾಗಬೇಕು ಎಂದಿಲ್ಲ.

ಯಾವಾಗ ಬದುಕಿಗೊಂದು ಉದ್ದೇಶ ಅಥವಾ ಗುರಿ ಇಲ್ಲವಾಗುತ್ತದೆ ಆಗ ಸದ್ದಿಲ್ಲದೆ ಖಿನ್ನತೆ ನಮ್ಮಲ್ಲಿ ಮನೆಮಾಡಿಕೊಳ್ಳುತ್ತದೆ. ನಾವು ಮಾತನಾಡಲು ಇಷ್ಟ ಪಡದ ವಿಷಯಗಳಲ್ಲಿ ಡಿಪ್ರೆಶನ್ ಕೂಡ ಒಂದು. ಕನ್ನಡದಲ್ಲಿ ಇದನ್ನ 'ಖಿನ್ನತೆ'

ಎನ್ನಬಹುದು. ಇದೊಂದು ರೀತಿಯ ಮಾನಸಿಕ ರೋಗ. ಇದನ್ನ ಪ್ರಾಥಮಿಕ ಹಂತದಲ್ಲಿ ಗುರುತಿಸಿ ಇದಕ್ಕೆ ಬೇಕಾದ ಉಪಚಾರ ಮಾಡಿದರೆ ಇದನ್ನ ಗುಣಪಡಿಸಬಹುದು. ಖಿನ್ನತೆಯ ಅತ್ಯಂತ ಉಗ್ರ ಅಥವಾ ಕೊನೆಯ ಮಟ್ಟದಲ್ಲಿ ಮನುಷ್ಯ ತನ್ನನ್ನ ತಾನೇ ಕೊಂದುಕೊಳ್ಳಲು ನಿರ್ಧರಿಸುತ್ತಾನೆ, ಅಂದರೆ ಆತ್ಮಹತ್ಯೆಗೆ ಶರಣಾಗುತ್ತಾನೆ. ಖಿನ್ನತೆಗೆ ಬಹಳಷ್ಟು ಕಾರಣಗಳಿವೆ ಅವುಗಳಲ್ಲಿ ಪ್ರಮುಖವಾದವೆಂದರೆ:

1) ಕೆಲಸದಲ್ಲಿ ಸೋಲು ಅಥವಾ ಅಂದುಕೊಂಡಂತೆ ಜಯ ಸಿಗದಿರುವುದು. ಜಗತ್ತಿನ ಪಾಲಿಗೆ ಯಶಸ್ವಿಯಾಗಿ ಕಂಡರೂ ಅವರ ಮಟ್ಟದಲ್ಲಿ ಅದು ಸೋಲಿನಂತೆ ಕಾಣುತ್ತದೆ
2) ಪ್ರೀತಿಯಲ್ಲಿ ಮೋಸ ಅಥವಾ ವಂಚನೆ
3) ಶಾಲೆ ಅಥವಾ ಕಾಲೇಜಿನಲ್ಲಿ ಅವಮಾನ ಅಥವಾ ವಿದ್ಯಾಭ್ಯಾಸದಲ್ಲಿ ಸೋಲು
4) ಕುಟುಂಬ ಕಲಹಗಳು
5) ತೀವ್ರ ಹಣಕಾಸಿನ ಮುಗ್ಗಟ್ಟು

ಯುವಜನತೆಯ ಸಾವಿನಲ್ಲಿ ಖಿನ್ನತೆ ಎರಡನೇ ಪ್ರಮುಖ ಕಾರಣವಾಗಿದೆ ಎನ್ನುವುದು, ನಮ್ಮ ಸಮಾಜ ತೀವ್ರಗತಿಯಲ್ಲಿ ಬದಲಾಗುತ್ತಿದೆ ಎನ್ನುವುದನ್ನು ಸಾರುತ್ತಿದೆ. ಮೇಲಿನ ಎಲ್ಲಾ ಕಾರಣಗಳನ್ನೂ ಮೀರಿದ ಕಾರಣವೊಂದು ಖಿನ್ನತೆಗೆ ಕಾರಣವಾಗುತ್ತಿದೆ. ಇದು ಹೇಳಿಕೇಳಿ ಸೋಶಿಯಲ್ ಮೀಡಿಯಾ ಯುಗ. ತಾಸುಗಟ್ಟಲೆ ರೀಲ್ಸ್ ನೋಡುತ್ತಾ ಯುವಜನರು ಅಲ್ಲಿ ಜೀವನ ಕಳೆಯುತ್ತಿದ್ದಾರೆ. ಬದುಕಿಗೊಂದು ಉದ್ದೇಶ ಇಲ್ಲವಾಗಿದೆ.

ಕೆಲಸ ಮಾಡುತ್ತಾ ಅಲ್ಲಿ ಯಶಸ್ಸು ಕಂಡ ಜನ ಅದನ್ನು ವರ್ಣರಂಜಿತವಾಗಿ ಚಿತ್ರಿಸಿ ಸೋಶಿಯಲ್ ಮೀಡಿಯಾದಲ್ಲಿ ಹಾಕುವುದು, ಅದನ್ನು ನೋಡಿ ಬೇಕಿಲ್ಲದ ಹೋಲಿಕೆ ಮಾಡಿಕೊಂಡು ನಾನು ನಿಷ್ಪ್ರಯೋಜಕ ಎನ್ನುವ ತೀರ್ಮಾನಕ್ಕೆ ಬರುವುದು ಮತ್ತು ಆ ನಂಬಿಕೆ ದಿನ ಕಳೆದಂತೆ ಮತ್ತಷ್ಟು ಬಲಿತು ಗಟ್ಟಿಯಾಗಿ ಯಾವಾಗ ಖಿನ್ನತೆಗೆ ಪರಿವರ್ತನೆ ಯಾಗುತ್ತದೆ ಹೇಳಲು ಬಾರದು.

ಸರಿಯಾದ ಕೆಲಸವಿದ್ದಿದ್ದರೆ ಅವರಿಗೆ ಇಂಥ ಸ್ಥಿತಿ ಬರುತ್ತಿರಲಿಲ್ಲ ಎನ್ನುವುದು ಇಂಥ ಸಮಯದಲ್ಲಿ ಸಹಜವಾಗಿ ಕೇಳಿಬರುವ ಮಾತು. ನಮ್ಮಲ್ಲಿ ಕೆಲಸಕ್ಕೇನೂ ಕೊರತೆಯಿಲ್ಲ. ಕೆಲಸ ಮಾಡುವ ಮನಸ್ಸಿದ್ದವರಿಗೆ ಎಂದಿಗೂ ಕೆಲಸವಿದ್ದೇ ಇರುತ್ತದೆ. ಆದರೆ ನಮ್ಮಲ್ಲಿ ಕೆಲಸದ ಕುರಿತು ಬಹಳಷ್ಟು ಮಡಿವಂತಿಕೆಯಿದೆ. ನನ್ನ ವಿದ್ಯಾಭ್ಯಾಸಕ್ಕೆ ತಕ್ಕಂಥ ಹುದ್ದೆ ಬೇಕು ಎನ್ನುವುದು ಅಂಥ ಒಂದು ಮಡಿವಂತಿಕೆ. ಏನಾದರೂ ಸರಿಯೇ ನಾನು ಮಾಡಲು ಸಿದ್ಧ ಎನ್ನುವ ಮನಸ್ಥಿತಿ ಉಳ್ಳವರಿಗೆ ಕೆಲಸದ ಕೊರತೆ ಎಂದಿಗೂ ಉಂಟಾಗುವುದಿಲ್ಲ. ಕೆಲಸ ಮಾಡುತ್ತಿದ್ದರೆ ಖಿನ್ನತೆ ಪಕ್ಕಕ್ಕೂ ಸುಳಿಯುವುದಿಲ್ಲ.

ಖಿನ್ನತೆಗೆ ಅನೇಕ ಕಾರಣಗಳಿವೆ, ಅವುಗಳೆಲ್ಲವೂ ಬಹುತೇಕ ನಮ್ಮ ಹಿಂದಿನ ತಲೆಮಾರಿಗೆ ಸರಿಹೊಂದುವ ಕಾರಣಗಳು. ಇಂದಿಗೆ ಹೊಸ ಕಾರಣಗಳು ಸೃಷ್ಟಿಯಾಗಿವೆ. ಎಲ್ಲವೂ ಉಳ್ಳವರು ಕೂಡ ಖಿನ್ನತೆಗೆ ತುತ್ತಾಗುತ್ತಿದ್ದಾರೆ. ಮೇಲ್ನೋಟಕ್ಕೆ ಅವರು ಬಹಳ ಯಶಸ್ವಿಯಂತೆ ಕಂಡರೂ ಅವರಲ್ಲೂ ಈ ಖಿನ್ನತೆ ಮನೆ ಮಾಡಿರುತ್ತದೆ. ಬಹಳಷ್ಟು ಸೆಲೆಬ್ರಿಟಿಗಳು ಕಾರಣವಿಲ್ಲದೆ ಖಿನ್ನತೆಗೆ ಒಳಗಾಗುತ್ತಿದ್ದಾರೆ. ಎಲ್ಲವೂ ಸಿಕ್ಕ ನಂತರ ಅಚಾನಕ್ಕಾಗಿ ಮುಂದೇನು ಮಾಡಬೇಕು ಎಂದು ತಿಳಿಯದೆ ಉಂಟಾಗುವ ಖಿನ್ನತೆಯಿದು.

ನಮ್ಮಲ್ಲಿ ಒಂದು ಪ್ರಸಿದ್ಧ ಮಾತಿದೆ. 'ಸಂಕಟ ಬಂದಾಗ ವೆಂಕಟರಮಣ' ಎನ್ನುವುದು ಆ ಮಾತು. ನಾವು ಕಷ್ಟ ಬಂದಾಗ ಮಾತ್ರ ದೇವರನ್ನು ನೆನೆಯುತ್ತೇವೆ ಎನ್ನುವುದು ಮಾತಿನ ಅರ್ಥ. ಕಷ್ಟ ಬರದಿದ್ದರೆ ನಾವು ದೇವರನ್ನು ಕೂಡ ನೆನೆಯುವುದಿಲ್ಲ ಎನ್ನುವುದು ಕೂಡ ಮಾತಿನ ಅರ್ಥ. ದೇವರ ಪರಿಸ್ಥಿತಿಯೇ ಹೀಗಿರುವಾಗ ಮಾರ್ಗದರ್ಶಕರ, ಲೈಫ್ ಕೋಚ್‌ಗಳ ಕಥೆಯೇನಿರಬಹುದು? ನಮ್ಮಲ್ಲಿ ಒಂದು ಮಿಥ್ಯೆ ಆವರಿಸಿಕೊಂಡಿದೆ; ನಾವು ಸೈಕಾಲಜಿಸ್ಟ್‌ರನ್ನು ಕಂಡರೆ ಅಥವಾ ಲೈಫ್ ಕೋಚ್‌ನ ಸಹಾಯ ಪಡೆದರೆ ನಮ್ಮಲ್ಲಿ ಏನೋ ಕೊರತೆಯಿದೆ ಎನ್ನುವುದು ಆ ಮಿಥ್ಯೆ.

ನಾವೆಷ್ಟೇ ಬಲಿಷ್ಠರಿರಲಿ, ನಮ್ಮ ಬದುಕು ಎಷ್ಟೇ ಚೆನ್ನಾಗಿ ಸಾಗುತ್ತಿರಲಿ, ಮಾರ್ಗದರ್ಶಕರ ಸಲಹೆ ಪಡೆಯುವುದರಲ್ಲಿ ತಪ್ಪಿಲ್ಲ. ಅವರ ಸಲಹೆ ಪಡೆದ ಮಾತ್ರಕ್ಕೆ ಎಲ್ಲವೂ ಇನ್ನಷ್ಟು ಉತ್ತಮವಾಗುತ್ತದೆ ಎಂದಲ್ಲ, ನಮ್ಮ ಯಶಸ್ಸು ಸಂಪೂರ್ಣ ನಮ್ಮ ಮೇಲೆ ಅವಲಂಬಿಸಿದೆ. ಸಲಹೆ ಯಾರು ಎಷ್ಟೇ ಕೊಟ್ಟರೂ ಅದನ್ನು ನಾವು ಸರಿಯಾಗಿ ಪಾಲಿಸದಿದ್ದರೆ ಅದರಿಂದ ಯಾವ ಪ್ರಯೋಜನವೂ ಇರುವುದಿಲ್ಲ. ಶಾಲೆಯಲ್ಲಿ ಶಿಕ್ಷಕರು ಎಲ್ಲಾ ಮಕ್ಕಳಿಗೂ ಪಾಠ ಹೇಳಿಕೊಡುತ್ತಾರೆ. ಆದರೆ ಕೆಲವು ಮಕ್ಕಳು ಮಾತ್ರ ಉತ್ತಮ ಫಲಿತಾಂಶವನ್ನು ತರುತ್ತಾರೆ. ಕೆಲವರು ಅನುತ್ತೀರ್ಣರಾಗುತ್ತಾರೆ, ಮೆಜಾರಿಟಿ ಓಕೆ ಎನ್ನುವ ಮಟ್ಟದಲ್ಲಿ ಬದುಕುತ್ತಾರೆ. ಹೀಗೇಕೆ? ಅದು ನಾವು ನೀಡುವ ಪ್ರತಿಕ್ರಿಯೆಯ ಮೇಲೆ, ನಮ್ಮ ಮೇಲೆ ಅವಲಂಬಿತವಾಗಿರುತ್ತದೆ. ಲೈಫ್ ಕೋಚ್ ತೆಗೆದುಕೊಂಡ ಮಾತ್ರಕ್ಕೆ ಗೆದ್ದೆವೆಂದು ಬೀಗಬೇಕಿಲ್ಲ, ಅಯ್ಯೋ ಇನ್ನೊಬ್ಬರ ಸಹಾಯ ಪಡೆಯುತ್ತಿದ್ದೇವೆ ಎಂದು ಕೊರಗಬೇಕಿಲ್ಲ. ಅವಶ್ಯಕ ಎನ್ನಿಸಿದ್ದನ್ನು ಮಾಡಲು ಹೆದರಬೇಕಿಲ್ಲ.

ಲೈಫ್ ಕೋಚ್ ಅಥವಾ ಮಾರ್ಗದರ್ಶಕರ ಸಹಾಯ ಬೇಕೆನ್ನಿಸಿದ್ದರೆ ಅದರಲ್ಲಿ ಸಂಕೋಚ ಬೇಡ. ಜಗತ್ತು ಏನೆಂದುಕೊಳ್ಳುತ್ತದೆ ಎನ್ನುವುದು ನಮ್ಮ ಲೆಕ್ಕಾಚಾರದಲ್ಲಿ ಎಂದಿಗೂ ಬರಬಾರದು. ಜಗತ್ತಿನ ಜನರ ಕೆಲಸ ಅವರು ಮಾಡುತ್ತಾರೆ. ನಮ್ಮ ಕೆಲಸ ನಾವು ಮಾಡುತ್ತಾ ಹೋಗೋಣ. ಲೈಫ್ ಕೋಚ್ ನಮಗೆ ಬೇಕಾದ ಉತ್ತೇಜನ ನೀಡುತ್ತಾರೆ. ಬದುಕಿನ ಬಂಡಿಯನ್ನು ಸರಿದಾರಿಗೆ ತರಲು ಸಹಾಯ ಮಾಡುತ್ತಾರೆ. ಎಲ್ಲದಕ್ಕೂ ಮುಖ್ಯವಾಗಿ ನಮ್ಮ ಭಾವನೆಗಳನ್ನು, ಬೇಕು–ಬೇಡಗಳನ್ನು ಕೇಳಿ, ಸರಿ–ತಪ್ಪುಗಳ ನಿರ್ಧಾರದಲ್ಲಿ ಭಾಗಿಯಾಗುತ್ತಾರೆ. ಇಂದಿನ ದಿನದಲ್ಲಿ ಕೇವಲ ಹಣವಿದ್ದವರು, ಸೆಲೆಬ್ರಿಟಿಗಳು ಮಾತ್ರ ಲೈಫ್ ಕೋಚ್ ಇಟ್ಟುಕೊಳ್ಳಬೇಕು, ಇಟ್ಟುಕೊಳ್ಳುತ್ತಾರೆ ಎನ್ನುವ ಮಿಥ್ಯೆ ಕೂಡ ಹಲವರಲ್ಲಿದೆ. ಹಾಗೇನಿಲ್ಲ, ಲೈಫ್ ಕೋಚ್ ಅಥವಾ ಮಾರ್ಗದರ್ಶಕರ ಸಲಹೆಯನ್ನು ಯಾರು ಬೇಕಾದರೂ ಪಡೆಯಬಹುದು.

ಭಾರತ ವೇಗವಾಗಿ ಮುಂದುವರಿಯುತ್ತಿದೆ. ಜಗತ್ತಿನ ನಾಲ್ಕನೇ ಅತಿ ದೊಡ್ಡ ಆರ್ಥಿಕತೆಯಾಗಿದೆ ಎನ್ನುವ ಮಾತುಗಳ ನಡುವೆ ಕೂಡ ನಾವಿನ್ನೂ 2–3 ದಶಕ ಕೆಲವು ವಿಷಯಗಳಲ್ಲಿ ಹಿಂದಿದ್ದೇವೆ. ಮನಶ್ಶಾಸ್ತ್ರಜ್ಞರನ್ನು ಕಾಣುವುದು, ಹಣಕಾಸು ವಿಚಾರದಲ್ಲಿ ಸಲಹೆ ಪಡೆದುಕೊಳ್ಳುವುದು ಎರಡೂ ಇಂದಿಗೂ ಹೆಚ್ಚು ಪ್ರಸಿದ್ಧವಲ್ಲದ ವಿಷಯಗಳು. ಮನಶ್ಶಾಸ್ತ್ರಜ್ಞರನ್ನು ಕಾಣುತ್ತಿದ್ದೇನೆ ಎನ್ನುವುದನ್ನು, ನನಗೆ ಖಿನ್ನತೆಯಿದೆ ಎಂದು ಹೇಳುವುದನ್ನು ನಾನು ಮಧ್ಯಮವರ್ಗದ ಜನರಲ್ಲಿ ಇಲ್ಲಿಯವರೆಗೆ ಕಂಡಿಲ್ಲ. ಮುಕ್ಕಾಲು ಪಾಲು ಜನರಿಗೆ ಅವರು ಖಿನ್ನತೆಗೆ ಒಳಗಾಗಿದ್ದಾರೆ ಎನ್ನುವುದು ಕೂಡ ಗೊತ್ತಾಗಿರುವುದಿಲ್ಲ, ಅವರಿಗೆ ಸಹಾಯ ಬೇಕಾಗಿರುತ್ತದೆ. ಅದನ್ನು ಕೇಳುವ ಸ್ಥಿತಿಯಲ್ಲೂ ಅವರಿರುವುದಿಲ್ಲ.

ಅವರಲ್ಲಿರುವ ಖಿನ್ನತೆಯನ್ನು ಗುರುತಿಸಿ ಅದಕ್ಕೊಂದು ಚಿಕಿತ್ಸೆ ನೀಡಬೇಕು. ಆದರೆ ಬೆಕ್ಕಿನ ಕೊರಳಿಗೆ ಗಂಟೆ ಕಟ್ಟುವರಾರು? ನಿಮಗೆಲ್ಲಾ ಗೊತ್ತಿರಲಿ ಭಾರತದ ಜನಸಂಖ್ಯೆಯ 15–20 ಪ್ರತಿಶತ ವಯಸ್ಕರಿಗೆ ಈ ರೀತಿಯ ಸಹಾಯದ ಅವಶ್ಯಕತೆಯಿದೆ. ಹೀಗೆ ಅವಶ್ಯಕತೆಯಿರುವ ಜನರಲ್ಲಿ ತೊಂಬತ್ತೆರಡು ಪ್ರತಿಶತ ಜನರಿಗೆ ಯಾವ ಸಹಾಯವೂ ಸಿಗುವುದಿಲ್ಲ. ವಾರ್ಷಿಕವಾಗಿ 8 ಲಕ್ಷಕ್ಕೂ ಅಧಿಕ ಜನ ಆತ್ಮಹತ್ಯೆಗೆ ಶರಣಾಗುತ್ತಿರುವುದು ಇದನ್ನು ಸ್ಪಷ್ಟಪಡಿಸುತ್ತದೆ. ಜಗತ್ತಿನ ಸೂಯಿಸೈಡ್ ಕ್ಯಾಪಿಟಲ್ ಎನ್ನುವ ಕುಖ್ಯಾತಿ ಕೂಡ ಪಡೆದುಕೊಂಡಿದೆ.

ಹಣಕಾಸಿನ ಲೆಕ್ಕಾಚಾರದಲ್ಲಿ ಹೇಳುವುದಾದರೆ 2012ರಿಂದ ಇಲ್ಲಿಯವರೆಗೆ ಈ ಕಾರಣದಿಂದ ಭಾರತಕ್ಕೆ 1 ಟ್ರಿಲಿಯನ್ ಡಾಲರ್ ಹಣ ನಷ್ಟವಾಗಿದೆ. ಭಾರತದ ವಾರ್ಷಿಕ ಜಿಡಿಪಿ 4 ಟ್ರಿಲಿಯನ್ ಎನ್ನುವುದನ್ನು ನೋಡಿದಾಗ ಇದೆಷ್ಟು ದೊಡ್ಡ ಮೊತ್ತ ಎನ್ನುವ ಅರಿವು ನಿಮಗಾಗಬಹುದು. ಅಭಿವೃದ್ಧಿಯಲ್ಲಿ ದೇಶದ ಪ್ರತಿಯೊಬ್ಬ ನಾಗರಿಕನೂ ಪಾಲುದಾರನಾದಾಗ ಮಾತ್ರ ಅಭಿವೃದ್ಧಿಗೆ ಅರ್ಥ ಬರುತ್ತದೆ. ಉಳಿದಂತೆ ಎಲ್ಲವೂ ಕೇವಲ ಆರ್ಥಿಕತೆಯ ಲೆಕ್ಕಾಚಾರದ ಅಂಕಿ–ಅಂಶವಾಗಿ ಉಳಿದುಕೊಳ್ಳುತ್ತದೆ.

ಸುವಿಚಾರ

ರಾಘವೇಂದ್ರ ಜೋಯಿಸ್, ಮೈಸೂರು

ಎತ್ತ ಸಾಗುತ್ತಿದೆ ಯುವಪೀಳಿಗೆ?

ಸ್ವಾಮಿ ವಿವೇಕಾನಂದರು ಯುವಜನರನ್ನು ಕುರಿತು, 'ಏಳಿ ಎದ್ದೇಳಿ, ಗುರಿ ಮುಟ್ಟುವ ತನಕ ನಿಲ್ಲದಿರಿ' ಅಂತ ಹೇಳಿದ್ದಾರೆ. ಆದರೆ ವರ್ತಮಾನದಲ್ಲಿ ಹೆಚ್ಚಿನ ಯುವಜನರು ಇದನ್ನು ಪಾಲಿಸುತ್ತಿಲ್ಲ ಮತ್ತು ಕೆಲವರಿಗಂತೂ ಒಂದು ನಿರ್ದಿಷ್ಟ ಗುರಿಯೇ ಇರುವುದಿಲ್ಲ ಎನ್ನುವುದು ಬೇಸರದ ಸಂಗತಿ.

ಯುವಜನರು ಹಾದಿತಪ್ಪುತ್ತಿರುವಂಥ ಅನೇಕ ನಿದರ್ಶನಗಳು/ಸುದ್ದಿಗಳು ದಿನವೂ ಮಾಧ್ಯಮಗಳಲ್ಲಿ ಪ್ರಕಟಗೊಳ್ಳುತ್ತಲೇ ಇರುತ್ತವೆ. ಆರನೇ ತರಗತಿಯ ವಿದ್ಯಾರ್ಥಿಯೊಬ್ಬ ಜತೆಗಾರನನ್ನು ಕೊಂದಿದ್ದು, ನವವಿವಾಹಿತೆಯೊಬ್ಬಳು ಮಧುಚಂದ್ರಕ್ಕೆ ತೆರಳಿದಾಗ ಗಂಡನನ್ನೇ ಇಲ್ಲವಾಗಿಸಿದ್ದು ಇವು ಅಂಥ ಒಂದೆರಡು ಸ್ಯಾಂಪಲ್‌ಗಳು. ಇವೆಲ್ಲಾ ಆತಂಕಕಾರಿ ಬೆಳವಣಿಗೆಗಳು ಎನ್ನದೆ ವಿಧಿಯಿಲ್ಲ. 'ತಾಳಿ ಕಟ್ಟುವ ಶುಭವೇಳೆ'ಯಲ್ಲಿ 'ಕೈ'ಕೊಡುವವರ ಸಂಖ್ಯೆಯೂ ದಿನೇದಿನೆ ಹೆಚ್ಚುತ್ತಿದೆ. ಸಂಸಾರದಲ್ಲಿ ಹೊಂದಿಕೊಂಡು ಬಾಳದೆ ಕ್ಷುಲ್ಲಕ ಕಾರಣಕ್ಕಾಗಿ ವಿಚ್ಛೇದನ ಪಡೆಯುವವರ ಸಂಖ್ಯೆಯೂ ಜಾಸ್ತಿಯಾಗುತ್ತಿದೆ. ಇನ್ನು, ಕಳ್ಳತನ, ಅತ್ಯಾಚಾರ, ದರೋಡೆ, ಸೈಬರ್ ಕ್ರೈಮ್ ಮುಂತಾದ ಕೆಟ್ಟ ಕೆಲಸಗಳಲ್ಲೂ ಯುವಜನರ ಪಾಲೇ ಹೆಚ್ಚಿದೆ. ಸಾಮಾಜಿಕ ಜಾಲತಾಣಗಳಲ್ಲಿ ಸಮಯವನ್ನು ಪೋಲುಮಾಡುವವರ, ನಕಾರಾತ್ಮಕ ಸಂದೇಶ ನೀಡುವ ಸಿನಿಮಾಗಳತ್ತ ಆಕರ್ಷಿತರಾಗುತ್ತಿರುವವರ ಬಗ್ಗೆಯಂತೂ ಹೇಳುವುದೇ ಬೇಕಿಲ್ಲ.

ಇಂಥವರಿಗೆ ಗುರು–ಹಿರಿಯರು ಮತ್ತು ಪೋಷಕರ ಮೇಲಿನ ಪ್ರೀತಿ–ಗೌರವಗಳು ಕಡಿಮೆಯಾಗುತ್ತಿವೆ. ಪೌರಾಣಿಕ ಕಥೆಗಳ ಮತ್ತು ನಮ್ಮ ಸಂಸ್ಕೃತಿಯ ಬಗೆಗಿನ ಆಸಕ್ತಿ ಕುಸಿಯುತ್ತಿದೆ. ನಮ್ಮ ನಾಡಿನ ಶ್ರೇಷ್ಠ ಕವಿಗಳು, ಅವರ ಕೃತಿಗಳು ಮತ್ತು ಅವರಿಗೆ ದಕ್ಕಿದ ಪ್ರಶಸ್ತಿಗಳ ಬಗ್ಗೆ ತಿಳಿದುಕೊಳ್ಳಲು ಹೆಚ್ಚಿನವರಿಗೆ ಆಸಕ್ತಿಯಿಲ್ಲ. ಯಾರಾದರೊಬ್ಬ ಮಹನೀಯರಿಂದ ಯುವಜನರಿಗೆಂದು ಮಾರ್ಗದರ್ಶನದ ಕಾರ್ಯಕ್ರಮವನ್ನು ಆಯೋಜಿಸಿದರೆ, ಅಲ್ಲಿ ಯುವಜನರ ಹಾಜರಾತಿಯೇ ಕಡಿಮೆಯಿರುತ್ತದೆ. ಯುವಜನರಿಗೆ/ವಿದ್ಯಾರ್ಥಿಗಳಿಗೆ ಸರಕಾರದಿಂದಲೋ, ಶಿಕ್ಷಣ ವ್ಯವಸ್ಥೆಯಿಂದಲೋ ಏನಾದರೂ ಅನುಕೂಲವಾಗುವಂಥ ಸಂದರ್ಭ ಎದುರಾದರೆ, ಅದನ್ನು ಒಗ್ಗಟ್ಟಿನಿಂದ ಪ್ರತಿಭಟಿಸುವುದಕ್ಕಾಗಲೀ ಅಥವಾ ಮನವರಿಕೆ ಮಾಡಿಕೊಡುವುದಕ್ಕಾಗಲೀ ಬರುವವರ ಸಂಖ್ಯೆ ಕಡಿಮೆ. ಯುವಜನರಲ್ಲಿ ಅನೇಕರು ಕೆಟ್ಟ ಚಾಳಿಗಳಿಗೆ ಬಲಿಯಾಗುತ್ತಿದ್ದಾರೆ. ತಮ್ಮ ಭವಿಷ್ಯದ ಬಗ್ಗೆ ಒಳ್ಳೆಯ ಕನಸು ಕಂಡು, ಅದನ್ನು ಸಾಕಾರಗೊಳಿಸಿಕೊಳ್ಳಲು ಪ್ರಾಮಾಣಿಕವಾಗಿ ಯತ್ನಿಸುವ ಸಂಕಲ್ಪ ತೊಟ್ಟು ಅದರಂತೆ ನಡೆದುಕೊಳ್ಳುವವರ ಸಂಖ್ಯೆ ಕಡಿಮೆಯಾಗುತ್ತಿದೆ. ಇಂಥ ಬೆಳವಣಿಗೆ ಖಂಡಿತಾ ಒಳ್ಳೆಯದಲ್ಲ, ಆತಂಕಕಾರಿ.

ಹಾಗೆಂದ ಮಾತ್ರಕ್ಕೆ ಯುವಜನರೆಲ್ಲರೂ ಹಾದಿ ತಪ್ಪುತ್ತಿದ್ದಾರೆ ಎಂದು ಸಾರಾಸಗಟಾಗಿ ಹೇಳಲಾಗದು. ಚಿಕ್ಕ ವಯಸ್ಸಿನಿಂದಲೇ ವ್ಯಾಸಂಗದ ಕಡೆಗೆ ಗಮನಕೊಟ್ಟು ಮುಂದುವರಿದು, ಸ್ವಪ್ರಯತ್ನದಿಂದ ಒಳ್ಳೆಯ ಭವಿಷ್ಯ ರೂಪಿಸಿಕೊಂಡವರು ಸಾಕಷ್ಟಿದ್ದಾರೆ. ಕೆಲವರು ಓದಿನಲ್ಲಿ ತಕ್ಕಮಟ್ಟಿಗಿದ್ದರೂ ಒಳ್ಳೆಯ ಸಂಸ್ಕಾರವನ್ನು ಮೈಗೂಡಿಸಿಕೊಂಡು, ಸತ್‌ಪ್ರಜೆ ಎನಿಸಿಕೊಂಡು ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳುವುದಿದೆ, ತಮ್ಮಿಷ್ಟದ ಕ್ಷೇತ್ರದಲ್ಲಿ ಹೆಸರು ಮಾಡಿ ನೆಲೆ ಕಂಡುಕೊಳ್ಳುವುದಿದೆ. ಆದರೆ ನಿರ್ದಿಷ್ಟ ಗುರಿಯಾಗಲೀ, ಸಕಾರಾತ್ಮಕ ಚಿಂತನೆಯಾಗಲೀ ಇಲ್ಲದೆ, ಕೆಟ್ಟ ಚಾಳಿಗಳಿಗೆ ಒಡ್ಡಿಕೊಂಡವರು ತಮ್ಮ ಭವಿಷ್ಯವನ್ನು ಹಾಳುಮಾಡಿಕೊಳ್ಳುವುದರ ಜತೆಗೆ ಹೆತ್ತವರನ್ನೂ ಅವರ ಕೊನೆಗಾಲದಲ್ಲಿ ನೋವಿನ ಕೂಪಕ್ಕೆ ದೂಡುತ್ತಿದ್ದಾರೆ. ಇದು ವಿಷಾದನೀಯ.

ಇಂದಿನ ಮಕ್ಕಳೇ ಮುಂದಿನ ಸತ್‌ಪ್ರಜೆಗಳು. ತಂತಮ್ಮ ಹೆತ್ತವರಿಗೂ, ದೇಶದ ಉಜ್ವಲ ಭವಿಷ್ಯಕ್ಕೂ ಇವರೇ ಆಧಾರ. ಯುವಜನರು ಇದನ್ನು ಅರಿತುಕೊಂಡು ಸನ್ಮಾರ್ಗದಲ್ಲಿ ನಡೆಯಲು ಯತ್ನಿಸಬೇಕು. ಒಳ್ಳೆಯ ಪುಸ್ತಕ ಓದಬೇಕು, ಒಳ್ಳೆಯ ಹವ್ಯಾಸಗಳನ್ನು ಬೆಳೆಸಿಕೊಳ್ಳಬೇಕು, ಗುರು–ಹಿರಿಯರ ಮತ್ತು ಪೋಷಕರ ಮಾರ್ಗದರ್ಶನವನ್ನು ಪಡೆಯಬೇಕು. ಓದುವ ಸಮಯದಲ್ಲಿ ಚೆನ್ನಾಗಿ ಓದುತ್ತಾ, ನಕಾರಾತ್ಮಕ ಚಿಂತನೆ ಮತ್ತು ಕೆಲಸಗಳಿಂದ ದೂರ ವಿರಬೇಕು. ಆಗ ಮಾತ್ರವೇ ಸ್ವಾಮಿ ವಿವೇಕಾನಂದರ ನುಡಿಯಂತೆ 'ಗುರಿ ಮುಟ್ಟುವ ತನಕ ನಿಲ್ಲದಿರಲು' ಸಾಧ್ಯ. ಇದರಿಂದ ಅವರಿಗೂ, ಅವರ ಹೆತ್ತವರಿಗೂ, ದೇಶಕ್ಕೂ ಒಳ್ಳೆಯದಾಗುತ್ತದೆ.

(ಲೇಖಕರು ಬ್ಯಾಂಕ್ ಅಧಿಕಾರಿ)

ಇದು ಅಮಾನುಷವನ್ನು ತೊಲಗಿಸುವ ಮನೀಷೆ...

ಕಾನೂನು ಸೆನ್ಸ್

ತಿಮ್ಮಣ್ಣ ಭಾಗ್ವತ್
vveditoped@gmail.com
tubhagwat2@gmail.com

ಜಾಗ್ರತ್ಸ್ವಪ್ನ ಸುಷುಪ್ತಿಷು ಸ್ಫುಟತರಾ ಯಾ ಸಂವಿದುಜ್ಜೃಂಭತೇ ಯಾ ಬ್ರಹ್ಮಾದಿಪಿಪೀಲಿಕಾತ ತನುಷು ಪ್ರೋತಾ ಜಗತ್ಸಾಕ್ಷಿಣೀ। ಸೈವಾಹಂ ನ ಚ ದೃಶ್ಯವಸ್ತ್ವಿತಿ ದೃಢಪ್ರಜ್ಞಾಪಿ ಯಸ್ಯಾಸ್ತಿಚೇ- ಚ್ಚಾಂಡಾಲೋಸ್ತು ಸ ತು ದ್ವಿಜೋಸ್ತು ಗುರುರಿತ್ಯೇಷಾ ಮನೀಷಾ ಮಮ''।1। (ಮನೀಷಾ ಪಂಚಕಂ– ಆದಿ ಶಂಕರಾಚಾರ್ಯರು). ಸನಾತನ ಧರ್ಮದ ಮೂಲ ತತ್ವಗಳಲ್ಲಿ ಜಾತ್ಯಾಧಾರಿತ ತಾರತಮ್ಯ ಮತ್ತು ಅಸ್ಪೃಶ್ಯತೆಯಂಥ ಅಮಾನವೀಯ ಅಂಶಗಳು ಇರಲಿಲ್ಲ ಎಂಬುದಕ್ಕೆ ಸಾಕ್ಷಾತ್ ಶಿವನ ಜತೆ ಆದಿಶಂಕರರು ನಡೆಸಿದ ಈ ಸಂವಾದಕ್ಕಿಂತ ಹೆಚ್ಚಿನ ದೃಷ್ಟಾಂತ ಬೇಕಾಗಿಲ್ಲ. ಸೃಷ್ಟಿಕರ್ತನಾದ ಬ್ರಹ್ಮನಿಂದ ಇರುವೆಯಷ್ಟು ಸಣ್ಣ ಜೀವಿಯವರೆಗೆ ಎಲ್ಲರಲ್ಲಿ ಎಚ್ಚರ, ಸ್ವಪ್ನ ಮತ್ತು ಗಾಢನಿದ್ರೆಯ ಅವಸ್ಥೆಗಳಲ್ಲಿಯೂ ಪ್ರಕಾಶಿಸುವ ಆ ಚೈತನ್ಯವೇ ನಾನು ಹೊರತು ಕಣ್ಣಿಗೆ ಕಾಣುವ ಶರೀರವಲ್ಲ ಮತ್ತು ಅಂಥ ಜ್ಞಾನ ಹೊಂದಿದವನು ಚಾಂಡಾಲನಾಗಲೀ ಬ್ರಾಹ್ಮಣನಾಗಲೀ ಗುರುವೆಂದೇ ತಿಳಿಯುತ್ತೇನೆ ಎಂದು ಶಂಕರ ಭಗವತ್ಪಾದರು ಹೇಳಿದ್ದಾರೆ. ಇದನ್ನೇ ಸ್ವಾಮಿ ವಿವೇಕಾನಂದರೂ ಪ್ರತಿಪಾದಿಸಿ ಜಾತ್ಯಾಧಾರಿತ ತಾರತಮ್ಯವು ಮೂಲಧರ್ಮದ ಭಾಗವಲ್ಲ. ಸಾಮಾಜಿಕ ವ್ಯವಸ್ಥೆಯಲ್ಲಿ ಕಾಲಾಂತರದಲ್ಲಿ ಸೇರಿಹೋಗಿರುವ ಅಂಥ ಅನಿಷ್ಟಗಳನ್ನು ಕಿತ್ತುಹಾಕಬೇಕೆಂದು ಕರೆ ನೀಡಿದರು. ಹಿಂದೂಗಳಲ್ಲಿರುವ ಜಾತಿ ವ್ಯವಸ್ಥೆ ಮೂಲದಲ್ಲಿ ಉದ್ಯೋಗಾಧಾರಿತವಾಗಿದ್ದರೂ ಕಾಲಕ್ರಮದಲ್ಲಿ ಜನ್ಮದಿಂದಲೇ ಜಾತಿ ಗುರುತಿಸುವ ಹಾಗೂ ಅದರ ಆಧಾರದಲ್ಲಿ ಮೇಲು ಕೀಳೆಂದು ಪರಿಗಣಿಸುವ ಪದ್ಧತಿಯಾಗಿ ಬೆಳೆಯಿತು ಮತ್ತು ಅಸ್ಪೃಶ್ಯತೆಯಂಥ ಅನಿಷ್ಟಗಳು ಮೂಲತತ್ವಗಳಿಗೆ ವಿರುದ್ಧವಾಗಿ ಆಚರಣೆಗೆ ಬಂದವು.

ಇಂಥ ಅನಿಷ್ಟಗಳ ವಿರುದ್ಧ ಅನೇಕ ಸಮಾಜ ಸುಧಾರಕರು ಸ್ವಾತಂತ್ರ್ಯ ಪೂರ್ವದಲ್ಲೇ ಹೋರಾಟ ನಡೆಸಿದರು. ಆದರೆ ಜಾತ್ಯಾಧಾರಿತ ತಾರತಮ್ಯ ಮತ್ತು ಅಸ್ಪೃಶ್ಯತೆ ವಿರುದ್ಧ ಬ್ರಿಟಿಷರು ಯಾವುದೇ ಕಾನೂನುಗಳನ್ನು ಜಾರಿಮಾಡಲಿಲ್ಲ. ಬದಲಾಗಿ ಜಾತಿಗಣತಿಯಂಥ ಉಪಕ್ರಮಗಳ ಮೂಲಕ ಜಾತಿ ವ್ಯವಸ್ಥೆಯನ್ನು ಅಧಿಕೃತಗೊಳಿಸಿದ್ದರಿಂದ ಅದು ಸರಕಾರಿ ದಾಖಲೆಗಳ ಒಂದು ಅನಿವಾರ್ಯ ಭಾಗವಾಯಿತು. ಸ್ವಾತಂತ್ರ್ಯೋತ್ತರ ಭಾರತದಲ್ಲೂ ಜಾತಿವ್ಯವಸ್ಥೆ ಪ್ರಮುಖ ರಾಜಕೀಯ ಅಸ್ತ್ರವಾಗಿ ಬೆಳೆಯಿತು. ಆದರೆ ಜಾತ್ಯಾಧಾರಿತ ತಾರತಮ್ಯ ನಿವಾರಣೆಗೆ ಅನೇಕ ಕಾನೂನುಗಳು ಜಾರಿಗೆ ಬಂದವು. ಡಾ. ಅಂಬೇಡ್ಕರರಂಥ ಮಹನೀಯರ ಆಶಯ ಮತ್ತು ಒತ್ತಾಯದ ಫಲವಾಗಿ ಜಾತ್ಯಾಧಾರಿತ ತಾರತಮ್ಯ ಮತ್ತು ಅಸ್ಪೃಶ್ಯತೆಗಳನ್ನು ಸ್ಪಷ್ಟವಾಗಿ ನಿಷೇಧಿಸುವ 15 ಮತ್ತು 17ನೇ ವಿಧಿಗಳನ್ನು ಹಾಗೂ ಅದಕ್ಕೆ ಸಂಬಂಧಿಸಿದ 16, 46, 342(1), 366 ವಿಧಿಗಳನ್ನು ಸಂವಿಧಾನದಲ್ಲಿ ಸೇರಿಸಲಾಯಿತು. 1955ರ ಅಸ್ಪೃಶ್ಯತಾ (ಅಪರಾಧ) ಕಾಯಿದೆಯು ಅಸ್ಪೃಶ್ಯತೆಯ ನಿರ್ಮೂಲನೆ ಕುರಿತಾದ ಮೊದಲ ಕಾನೂನು. 1976ರಲ್ಲಿ ಈ ಕಾಯಿದೆಗೆ ಕೆಲವು ತಿದ್ದುಪಡಿಗಳನ್ನು ಮಾಡಿ ಇದರ ಹೆಸರನ್ನು 'ನಾಗರಿಕ ಹಕ್ಕುಗಳ ರಕ್ಷಣೆ ಕಾಯಿದೆ'ಯೆಂದು ಬದಲಾಯಿಸಲಾಯಿತು. ಆದರೆ ಈ ಪಿಡುಗನ್ನು ತೊಲಗಿಸಲು ಸಮಗ್ರವಾದ ಹಾಗೂ ಪ್ರತ್ಯೇಕವಾದ ಹೆಚ್ಚು ಪರಿಣಾಮಕಾರಿ ಕಾಯಿದೆಯ ಅವಶ್ಯಕತೆ ಇದೆಯೆಂದು ಭಾರತ ಸರಕಾರ ಮನಗಂಡಿದ್ದರಿಂದ ''1989ರ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ದೌರ್ಜನ್ಯ ತಡೆ ಕಾಯಿದೆ''ಯನ್ನು (SC ST - Prevention of Attrocity Act) ಹಾಗೂ 1995ರ ನಿಯಮಾವಳಿಗಳನ್ನೂ ಜಾರಿಗೆ ತರಲಾಯಿತು. ಈ ಕಾಯಿದೆಯನ್ನು ಇನ್ನಷ್ಟು ಪರಿಣಾಮಕಾರಿಯಾಗಿಸಲು ಅನೇಕ ತಿದ್ದುಪಡಿಗಳನ್ನು ಮಾಡಲಾಯಿತು. 2018ರಲ್ಲಿ 'ಸುಭಾಸ ಮಹಾಜನ್ ವರ್ಸಸ್ ಭಾರತ ಸರಕಾರ' ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಈ ಕಾಯಿದೆಯಡಿ ಅನಗತ್ಯ ಬಂಧನ ಮತ್ತು ನಿರೀಕ್ಷಣಾ ಜಾಮೀನು ನಿರಾಕರಣೆಯನ್ನು ತಡೆಗಟ್ಟಲು ಕೆಲವು ನಿಯಮ ಗಳನ್ನು ವಿಧಿಸಿ ಆದೇಶಿಸಿತು. ಆದರೆ ಆನಂತರ ನಡೆದ ವ್ಯಾಪಕ ಪ್ರತಿಭಟನೆಯ ಕಾರಣದಿಂದ 2019ರಲ್ಲಿ ಈ ಕಾಯಿದೆಗೆ ತರಲಾದ ತಿದ್ದುಪಡಿಯು ಸುಪ್ರೀಂ ಕೋರ್ಟಿನ ಆದೇಶವನ್ನು ಅನೂರ್ಜಿತಗೊಳಿಸಿತು ಮತ್ತು ಸುಪ್ರೀಂ ಕೋರ್ಟ್ ತನ್ನ ಆದೇಶವನ್ನು ಭಾಗಶಃ ಹಿಂಪಡೆಯಬೇಕಾಗಿ ಬಂತು.

ಈ ಕಾಯಿದೆಯು ಎಸ್‌ಸಿ/ಎಸ್‌ಟಿ ಸಮುದಾಯದ ಜನರ ಮೇಲೆ ನಡೆಯುವ ದೌರ್ಜನ್ಯಗಳನ್ನು ತಡೆದು ಅವರಿಗೆ ಸಮಾಜದಲ್ಲಿ ಗೌರವದಿಂದ ಬದುಕುವ ಹಕ್ಕನ್ನು ಒದಗಿಸುವುದೇ ಮುಂತಾದ ಉದ್ದೇಶಗಳನ್ನು ಹೊಂದಿದೆ. ಈ ಕಾಯಿದೆಯಡಿಯಲ್ಲಿ ಅಪರಾಧಗಳೆಂದು ಪರಿಗಣಿಸಲ್ಪಡುವ ಕೃತ್ಯಗಳನ್ನು ಕಲಂ 3 (1)ರಲ್ಲಿ(a) ಇಂದ (zc) ವರೆಗಿನ 29 ಉಪಕಲಂಗಳು, 3(2)ರಲ್ಲಿ (i) ರಿಂದ (vii)ರ ವರೆಗಿನ 7 ಉಪಕಲಂಗಳಲ್ಲಿ ವ್ಯಾಖ್ಯಾನಿಸಲಾಗಿದೆ. ಈ ಕಾಯಿದೆಯಡಿ ಬರುವ ಅಪರಾಧ ಕೃತ್ಯಗಳನ್ನು ಈ ಮುಂದಿನಂತೆ ವರ್ಗೀಕರಿಸಬಹುದು:

- ಸಾರ್ವಜನಿಕ ಕೊಳ, ಬಾವಿ ಮತ್ತು ಜಲಾಶಯಗಳಿಂದ ನೀರು ಬಳಸಲು ನಿರ್ಬಂಧ, ದಾರಿ ಹಾಗೂ ಇತರ ಸಾರ್ವಜನಿಕ ಸ್ಥಳಗಳಿಗೆ ಪ್ರವೇಶ ನಿರ್ಬಂಧದಂಥ ಸಾಮಾಜಿಕ ತಾರತಮ್ಯ.
- ಅವಮಾನಿಸುವ ಉದ್ದೇಶದಿಂದ ಜಾತಿಯ ಹೆಸರು ಹೇಳಿ ಸಾರ್ವಜನಿಕವಾಗಿ ನಿಂದಿಸುವುದು.
- ಮಲ ಅಥವಾ ಇತರ ತ್ಯಾಜ್ಯಗಳನ್ನು ಒತ್ತಾಯಪೂರ್ವಕವಾಗಿ ತಿನ್ನಿಸುವುದು, ಬೆತ್ತಲೆ ಮಾಡಿ ಥಳಿಸುವುದು, ತಲೆ ಬೋಳಿಸಿ, ಚಪ್ಪಲಿಹಾರ ತೊಡಿಸಿ ಮೆರವಣಿಗೆ ಅಥವಾ ಇನ್ನಿತರ ದೈಹಿಕ ಹಿಂಸೆ, ಅತ್ಯಾಚಾರದಂಥ ವೈಯಕ್ತಿಕ ಹಾನಿ.
- **ಆಸ್ತಿಗಳಿಗೆ ಸಂಬಂಧಿಸಿದ ಅನ್ಯಾಯ:** ಒತ್ತಾಯಪೂರ್ವಕ ಆಸ್ತಿಗಳ ಮಾರಾಟ, ಆಸ್ತಿಗಳನ್ನು ನಾಶಪಡಿಸುವುದು ಇಲ್ಲವೇ ಆಸ್ತಿಯನ್ನು ಅನುಭವಿಸಲು ಅಡ್ಡಿಪಡಿಸುವದು ಇತ್ಯಾದಿ.
- **ದುರುದ್ದೇಶಪೂರಿತ ಕಾನೂನುಕ್ರಮ ಕೈಗೊಳ್ಳುವುದು:** ಖೊಟ್ಟಿ ಪ್ರಕರಣ ಹಾಕಿ ಅವರ ಬಂಧನಕ್ಕೆ ಕಾರಣರಾಗುವುದು, ಅವರ ವಿರುದ್ಧ ಸುಳ್ಳು ಸಾಕ್ಷಿ ಮತ್ತು ಪುರಾವೆ ಸೃಷ್ಟಿಸುವುದು.
- **ರಾಜಕೀಯ ತಾರತಮ್ಯ:** ಉದಾಹರಣೆಗೆ ಮತದಾನ ಅಥವಾ ಚುನಾವಣೆಗೆ ಸ್ಪರ್ಧಿಸದಂತೆ ತಡೆಯುವುದು. ಮತದಾನ/ಫಲಿತಾಂಶದ ನಂತರ ನಡೆಯುವ ಹಿಂಸೆ.

ಆರ್ಥಿಕ ಶೋಷಣೆ

ಇದಲ್ಲದೆ ಈ ಕಾಯಿದೆಯ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಅನೇಕ ಮುನ್ನೆಚ್ಚರಿಕೆ ಕ್ರಮಗಳು, ಸ್ವಯಂಪ್ರೇರಿತ ಪ್ರಕರಣ ದಾಖಲು, ವಿಶೇಷ ನ್ಯಾಯಾಲಯಗಳ ಸ್ಥಾಪನೆ, ಪ್ರತ್ಯೇಕ ತನಿಖಾ ವ್ಯವಸ್ಥೆ, ಸಂತ್ರಸ್ತರಿಗೆ ಆರ್ಥಿಕ ಸಹಾಯ ಮತ್ತು ಪುನರ್ವಸತಿ ಮುಂತಾದ ಕ್ರಮಗಳನ್ನು ಅಳವಡಿಸಲಾಗಿದೆ. ಕಾಲಕಾಲಕ್ಕೆ ತಾಲೂಕು ಮಟ್ಟದಿಂದ ರಾಜ್ಯ ಮಟ್ಟದವರೆಗೂ ಅನುಷ್ಠಾನ ಸಮಿತಿಗಳು, ದೌರ್ಜನ್ಯ ತಡೆಗೆ ಕೈಗೊಳ್ಳಲಾದ ಕ್ರಮಗಳ ಪರಾಮರ್ಶೆ ನಡೆಸಿ ಸರಕಾರಕ್ಕೆ ಕ್ರಮ ಕೈಗೊಂಡ ವರದಿ ಸಲ್ಲಿಸಬೇಕು. ಈ ಕಾಯಿದೆಯಡಿ ವ್ಯಾಖ್ಯಾನಿಸಲಾದ ಎಲ್ಲಾ ಅಪರಾಧಗಳೂ ಗುರುತಿಸಲ್ಪಡುವ (cognizable) ಮತ್ತು ಜಾಮೀನುರಹಿತ (non-bailable) ವಾಗಿರುವುದರಿಂದ ದೂರು ಬಂದಾಗ ಆರೋಪಿಯನ್ನು ಬಂಧಿಸಲಾಗುತ್ತದೆ ಮತ್ತು ಶೀಘ್ರ ತನಿಖೆ ನಡೆಸಿ ಶಿಕ್ಷೆ ವಿಧಿಸಲು ಕ್ರಮಕೈಗೊಳ್ಳಲಾಗುತ್ತದೆ. ಸರಕಾರಿ ನೌಕರರು ಆರೋಪಿಗಳಾದಾಗ ಅವರ ಬಂಧನವಾದರೆ ಅಮಾನತಿಗೆ ಒಳಪಡುವುದರಿಂದ ಈ ಕಾಯಿದೆಯ ಪರಿಣಾಮ ಹೆಚ್ಚು ಕಠಿಣವೆನಿಸುತ್ತದೆ. ಈ ಕಾರಣಕ್ಕೆ ಅಂಥ ಯಾವುದೇ ಅಪರಾಧ ಮಾಡಲು ಜನರು ಹೆದರುವುದರಿಂದ ಇದೊಂದು ಅಪರಾಧ ಪ್ರತಿಬಂಧಕ ಕಾಯಿದೆ ಎನ್ನಬಹುದು.

3ನೇ ಕಲಮಿನಲ್ಲಿ ಹೆಸರಿಸಲಾದ ಬಹುತೇಕ ಎಲ್ಲ ಕೃತ್ಯಗಳು ಭಾರತೀಯ ನ್ಯಾಯ ಸಂಹಿತೆಯ ಅಡಿಯಲ್ಲಿಯೂ ಶಿಕ್ಷಾರ್ಹ ಅಪರಾಧಗಳೇ ಆಗಿರುತ್ತವೆ. ಆದರೆ attrocity ಕಾಯಿದೆಯಡಿ ಪ್ರಕರಣ ದಾಖಲಿಸಲು ಅಂಥ ಕೃತ್ಯಗಳು ಎಸ್.ಸಿ.ಗಳ ವಿರುದ್ಧ ಎಸ್.ಸಿ.ಯೇತರ ವ್ಯಕ್ತಿಗಳಿಂದ ಹಾಗೂ ಎಸ್.ಟಿ.ಗಳ ವಿರುದ್ಧ ಎಸ್.ಟಿ.ಯೇತರ ವ್ಯಕ್ತಿಗಳಿಂದ ಮಾಡಲ್ಪಟ್ಟಿರಬೇಕು. ಜಾತಿ ನಿಂದನೆಯ ಪ್ರಕರಣಗಳಲ್ಲಿ ಅವರನ್ನು ಆ ಮೂಲಕ ಅಪಮಾನಿಸುವುದು ಮುಖ್ಯ ಉದ್ದೇಶವಾಗಿರಬೇಕು. ಬಿಎನ್‌ಎಸ್ ಅಡಿಯಲ್ಲಿ ಅಂಥ ಕೆಲವು ಅಪರಾಧಗಳು ಸಾಮಾನ್ಯವೆಂದು ಪರಿಗಣಿತವಾದರೂ, ಈ ಕಾಯಿದೆಯಡಿ ಅದು ಗುರುತಿಸಲ್ಪಡುವ ಮತ್ತು ಜಾಮೀನುರಹಿತ ಪ್ರಕರಣವಾಗುತ್ತದೆ. ದೌರ್ಜನ್ಯ ನಡೆದ ಸುದ್ದಿ ತಿಳಿದ ತಕ್ಷಣ ಉಪ-ಪೊಲೀಸ್ ವರಿಷ್ಠಾಧಿಕಾರಿ ಅಥವಾ ಉಪವಿಭಾಗೀಯ ದಂಡಾಧಿಕಾರಿ ಸ್ಥಳಕ್ಕೆ ಭೇಟಿ ಕೊಟ್ಟು ಪ್ರಾಥಮಿಕ ತನಿಖೆ ನಡೆಸಿ ವರದಿ ಸಲ್ಲಿಸಬೇಕು ಮತ್ತು ಅಂಥ ಘಟನೆ ನಡೆದದ್ದು ನಿಜವೆಂದು ವರದಿಯಾದರೆ ಜಿಲ್ಲಾ ದಂಡಾಧಿಕಾರಿ ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಭೇಟಿನೀಡಿ ಸಂತ್ರಸ್ತರಿಗೆ ಪರಿಹಾರ ನೀಡಬೇಕು ಮತ್ತು ಅಪರಾಧಿಗಳನ್ನು ಗುರುತಿಸಿ ಮುಂದಿನ ಕ್ರಮ ಕೈಗೊಳ್ಳಬೇಕು. DSP ನೇತೃತ್ವದಲ್ಲಿ ಕೂಡಲೇ ತನಿಖೆ ನಡೆಸಿ 60 ದಿನಗಳ ಒಳಗೆ ಸರಕಾರಕ್ಕೆ ವರದಿ ಸಲ್ಲಿಸಬೇಕು. ಇದಕ್ಕೆ ತಪ್ಪಿದಲ್ಲಿ ಸಂಬಂಧಿತ DSP ಕಾನೂನು ಕ್ರಮಕ್ಕೆ ಬಾಧ್ಯಸ್ಥರಾಗುತ್ತಾರೆ. ಎಫ್‌ಐಆರ್ ದಾಖಲಾದ 60 ದಿನಗಳಲ್ಲಿ ಸಂಬಂಧಿತ ಪೊಲೀಸ್ ಠಾಣೆಯ ಇನ್ಸಪೆಕ್ಟರ್ ಈ ಕಾಯಿದೆಯಡಿ ಸ್ಥಾಪಿತವಾಗುವ ವಿಶೇಷ ನ್ಯಾಯಾಲಯದಲ್ಲಿ ಚಾರ್ಜ್‌ಶೀಟ್ ಸಲ್ಲಿಸಬೇಕು. ದೌರ್ಜನ್ಯದ ಕೃತ್ಯಗಳ ಸಂತ್ರಸ್ತರಿಗೆ ತುರ್ತು ಪರಿಹಾರ ಮತ್ತು ಕೊಲೆ, ಅತ್ಯಾಚಾರದಂಥ ಪ್ರಕರಣಗಳಲ್ಲಿ ಹೆಚ್ಚಿನ ಪರಿಹಾರ ನೀಡುವ ಮತ್ತು ಸಂತ್ರಸ್ತ ಕುಟುಂಬಲ್ಲಿ ಕನಿಷ್ಠ ಒಬ್ಬರಿಗೆ ಸರಕಾರಿ ಉದ್ಯೋಗ ನೀಡುವ ನಿಯಮ ಕೂಡಾ ಈ ಕಾಯಿದೆಯಲ್ಲಿದೆ.

ಇಂಥ ದೌರ್ಜನ್ಯ ಪ್ರಕರಣಗಳ ತನಿಖೆ, ವಿಚಾರಣೆ ಹಾಗೂ ಎಸ್‌ಸಿ/ಎಸ್‌ಟಿ ಜನರ ಕಲ್ಯಾಣಕ್ಕಾಗಿ ರಾಷ್ಟ್ರೀಯ ಎಸ್‌ಸಿ–ಎಸ್‌ಟಿ ಆಯೋಗವನ್ನು ರಚಿಸಲಾಗಿದ್ದು, ಸದರಿ ಆಯೋಗಕ್ಕೆ ಯಾವುದೇ ದೌರ್ಜನ್ಯದ ಪ್ರಕರಣಗಳ ಕುರಿತು ಲಿಖಿತವಾಗಿ ಇಲ್ಲವೇ ಆನ್‌ಲೈನ್ ಮೂಲಕ ದೂರು ಸಲ್ಲಿಸಬಹುದಾಗಿದೆ. ಆಯೋಗದ ವಿಳಾಸ: National Commission For Scheduled Castes 5th Floor, Lok Nayak Bhawan, Khan Market, New Delhi-110003 ಮತ್ತು ಆನ್‌ಲೈನ್ ದೂರು ನೀಡಲು ವೆಬ್‌ಸೈಟ್: ncsc.negd.in. ಅಲ್ಲದೆ ಆಯೋಗದ ನಿಶ್ಶುಲ್ಕ ದೂರವಾಣಿ ಸಂಖ್ಯೆ: 1800 11 8888ಕ್ಕೆ ಕರೆಮಾಡಿ ಕೂಡಾ ದೂರು ನೀಡಬಹುದು.

ಇಷ್ಟು ಕಟ್ಟುನಿಟ್ಟಾದ ಕಾಯಿದೆ ಇದ್ದಾಗಲೂ ದೌರ್ಜನ್ಯದ ಪ್ರಕರಣಗಳು ನಡೆಯುತ್ತಲೇ ಇವೆ. ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋ ಪ್ರಕಟಿಸಿದ ಅಂಕಿ–ಅಂಶಗಳ ಪ್ರಕಾರ, 2022ರ ವರ್ಷವೊಂದರಲ್ಲೇ 4703 ಪ್ರಕರಣಗಳು ದಾಖಲಾಗಿದ್ದು ಈ ಪೈಕಿ 1735 ಪ್ರಕರಣಗಳು ಉದ್ದೇಶಪೂರ್ವಕ ಅಪಮಾನ ಹಾಗೂ ಬೆದರಿಸುವಿಕೆಗೆ ಸಂಬಂಧಿಸಿದ್ದಾಗಿವೆ. ಇದು ಅತ್ಯಂತ ಗಂಭೀರ ವಿಷಯ ಮತ್ತು ನಾಗರಿಕ ಸಮಾಜ ತಲೆ ತಗ್ಗಿಸಬೇಕಾದ ವಿಚಾರ. ಇತ್ತೀಚೆಗೆ ಅಂದರೆ 29–10–2021ರಂದು ಸುಪ್ರೀಂ ಕೋರ್ಟ್ 'ಹರಿರಾಮ್ ಭಾಂಬಿ ವರ್ಸಸ್ ಸತ್ಯನಾರಾಯಣ' ಪ್ರಕರಣದಲ್ಲಿ ''ಎಸ್.ಸಿ.–ಎಸ್.ಟಿ. ಜನರ ವಿರುದ್ಧದ ದೌರ್ಜನ್ಯ ಎನ್ನುವುದು ಹಳೆಯ ಮಾತಲ್ಲ. ಈಗಲೂ ನಮ್ಮ ಸಮಾಜದಲ್ಲಿ ಇದು ವಾಸ್ತವಿಕವಾಗಿ ನಡೆಯುತ್ತಿದೆ. ಆದ್ದರಿಂದ ಅವರ ಹಕ್ಕುಗಳ ರಕ್ಷಣೆಗಾಗಿ ಜಾರಿಮಾಡಲಾದ ಕಾನೂನು ಕ್ರಮಗಳು ಕಟ್ಟುನಿಟ್ಟಾಗಿ ಅನುಷ್ಠಾನಗೊಳ್ಳಬೇಕು'' ಎಂದು ಸ್ಪಷ್ಟವಾಗಿ ಹೇಳಿದೆ. ಆದರೆ ಈ ಕಾಯಿದೆ ಪ್ರಾಮಾಣಿಕವಾಗಿ ಅನುಷ್ಠಾನಗೊಳ್ಳಬೇಕೇ ಹೊರತು ಸಂತ್ರಸ್ತರೆಂಬ ಸೋಗಿನಲ್ಲಿ ಮುಗ್ಧರ ಶೋಷಣೆಗೆ ಬಳಕೆಯಾಗಬಾರದು ಎಂಬುದೂ ಅಷ್ಟೇ ಸತ್ಯ. ಈ ಕಾಯಿದೆಯ ದುರ್ಬಳಕೆಯ ಪ್ರಕರಣಗಳನ್ನು ಮುಂದಿನ ಭಾಗದಲ್ಲಿ ಚರ್ಚಿಸೋಣ.

(ಮುಂದುವರಿಯುವುದು)

(ಲೇಖಕರು ಕಾನೂನು ತಜ್ಞರು ಮತ್ತು ಕೆವಿಜಿ ಬ್ಯಾಂಕ್‌ನ ನಿವೃತ್ತ ಎಜಿಎಂ)

ಪ್ರತಿಸ್ಪಂದನ

ಬಿ.ಎಸ್.ಮೋಹನ್ ಕುಮಾರ್, ಬೆಂಗಳೂರು

ಭೈರಪ್ಪನವರು ಕನ್ನಡದ ಹೆಮ್ಮೆ

ಕನ್ನಡದ ಮೇರುಸಾಹಿತಿ, ಕಾದಂಬರಿಕಾರ ಡಾ. ಎಸ್.ಎಲ್. ಭೈರಪ್ಪ ಅವರ ಹೆಸರಿನ ಪ್ರತಿಷ್ಠಾನವು ಅಸ್ತಿತ್ವಕ್ಕೆ ಬಂದ ಸುದ್ದಿಯನ್ನು ಓದಿ ಖುಷಿಯಾಯಿತು, ಹೆಮ್ಮೆಯೂ ಆಯಿತು. ಬರಹಗಾರರೊಬ್ಬರು ತಮ್ಮ ಬದುಕಿನ ರೀತಿಯಲ್ಲಿ ಬರಹವನ್ನು ಸೃಜಿಸಿ, ಮತ್ತೆ ಬರಹದಂತೆ ಬದುಕನ್ನು ಸಾರ್ಥಕಪಡಿಸಿಕೊಂಡಿರುವ ಒಂದಷ್ಟು ನಿದರ್ಶನಗಳನ್ನು ಒಮ್ಮೆ ಅವಲೋಕಿಸಿದರೆ, ಆ ವಿಷಯದಲ್ಲಿ ನಮ್ಮ ಭೈರಪ್ಪನವರು ಎದ್ದು ಕಾಣುತ್ತಾರೆ ಎಂಬುದು ನನ್ನ ಅನಿಸಿಕೆ. 'ತಾವು ಪಟ್ಟ ಕಷ್ಟ–ಕಾರ್ಪಣ್ಯಗಳು ಇನ್ನಾರಿಗೂ ಬರಬಾರದು; ಅದಕ್ಕಾಗಿ ತಾವು ಒಂದಿಷ್ಟು ಕೊಡುಗೆ ನೀಡಬೇಕಿದೆ, ಬದುಕನ್ನು ಆದಷ್ಟು ಇತಿಮಿತಿಯಲ್ಲಿ ನಡೆಸಬೇಕಿದೆ' ಎಂಬ ಗ್ರಹಿಕೆ ಇಟ್ಟುಕೊಂಡು ಭೈರಪ್ಪನವರು ಕೈಗೊಂಡ ಸಮಾಜಸೇವಾ ಚಟುವಟಿಕೆಗಳು ಮತ್ತು ಅವರ ಸೇವಾ ಮನೋಭಾವ ಶ್ಲಾಘನೀಯ. ಇದು ಭೈರಪ್ಪನವರ ಹೃದಯವಂತಿಕೆಗೆ ಸಾಕ್ಷಿ.

'ಇದು ನನಗೆ ಸಂಬಂಧಪಡದ ಸಂಗತಿ' ಎಂದು ಭೈರಪ್ಪನವರು ಸುಮ್ಮನಿದ್ದುಬಿಡಬಹುದಿತ್ತು. ಆದರೆ ತಮ್ಮ ಹುಟ್ಟೂರಿನ ಬಾಂಧವ್ಯವನ್ನು ಕಳೆದುಕೊಳ್ಳದೆಯೇ, ಅಲ್ಲಿನ ಜನರು–ಜಾನುವಾರುಗಳಿಗೆ ನೀರಿನ ಸೌಕರ್ಯವನ್ನು ಕಲ್ಪಿಸುವಲ್ಲಿ ಆ ಹಿರಿಯ ಜೀವವು ಶ್ರಮ ವಹಿಸಿದ್ದು, ಆಸಕ್ತಿ ತೋರಿದ್ದು ನಿಜಕ್ಕೂ ಮತ್ತೊಬ್ಬರಿಗೆ 'ಮೇಲ್ಪಂಕ್ತಿ'ಯ ವಿಷಯವೇ. ಭೈರಪ್ಪನವರು 'ವಿಶ್ವವಾಣಿ'ಯ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ಟರನ್ನು ಮುಂದುಮಾಡಿ, ಸರಕಾರಕ್ಕೆ ದುಂಬಾಲು ಬಿದ್ದು, ತಾವು ಹಿಡಿದ ಈ ಕೆಲಸವನ್ನು ಸಾಧಿಸಿದರು ಎಂಬ ಸಂಗತಿಯನ್ನು ಓದಿದಾಗ ಹೃದಯ ತುಂಬಿಬಂತು. ಭೈರಪ್ಪನವರ ಈ ಛಲವು ಇಂದಿನ ರಾಜಕಾರಣಿಗಳಿಗೆ ಒಂದು ದೊಡ್ಡ ಪಾಠವಾಗಿದೆ ಎಂದರೆ ಅತಿಶಯೋಕ್ತಿಯಲ್ಲ.

ಮತ್ತೊಂದೆಡೆ, 'ಒಬ್ಬ ಪತ್ರಕರ್ತ/ಸಂಪಾದಕ ಆಗಿದ್ದುಕೊಂಡು, ಸುದ್ದಿಗಳನ್ನು ಓದುಗರ ಮುಂದಿಟ್ಟರೆ ನನ್ನ ಕೆಲಸ ಮುಗಿಯಿತು, ನನ್ನ ಹೊಣೆ ಅಷ್ಟೇ' ಎಂಬ ಗ್ರಹಿಕೆಯೊಂದಿಗೆ ಪೆನ್ನು ಮುಚ್ಚಿಟ್ಟು ಆಕಳಿಸುವ ಹಲವು ಪತ್ರಕರ್ತರ ನಡುವೆ ವಿಶ್ವೇಶ್ವರ ಭಟ್ಟರು ವಿಭಿನ್ನರಾಗಿ ಕಾಣಿಸುತ್ತಾರೆ. ತಮ್ಮ ವೃತ್ತಿಯ ಆಚೆಗೂ ತಮಗೊಂದಿಷ್ಟು ಹೊಣೆಗಾರಿಕೆಗಳಿವೆ ಎಂಬ ಗ್ರಹಿಕೆಯೊಂದಿಗೆ, ಭೈರಪ್ಪನವರ ಜನಹಿತ ಕಾರ್ಯಕ್ಕೆ ಹೆಗಲು ಕೊಟ್ಟು ಆ ಮಹತ್ಕಾರ್ಯವನ್ನು ಸಾಕಾರಗೊಳಿಸಿದ ವಿಶ್ವೇಶ್ವರ ಭಟ್ಟರು ಯಾವುದೇ ಸಮಾಜ ಸೇವಕ ಅಥವಾ ರಾಜಕಾರಣಿಗಿಂತ ವಿಶಿಷ್ಟವಾಗಿ ನಮ್ಮೆದುರು ನಿಲ್ಲುತ್ತಾರೆ. ಅವರಲ್ಲಿ ಇಂಥ ಇನ್ನೂ ಅದೆಷ್ಟೋ ಆಶಯಗಳು ಮತ್ತು ಸಮಾಜಮುಖಿ ಚಿಂತನೆಗಳು ಇರಬಹುದು. ಅವನ್ನು ಸಮರ್ಥವಾಗಿ ಕಾರ್ಯರೂಪಕ್ಕೆ ತರುವ ನಿಟ್ಟಿನಲ್ಲಿ 'ಡಾ. ಎಸ್.ಎಲ್.ಭೈರಪ್ಪ ಪ್ರತಿಷ್ಠಾನ'ವು ಯಶಸ್ಸು ಕಾಣಲಿ. ಭೈರಪ್ಪನವರ ಅಭಿಮಾನಿಗಳು ಸೇರಿದಂತೆ ಸಹೃದಯಿಗಳೆಲ್ಲರೂ ಇಂಥ ಚಟುವಟಿಕೆಗಳಿಗೆ ಕೈಜೋಡಿಸುವಂತಾಗಲಿ. ಕನ್ನಡಿಗರ ಹೆಮ್ಮೆಯ ಸಾಹಿತಿ ಭೈರಪ್ಪನವರಿಗೆ ಹಾಗೂ ಪತ್ರಕರ್ತ ವಿಶ್ವೇಶ್ವರ ಭಟ್ಟರಿಗೆ ಮತ್ತೊಮ್ಮೆ ನಮನಗಳು.

(ಲೇಖಕರು ಹವ್ಯಾಸಿ ಬರಹಗಾರರು)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ, ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue:154

ಸಮಾಚಾರ ಸಣ್ಣದಲ್ಲ

ಅಡುಗೆ ಎಣ್ಣೆ ಬೆಲೆ ₹4 ದಿಢೀರ್ ಹೆಚ್ಚಳ

ದೆಹಲಿ: ಇರಾನ್-ಇಸ್ರೇಲ್ ಯುದ್ಧ ವಿಶ್ವಾದ್ಯಂತದ ಜನಜೀವನದ ಮೇಲೆ, ಅಂತಾರಾಷ್ಟ್ರೀಯ ಮಾರುಕಟ್ಟೆ ವಹಿವಾಟಿನ ಮೇಲೆ ಪ್ರಭಾವ ಬೀರುತ್ತಿದೆ. ಒಂದೆಡೆ ಪೆಟ್ರೋಲಿಯಂ ಉತ್ಪನ್ನಗಳ ಸರಬರಾಜಿನಲ್ಲಿ ವ್ಯತ್ಯಯವಾಗಿದ್ದರೆ, ಇನ್ನೊಂದೆಡೆ, ಖಾದ್ಯ ತೈಲಗಳ ಬೆಲೆಯಲ್ಲಿ ಏರಿಕೆ ಕಂಡುಬಂದಿದೆ. ಇರಾನ್ ಮೇಲೆ ಇಸ್ರೇಲ್ ಶುಕ್ರವಾರ ದಾಳಿ ಆರಂಭಿಸಿದೆ. ಶನಿವಾರದಿಂದ ಈವರೆಗೆ ಅಡುಗೆ ಎಣ್ಣೆ ಬೆಲೆಯಲ್ಲಿ 4 ರು. ಏರಿಕೆಯಾಗಿದೆ. ಒಂದೊಮ್ಮೆ ಇಸ್ರೇಲ್-ಇರಾನ್ ಯುದ್ಧ ಇನ್ನಷ್ಟು ಕಾಲ ಮುಂದುವರೆದರೆ ಖಾದ್ಯ ತೈಲಗಳ ಬೆಲೆ ಲೀಟರ್‌ಗೆ ಕನಿಷ್ಠ 10 ರು.ನಿಂದ ಗರಿಷ್ಠ 30 ರು.ವರೆಗೂ ಏರಿಕೆಯಾಗುವ ಸಾಧ್ಯತೆಯಿದೆ ಎಂದು ತೈಲ ಆಮದು ಮತ್ತು ಮಾರುಕಟ್ಟೆ ತಜ್ಞರು ವಿಶ್ಲೇಷಿಸಿದ್ದಾರೆ.

ಸೋನಿಯಾ ಮತ್ತೆ ಆಸ್ಪತ್ರೆಗೆ ದಾಖಲು

ದೆಹಲಿ: ಕಾಂಗ್ರೆಸ್‌ನ ಸಂಸದೀಯ ಪಕ್ಷದ ನಾಯಕಿ, ರಾಜ್ಯಸಭೆ ಸದಸ್ಯೆ ಸೋನಿಯಾ ಗಾಂಧಿ ಅವರ ಆರೋಗ್ಯದಲ್ಲಿ ಸೋಮವಾರ ತುಸು ಏರುಪೇರಾಗಿದ್ದು, ತಕ್ಷಣವೇ ಅವರನ್ನು ದೆಹಲಿಯ ಸರ್ ಗಂಗಾರಾಮ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಸೋನಿಯಾ ಅವರು ಉದರ ಸಂಬಂಧಿ ಸಮಸ್ಯೆಯಿಂದ ಬಳಲುತ್ತಿದ್ದಾರೆ. ಚಿಕಿತ್ಸೆ ನೀಡಲಾಗಿದೆ. ಅವರ ದೇಹಾರೋಗ್ಯ ಸದ್ಯ ಸ್ಥಿರವಾಗಿದೆ ಎಂದು ಆಸ್ಪತ್ರೆ ಮೂಲಗಳು ಸೋಮವಾರ ಸಂಜೆ ತಿಳಿಸಿವೆ. ಕೆಲ ದಿನಗಳ ಹಿಂದೆ, ಹಿಮಾಚಲ ಪ್ರದೇಶಕ್ಕೆ ವಿಶ್ರಾಂತಿಗಾಗಿ ತೆರಳಿದ್ದಾಗಲೂ ಸೋನಿಯಾ ಆರೋಗ್ಯ ಹದಗೆಟ್ಟಿತ್ತು. ಆಗ ಅವರನ್ನು ಶಿಮ್ಲಾದ ಇಂದಿರಾ ಗಾಂಧಿ ವೈದ್ಯಕೀಯ ಕಾಲೇಜು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಫೆಬ್ರವರಿಯಲ್ಲಿಯೂ ಒಮ್ಮೆ ಸೋನಿಯಾ ಅವರಿಗೆ ಉದರ ಸಂಬಂಧಿ ಸಮಸ್ಯೆ ಕಾಣಿಸಿಕೊಂಡು ಸರ್ ಗಂಗಾ ರಾಮ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗಿತ್ತು.

{ ಮಲ್ಲಿಕಾರ್ಜುನ ಖರ್ಗೆ } ಕಾಂಗ್ರೆಸ್ ಅಧ್ಯಕ್ಷ

ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರಕಾರ ದೇಶದ ಬಡವರ ಪಾಲಿನ ದುಡಿಮೆಯ ಅವಕಾಶವಾದ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ(ನರೇಗಾ) ಯೋಜನೆಯನ್ನೇ ನಾಶ ಮಾಡಲು ಯತ್ನಿಸುತ್ತಿದೆ. 2025-26ನೇ ಹಣಕಾಸು ವರ್ಷದ ಪ್ರಥಮಾರ್ಧಕ್ಕೆ ಅನುದಾನ ಹಂಚಿಕೆ ಶೇ.60ಕ್ಕೆ ಮಿತಿಗೊಳಿಸಿ ಗ್ರಾಮೀಣ ಬಡಜನರ ದುಡಿಮೆ ಅವಕಾಶವನ್ನೇ ಕಸಿದಿದೆ.



ಭಾರತದತ್ತ ಬರುತ್ತಿದ್ದ ಬೋಯಿಂಗ್ 787 ಡ್ರೀಮ್‌ಲೈನರ್ ಶ್ರೇಣಿಯ 3 ವಿಮಾನಗಳು 48 ಗಂಟೆಗಳ ಅವಧಿಯಲ್ಲಿ ಯು ಟರ್ನ್! | ಒಟ್ಟಾರೆ 36 ಗಂಟೆಗಳ ಪ್ರಯಾಣದ ಬಳಿಕ ಹೊರಟ ಜಾಗಕ್ಕೇ ವಾಪಸ್: ಹಲವು ಗಂಟೆಗಳ ನಂತರ ವಿಳಂಬವಾಗಿ ಮರು ಪ್ರಯಾಣ

ಬೋಯಿಂಗ್ ಡ್ರೀಮ್‌ಲೈನರ್ ಭಾರತ ಪ್ರಯಾಣಿಕರ ದುಃಸ್ವಪ್ನ!

ದೆಹಲಿ: ಅಮೆರಿಕ ಮೂಲದ ವಿಮಾನ ತಯಾರಿಕಾ ಕಂಪನಿ 'ಬೋಯಿಂಗ್' ನಿರ್ಮಿಸಿದ ಬೋಯಿಂಗ್ 787 ಡ್ರೀಮ್‌ಲೈನರ್ ಶ್ರೇಣಿಯ ವಿಮಾನಗಳು ಭಾರತದತ್ತ ಪ್ರಯಾಣಿಸುವವರ ಪಾಲಿಗೆ ಶನಿವಾರ-ಸೋಮವಾರ ನಡುವಿನ 48ಗಂಟೆಗಳ ಅವಧಿಯಲ್ಲಿ ದುಃಸ್ವಪ್ನವಾಗಿ ಕಾಡಿದವು. ಒಟ್ಟು ಮೂರು ಬೋಯಿಂಗ್ 787 ಡ್ರೀಮ್‌ಲೈನರ್ ವಿಮಾನಗಳು ಹಲವು ಗಂಟೆಗಳ ಪ್ರಯಾಣದ ಬಳಿಕ ಮಾರ್ಗ ಮಧ್ಯೆಯೇ ಯುಟರ್ನ್ ತೆಗೆದುಕೊಂಡು ಹೊರಟ ಜಾಗಕ್ಕೆ ಮರಳಿದವು. ಪರಿಣಾಮ ಭಾರತದ ದೆಹಲಿ, ಹೈದರಾಬಾದ್, ಚೆನ್ನೈ ನಗರಗಳತ್ತ ಪ್ರಯಾಣಿಸುತ್ತಿದ್ದ ನೂರಾರು ಪ್ರಯಾಣಿಕರು ದುಪ್ಪಟ್ಟು ಸಮಯ ಸಂಚಾರದ ಕಷ್ಟ ಅನುಭವಿಸಬೇಕಾಯಿತು. ಹತ್ತಾರು ಗಂಟೆಗಳ ಬಳಿಕವಷ್ಟೇ ತಮ್ಮ ನೆಲೆ ತಲುಪಬೇಕಾಯಿತು. ಜೂ.12ರ ಮಧ್ಯಾಹ್ನ 1.38ರಲ್ಲಿ ಗುಜರಾತ್‌ನ ಅಹಮದಾಬಾದ್‌ನ ಸರದಾರ್ ವಲ್ಲಭಭಾಯಿ ಪಟೇಲ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಲಂಡನ್‌ನತ್ತ ಹೊರಟ ಏರ್ ಇಂಡಿಯ ವಿಮಾನಯಾನ ಸಂಸ್ಥೆಯ ಎಐ-171 ಬೋಯಿಂಗ್ 787 ಡ್ರೀಮ್‌ಲೈನರ್ ವಿಮಾನ ಸರಿಯಾಗಿ ಮೇಲಕ್ಕೆ ಚಿಮ್ಮಿ ವೇಗಪಡೆದುಕೊಳ್ಳಲಾಗದೇ ಇದ್ದುದಕ್ಕೆ ನಗರದ ಹೊರವಲಯದಲ್ಲಿನ ಬಿಜೆ ವೈದ್ಯಕೀಯ ಕಾಲೇಜು ಹಾಸ್ಟೆಲ್ ಕಟ್ಟಡದ ಮೇಲೆ ಪತನಗೊಂಡು 279 ಜನರ ಜೀವಬಲಿ ಪಡೆದ ದುರಂತದ ಬೆನ್ನಲ್ಲೇ ಬೋಯಿಂಗ್ ವಿಮಾನಗಳ ಈ ಯು ಟರ್ನ್ ಸಂಚಾರ ಭಾರತದ ಪ್ರಯಾಣಿಕರ ಪಾಲಿಗೆ ಮತ್ತಷ್ಟು ಭಯ ಉಂಟು ಮಾಡಿದೆ.

ಬೋಯಿಂಗ್ ಡ್ರೀಮ್‌ಲೈನರ್ 787-9 ಫ್ರಾಂಕ್‌ಫರ್ಟ್‌ಗೆ ವಾಪಸ್

ಹೈದರಾಬಾದ್: ಜರ್ಮನಿಯ ಫ್ರಾಂಕ್‌ಫರ್ಟ್‌ನಿಂದ ತೆಲಂಗಾಣದ ರಾಜಧಾನಿ ಹೈದರಾಬಾದ್‌ಗೆ ಬರುತ್ತಿದ್ದ ಜರ್ಮನಿಯ ಲುಫ್ತಾನ್ಸ್ ಏರ್‌ಲೈನ್ಸ್ ಕಂಪನಿಯ 'ಲುಫ್ತಾನ್ಸಾ ಎಲ್‌ಎಚ್ 752 ಬೋಯಿಂಗ್ 787-9 ಡ್ರೀಮ್‌ಲೈನರ್ ವಿಮಾನ ಕೆಲವು ಗಂಟೆಗಳ ಸಂಚಾರದ ನಂತರ ಬಾಂಬ್ ಬೆದರಿಕೆ ಎದುರಾಗಿದ್ದರಿಂದ ಫ್ರಾಂಕ್‌ಫರ್ಟ್ ವಿಮಾನ ನಿಲ್ದಾಣಕ್ಕೆ ವಾಪಸಾಗಿದೆ.

ಫ್ರಾಂಕ್‌ಫರ್ಟ್‌ನ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಭಾನುವಾರ ಮಧ್ಯಾಹ್ನ 2.15ಕ್ಕೆ(ಜರ್ಮನಿ ಕಾಲಮಾನ) ಹಾರಾಟ ಆರಂಭಿಸಿದ ಬೋಯಿಂಗ್ 787-9 ಡ್ರೀಮ್‌ಲೈನರ್ ವಿಮಾನ ಸೋಮವಾರ ನಸುಕಿನ 2.30ರ ವೇಳೆಗೆ (ಭಾರತದ ಕಾಲಮಾನ) ಹೈದರಾಬಾದ್‌ನ ರಾಜೀವ್‌ಗಾಂಧಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಇಳಿಯಬೇಕಿತ್ತು. ಆದರೆ, ಮಾರ್ಗ ಮಧ್ಯದಲ್ಲಿ ಬಾಂಬ್ ಬೆದರಿಕೆ ಎದುರಾಗಿದ್ದರಿಂದ ಯು ಟರ್ನ್ ತೆಗೆದುಕೊಂಡು ಭಾನುವಾರ ಸಂಜೆ ಫ್ರಾಂಕ್‌ಫರ್ಟ್ ವಿಮಾನ ನಿಲ್ದಾಣದಲ್ಲಿ ಲ್ಯಾಂಡ್ ಆಯಿತು.

ಹೈದರಾಬಾದ್ ವಿಮಾನ ನಿಲ್ದಾಣದ ಕಚೇರಿಗೆ ಭಾನುವಾರ ಸಂಜೆ 6 ಗಂಟೆಗೆ ಇ-ಮೇಲ್ ಬಂದಿದ್ದು, 'ಲುಫ್ತಾನ್ಸಾ ಎಲ್‌ಎಚ್752 ವಿಮಾನದಲ್ಲಿ ಬಾಂಬ್ ಇರಿಸಲಾಗಿದೆ' ಎಂಬ ಸಂದೇಶ ಅದರಲ್ಲಿತ್ತು. ತಕ್ಷಣವೇ ಸಭೆ ಸೇರಿದ ಬಾಂಬ್ ಬೆದರಿಕೆ ನಿರ್ವಹಣಾ ಸಮಿತಿಯ ಅಧಿಕಾರಿಗಳು, ತಂತ್ರಜ್ಞರು, 'ಎಸ್‌ಒಪಿ' ಮಾರ್ಗಸೂಚಿಗಳ ಪ್ರಕಾರವೇ ವಿಮಾನದ ಪೈಲಟ್‌ಗೆ ಮತ್ತು ಲುಫ್ತಾನ್ಸಾ ಏರ್‌ಲೈನ್ಸ್ ಸಂಸ್ಥೆ ಜತೆಗೆ ಮಾಹಿತಿ ಹಂಚಿಕೊಂಡರು. ಅಷ್ಟರಲ್ಲಾಗಲೇ ಅರ್ಧ ದಾರಿ ಕ್ರಮಿಸಿದ್ದ ವಿಮಾನವನ್ನು ಫ್ರಾಂಕ್‌ಫರ್ಟ್ ಕಡೆಗೆ ವಾಪಸಾಗುವಂತೆ ಸೂಚಿಸಲಾಯಿತು.

ಫ್ರಾಂಕ್‌ಫರ್ಟ್‌ನಿಂದ ಹೈದರಾಬಾದ್‌ಗೆ ವಿಮಾನ ಪ್ರಯಾಣ ಅವಧಿ 8.45 ಗಂಟೆಗಳಷ್ಟಿದೆ. ಅದಾಗಲೇ ಕೆಲವು ಗಂಟೆಗಳಷ್ಟು ಸಮಯ ಪ್ರಯಾಣಿಸಿದ್ದ ವಿಮಾನ ಫ್ರಾಂಕ್‌ಫರ್ಟ್‌ಗೆ ಮರಳಿದ್ದು, ಆಮೂಲಾಗ್ರ ತಪಾಸಣೆ ನಡೆಸಿದ (ಕೆಲವು ಗಂಟೆಗಳ) ಬಳಿಕ ವಿಮಾನದ ಮರು ಪ್ರಯಾಣ ಆರಂಭವಾಗಲಿದೆ. ಅಲ್ಲಿಯವರೆಗೂ ಪ್ರಯಾಣಿಕರಿಗೆ ಹೋಟೆಲ್ ಕೊಠಡಿ, ಊಟದ ವ್ಯವಸ್ಥೆ ಲುಫ್ತಾನ್ಸಾ ವಿಮಾನಯಾನ ಸಂಸ್ಥೆ ಮಾಡಿದೆ ಎಂದು ತಿಳಿದುಬಂದಿದೆ.

ಹೈದರಾಬಾದ್‌ನಲ್ಲಿಳಿಯಲು ಅನುಮತಿ ನಿರಾಕರಣೆ?

ಬಾಂಬ್ ಬೆದರಿಕೆ ಇಮೇಲ್ ವಿಚಾರ ತಿಳಿದಬಳಿಕವೂ ಲುಫ್ತಾನ್ಸ್ ಏರ್‌ವೇಸ್ ಸಂಸ್ಥೆ ವಿಮಾನದ ಪ್ರಯಾಣವನ್ನು ಮುಂದುವರಿಸಲು ನಿರ್ಧರಿಸಿತ್ತು. ಅದಾಗಲೇ ಅರ್ಧದಾರಿ ಕ್ರಮಿಸಿದ್ದರಿಂದ ವಾಪಸಾಗುವ ಬದಲು ಪ್ರಯಾಣ ಮುಂದುವರಿಸೋಣ ಎಂಬ ಸಂಸ್ಥೆಯ ನಿರ್ಧಾರ ಸರಿಯಾಗಿಯೇ ಇದ್ದಿತು. ಆದರೆ, ಬಾಂಬ್ ಬೆದರಿಕೆ ಹಿನ್ನೆಲೆ ಹೈದರಾಬಾದ್ ವಿಮಾನ ನಿಲ್ದಾಣದ ನಿಯಂತ್ರಣ ಕೇಂದ್ರದಿಂದ ಲ್ಯಾಂಡಿಂಗ್‌ಗೆ ಅನುಮತಿ ನಿರಾಕರಿಸಲಾಯಿತು. ಹಾಗಾಗಿ, ಲುಫ್ತಾನ್ಸಾ ಏರ್‌ಲೈನ್ಸ್‌ನ ಬೋಯಿಂಗ್ 787 ಡ್ರೀಮ್‌ಲೈನರ್ ವಿಮಾನ ಮರಳಿ ಫ್ರಾಂಕ್‌ಫರ್ಟ್‌ಗೆ ಪ್ರಯಾಣಿಸುವುದು ಅನಿವಾರ್ಯವಾಯಿತು ಎಂದು ವಿಮಾನದಲ್ಲಿದ್ದ ಪ್ರಯಾಣಿಕರು ಹೇಳಿದ್ದಾರೆ. ಫ್ರಾಂಕ್‌ಫರ್ಟ್‌ನಿಂದ ಅದಾಗಲೇ 2 ಗಂಟೆಗಳ ಕಾಲ ಸಂಚರಿಸಿದ್ದ ವಿಮಾನ ವಾಪಸ್ 2 ಗಂಟೆ ಸಂಚರಿಸಿ ಫ್ರಾಂಕ್‌ಫರ್ಟ್ ವಿಮಾನ ನಿಲ್ದಾಣದಲ್ಲಿ ಇಳಿ ಯಿತು. ಬಳಿಕ ತಪಾಸಣೆ ಎಂದು ಮತ್ತಷ್ಟು ಗಂಟೆ ವ್ಯಯವಾಯಿತು. ಪ್ರಯಾಣಿಕರೆಲ್ಲರೂ ಒಟ್ಟಾರೆ 8-10 ಗಂಟೆಗಳಷ್ಟು ತಡವಾಗಿ ಗುರಿ ತಲುಪು ವಂತಾಯಿತು. ಎಲ್ಲರ ಸಮಯವೂ ವ್ಯರ್ಥವಾಯಿತು ಎಂದು ಪ್ರಯಾಣಿಕರು ಬೇಸರ ವ್ಯಕ್ತಪಡಿಸಿದ್ದಾರೆ.

ಮುಖ್ಯಾಂಶಗಳು

1) ಜರ್ಮನಿಯ ಫ್ರಾಂಕ್‌ಫರ್ಟ್‌ನಿಂದ ಹೈದರಾಬಾದ್‌ಗೆ ಬರುತ್ತಿದ್ದ ವಿಮಾನದಲ್ಲಿ ಬಾಂಬ್ ಬೆದರಿಕೆ. ಹೈದರಾಬಾದ್‌ನಲ್ಲಿ ಇಳಿಯಲು ಅನುಮತಿ ನಿರಾಕರಣೆ. 4 ಗಂಟೆ ಪ್ರಯಾಣ ಬಳಿಕ ಫ್ರಾಂಕ್‌ಫರ್ಟ್‌ಗೆ ವಾಪಸ್.
2) ಲಂಡನ್‌ನಿಂದ ಚೆನ್ನೈಗೆ ಬರುತ್ತಿದ್ದ ಬ್ರಿಟಿಷ್ ಏರ್‌ವೇಸ್‌ನ ಬೋಯಿಂಗ್ ವಿಮಾನ ಲಂಡನ್‌ಗೆ ವಾಪಸ್
3) ದೆಹಲಿಗೆ ಬರುತ್ತಿದ್ದ ಏರ್ ಇಂಡಿಯ ವಿಮಾನ ತಾಂತ್ರಿಕ ದೋಷದ ಶಂಕೆಯಿಂದ ಹಾಂಕಾಂಗ್‌ಗೆ ವಾಪಸ್

ಹಾಂಕಾಂಗ್-ದೆಹಲಿ ಮಾರ್ಗದ ಏರ್ ಇಂಡಿಯ ವಿಮಾನ ವಾಪಸ್

ಮುಂಬೈ: ಹಾಂಕಾಂಗ್‌ನಿಂದ ಸೋಮವಾರ ಬೆಳಗ್ಗೆ 11.59ಕ್ಕೆ(ಹಾಂಕಾಂಗ್ ಸಮಯ) ಹೊರಟ ಏರ್ ಇಂಡಿಯ ವಿಮಾನಯಾನ ಸಂಸ್ಥೆಯ 'ಎಐ-315 ಬೋಯಿಂಗ್ 787 ಡ್ರೀಮ್‌ಲೈನರ್' ವಿಮಾನ ದೆಹಲಿಯತ್ತ ಪ್ರಯಾಣಿಸುತ್ತಿತ್ತು. ನಿಗದಿಯಂತೆ ವಿಮಾನ ದೆಹಲಿಯಲ್ಲಿ ಸೋಮ ವಾರ ಮಧ್ಯಾಹ್ನ 3.30 ಗಂಟೆಗೆ(ಭಾರತೀಯ ಕಾಲಮಾನ) ಲ್ಯಾಂಡ್ ಆಗಬೇಕಿತ್ತು. ಆದರೆ, ಮಾರ್ಗ ಮಧ್ಯದಲ್ಲಿ ವಿಮಾನದಲ್ಲಿ ತಾಂತ್ರಿಕ ದೋಷ ಉಂಟಾಗಿದೆ ಎಂಬ ಅನುಮಾನ ಪೈಲಟ್‌ಗೆ ಬಂದಿದ್ದರಿಂದ ವಿಮಾನ ಯು ಟರ್ನ್ ತೆಗೆದುಕೊಳ್ಳಬೇಕಾಗಿ ಬಂದಿತು. ವಿಮಾನ ಕೆಲವು ಗಂಟೆಗಳ ಹಾರಾಟ ಬಳಿಕ ಹಾಂಕಾಂಗ್ ವಿಮಾನ ನಿಲ್ದಾಣಕ್ಕೆ ವಾಪಸ್ ಆಗಿದ್ದು, ಮಧ್ಯಾಹ್ನ 3.20ರ(ಹಾಂಕಾಂಗ್ ಸಮಯ) ವೇಳೆಗೆ ಸುರಕ್ಷಿತವಾಗಿ ಇಳಿದಿದೆ, ಪ್ರಯಾಣಿಕರು ಸುರಕ್ಷಿತವಾಗಿದ್ದಾರೆ ಎಂದು ವಿಮಾನಯಾನ ಸಂಸ್ಥೆ ಅಧಿಕಾರಿಗಳು ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ. ತಾಂತ್ರಿಕ ದೋಷ ಪತ್ತೆಗಾಗಿ ವಿಮಾನದ ಸಮಗ್ರ ತಪಾಸಣೆ ನಡೆಸಲಾಯಿತು. ಬಳಿಕ 3.30 ಗಂಟೆಗಳಷ್ಟು ವಿಳಂಬವಾಗಿ(ಮಧ್ಯಾಹ್ನ 3.30ಕ್ಕೆ) ಎಐ 315 ಬೋಯಿಂಗ್ 787 ವಿಮಾನ ಡ್ರೀಮ್‌ಲೈನರ್ ಹಾಂಕಾಂಗ್ ವಿಮಾನ ನಿಲ್ದಾಣದಿಂದ ಪ್ರಯಾಣ ಆರಂಭಿಸಿದೆ. ಸಂಜೆ 7ರ(ದೆಹಲಿ ಸಮಯ) ವೇಳೆಗೆ ದೆಹಲಿಗೆ ಬಂದು ತಲುಪಿದೆ ಎಂದು ಅಧಿಕಾರಿಗಳು

ಲಂಡನ್‌ನಿಂದ ಚೆನ್ನೈಗೆ ಬರುತ್ತಿದ್ದ ವಿಮಾನ

ಬ್ರಿಟನ್ ಏರ್‌ವೇಸ್ ಬೋಯಿಂಗ್ 787 ವಿಮಾನ ಲಂಡನ್‌ಗೆ ವಾಪಸ್

ಚೆನ್ನೈ: ಲಂಡನ್‌ನ ಹೀಥ್ರೂ ವಿಮಾನ ನಿಲ್ದಾಣದಿಂದ ಶನಿವಾರ ಹೊರಟು ಚೆನ್ನೈನತ್ತ ಬರುತ್ತಿದ್ದ ಬ್ರಿಟಿಷ್ ಏರ್‌ವೇಸ್‌ನ 'ಬಿಎ 35 ಬೋಯಿಂಗ್ 787-8' ಡ್ರೀಮ್‌ಲೈನರ್ ಶ್ರೇಣಿಯ ವಿಮಾನ ಕೆಲವು ಗಂಟೆಗಳ ಸಂಚಾರದ ಬಳಿಕ ತಾಂತ್ರಿಕ ದೋಷ ಕಾಣಿಸಿಕೊಂಡಿದ್ದರಿಂದ ಯು ಟರ್ನ್ ತೆಗೆದುಕೊಂಡಿದೆ. ಹೊರಟಿದ್ದ ಜಾಗಕ್ಕೇ ಮರಳಿದೆ.

ಬೋಯಿಂಗ್ 787 ಡ್ರೀಮ್‌ಲೈನರ್ ವಿಮಾನ ಯು ಟರ್ನ್ ತೆಗೆದುಕೊಂಡ ಬಳಿಕವೂ ಸಮುದ್ರದ ಮೇಲೆಯೇ ಹಲವು ಬಾರಿ ಸುತ್ತು ಹಾಕಿದೆ. ಆ ಬಳಿಕ ಲಂಡನ್ ಹೀಥ್ರೂ ವಿಮಾನ ನಿಲ್ದಾಣದತ್ತ ಸಾಗಿ ಸುರಕ್ಷಿತವಾಗಿ ಲ್ಯಾಂಡ್ ಆಗಿದೆ. ವಿಮಾನದ ಸಿಬ್ಬಂದಿ ವರ್ಗದವರು ಮತ್ತು ಪ್ರಯಾಣಿಕರೆಲ್ಲರೂ ಸುರಕ್ಷಿತವಾಗಿದ್ದಾರೆ. ಪ್ರಯಾಣಿಕರನ್ನೆಲ್ಲಾ ವಿಮಾನದಿಂದ ಕೆಳಕ್ಕಿಳಿಸಿ ವಿಶ್ರಾಂತಿಗೆ ವ್ಯವಸ್ಥೆ ಮಾಡಿಕೊಡಲಾಗಿದೆ. ವಿಮಾನವನ್ನು ತಂತ್ರಜ್ಞರ ತಂಡ ಸಮಗ್ರವಾಗಿ ತಪಾಸಣೆ ಮಾಡಿ ದೋಷ ಸರಿಪಡಿಸಿದೆ. ನಂತರ 36 ನಿಮಿಷಗಳ ಬಳಿಕ ವಿಮಾನ ಮತ್ತೆ ಸಂಚಾರ ಆರಂಭಿಸಿದೆ ಎಂದು ಹೀಥ್ರೂ ವಿಮಾನ ನಿಲ್ದಾಣದ ಅಧಿಕಾರಿಗಳು ತಿಳಿಸಿರುವುದಾಗಿ 'ಫ್ಲೈಟ್‌ರಾಡಾರ್ 24' ಮಾಧ್ಯಮ ವರದಿ ಮಾಡಿದೆ.

ರೆಕ್ಕೆಗಳಲ್ಲಿ ದೋಷ!: ಬೋಯಿಂಗ್ 787-8 ವಿಮಾನದ ರೆಕ್ಕೆಗಳಲ್ಲಿ ಮೇಲೆ-ಕೆಳಕ್ಕೆ ಬದಲಾಗುವ ಪ್ರಕ್ರಿಯೆಯಲ್ಲಿ ದೋಷ ಕಂಡುಬಂದಿದ್ದರಿಂದ ಲಂಡನ್‌ನಿಂದ ಚೆನ್ನೈಗೆ ತೆರಳಬೇಕಿದ್ದ ವಿಮಾನ ಮರಳಿ ಹೀಥ್ರೂ ವಿಮಾನ ನಿಲ್ದಾಣದಲ್ಲಿ ಲ್ಯಾಂಡ್ ಆಗಿದೆ ಎಂದು ಜಾಲತಾಣಗಳಲ್ಲಿ 'ನಕ್ಷೆ' ಸಮೇತ ಪ್ರಕಟವಾಗಿದೆ. ಆದರೆ, ಬ್ರಿಟಿಷ್ ಏರ್‌ಲೈನ್ಸ್ ವಿಮಾನಯಾನ ಸಂಸ್ಥೆ ಈ ಬಗ್ಗೆ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ಲುಫ್ತಾನ್ಸ್ ಏರ್‌ಲೈನ್ ವಿಮಾನದಲ್ಲಿ ಜೂ.15ರ ಪ್ರಯಾಣ ಸುಖಕರವಾಗಿಯೇ ಇದ್ದಿತು. ಆದರೆ, ಬಾಂಬ್ ಬೆದರಿಕೆ ಎದುರಾಗಿ ಪ್ರಯಾಣಿಕರು ಹೈದರಾಬಾದ್ ತಲುಪಲು ಆಗಲಿಲ್ಲ. ಸುಮಾರು 4 ಗಂಟೆ ಕಾಲ ಪ್ರಯಾಣಿಸಿದ್ದ ಬೋಯಿಂಗ್ 787 ವಿಮಾನ ತಿರುವು ತೆಗೆದುಕೊಂಡು ಫ್ರಾಂಕ್‌ಫರ್ಟ್‌ಗೆ ಮರಳಿತು. ವಿಮಾನಯಾನ ಸಂಸ್ಥೆ ವಾಸ್ತವ್ಯಕ್ಕೆ ಮತ್ತು ಆಹಾರಕ್ಕೆ ವ್ಯವಸ್ಥೆ ಮಾಡಿಕೊಟ್ಟಿದ್ದಾರೆ. ಮರುದಿನ ಬೆಳಗ್ಗೆ ಮರು ಪ್ರಯಾಣ ಕೈಗೊಳ್ಳಲಾಗುವುದೆಂದು ತಿಳಿಸಿದ್ದಾರೆಂದು ಪ್ರಯಾಣಿಕರೊಬ್ಬರು 'ಎಕ್ಸ್' ಸಂದೇಶದಲ್ಲಿ ಬರೆದಿದ್ದಾರೆ.

ಹೆಲಿಕಾಪ್ಟರ್ ಸಂಸ್ಥೆ ವಿರುದ್ಧ ಎಫ್‌ಐಆರ್

ಡೆಹರಾಡೂನ್: ಕೇದಾರನಾಥ ಬಳಿ 2 ವರ್ಷದ ಮಗು, ಪೈಲಟ್ ಸೇರಿದಂತೆ 7 ಜನರ ಸಾವಿಗೆ ಕಾರಣವಾದ ಹೆಲಿಕಾಪ್ಟರ್ ಪತನ ಪ್ರಕರಣದಲ್ಲಿ ಖಾಸಗಿ ಹೆಲಿಕಾಪ್ಟರ್ ಸಂಸ್ಥೆ ವಿರುದ್ಧ ಉತ್ತರಾಖಂಡ ರಾಜ್ಯ ಪೊಲೀಸರು ಸೋಮವಾರ ಎಫ್‌ಐಆರ್ ದಾಖಲಿಸಿದ್ದಾರೆ.

ಹೆಲಿಕಾಪ್ಟರ್ ಸೇವಾ ನಿರ್ವಹಣಾ ಸಂಸ್ಥೆ ಆರ್ಯನ್ ಏವಿಯೇಷನ್ ಪ್ರೈ.ಲಿ. ವಿರುದ್ಧ ನಿರ್ಲಕ್ಷ್ಯ ಆರೋಪದಡಿ ಅಪರಾಧ ಪ್ರಕರಣ ದಾಖಲಾಗಿದೆ. ಆರ್ಯನ್ ಏವಿಯೇಷನ್‌ನ ಕಾರ್ಯನಿರ್ವಾಹಕ ವ್ಯವಸ್ಥಾಪಕ ಕೌಶಿಕ್ ಪಾಠಕ್ ಮತ್ತು ವ್ಯವಸ್ಥಾಪಕ ವಿಕಾಸ್ ತೋಮರ್ ವಿರುದ್ಧ ಪಿಎಸ್‌ಐ ರಾಜೀವ್ ನಖೋಲಿಯಾ ನೀಡಿದ ದೂರಿನ ಆಧಾರ ಸೋನ್‌ಪ್ರಯಾಗ್ ಪೊಲೀಸ್ ಠಾಣೆಯಲ್ಲಿ ಬಿಎನ್‌ಎಸ್ ಮತ್ತು ನಾಗರಿಕ ವಿಮಾನಯಾನ ಕಾಯ್ದೆ-1934ರ ಸೆಕ್ಷನ್ 10ರಡಿ ಪ್ರಕರಣ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಪ್ರಧಾನಿ ನರೇಂದ್ರ ಮೋದಿಗೆ ಸೈಪ್ರಸ್ ಅತ್ಯುನ್ನತ ನಾಗರಿಕ ಗೌರವ

ನಿಕೋಸಿಯಾ: ರಿಪಬ್ಲಿಕ್ ಆಫ್ ಸೈಪ್ರಸ್ ದೇಶದ ಪ್ರವಾಸದಲ್ಲಿರುವ ಪ್ರಧಾನಿ ನರೇಂದ್ರ ಮೋದಿ ಅವರಿಗೆ ದೇಶದ ಅತ್ಯುನ್ನತ ನಾಗರಿಕ ಗೌರವವಾದ 'ಗ್ರ್ಯಾಂಡ್ ಕ್ರಾಸ್ ಆಫ್ ದಿ ಆರ್ಡರ್ ಆಫ್ ಮಕರಿಯೋಸ್-3 ಆಫ್ ಸೈಪ್ರಸ್' ಸೋಮವಾರ ಪ್ರದಾನ ಮಾಡಲಾಯಿತು.

ಸೈಪ್ರಸ್ ಅಧ್ಯಕ್ಷ ನಿಕೋಸ್ ಕ್ರಿಸ್ಟೋಡೌಲೈಡ್ಸ್ ಅವರು ಪ್ರಧಾನಿ ಮೋದಿ ಅವರಿಗೆ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಿದರು. ಭಾರತದ ಮಿತ್ರ ದೇಶ ಸೈಪ್ರಸ್‌ನ ಸರಕಾರ ಪ್ರದಾನ ಮಾಡಿದ ಈ ಗೌರವವನ್ನು ನಮ್ರತೆ ಮತ್ತು ಕೃತಜ್ಞತೆಯಿಂದ ಸ್ವೀಕರಿಸುತ್ತೇನೆ. ಈ ಪ್ರಶಸ್ತಿಯನ್ನು ಭಾರತದ 140 ಕೋಟಿ ಜನರಿಗೆ ಮತ್ತು ಸೈಪ್ರಸ್ ದೇಶ ತೋರಿದ ಸ್ನೇಹಕ್ಕೆ ಅರ್ಪಿಸುವೆ ಎಂದು ಪ್ರಧಾನಿ ಮೋದಿ ಪ್ರಶಸ್ತಿ ಸ್ವೀಕಾರ ನಂತರ ಪ್ರತಿಕ್ರಿಯಿಸಿದ್ದಾರೆ. ದೇಶದ ಪ್ರಥಮ ಅಧ್ಯಕ್ಷರಾದ ಆರ್ಚ್‌ಬಿಷಪ್ ಮಕರಿಯೋಸ್-3 ಅವರ ಹೆಸರಿನಲ್ಲಿ ನೀಡುವ ಸೈಪ್ರಸ್ ದೇಶದ ಅತ್ಯುನ್ನತ ನಾಗರಿಕ ಗೌರವವಾಗಿದೆ.

ಬಳಿಕ ದ್ವಿಪಕ್ಷೀಯ ಸಭೆ ನಡೆಸಿದ ಪ್ರಧಾನಿ ನರೇಂದ್ರ ಮೋದಿ ಹಾಗೂ ಸೈಪ್ರಸ್ ಅಧ್ಯಕ್ಷ ನಿಕೋಸ್ ಕ್ರಿಸ್ಟೋಡೌಲಿಡೆಸ್, ರಷ್ಯಾ-ಉಕ್ರೇನ್ ಮತ್ತು ಇಸ್ರೇಲ್-ಇರಾನ್ ನಡುವಿನ ಸಮರದ ಬಗ್ಗೆ ಕಳವಳ ವ್ಯಕ್ತಪಡಿಸಿದರು. 'ಇದು ಯುದ್ಧದ ಯುಗವಲ್ಲ' ಎಂದು ಉಭಯ ನಾಯಕರು ಸಂದೇಶ ನೀಡಿದರು. ಮಾತುಕತೆ ಮತ್ತು ಸ್ಥಿರತೆ ಮರುಸ್ಥಾಪನೆ ಮೂಲಕ ಪರಿಹಾರ ಕಂಡುಕೊಳ್ಳುವುದು ಮಾನವೀಯ ನಡೆಯಾಗಿದೆ ಎಂದರು.

ಮಾನಸ ಸರೋವರ ಯಾತ್ರೆಗೆ ತಂಡ ಸಿದ್ಧ

ಗ್ಯಾಂಗ್ಟಕ್: ಹಿಂದೂಗಳ ಪಾಲಿನ ಪವಿತ್ರ ಯಾತ್ರೆಯಾದ ಮಾನಸ ಸರೋವರ ಯಾತ್ರೆಗೆ ಕ್ಷಣಗಣನೆ ಆರಂಭಗೊಂಡಿದೆ. 2020ರಲ್ಲಿ ಪೂರ್ವ ಲಡಾಕ್ ಗಡಿಯಲ್ಲಿ ಭಾರತ-ಚೀನಾ ಯೋಧರ ನಡುವೆ ಸಂಘರ್ಷ ಉಂಟಾದ ಬಳಿಕ ಸ್ಥಗಿತಗೊಂಡಿದ್ದ ಕೈಲಾಸ ಮಾನಸ ಸರೋವರ ಯಾತ್ರೆ 6 ವರ್ಷಗಳ ಬಳಿಕ ಮರಳಿ ಆಯೋಜನೆಗೊಂಡಿದೆ. ಬಲು ಕಠಿಣ ಮಾರ್ಗದ ಈ ಯಾತ್ರೆಗೆ ಸಜ್ಜಾಗಿರುವ 36 ಯಾತ್ರಾರ್ಥಿಗಳ ಮೊದಲ ತಂಡ ಈಗಾಗಲೇ ಸಿಕ್ಕಿಂ ರಾಜ್ಯದ ಗ್ಯಾಂಗ್ಟಕ್ ಶಿಬಿರಕ್ಕೆ ಬಂದಿದೆ. ಯಾತ್ರಾರ್ಥಿಗಳ ತಂಡದಲ್ಲಿ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಇಬ್ಬರು ಅಧಿಕಾರಿಗಳೂ ಇದ್ದಾರೆ ಎಂದು ಅಧಿಕಾರಿಗಳು ಸುದ್ದಿಸಂಸ್ಥೆಗೆ ಸೋಮವಾರ ತಿಳಿಸಿದ್ದಾರೆ. ಯಾತ್ರಾರ್ಥಿಗಳ ಮೊದಲ ತಂಡ ಭಾನುವಾರವೇ ಗ್ಯಾಂಗ್ಟಕ್ ಶಿಬಿರಕ್ಕೆ ಬಂದು ಸೇರಿದ್ದು, ಯಾತ್ರೆ ಆರಂಭಕ್ಕೂ ಮೊದಲು ಅಗತ್ಯ ವಿಶ್ರಾಂತಿ ಪಡೆದು ಕೊಳ್ಳುತ್ತಿದೆ. ಯಾತ್ರಾರ್ಥಿಗಳ ಮೊದಲ ತಂಡ ಗ್ಯಾಂಗ್ಟಕ್‌ನಿಂದ 27 ಕಿಮೀ ದೂರದಲ್ಲಿನ 17 ಮೈಲ್ ಪ್ರದೇಶಕ್ಕೆ ಸೋಮವಾರ ಪ್ರಯಾಣ ಬೆಳೆಸಲಿದೆ. ಜೂ.20 ರಂದು ತಂಡ ಭಾರತ-ಚೀನಾದ ಗಡಿ ದಾಟಲಿದೆ. 2025ರ ಕೈಲಾಸ ಮಾನಸ ಸರೋವರ ಯಾತ್ರೆಗೆ 750 ಜನರು ಆಯ್ಕೆಯಾಗಿದ್ದಾರೆ. ಇವರಲ್ಲಿ 500 ಮಂದಿ 10 ತಂಡಗಳಾಗಿ ಸಿಕ್ಕಿಂನ ನಾಥುಲಾ ಪಾಸ್ ಮಾರ್ಗವಾಗಿ ಮಾನಸ ಸರೋವರ ತಲುಪಿದರೆ, 250 ಜನರ ತಂಡ ಉತ್ತರಾಖಂಡದ ಲಿಪುಲೇಖ್ ಪಾಸ್ ಮೂಲಕ ತೆರಳಲಿದೆ ಎಂದು ಅಧಿಕಾರಿಗಳು ವಿವರ ನೀಡಿದ್ದಾರೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮುಖ್ಯ ಆಯುಕ್ತರ ಕಚೇರಿ, ಅನೆಕ್ಸ್ ಕಟ್ಟಡ-1, ಎನ್.ಆರ್. ಚೌಕ, ಬೆಂಗಳೂರು-560002.

No: BBMP/C.Comm/PSR(G)/629/2025-26 FORM – III (See Sub-rule (3) of rule-3) Date: 16.06.2025

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ನಗರ ಮತ್ತು ಪಟ್ಟಣ **ಯೋಜನಾ ಕಾಯಿದೆ 1961ರ ಸೆಕ್ಷನ್ 14-ಬಿ ಪ್ರದತ್ತವಾದ ಹಕ್ಕನ್ನು ಚಲಾಯಿಸುತ್ತ, ಮಾಸ್ಟರ್ ಪ್ಲಾನ್-2015ರ ಪ್ರಸ್ತಾವನೆಯನ್ನು ಅನುಷ್ಠಾನಗೊಳಿಸಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿರುವ ಪಣತ್ತೂರು ಬಲಗೆರೆ ರಸ್ತೆಯನ್ನು ಪಣತ್ತೂರು RUB ಯಿಂದ ವರ್ತೂರು ಗುಂಜೂರು ರಸ್ತೆಯವರೆಗೆ 18.00 ಮೀಟರ್ ಅಗಲದ ರಸ್ತೆಯನ್ನು ಅಗಲೀಕರಣ ಮತ್ತು ಅಗಲೀಕರಣ** ರಚನೆಗಾಗಿ ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಇವರಿಗೆ ಈ ಕೆಳಗಿನ ಷೆಡ್ಯೂಲ್‌ನಲ್ಲಿ ತಿಳಿಸಲಾದ ಪ್ರದೇಶಗಳ ಅವಶ್ಯಕವಿರುತ್ತದೆ.

ಈ ಕೆಳಗಿನ ಜಮೀನು ಕಟ್ಟಡದ ಮಾಲೀಕರು ನ್ಯಾಯೋಚಿತ ಪರಿಹಾರ ಮತ್ತು ಭೂಸ್ವಾಧೀನ, ಪುನರ್ವಸತಿ ಮತ್ತು ರೀಸೆಟಲ್‌ಮೆಂಟ್ ಪಾರದರ್ಶಕ ಕಾಯಿದೆ 2013ರಂತೆ ವಿತ್ತೀಯ ಪರಿಹಾರದ ಬದಲಾಗಿ ಅಭಿವೃದ್ಧಿ ಹಕ್ಕುಗಳನ್ನು ಮೌಲ್ಯವನ್ನು ಪ್ರಾಧಿಕಾರವು ಭೂಮಿಯನ್ನು ನೀಡಿದ, ಒಪ್ಪಿಸಿದ ದುಪ್ಪಟ್ಟು ಮತ್ತು ನೀಡಿದ/ ಒಪ್ಪಿಸಿದ ಕಟ್ಟಡ ಪ್ರದೇಶದ ಎರಡರಷ್ಟು ಹಾಗೂ ನೀಡಿದ/ಒಪ್ಪಿಸಿದ ಕಟ್ಟಡದ ಪ್ರದೇಶದ ಅಂದಾಜು ಮೌಲ್ಯವನ್ನು (ಲೋಕೋಪಯೋಗಿ ಇಲಾಖೆ ಮಾನದಂಡಗಳಂತೆ) ಭೂಮಿಯ ಪೈಕಿ ಕಟ್ಟಡ ನಿರ್ಮಿಸಿರುವ ಭಾಗದ ಮಾರುಕಟ್ಟೆ ಮೌಲ್ಯದಂತೆ ವಿಂಗಡಿಸಿ ನೀಡಲಾಗುವುದು.

ಈ ನಿಟ್ಟಿನಲ್ಲಿ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ಸಾರ್ವಜನಿಕ ಉದ್ದೇಶಕ್ಕಾಗಿ ಅವಶ್ಯಕವಿರುವ ಸ್ವತ್ತು ಮತ್ತು ಸ್ವತ್ತಿನ ಮಾಲೀಕರು ಹಾಗೂ ಆಸಕ್ತ ವ್ಯಕ್ತಿಗಳಿಗೆ ವಿತ್ತೀಯ ಪರಿಹಾರ: ಬದಲಿಗೆ ಅಭಿವೃದ್ಧಿ ಹಕ್ಕುಗಳ ಪ್ರಮಾಣ ಪತ್ರಗಳನ್ನು (ಡಿಆರ್‌ಸಿಗಳು) ವಿತರಿಸಲಾಗುವುದು, ಯಾವುದೇ ಆಕ್ಷೇಪಣೆಗಳು ಮತ್ತು ಸಲಹೆಗಳಿದ್ದಲ್ಲಿ ವಿಶೇಷ ಭೂಸ್ವಾಧೀನ ಅಧಿಕಾರಿ, ಉಪ ಆಯುಕ್ತರವರ ಕಚೇರಿ, (ಭೂಸ್ವಾಧೀನ ಮತ್ತು ಟಿಡಿಆರ್), ಕೇಂದ್ರ ಕಚೇರಿ, ಬೃ.ಬೆಂ.ಮ.ಪಾಲಿಕೆ ಇವರನ್ನು ಈ ಪ್ರಕಟಣೆಯ ದಿನಾಂಕದಿಂದ 30 ದಿನಗಳೊಳಗಾಗಿ ಸಂಪರ್ಕಿಸಬಹುದು.

ಡಿಆರ್‌ಸಿ ನೀಡಬೇಕಾದ ಭೂಮಿ / ಕಟ್ಟಡದ ಪ್ರದೇಶ ಮತ್ತು ಭೂ ಮಾಲೀಕರ ಪಟ್ಟಿ.

ಜಿಲ್ಲೆಯ ಹೆಸರು : **ಬೆಂಗಳೂರು ನಗರ** ತಾಲ್ಲೂಕಿನ ಹೆಸರು : **ಬೆಂಗಳೂರು ಪೂರ್ವ** ಗ್ರಾಮದ ಹೆಸರು : **ಬಲಗೆರೆ**

Sy. No / Khatha no.	Type of land		Nature of Land	Dimension of the land / plot and extent in Sq.m	Boundaries of the land / plot				Building details			Present activity on land/ Building (Specify Specific activity such as shop, office, factory, apartment, Individual house etc.,	Market (guidelines) value of the land per Sq.m	Name and address of the owner of the plot/ land for which DRC is to be issued
	Vacant	Built up	Agriculture Converted Undeveloped Approved layout / developed land Building Site	Dimension Extent	East	West	North	South	Extent in Sq.m	Type of Construction and No. of floors	Floor Area Ratio			
Sy No.78	Vacant land		Converted Land	140.63	Sy No.62/6	Sy No.69	Remaining Portion of Sy No.78	Existing Road	None	None	None	Vacant	45,000/-	Smt.S.R Koushalya Reddy W/o S.R Gopalkrishna Reddy. at Residing Maragondanahalli Village, Bidarahalli Hobli, Bangalore East Taluk, Bangalore.

Note: Market guideline value of this property is considered subject to conditions of payment of fee as per Government Order No:ನಅಇ 137 ಎಂಎನ್‌ಯು 2024 (E), ದಿನಾಂಕ:09.09.2024 and as per the Circular No:ಆಯುಕ್ತರು/ಪಿ.ಎಸ್.ಆರ್/ಜಿ/1802/2024-25, ದಿನಾಂಕ:21.09.2024.

Objections and suggestions made be submitted at the address specified below:

ವಿಭಾಗ / ಉಪ ವಿಭಾಗ / ಶಾಖಾ ಕಚೇರಿಯ ಹೆಸರು ಮತ್ತು ವಿಳಾಸ
ಉಪ ಆಯುಕ್ತರು, ಭೂ ಸ್ವಾಧೀನ ಮತ್ತು ಟಿಡಿಆರ್, 2ನೇ ಮಹಡಿ, ಕೊಠಡಿ ಸಂಖ್ಯೆ: 208, ಅನೆಕ್ಸ್ ಕಟ್ಟಡ-3, ಎನ್.ಆರ್. ಚೌಕ, ಬಿಬಿಎಂಪಿ, ಬೆಂಗಳೂರು-560002.

ಸಹಿ/-
ಮುಖ್ಯ ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಇಂಜಿನಿಯರ್ ಪಂಚಾಯತ್ ರಾಜ್ ಇಂ.ವಿಭಾಗ ಮಡಿಕೇರಿ

..ಇಂ/ಪಂ.ರಾ.ಇಂ.ವಿ-ಮಡಿಕೇರಿ/ಜೆ.ಇ/ಟೆಂಡರ್‌ಪ್ರಕಟಣೆ ಸಂಖ್ಯೆ:/05/2025-26 ದಿನಾಂಕ:13-06-2025

"ಟೆಂಡರ್ ಪ್ರಕಟಣೆ " (ಕೆ.ಪಿ.ಪಿ.ಪಿ ಮಖಾಂತರ ಮಾತ್ರ)

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಈ ಕೆಳಗಿನ ಕಾಮಗಾರಿಗಳಿಗೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್ಮೆಂಟ್ ವೇದಿಕೆ ಪದ್ಧತಿಯಲ್ಲಿ ಕೆಡಬ್ಲ್ಯೂ ನಿಬಂಧನೆಗೊಳಪಟ್ಟು ಟೆಂಡರ್ ಕರೆಯಲಾಗಿದೆ. ಅರ್ಹ ಗುತ್ತಿಗೆದಾರರು ಟೆಂಡರ್‌ನಲ್ಲಿ ಭಾಗವಹಿಸಲು ಕೋರಿದೆ.

ಕ್ರ.ಸಂ	ಕಾಮಗಾರಿಯ ಹೆಸರು	ಮೀಸಲಾತಿ	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)
1	ಪೊನ್ನಂಪೇಟೆ ತಾಲೂಕು ಗೋಣಿಕೊಪ್ಪ ಗ್ರಾ.ಪಂ. ಸರಕಾರಿ ಪ್ರಾಥಮಿಕ ಶಾಲೆ ಗೋಣಿಕೊಪ್ಪ ಕೊಠಡಿಗಳ ದುರಸ್ಥಿ ಕಾಮಗಾರಿ	OTHER	6.00
2	ಸೋಮವಾರಪೇಟೆ ತಾಲೂಕು ಚೆಟ್ಟಳ್ಳಿ ಗ್ರಾ.ಪಂ. ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಚೆಟ್ಟಳ್ಳಿ ಕೊಠಡಿಗಳ ದುರಸ್ಥಿ ಕಾಮಗಾರಿ	OTHER	15.00
3	ಮಡಿಕೇರಿ ತಾ// ಕರಿಕೆ ಗ್ರಾಮದ ಪಳ್ಳಿಕಳ ದಿಂದ ಶಾಸ್ತಾವು, 13 ನೇ ಮೈಲು ಪ. ಪಂಗಡ ಕಾಲೋನಿ ಸಂಪರ್ಕ ರಸ್ತೆ ಸರಪಳಿ 0.030ಕಿ.ಮೀ.; ರಲ್ಲಿ ಹಾನಿಗೊಂಡ ಸೇತುವೆ ಮರು- ನಿರ್ಮಾಣ	OTHER	56.00

1).ಭರ್ತಿಮಾಡಿದ ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ: 14/07/2025 ಸಂಜೆ 5:00 2) ಬಿಡ್ಡ್ ತೆರೆಯುವ ದಿನಾಂಕ: 15/07/2025 ಬೆಳಗ್ಗೆ 9:00 ಗಂಟೆ ನಂತರ. 3) ಟೆಂಡರ್ ಪ್ರಕಟಣೆ ಷರತ್ತು ಹಾಗೂ ಕಾಮಗಾರಿಗಳ ವಿವರಗಳನ್ನು ವಿಭಾಗ ಕಛೇರಿಯಲ್ಲಿ ಅಥವಾ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ವೆಬ್ ಸೈಟ್ (www.kppp.karnataka.gov.in) ನಲ್ಲಿ ಪಡೆಯಬಹುದಾಗಿದೆ.

ಸಹಿ/-
ಕಾರ್ಯಪಾಲಕ ಇಂಜಿನಿಯರ್
ಪಂಚಾಯತ್ ರಾಜ್ ಇಂ.ವಿಭಾಗ
ಮಡಿಕೇರಿ

ಕಾಲುವೆಯಲ್ಲಿ ರೂಪದರ್ಶಿ ಶವ

ಚಂಡೀಗಢ: ಹರಿಯಾಣ ಮೂಲದ ರೂಪದರ್ಶಿ ಯುವತಿಯ ಶವ ಸೋನಿಪತ್ ಕಾಲುವೆಯಲ್ಲಿ ಸೋಮವಾರ ಪತ್ತೆಯಾಗಿದೆ. ಹರಿಯಾಣವಿ ಸಂಗೀತ ಉದ್ಯಮದಲ್ಲಿ ರೂಪದರ್ಶಿಯಾಗಿದ್ದ ಶೀತಲ್‌ಳನ್ನು ಕತ್ತು ಸೀಳಿ ಕೊಲೆ ಮಾಡಲಾಗಿದೆ. ಸೋದರಿ ನೇಹಾ ಜತೆ ಪಾಣಿಪತ್‌ನಲ್ಲಿ ವಾಸಿಸುತ್ತಿದ್ದ ಶೀತಲ್, ಶನಿವಾರ ಶೂಟಿಂಗ್‌ಗೆಂದು ಅಹರ್ ಗ್ರಾಮಕ್ಕೆ ತೆರಳಿದ್ದಳು. ಬಳಿಕ ಮರಳಿ ಮನೆಗೆ ಬರದಿದ್ದರಿಂದ ಸೋದರಿ ಪೊಲೀಸರಿಗೆ ದೂರು ನೀಡಿದ್ದರು. ತನಿಖೆ ಆರಂಭಿಸಿ ಪೊಲೀಸರಿಗೆ ಖಾಂಡಾ ಗ್ರಾಮ ಬಳಿ ಕಾಲುವೆಯಲ್ಲಿ ಶೀತಲ್ ಶವ ಕಂಡುಬಂದಿದೆ. ಕೊಲೆ ಆರೋಪಿಗಳಿಗಾಗಿ ಶೋಧ ನಡೆದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ಮೆಟ್ರೋ ಸಿಗ್ನಲಿಂಗ್ ಸಮಸ್ಯೆ: ಪರದಾಟ

ಬೆಂಗಳೂರು: ನಮ್ಮ ಮೆಟ್ರೋದ ನೇರಳೆ ಮಾರ್ಗದಲ್ಲಿ ಸೋಮವಾರ ಸಂಚಾರ ವ್ಯತ್ಯಯವುಂಟಾಗಿದ್ದು, ಪರಿಣಾಮ ಕೆಲಸ, ಕಚೇರಿ, ಕಾಲೇಜುಗಳಿಗೆ ಹೊರಟವರು ಸಮಸ್ಯೆ ಎದುರಿಸಬೇಕಾಗಿ ಬಂದಿತ್ತು. ಪೀಕ್ ಅವರ್‌ನಲ್ಲೇ ಮೆಟ್ರೋ ಸಂಚಾರದಲ್ಲಿ ವ್ಯತ್ಯಯವುಂಟಾಗಿದ್ದರಿಂದ ನಮ್ಮ ಮೆಟ್ರೋ ಸಂಚಾರದ ಮೇಲೆ ಅವಲಂಬಿತರಾಗಿರುವ ಜನರು ಪೇಚಾಡುವಂತಾಗಿತ್ತು. ಮೆಜೆಸ್ಟಿಕ್ ಮೆಟ್ರೋ ನಿಲ್ದಾಣ ಹಸಿರು ಹಾಗೂ ನೇರಳೆ ಬಣ್ಣದ ಇಂಟರ್‌ಚೇಂಜ್ ನಿಲ್ದಾಣವೂ ಆಗಿದ್ದು, ನಿಲ್ದಾಣದಲ್ಲಿ ಭಾರಿ ಜನ ದಟ್ಟಣೆ ಉಂಟಾಗಿತ್ತು. ನಿಮಿಷ ನಿಮಿಷಕ್ಕೂ ನೂರಾರು ಪ್ರಯಾಣಿಕರ ದಟ್ಟಣೆ ಉಂಟಾಗಿ ಮೆಜೆಸ್ಟಿಕ್ ನಿಲ್ದಾಣದಲ್ಲಿ ಕಾಲಿಡಲೂ ಸಾಧ್ಯವಾಗದ ಸ್ಥಿತಿ ನಿರ್ಮಾಣವಾಗಿದೆ ಎಂದು ತಿಳಿದುಬಂದಿದೆ.

ಸಿಗ್ನಲಿಂಗ್ ಸಮಸ್ಯೆಯಿಂದಾಗಿ ಸಂಚಾರದಲ್ಲಿ ವ್ಯತ್ಯಯ ಎದುರಾಗಿತ್ತು. ನೇರಳೆ ಮಾರ್ಗದಲ್ಲಿ ಸಿಗ್ನಲ್ ಸಮಸ್ಯೆಯಾಗಿತ್ತು. ಇದೀಗ ಎಲ್ಲವೂ ಸರಿ ಹೋಗಿದ್ದು ಸಹಜ ಸ್ಥಿತಿಗೆ ಮರಳಿದೆ. ಇದೀಗ ಮೆಟ್ರೋ ಕಾರ್ಯಾಚರಣೆ ಎಂದಿನಂತೆ ಇದೆ ಎಂದು ಮೆಟ್ರೋ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ವಿಮಾನ ದುರಂತದಲ್ಲಿ ರಾಜಕೀಯ ಮಾಡಲ್ಲ

ಬೆಂಗಳೂರು: ನಾವು ಅಹಮದಾಬಾದ್ ವಿಮಾನ ದುರಂತದ ಬಗ್ಗೆ ರಾಜಕೀಯ ಮಾಡುವುದಿಲ್ಲ. ಹೆಣದ ಮೇಲೆ ರಾಜಕೀಯ ಮಾಡುವುದು ಏನಿದ್ದರೂ ಬಿಜೆಪಿ ಹಾಗೂ ಜೆಡಿಎಸ್ ಕೆಲಸ. ನಾವು ಅವರಂತೆ ನೀಚ ರಾಜಕೀಯ ಮಾಡುವುದಿಲ್ಲ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಕಿಡಿಕಾರಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅಹಮದಾಬಾದ್ ವಿಮಾನ ದುರಂತ ದೇಶದಲ್ಲಿ ಮಾತ್ರವಲ್ಲ ಪ್ರಪಂಚದಲ್ಲಿ ಎಲ್ಲಿಯೂ ನಡೆಯಬಾರದು. ಈ ದುರಂತದಲ್ಲಿ ಅನೇಕರು ಸುಟ್ಟುಹೋಗಿದ್ದಾರೆ. ಆ ದುರಂತದ ಸ್ಥಳ ನೋಡಿದರೆ ಆಘಾತವಾಗುತ್ತದೆ. ಅಕಸ್ಮಾತ್ 500 ಮೀಟರ್ ಮುಂದಕ್ಕೆ ಹೋಗಿ ವಿಮಾನ ಅಪ್ಪಳಿಸಿದ್ದರೂ ಸಾವಿರಾರು ಮಂದಿಯ ಜೀವಹಾನಿಯಾಗುತ್ತಿತ್ತು. ಈಗ ವೈದ್ಯಕೀಯ ಹಾಸ್ಟೆಲ್ ವಿದ್ಯಾರ್ಥಿಗಳು ಗಾಯಗೊಂಡಿದ್ದಾರೆ. ಕೆಲವು ವಿದ್ಯಾರ್ಥಿಗಳಿಗೆ ಮಾನಸಿಕ ಆಘಾತವಾಗಿದೆ. ಮಲ್ಲಿಕಾರ್ಜುನ ಖರ್ಗೆ ಅವರ ನೇತೃತ್ವದಲ್ಲಿ ನಾವು ಕೆಲವರನ್ನು ಭೇಟಿ ಮಾಡಿ ಮಾತನಾಡಿದೆವು. ಈ ಅಪಘಾತ ಕುರಿತು ಬ್ಲಾಕ್ ಬಾಕ್ಸ್ ತನಿಖೆ ವರದಿ ಬರಬೇಕಾಗಿದೆ. ಕಾಂಗ್ರೆಸ್ ಪಕ್ಷದ ವತಿಯಿಂದ ಅಲ್ಲಿ ಹೋಗಿ ಸಾಂತ್ವನ ಹೇಳಿದ್ದೇವೆ ಎಂದು ಮಾಹಿತಿ ನೀಡಿದರು.

ಪ್ರಜ್ವಲ್‌ಗೆ ಸಂಕಷ್ಟ, ಸರಕಾರಕ್ಕೆ ಸಂತೋಷ!

ಬೆಂಗಳೂರು: ಮನೆ ಕೆಲಸದಾಕೆಯ ಮೇಲಿನ ಅತ್ಯಾಚಾರ ಪ್ರಕರಣದಲ್ಲಿ ಆರೋಪಿಯಾಗಿರುವ ಪ್ರಜ್ವಲ್ ರೇವಣ್ಣ ಒಂದೂವರೆ ವರ್ಷದಿಂದ ಜೈಲಿನಲ್ಲಿ ಕಠಿಣ ಪರಿಸ್ಥಿತಿಯಲ್ಲಿದ್ದು, ರಾಜ್ಯ ಸರಕಾರ ಸಂತೋಷವಾಗಿದೆ ಎಂದು ಹಿರಿಯ ವಕೀಲ ಪ್ರಭುಲಿಂಗ ನಾವದಗಿ ಅವರು ಮೌಖಿಕವಾಗಿ ಹೈಕೋರ್ಟ್‌ನಲ್ಲಿ ಸೋಮವಾರ ಆಕ್ಷೇಪಿಸಿದರು. ಜಾಮೀನು ಕೋರಿ ಪ್ರಜ್ವಲ್ ಸಲ್ಲಿಸಿರುವ ಅರ್ಜಿಯನ್ನು ನ್ಯಾಯಮೂರ್ತಿ ಎಸ್.ಆರ್. ಕೃಷ್ಣಕುಮಾರ್ ಅವರ ಏಕಸದಸ್ಯ ಪೀಠವು ವಿಚಾರಣೆ ನಡೆಸಿತು. ಪ್ರಜ್ವಲ್ ಪರ ಹಿರಿಯ ವಕೀಲ ಪ್ರಭುಲಿಂಗ ನಾವದಗಿ ಅವರು ಮೇಲ್ನೋಟಕ್ಕೆ ಪ್ರಕರಣ ಇದೆ ಎಂದು ಮತ್ತು ಪ್ರಜ್ವಲ್ ನಾಪತ್ತೆಯಾಗುವ ಸಾಧ್ಯತೆ ಇದೆ ಎಂದು ಈ ಹಿಂದೆ ಜಾಮೀನು ಅರ್ಜಿ ವಜಾಗೊಂಡಿತ್ತು. ಈಗ ಎರಡು ಆಧಾರಗಳ ಮೇಲೆ ಪ್ರಜ್ವಲ್ ಜಾಮೀನು ಕೋರುತ್ತಿದ್ದಾರೆ. ಪ್ರಕರಣದಲ್ಲಿ ಪ್ರಜ್ವಲ್ ಮತ್ತು ಅವರ ತಂದೆ ಎಚ್.ಡಿ. ರೇವಣ್ಣ ಆರೋಪಿಗಳಾಗಿದ್ದು, ರೇವಣ್ಣ ವಿರುದ್ಧದ ವಿಚಾರಣೆಗೆ ತಡೆ ನೀಡಲಾಗಿದೆ. ಪ್ರಕರಣದಲ್ಲಿ 157 ಸಾಕ್ಷಿಗಳನ್ನು ಉಲ್ಲೇಖಿಸಲಾಗಿದ್ದು, ಪ್ರಕರಣ ವಿಭಜಿಸಲಾಗಿಲ್ಲ. ಇಂದು ಪ್ರಜ್ವಲ್ ಕಷ್ಟದಲ್ಲಿದ್ದು, ಸರಕಾರ ಸಂತೋಷವಾಗಿದೆ ಎಂದರು. ರಾಜ್ಯ ಸರಕಾರ ಪ್ರತಿನಿಧಿಸಿದ್ದ ವಿಶೇಷ ಸರಕಾರಿ ಅಭಿಯೋಜಕ ಬಿ.ಎನ್.ಜಗದೀಶ್ ಅವರು ಪ್ರಜ್ವಲ್ ವಿರುದ್ಧ ನಾಲ್ವರು ಅತ್ಯಾಚಾರ ಪ್ರಕರಣ ದಾಖಲಿಸಿದ್ದು, ಎರಡು ಪ್ರಕರಣದಲ್ಲಿ ಈಗಾಗಲೇ ವಿಚಾರಣೆ ಆರಂಭವಾಗಿದೆ. ಅವುಗಳು ಪ್ರಾಥಮಿಕ ಹಂತ ದಲ್ಲಿವೆ. ಆಕ್ಷೇಪಣೆ ಸಲ್ಲಿಸಿದ್ದು, ವಾದ ಮಂಡಿಸಲು ಕಾಲಾವಕಾಶ ನೀಡಬೇಕು ಎಂದು ಕೋರಿದರು. ವಿಚಾರಣೆಯ ಮಧ್ಯದಲ್ಲಿ ಪೀಠವು ವಿಚಾರಣೆ ವಿಳಂಬವಾಗುತ್ತಿದ್ದ ಎಂಬ ಆಧಾರವನ್ನು ಪ್ರಜ್ವಲ್ ತೆಗೆದುಕೊಂಡಿದ್ದಾರೆ ಎಂದಿತು. ಅಂತಿಮವಾಗಿ ಸರಕಾರ ಸಲ್ಲಿಸರುವ ಆಕ್ಷೇಪಣೆ ದಾಖಲಿಸಿಕೊಂಡ ಪೀಠವು ಅರ್ಜಿಯ ಪ್ರಾಥಮಿಕ ವಿಚಾರಣೆಗಾಗಿ ಪ್ರಕರಣ ಶುಕ್ರವಾರಕ್ಕೆ (ಜೂನ್ 20) ಮುಂದೂಡಿತು.

ಫನ್‌ತರಂಗ
- ರಘುಪತಿ ಶೃಂಗೇರಿ -

‘ಕರೆ ಬಂದಿದೆ’ ಎಂದು ಯುಎಸ್‌ಗೆ ಹಾರಿದ್ದ ಪಾಕ್ ಸೇನಾ ಮುಖ್ಯಸ್ಥಗೆ ಬಿಗ್ ಶಾಕ್ ಯಾವುದೇ ಆಹ್ವಾನ ನೀಡಿಲ್ಲ ಎಂದ ಅಮೆರಿಕಾ.
ಸುದ್ದಿ

147 ತಾಲೂಕಾಸ್ಪತ್ರೆಗಳಲ್ಲಿ ಪ್ಲಾಸ್ಮಾ ರಕ್ತ ಸಂಗ್ರಹಣೆಗೆ ವ್ಯವಸ್ಥೆ | ವಿಶ್ವ ರಕ್ತದಾನಿಗಳ ದಿನಾಚರಣೆಯಲ್ಲಿ ಸಚಿವ ದಿನೇಶ್ ಗುಂಡೂರಾವ್ ಅಭಿಮತ

ನಿಗದಿತ ಗುರಿಗಿಂತ ರಾಜ್ಯದಲ್ಲಿ ಹೆಚ್ಚು ರಕ್ತ ಸಂಗ್ರಹ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯದಲ್ಲಿ ಜನಸಂಖ್ಯೆಗೆ ಅನುಗುಣವಾಗಿ ನಿಗದಿಪಡಿಸಿದ ರಕ್ತ ಸಂಗ್ರಹಣೆಯ ಗುರಿಗಿಂತ ಶೇ.124 ರಷ್ಟು ಪ್ರಗತಿ ಸಾಧಿಸಲಾಗಿದೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ನಗರದ ಶೇಷಾದ್ರಿಪುರ ಕಾಲೇಜಿನಲ್ಲಿ ನಡೆದ ವಿಶ್ವ ರಕ್ತದಾನಿಗಳ ದಿನಾಚರಣೆಯಲ್ಲಿ ಮಾತನಾಡಿದ ಸಚಿವರು, ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಶೇ.1ರಷ್ಟು ಜನರಿಗೆ ರಕ್ತದ ಅವಶ್ಯಕತೆ ಇದ್ದು, ಅದಕ್ಕೆ ಅನುಗುಣವಾಗಿ 2024-25ರಲ್ಲಿ 8,15,402 ರಕ್ತದ ಯುನಿಟ್ ಸಂಗ್ರಹಿಸುವ ಗುರಿ ನಿಗದಿಪಡಿಸಲಾಗಿತ್ತು. ಸದರಿ ಸಾಲಿನಲ್ಲಿ 10,11,073 ರಕ್ತದ ಯುನಿಟ್ ಸಂಗ್ರಹಿಸುವ ಮೂಲಕ ಶೇ.124 ರಷ್ಟು ಪ್ರಗತಿ ಸಾಧಿಸಲಾಗಿದೆ. ರಕ್ತದಾನಿಯಗಳ ದಿನಾಚರಣೆ ಆಚರಿಸುವ ಮೂಲಕ ರಕ್ತದಾನಕ್ಕೆ ಪ್ರೋತ್ಸಾಹಿಸಲಾಗುತ್ತಿದೆ. 1 ಯುನಿಟ್ ರಕ್ತವು 4 ಜೀವ ಉಳಿಸಬಹುದು. ಹೀಗಾಗಿ ಯುವಕ ಯುವತಿಯರು ರಕ್ತದಾನಕ್ಕೆ ಮುಂದಾಗಬೇಕು ಎಂದು ಹೇಳಿದರು.

ರಾಜ್ಯ ಸರಕಾರದಿಂದ ರಕ್ತ ಸಂಗ್ರಹಣೆಗೆ ಉತ್ತಮ ವ್ಯವಸ್ಥೆ ಕಲ್ಪಿಸಲು ಕ್ರಮ ತೆಗೆದುಕೊಳ್ಳಲಾಗಿದೆ. ತಾಯಂದಿರ ಸಾವು ತಡೆಯುವಲ್ಲಿ ರಕ್ತದ ಪಾತ್ರ ಪ್ರಮುಖವಾಗಿದೆ. ತಾಲೂಕು ಸರಕಾರಿ ಆಸ್ಪತ್ರೆಗಳಲ್ಲಿ ಪ್ಲಾಸ್ಮಾ ರಕ್ತ ಸಂಗ್ರಹಣೆಯ ವ್ಯವಸ್ಥೆ ಇರಲಿಲ್ಲ. ಇದೀಗ ಎಲ್ಲ 147 ತಾಲೂಕು ಆಸ್ಪತ್ರೆಗಳಲ್ಲಿ ಪ್ಲಾಸ್ಮಾ ರಕ್ತ ಸಂಗ್ರಹಣೆ ವ್ಯವಸ್ಥೆ ಜಾರಿಗೆ ತರಲಾಗುತ್ತಿದ್ದು, ಅಗತ್ಯ ಉಪಕರಣಗಳ ಖರೀದಿಗೆ ಈಗಾಗಲೇ ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಲಾಗಿದೆ. ಹೊಸದಾಗಿ 11 ಸರಕಾರಿ ರಕ್ತ ಕೇಂದ್ರಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಇದರಿಂದ ರಾಜ್ಯದ ಸರಕಾರಿ ಆಸ್ಪತ್ರೆಗೆ ಬರುವ ಬಡಜನರಿಗೆ ರಕ್ತ ಮತ್ತು ಅದರ ಅಂಗಾಂಶಗಳನ್ನು ಪೂರೈಸಲು ಸಾಧ್ಯವಾಗುತ್ತದೆ ಎಂದು ಸಚಿವರು ತಿಳಿಸಿದರು.

ರಕ್ತದಾನಿಗಳ ದಿನಾಚರಣೆಯ ಅಂಗವಾಗಿ ಆಯೋಜಿಸಿದ್ದ ರಕ್ತದಾನ ಶಿಬಿರದಲ್ಲಿ ಆರೋಗ್ಯ ಸಚಿವರು ಸ್ವತಃ ರಕ್ತದಾನಿ ಮಾಡಿ ಇತರರಿಗೆ ರಕ್ತ ದಾನಕ್ಕೆ ಪ್ರೇರಣೆ ನೀಡಿದರು.

ನಗರದ ಶೇಷಾದ್ರಿಪುರಂ ಕಾಲೇಜಿನಲ್ಲಿ ನಡೆದ ವಿಶ್ವ ರಕ್ತದಾನಿಗಳ ದಿನಾಚರಣೆಯಲ್ಲಿ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ರಕ್ತದಾನ ಮಾಡಿದರು.

4 ಸರಕಾರಿ ರಕ್ತ ಕೇಂದ್ರ ಮೇಲ್ದರ್ಜೆಗೆ

ದೇಶದಲ್ಲಿಯೇ ಪ್ರಥಮ ಬಾರಿಗೆ ರಾಜ್ಯದಲ್ಲಿ ಅತಿ ಹೆಚ್ಚು ರಕ್ತ ಸಂಗ್ರಹಿಸಿರುವ 4 ಸರಕಾರಿ ರಕ್ತ ಕೇಂದ್ರಗಳನ್ನು ರೀಜನಲ್ ಸೆಂಟರ್ ಆಫ್ ಎಕ್ಸಲೆನ್ಸ್ ರಕ್ತ ಕೇಂದ್ರಗಳಾಗಿ ಮೇಲ್ದರ್ಜೆಗೇರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಇಲ್ಲಿ ನುರಿತ ತಜ್ಞರಿಂದ ಎಲ್ಲಾ ರಕ್ತ ಕೇಂದ್ರಗಳಿಗೆ ತರಬೇತಿ ಕಾರ್ಯಕ್ರಮ, ಜಿಲ್ಲೆಗಳಲ್ಲಿ ರಕ್ತದ ಕೊರತೆಯಿರುವ ರಕ್ತ ಕೇಂದ್ರಗಳಿಗೆ, ರಕ್ತ ಶೇಖರಣಾ ಘಟಕಗಳಿಗೆ ಹಾಗೂ ಆಸ್ಪತ್ರೆಗಳಿಗೆ ಸಮರ್ಪಕವಾದ, ಸುರಕ್ಷಿತ ಮತ್ತು ಗುಣಮಟ್ಟದ ರಕ್ತ ಒದಗಿಸುವುದನ್ನು ಖಚಿತಪಡಿಸುವುದರ ಮುಖಾಂತರ ಕರ್ನಾಟಕ ರಾಜ್ಯವು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ರಕ್ತದ ಗುಣಮಟ್ಟ ಕಾಯ್ದುಕೊಳ್ಳಲಿದೆ ಎಂದು ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ರಾಜ್ಯ ಸರಕಾರದಿಂದ ರಕ್ತ ಸಂಗ್ರಹಣೆಗೆ ಉತ್ತಮ ವ್ಯವಸ್ಥೆ ಕಲ್ಪಿಸಲು ಕ್ರಮ ತೆಗೆದುಕೊಳ್ಳಲಾಗಿದೆ. ಈಗಾಗಲೇ 9 ರಕ್ತ ಸಾಗಣಿಕ ವಾಹನಗಳು ಚಾಲನೆಯಲ್ಲಿದ್ದು, 7 ರಕ್ತ ಸಾಗಣಿಕ ಕಾರ್ಯ ನಿರ್ವಹಿಸುತ್ತಿವೆ. ಹೊಸದಾಗಿ 4 ರಕ್ತ ಸಾಗಣಿಕ ಮತ್ತು ರಕ್ತ ಸಂಗ್ರಹಣಾ ವಾಹನಗಳ ಖರೀದಿ ಪ್ರಕ್ರಿಯೆ ಚಾಲನೆಯಲ್ಲಿದ್ದು, ಶೀಘ್ರದಲ್ಲೆ ರಕ್ತ ಸಂಗ್ರಹಣೆ ಮತ್ತು ಸಾಗಣಿಕೆ ಸೇವೆಗೆ ಅನುವು ಮಾಡಿಕೊಡಲಾಗುವುದು.
-ದಿನೇಶ್ ಗುಂಡೂರಾವ್, ಆರೋಗ್ಯ ಸಚಿವ

ಮುಖ್ಯಾಂಶಗಳು

- ರಾಜ್ಯದ 4 ಸರಕಾರಿ ರಕ್ತ ಕೇಂದ್ರಗಳು ಮೇಲ್ದರ್ಜೆಗೆರಿಸಲು ಕ್ರಮ
- 2024-25ರಲ್ಲಿ 8,15,402 ರಕ್ತದ ಯುನಿಟ್ ಸಂಗ್ರಹಿಸುವ ಗುರಿ
- 10,11,073 ರಕ್ತದ ಯುನಿಟ್ ಸಂಗ್ರಹಿಸಿ ಶೇ.124 ರಷ್ಟು ಪ್ರಗತಿ

ಉಪನ್ಯಾಸ ಕಾರ್ಯಕ್ರಮದಲ್ಲಿ ಡಾ.ಲಕ್ಷ್ಮೀಶ ಹೆಗಡೆ ಸೋಂದಾ ಅಭಿಮತ

ಇತಿಹಾಸ ಸಂಶೋಧನೆ ಒಂದು ತಪಸ್ಸಿದ್ದಂತೆ

ಬೆಂಗಳೂರು: ಇತಿಹಾಸ ಸಂಶೋಧನೆ ಎಂದರೆ ಅದು ಒಂದು ಯಜ್ಞ, ತಪಸ್ಸು ಇದ್ದಂತೆ ಎಂದು ಸಂಶೋಧಕ ಡಾ.ಲಕ್ಷ್ಮೀಶ ಹೆಗಡೆ ಸೋಂದಾ ಹೇಳಿದರು.

ಲೆಕ್ಕಾಧಿಕಾರಿಗಳ ಸಂಘ ಏರ್ಪಡಿಸಿದ ಸಾಧಕ ತ್ರಯರಾದ ಡಾ.ಎ.ಕೆ.ಶಾಸ್ತ್ರಿ, ಡಾ.ಗುಂಡಾ ಜೋಯಿಸ್, ಡಾ.ಎಚ್.ಎಸ್.ಗೋಪಾಲ ರಾವ್ ಅವರ ಬದುಕು- ಬರಹ -ಸಾಧನೆ ಕುರಿತ ಉಪನ್ಯಾಸದಲ್ಲಿ ಮಾತನಾಡಿ, ಯಾವುದೇ ಸಂಗತಿಯನ್ನು, ವ್ಯಕ್ತಿಯ ಸಾಧನೆಯನ್ನು, ವಸ್ತು ವಿಷಯವನ್ನು ಯಥಾವತ್ ನಿರೂಪಿಸುವುದೇ ಇತಿಹಾಸ. ಡಾ.ಎಚ್.ಎಸ್. ಗೋಪಾಲ ರಾವ್ ಎಂಜಿನಿಯರ್ ಆದವರು, ಕನ್ನಡ ಎಂಎ ಮಾಡಿದರು, ಶಾಸನಶಾಸ್ತ್ರ ವಿಷಯದ ಮೊದಲ ವಿದ್ಯಾರ್ಥಿಯಾಗಿ ಪದವಿ ಪಡೆದವರು. ವಿದ್ಯುತ್ ಇಲಾಖೆಯಲ್ಲಿ ಎಂಜಿನಿಯರಾಗಿ ಕನ್ನಡ ಸಂಘವನ್ನು ಕಟ್ಟಿ ಬೆಳೆಸುವಲ್ಲಿ ಪ್ರಮುಖ ಪಾತ್ರ ವಹಿಸಿದವರು. ಕಾದಂಬರಿ, ನಾಟಕ, ಸಂಗೀತ, ಪುರಾಣ, ಶಾಸನಗಳ ಸಂಶೋಧನೆ, ಇತಿಹಾಸ, ಶಿಲ್ಪಶಾಸ್ತ್ರ, ಸಿನಿಮಾ, ಕಿರು ಚಿತ್ರಗಳಲ್ಲಿ ಕೃಷಿ ಮಾಡಿದ್ದು ತಮ್ಮ ಛಾಪು ಮೂಡಿಸಿದ್ದರು ಎಂದರು. ವಿದುಷಿ ಶ್ರೀಸನ್ನಿಧಿ ಹಾಗೂ ಅವರ ಶಿಷ್ಯೆಯ ರಿಂದ ಭರತನಾಟ್ಯ ಸಭಿಕರ ಮನ ಸೆಳೆಯಿತು. ಸಾಹಿತಿಗಳಾದ ಕೆ.ವಿ. ನಾಗರಾಜ್ ದಿನೇಶ್ ಉಪ್ಪೂರ್, ಬನವಾಸಿ ಕೃಷ್ಣಮೂರ್ತಿ, ನಂಜುಂಡಸ್ವಾಮಿ, ಪ್ರಭಾಕರ್ ಗಂಗೊಳ್ಳಿ, ಸಿದ್ದಣ್ಣ ಸೊನ್ನದ್, ಬಿ.ವಿ.ರಾವ್, ಕೊಪ್ಪರಂ ಅನ್ನಪೂರ್ಣ, ಸದಸ್ಯರುಗಳಾದ ಬಿ.ಸತ್ಯನಾರಾಯಣ, ಉಲಿಗೆ ಸ್ವಾಮಿ ಇದ್ದರು.

ಲೆಕ್ಕಾಧಿಕಾರಿಗಳ ಸಂಘದ ಬೆಳ್ಳಿ ಭವನದಲ್ಲಿ ನಡೆದ ಸಾಧಕತ್ರಯರ ಉಪನ್ಯಾಸ ಹಾಗೂ ಭರತನಾಟ್ಯ ಪ್ರದರ್ಶನ ಕಾರ್ಯಕ್ರಮದಲ್ಲಿ ಭರತನಾಟ್ಯಕಲಾವಿದೆ ವಿದುಷಿ ಶ್ರೀಸನ್ನಿಧಿ ಅವರನ್ನು ಸನ್ಮಾನಿಸಲಾಯಿತು.

ವಿದ್ವತ್ತಿಗೆ ತಕ್ಕ ಗೌರವ ಸಿಗಲಿಲ್ಲ

ಡಾ.ಗುಂಡಾ ಜೋಯಿಸ್ ಅವರು ಮೂಡಿ, ತಿಗಳಾರಿ, ಹಳಗನ್ನಡ, ನಂದಿನಾಗರಿ ಲಿಪಿಗಳನ್ನು ಸರಾಗವಾಗಿ ಓದುತ್ತಿದ್ದರು, ತಮ್ಮ 50ನೇ ವಯಸ್ಸಿನಲ್ಲಿ ಇತಿಹಾಸ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದವರು, ಹಲವಾರು ಇಲಾಖೆಗಳಲ್ಲಿ ಸೇವೆ ಸಲ್ಲಿಸಿದ ಇವರು, ಉಪನ್ಯಾಸಕರಾಗಿ, ವಿವಿಧ ವಿಶ್ವವಿದ್ಯಾಲಯಗಳ ಪ್ರಾಧ್ಯಾಪಕರಾಗಿ, ಪತ್ರಗಾರ ಇಲಾಖೆಯ ಉಪನ್ಯಾಸಕರಾಗಿ, ಚಾರಿತ್ರಿಕ ಸರ್ವೇಕ್ಷಣಾ ಸಮಿತಿ ಸದಸ್ಯರಾಗಿ, ಕರ್ನಾಟಕ ಇತಿಹಾಸ ದಾಖಲೆ ಸಂಶೋಧನಾ ಸಮಿತಿ ಸದಸ್ಯರಾಗಿ ಸೇವೆ ಸಲ್ಲಿಸಿದವರು. ಸತತ ಎಂಬತ್ತು ವರ್ಷ ಕೆಳದಿಯ ಇತಿಹಾಸಕ್ಕಾಗಿ ತಮ್ಮನ್ನು ತಾವು ತೊಡಗಿಸಿಕೊಂಡು 2600 ಕ್ಕೂ ಹೆಚ್ಚು ತಾಳೆಗರಿ ಇತರ ಮಹತ್ವದ ಶಾಸನಗಳನ್ನು ಸಂಗ್ರಹಿಸಿ ಮನೆಯನ್ನೇ ಮ್ಯೂಸಿಯಂ ಆಗಿ ಮಾರ್ಪಡಿಸಿದವರು. ಸ್ವೀಡನ್ ವಿವಿಯಿಂದ ಸ್ಕ್ರಿಪ್ಟ್ ಎಕ್ಸ್‌ಪರ್ಟ್ ಎಂಬ ಬಿರುದು ಪಡೆದರೂ ಇವರ ಪಾಂಡಿತ್ಯ, ವಿದ್ವತ್ತು ಯೋಗ್ಯತೆಗೆ ತಕ್ಕದಾದ ಗೌರವ ಸನ್ಮಾನಗಳು ಸಿಗದಿರುವುದು ಬೇಸರದ ಸಂಗತಿ ಎಂದು ಸೋಂದಾ ನುಡಿದರು.

ಮೈಸೂರಿನ ದೊಡ್ಡಕೆರೆ ಮೈದಾನದಲ್ಲಿ ಪ್ರಕೃತಿ ಫೌಂಡೇಶನ್‌ನಿಂದ ಆಯೋಜನೆ ಮಾಡಿದ್ದ ರಾಷ್ಟ್ರೀಯ ಮಟ್ಟದ ಕುಸ್ತಿ ಸ್ಪರ್ಧೆಯಲ್ಲಿ ವಿಜೇತರಾದ ಕುಸ್ತಿಪಟ್ಟು ವಿಶಾಲ್ ಸೇಗಲೆಗೆ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿಯ ಅಧ್ಯಕ ಎಸ್.ಈ ಸುಧೀಂದ್ರ ಪ್ರಶಸ್ತಿ ಪ್ರದಾನ ಮಾಡಿದರು. ಈ ವೇಳೆ ಲೋಕೇಶ್ ಗೌಡ, ಧನುಷ್, ಬಿಟ್ಟೇಗೌಡ, ಕಿರಣ್ ಕುಮಾರ್, ಹನುಮಂತ ಗೌಡ ಸೇರಿ ಇತರರಿದ್ದರು.

ಅರ್ಜಿ ಆಹ್ವಾನ

ನೆಲಮಂಗಲ: ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಶೇಕಡ 90ಕ್ಕಿಂತ ಹೆಚ್ಚು ಅಂಕ ಗಳಿಸಿದ ಒಕ್ಕಲಿಗ ಸಮುದಾಯದ ವಿದ್ಯಾರ್ಥಿಗಳಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ನೆಲಮಂಗಲ ತಾಲೂಕು ಸೇರಿದಂತೆ ಮಾಗಡಿ ತಾಲೂಕಿನ ಸೋಲೂರು ಹೋಬಳಿ ಮತ್ತು ಬೆಂಗಳೂರು ಉತ್ತರ ತಾಲೂಕಿನ ದಾಸನಪುರ ಹೋಬಳಿ ವಿದ್ಯಾರ್ಥಿಗಳೂ ಅಗತ್ಯ ದಾಖಲೆಗಗಳೊಂದಿಗೆ ಜೂನ್ 30 ರೊಳಗೆ ಅರ್ಜಿ ಸಲ್ಲಿಸಬಹುದು ಎಂದು ಒಕ್ಕಲಿಗ ಕ್ಷೇಮಾಭಿವೃದ್ಧಿ ಟ್ರಸ್ಟ್ ಅಧ್ಯಕ್ಷ ಎಂ.ಕೆ.ನಾಗರಾಜು ತಿಳಿಸಿದ್ದಾರೆ. ಸಂಪರ್ಕ: 9343705608, 9449638143, 9980525501.

ಬಿಬಿಎಂಪಿ ಆಡಳಿತದಲ್ಲಿ ಭ್ರಷ್ಟಾಚಾರ ಹಾಗೂ ಎಸ್‌ಸಿ, ಎಸ್‌ಟಿ ಅನುದಾನ ದುರ್ಬಳಕೆ ವಿರೋಧಿಸಿ ಕರ್ನಾಟಕ ದಲಿತ ಸಂಘರ್ಷ ಸಮಿತಿ ರಾಜ್ಯಾಧ್ಯಕ್ಷ ಚಳುವಳಿ ಅಯ್ಯಪ್ಪಕೆ ಮತ್ತು ಜಿಲ್ಲಾಧ್ಯಕ್ಷ ಎನ್.ಪ್ರಸಾದ್ ರವರ ನೇತೃತ್ವದಲ್ಲಿ ಪ್ರತಿಭಟನೆ ನಡೆಸಲಾಯಿತು.

ವಿಜಯನಗರದ ಆದಿಚುಂಚನಗಿರಿ ಮಹಿಳಾ ಮಿನಿ ಸಭಾಂಗಣದಲ್ಲಿ ನಡೆದ ಕವಿ ಪ್ರೊ.ಎಚ್.ಎಸ್.ವೆಂಕಟೇಶಮೂರ್ತಿ ನುಡಿ, ನೃತ್ಯ ನಮನ ಕಾರ್ಯಕ್ರಮದಲ್ಲಿ ಸಾಹಿತಿಗಳಾದ ಪ್ರೊ.ಕೆ.ಇ.ರಾಧಾಕೃಷ್ಣ, ಟಿ.ಸತೀಶ್ ಜವರೇಗೌಡ, ಡಾ.ರಾಮಲಿಂಗೇಶ್ವರ (ಸಿಸಿರಾ), ಗುಣವಂತ ಮಂಜು, ಡಾ.ವಾದಿರಾಜು, ಕರುಣವೀರ ಕೆಂಪಯ್ಯ ಸೇರಿ ಮತ್ತಿತರರು ಭಾಗವಹಿಸಿದ್ದರು.

ರಾಮನಾಯಕ್ ಮರು ಆಯ್ಕೆ

ಬೆಂಗಳೂರು: ಆಲ್ ಇಂಡಿಯಾ ಬಂಜಾರ ಸೇವ ಸಂಘದ ರಾಷ್ಟ್ರೀಯ ಕಾರ್ಯಾಧ್ಯಕ್ಷರಾಗಿ ಡಿ.ರಾಮ ನಾಯಕ್ ಮರು ಆಯ್ಕೆಯಾಗಿದ್ದಾರೆ. ಸಮುದಾಯ ಸೇವೆ ಮತ್ತು ನಾಯಕತ್ವಕ್ಕೆ ಅವರ ಅತ್ಯುತ್ತಮ ಬದ್ಧತೆ ಗುರುತಿಸಿ, ಡಿ.ರಾಮ ನಾಯಕ್ ಅವರನ್ನು ಅಖಿಲ ಭಾರತ ಬಂಜಾರ ಸೇವಾ ಸಂಘದ ರಾಷ್ಟ್ರೀಯ ಕಾರ್ಯಾಧ್ಯಕ್ಷರಾಗಿ ಮತ್ತೆ ಐದು ವರ್ಷಗಳ ಅವಧಿಗೆ ತಕ್ಷಣದಿಂದ ಜಾರಿಗೆ ಬರುವಂತೆ ಮರು ನೇಮಕ ಮಾಡಲಾಗಿದೆ. ಸಾಮಾಜಿಕ ಉನ್ನತಿಗೆ ಅವರ ಗಮನಾರ್ಹ ಕೊಡುಗೆ ಗುರುತಿಸಿ ಕರ್ನಾಟಕ ಸರಕಾರ 2022 ರಲ್ಲಿ ಪ್ರತಿಷ್ಠಿತ ಡಾ.ಬಿ.ಆರ್.ಅಂಬೇಡ್ಕರ್ ಪ್ರಶಸ್ತಿ ನೀಡಿ ಗೌರವಿಸಿದೆ. ಡಿ.ರಾಮ ನಾಯಕ್ ಅವರ ಪ್ರಸ್ತುತ ಜವಾಬ್ದಾರಿಗಳ ಜತೆಗೆ ಕರ್ನಾಟಕ, ಬಿಹಾರ ಮತ್ತು ಒಡಿಶಾ ರಾಜ್ಯಗಳಲ್ಲಿ ಸಂಘದ ಉದ್ದೇಶಗಳನ್ನು ಸಾಧಿಸಿ ಮುನ್ನಡೆಸಲು ಉಸ್ತುವಾರಿ ವಹಿಸಲಾಗಿದೆ.

ಸಂಚಾರ ನಿಯಮ ಉಲ್ಲಂಘಿಸಿದ್ದನ್ನು ಪ್ರಶ್ನಿಸಿದ್ದಕ್ಕೆ ಹಲ್ಲೆ ಆರೋಪ

ಯುವತಿಗೆ ಕಪಾಳಮೋಕ್ಷ: ರ‍್ಯಾಪಿಡೋ ಕ್ಯಾಪ್ಟನ್ ವಿರುದ್ಧ ಎಫ್‌ಐಆರ್

ಬೆಂಗಳೂರು: ಅಜಾಗರೂಕತೆಯಿಂದ ದ್ವಿಚಕ್ರವಾಹನ ಚಲಾಯಿಸಿ ಸಂಚಾರ ನಿಯಮ ಉಲ್ಲಂಘಿಸಿದ್ದನ್ನು ಪ್ರಶ್ನಿಸಿದ್ದಕ್ಕೆ ಕಪಾಳಮೋಕ್ಷ ಮಾಡಿದ ಆರೋಪದಡಿ ರ‍್ಯಾಪಿಡೋ ಬೈಕ್ ಟ್ಯಾಕ್ಸಿ ಕ್ಯಾಪ್ಟನ್ ವಿರುದ್ಧ ಜಯನಗರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಹಲ್ಲೆಗೊಳಗಾದ ಯುವತಿ ಶ್ರೇಯಾ ಎಂಬಾಕೆ ನೀಡಿದ ದೂರಿನ ಮೇರೆಗೆ ದ್ವಿಚಕ್ರವಾಹನ ಸವಾರ ಸುಹಾಸ್ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ. ಹಲ್ಲೆ ದೃಶ್ಯ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆದ ಹಿನ್ನೆಲೆಯಲ್ಲಿ ಆರೋಪಿತನ ವಿರುದ್ಧ ದೂರು ನೀಡಿರುವು ದಾಗಿ ಯುವತಿ ಎಫ್‌ಐಆರ್‌ನಲ್ಲಿ ತಿಳಿಸಿದ್ದಾಳೆ. ಎಫ್‌ಐಆರ್ ದಾಖಲಿಸಿಕೊಂಡಿರುವ ಪೊಲೀಸರು ಬೈಕ್ ಸವಾರನನ್ನು ಕರೆಯಿಸಿ ವಿಚಾರಣೆಗೊಳಪಡಿಸಿದ್ದಾರೆ.

ಜೂನ್ 13ರಂದು ಬೆಳಗ್ಗೆ 10 ಗಂಟೆ ಸುಮಾರಿಗೆ ಬಿಟಿಎಂ ಲೇಔಟ್‌ನಿಂದ ಜಯನಗರ 3ನೇ ಬ್ಲಾಕ್‌ಗೆ ಹೋಗಲು ರ‍್ಯಾಪಿಡೋ ಬುಕ್ ಮಾಡಿದ್ದೆ. ಗಮ್ಯ ಸ್ಥಳಕ್ಕೆ ತಲುಪಿದ ಬಳಿಕ ಸಂಚಾರ ನಿಯಮ ಉಲ್ಲಂಘಿಸಿ ಚಾಲನೆ ಮಾಡಿರುವುದು ಕಾನೂನುಬಾಹಿರ ಎಂದು ಬೈಕ್ ಸವಾರನಿಗೆ ಹೇಳಿದೆ.

ಇದಕ್ಕೆ ಕಿಡಿಕಾರಿದ ಸವಾರ, ಸಾರ್ವಜನಿಕ ಸ್ಥಳದಲ್ಲಿ ತನ್ನೊಂದಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿ ಕೈಗಳಿಂದ ಹಲ್ಲೆ ಮಾಡಿದ್ದ. ಈ ಬಗ್ಗೆ ದೂರು ನೀಡಲು ಇಷ್ಟವಿಲ್ಲದಿದ್ದರೂ ಸಾಮಾಜಿಕ ಜಾಲತಾಣದಲ್ಲಿ ವಾಗ್ವಾದದ ವಿಡಿಯೊ ವೈರಲ್ ಆಗಿದ್ದರಿಂದ ಸ್ನೇಹಿತರು ಸೂಚಿಸಿದ್ದರಿಂದ ಪೊಲೀಸರಿಗೆ ದೂರು ನೀಡಿದೆ ಎಂದು ಯುವತಿ ತಿಳಿಸಿದ್ದಾಳೆ.

ರ‍್ಯಾಪಿಡೋ ಸವಾರ ಹೇಳಿದ್ದೇನು?

ಸಾಮಾಜಿಕ ಜಾಲತಾಣದಲ್ಲಿ ವಿಡಿಯೊ ವೈರಲ್ ಆಗುತ್ತಿದ್ದಂತೆ ಸವಾರ ಸುಹಾಸ್ ವಿಡಿಯೊ ಮಾಡಿ ಸ್ಪಷ್ಟನೆ ನೀಡಿದ್ದಾನೆ. ಏಕಾಏಕಿ ವಾಹನ ನಿಲ್ಲಿಸುವಂತೆ ಸೂಚಿಸಿದರು. ವೇಗದ ಪ್ರಮಾಣ ಹೆಚ್ಚಿದ್ದರಿಂದ ಏಕಾಏಕಿ ವಾಹನ ನಿಲ್ಲಿಸಿದರೆ ಹಿಂಬದಿ ಸವಾರರಿಗೆ ತೊಂದರೆಯಾಗಲಿದೆ ಎಂದು ಭಾವಿಸಿ ಕಚೇರಿ ಸ್ಥಳದಿಂದ 100 ಮೀಟರ್ ದೂರದಲ್ಲಿ ವಾಹನ ನಿಲ್ಲಿಸಿದೆ. ಇಷ್ಟಕ್ಕೆ ವಾಹನ ಚಾಲನೆ ಮಾಡಲು ಬರುವುದಿಲ್ಲವೇ? ಎಂದು ತನಗೆ ಬೈದಿದ್ದಾರೆ. ಎರಡು ಬಾರಿ ತನ್ನ ಮೇಲೆ ಕೈ ಮಾಡಿದ್ದಾರೆ ಎಂದು ಸವಾರ ಸುಹಾಸ್ ಪ್ರತಿಯಾಗಿ ಆರೋಪಿಸಿದ್ದು ಈ ಸಂಬಂಧಿತ ವಿಡಿಯೊ ಬೆಳಕಿಗೆ ಬಂದಿದೆ.

ರಾಜ್ಯದಲ್ಲಿ 208 ಮಂದಿಗೆ ಪಾಸಿಟಿವ್

ಬೆಂಗಳೂರು: ರಾಜ್ಯದಲ್ಲಿ ಕೊರೋನಾ ವೈರಸ್ ಪ್ರಕರಣ ಪತ್ತೆ ಮುಂದುವರೆದಿದ್ದು ಇಂದು ಮತ್ತೆ 208 ಹೊಸ ಸೋಂಕು ಪ್ರಕರಣಗಳು ವರದಿಯಾಗಿವೆ. ಈ ಬಗ್ಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ತನ್ನ ದೈನಂದಿನ ಪ್ರಕಟಣೆಯಲ್ಲಿ ಮಾಹಿತಿ ನೀಡಿದ್ದು, ಕಳೆದ 24 ಗಂಟೆಯಲ್ಲಿ ರಾಜ್ಯದಲ್ಲಿ 208 ಮಂದಿಗೆ ಕೋವಿಡ್-19 ಪಾಸಿಟಿವ್ ದೃಢಪಟ್ಟಿದೆ. ಇದೇ ಅವಧಿಯಲ್ಲಿ ಸೋಂಕಿಗೆ ತುತ್ತಾಗಿದ್ದ 103 ಮಂದಿ ಗುಣಮುಖರಾಗಿದ್ದಾರೆ.

ಕಿರುಕುಳ: ಕೇರಳದ ಅರ್ಚಕನ ಬಂಧನ



ಬೆಂಗಳೂರು: ಬೆಂಗಳೂರಿನ ಮಹಿಳೆ ಮೇಲೆ ಅತ್ಯಾಚಾರಕ್ಕೆ ಯತ್ನಿಸಿದ್ದಲ್ಲದೆ, ಬೆತ್ತಲೆ ವಿಡಿಯೊ ಮಾಡಿ ಕಿರುಕುಳ ನೀಡುತ್ತಿದ್ದ ಆರೋಪದಲ್ಲಿ ಕೇರಳದ ಪೆರಿಂಗೋಟ್ಟುಕ್ಕಾರ ದೇವಸ್ಥಾನದ ಅರ್ಚಕ ಅರುಣ್ ಎಂಬಾತನನ್ನು ಬೆಳ್ಳಂದೂರು ಠಾಣೆ ಪೊಲೀಸರು ಬಂಧಿಸಿದ್ದಾರೆ.

ಮತ್ತೊಬ್ಬ ಆರೋಪಿ, ಮುಖ್ಯ ಅರ್ಚಕ ಉನ್ನಿ ದಾಮೋದರನ್ ಪರಾರಿಯಾಗಿದ್ದು, ಆತನಿಗಾಗಿ ಪೊಲೀಸರು ಶೋಧ ಆರಂಭಿಸಿದ್ದಾರೆ. ಪೂಜೆ ಮಾಡಿಸಲೆಂದು ಕೇರಳದ ಪೆರಿಂಗೋಟ್ಟುಕ್ಕಾರ ದೇವಸ್ಥಾನಕ್ಕೆ ತೆರಳಿದ್ದ ಮಹಿಳೆಗೆ ಮಾಟ ಮಾಂತ್ರದ ಬೆದರಿಕೆಯೊಡ್ಡಿ ಮುಖ್ಯ ಅರ್ಚಕ ಹಾಗೂ ಅರ್ಚಕ ಕೃತ್ಯ ಎಸಗಿದ್ದಾರೆ ಎಂದು ಆರೋಪಿಸಲಾಗಿದೆ.

ಕೌಟುಂಬಿಕ ಸಮಸ್ಯೆಯಿಂದ ಬಳಲುತ್ತಿದ್ದ ಮಹಿಳೆ ಕೇರಳದ ಪೆರಿಂಗೋಟ್ಟುಕ್ಕಾರ ದೇಗುಲದ ಬಗ್ಗೆ ಕೇಳಿ ತಿಳಿದಿದ್ದರು. ಹೀಗಾಗಿ ಅಲ್ಲಿಗೆ ಪೂಜೆ ಮಾಡಿಸಲೆಂದು ತೆರಳಿದ್ದರು. ಆ ವೇಳೆ ಪರಿಚಯವಾಗಿದ್ದ ಅರ್ಚಕರು, ಪೂಜೆಯ ಹೆಸರಿನಲ್ಲಿ ಮತ್ತು ಮಾಟ-ಮಂತ್ರ ಹೆಸರಿನಲ್ಲಿ ಮಹಿಳೆ ಜತೆ ವಾಟ್ಸ್‌ಆ್ಯಪ್ ವಿಡಿಯೊ ಕಾಲ್ ಮೂಲಕ ಅಸಭ್ಯವಾಗಿ ವರ್ತಿಸಿದ್ದಾರೆ. ಅಷ್ಟೇ ಅಲ್ಲದೆ, ಮತ್ತೊಂದು ಪೂಜೆ ಮಾಡಿಸುವುದಾಗಿ ಕರೆಸಿಕೊಂಡು ಅಸಹಜ ಲೈಂಗಿಕ ಕ್ರಿಯೆಗೆ ಒತ್ತಾಯಿಸಿದ್ದಾರೆ ಎಂದು ಬೆಳ್ಳಂದೂರು ಠಾಣೆ ಪೊಲೀಸರಿಗೆ ನೀಡಿದ ದೂರಿನಲ್ಲಿ ಸಂತ್ರಸ್ತೆ ಮಹಿಳೆ ಉಲ್ಲೇಖಿಸಿದ್ದಾರೆ.

ಜ್ಞಾನಭಾರತಿ ಬಯೋಪಾರ್ಕ್ ಉಳಿವಿಗೆ ರಾಜ್ಯಪಾಲರ ಮೊರೆ

ಬೆಂಗಳೂರು: ಬೆಂಗಳೂರು ವಿವಿಯ ಜ್ಞಾನಭಾರತಿ ಆವರಣದ 660 ಎಕರೆ ಜೀವವೈವಿಧ್ಯ ತಾಣವನ್ನುಉಳಿಸುವಂತೆ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಥ್ ಅವರಿಗೆ ಜ್ಞಾನಭಾರತಿ ವಾಯುವಿಹಾರಿಗಳ ಸಂಘ ಮನವಿ ಸಲ್ಲಿಸಿದೆ.

ಜ್ಞಾನಭಾರತಿ ವಾಯುವಿಹಾರಿಗಳ ಸಂಘದ ಪ್ರೊ.ರೇಣುಕಾ ಪ್ರಸಾದ್, ಸುಬ್ರಹ್ಮಣ್ಯಂ, ಸತ್ಯನಾರಾಯಣ ಭಟ್, ಗಣಪತಿ ಭಾಟಿ ಮತ್ತು ಪರಿಸರ ಕಾರ್ಯಕರ್ತ ಜೋಸೆಫ್ ಹೂವರ್ ನೇತೃತ್ವದ ನಿಯೋಗ ರಾಜ್ಯಪಾಲರಿಗೆ ಮನವಿ ಸಲ್ಲಿಸಿದ್ದಾರೆ. ಬೆಂಗಳೂರು ವಿವಿಯ ಬಯೋಪಾರ್ಕ್‌ನ್ನು ಉದ್ದೇಶ ಪೂರ್ವಕವಾಗಿ ಹಾನಿಮಾಡಲಾಗುತ್ತಿದ್ದು, ಇದನ್ನು ತಕ್ಷಣವೇ ನಿಲ್ಲಿಸುವಂತೆ ಸಂಘವು ಸೇವ್ ಜ್ಞಾನಭಾರತಿ ಬಯೋಪಾರ್ಕ್ ಅಭಿಯಾನವನ್ನು ಹಮ್ಮಿಕೊಂಡಿದ್ದು, ಸಾರ್ವಜನಿಕರು, ಪರಿಸರ ಕಾರ್ಯಕರ್ತರು ಈ ಅಭಿಯಾನಕ್ಕೆ ಕೈ ಜೋಡಿಸಿದ್ದಾರೆ.

ಬೆಂಗಳೂರಿನ ಹೃದಯಭಾಗದಲ್ಲಿ ಬೃಹತ್ ಮಹಾನಗರದ ಜಂಜಾಟಗಳ ಮಧ್ಯೆ ಜ್ಞಾನಭಾರತಿ ಕ್ಯಾಂಪಸ್ ಒಂದು ಹಸಿರು ಸ್ವರ್ಗದಂತೆ ಕಾರ್ಯ ನಿರ್ವಹಿಸುತ್ತಿದೆ. ಇದು ಅಸಂಖ್ಯಾತ ಪ್ರಾಣಿ ಮತ್ತು ಸಸ್ಯ ಪ್ರಭೇದಗಳಿಗೆ ಆಶ್ರಯ ತಾಣವಾಗಿದ್ದು, ನಗರದ ಹಸಿರು ಶ್ವಾಸಕೋಶ ಎಂದು ಗುರುತಿಸಲ್ಪಟ್ಟಿದೆ. ಇತ್ತೀಚಿನ ದಿನಗಳಲ್ಲಿ, ಈ ಅಮೂಲ್ಯವಾದ ಪರಿಸರ ವ್ಯವಸ್ಥೆಗೆ ಅಪಾಯ ಎದುರಾಗಿದೆ ಎಂಬ ಗಂಭೀರ ಆರೋಪಗಳು ಕೇಳಿಬರುತ್ತಿವೆ.

ಈ ಬಗ್ಗೆ ವಿಶ್ವವಿದ್ಯಾಲಯದ ಕೆಲವು ಅಧಿಕಾರಿಗಳು, ಕ್ಯಾಂಪಸ್‌ನಲ್ಲಿ ನಡೆಯುತ್ತಿರುವ ಅಭಿವೃದ್ಧಿ ಕಾಮಗಾರಿಗಳು ವಿಶ್ವವಿದ್ಯಾಲಯದ ಶೈಕ್ಷಣಿಕ ಮತ್ತು ಮೂಲಸೌಕರ್ಯ ಅಗತ್ಯಗಳನ್ನು ಪೂರೈಸುವ ಉದ್ದೇಶ ಹೊಂದಿವೆ ಎಂದು ಸಮರ್ಥಿಸಿಕೊಂಡಿದ್ದಾರೆ. ಆದರೂ ಈ ಕಾಮಗಾರಿಗಳು ಪರಿಸರಕ್ಕೆ ಕನಿಷ್ಠ ಹಾನಿಯಾಗುವಂತೆ ನೋಡಿಕೊಳ್ಳಬೇಕು ಎಂಬ ನಿಯಮಗಳನ್ನು ಉಲ್ಲಂಘಿಸಿವೆ ಎಂಬುದು ಪರಿಸರ ಕಾರ್ಯಕರ್ತರ ಪ್ರಮುಖ ಆರೋಪವಾಗಿದೆ.

ಬೆಂಗಳೂರು ವಿವಿಯ ಜ್ಞಾನಭಾರತಿ ಆವರಣದ 660 ಎಕರೆ ಜೀವವೈವಿಧ್ಯ ತಾಣವನ್ನುಉಳಿಸುವಂತೆ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಥ್ ಅವರಿಗೆ ಜ್ಞಾನಭಾರತಿ ವಾಯುವಿಹಾರಿಗಳ ಸಂಘ ಮನವಿ ಸಲ್ಲಿಸಿದೆ.

ಪರಿಸರಕ್ಕೆ ಧಕ್ಕೆ

ಅಭಿವೃದ್ಧಿ ಕಾಮಗಾರಿಗಳು, ಒತ್ತುವರಿ ಮತ್ತು ನಿರ್ವಹಣೆಯ ಕೊರತೆಯಿಂದಾಗಿ ಬಯೋಪಾರ್ಕ್‌ನ ಪರಿಸರ ಸಮತೋಲನಕ್ಕೆ ಧಕ್ಕೆ ಉಂಟಾಗುತ್ತಿದೆ ಎಂದು ಪರಿಸರವಾದಿಗಳು ಮತ್ತು ಸ್ಥಳೀಯರು ಆತಂಕ ವ್ಯಕ್ತಪಡಿಸಿದ್ದು, ಜ್ಞಾನಭಾರತಿ ವಾಯುವಿಹಾರಿಗಳ ಸಂಘವು ರಾಜ್ಯಪಾಲರಿಗೆ ಸಲ್ಲಿಸಿರುವ ಮನವಿಯಲ್ಲಿ, ಕ್ಯಾಂಪಸ್‌ನಲ್ಲಿ ನಡೆಯುತ್ತಿರುವ ಅಕ್ರಮ ಚಟುವಟಿಕೆಗಳು ಮತ್ತು ಪರಿಸರಕ್ಕೆ ಹಾನಿ ಕಾರಕ ಯೋಜನೆಗಳನ್ನು ಉಲ್ಲೇಖಿಸಲಾಗಿದೆ. ಮರಗಳ ಕಡಿತ, ತ್ಯಾಜ್ಯ ವಿಲೇವಾರಿ, ಮತ್ತು ಕಟ್ಟಡ ನಿರ್ಮಾಣ ಚಟುವಟಿಕೆಗಳಿಂದಾಗಿ ಬಯೋಪಾರ್ಕ್ ಅಸ್ತಿತ್ವಕ್ಕೆ ಧಕ್ಕೆಯಾಗುತ್ತಿದೆ. ಅಲ್ಲದೆ, ವಿಶ್ವವಿದ್ಯಾಲಯ ಆಡಳಿತ ಮಂಡಳಿಯು ಈ ಪರಿಸರ ನಾಶವನ್ನು ತಡೆಯುವಲ್ಲಿ ವಿಫಲವಾಗಿದೆ ಅಥವಾ ಅದಕ್ಕೆ ಕುಮ್ಮಕ್ಕು ನೀಡುತ್ತಿದೆ ಎಂಬ ಗಂಭೀರ ಆರೋಪಗಳೂ ಕೇಳಿಬರುತ್ತಿವೆ.

ಬೈಕ್-ಆಟೋ ತಾಕಲಾಟ ಪ್ರಯಾಣಿಕರಿಗೆ ಪೀಕಲಾಟ

ನರೇಂದ್ರ ಪಾರೆಕಟ್

ರಾಜ್ಯದಲ್ಲಿ ಬೈಕ್ ಟ್ಯಾಕ್ಸಿ ಸೇವೆಗಳ ನಿಷೇಧ ಸೋಮವಾರದಿಂದ ಅಧಿಕೃತವಾಗಿ ಜಾರಿಯಾಗಿದೆ. ಬೈಕ್ ಟ್ಯಾಕ್ಸಿ ಸೇವೆ ನೀಡಲು ಗೈಡ್ ಲೈನ್ಸ್ ಜಾರಿಯಾಗುವವರೆಗೂ ಸೇವೆಗಳನ್ನು ಸ್ಥಗಿತಗೊಳಿಸುವ ರಾಜ್ಯ ಸರಕಾರದ ಆದೇಶವನ್ನು ಕರ್ನಾಟಕ ಹೈಕೋರ್ಟ್ ಎತ್ತಿ ಹಿಡಿದಿದೆ. ಬೈಕ್ ಟ್ಯಾಕ್ಸಿ ಕಂಪನಿಗಳು ಕೋರಿದ್ದ ಆರು ವಾರಗಳ ಕಾಲಾವಕಾಶ ಭಾನುವಾರದಂದು ಮುಕ್ತಾಯ ಗೊಂಡಿದ್ದು, ಸೇವೆ ಮುಂದು ವರಿಸುವ ಕುರಿತು ನ್ಯಾಯಾಲ ಯವು ಮಧ್ಯಂತರ ಅನುಮತಿ ಯನ್ನೂ ನಿರಾಕರಿಸಿದೆ.

- ಏಕ ಸದಸ್ಯ ಪೀಠದ ಆದೇಶಕ್ಕೆ ತಡೆ ನೀಡಲು ನಿರಾಕರಿಸಿದ್ದ ಹೈಕೋರ್ಟ್
- ಮುಂದಿನ ವಿಚಾರಣೆ ಇದೇ ತಿಂಗಳು 24ಕ್ಕೆ ನಿಗದಿ
- ಸರಕಾರ ಹೊಸ ನಿಯಮಗಳನ್ನು ರೂಪಿಸದ ಹಿನ್ನೆಲೆಯಲ್ಲಿ ನಿಷೇಧ

ರ್‍ಯಾಪಿಡೋ, ಊಬರ್ ಮತ್ತಿತರ ಕಂಪನಿಗಳು ತಮ್ಮ ಆ್ಯಪ್‌ನಲ್ಲಿ ಬೈಕ್ ಟ್ಯಾಕ್ಸಿ ಸೇವೆಯ ಆಯ್ಕೆಯನ್ನುತೆಗೆದು ಹಾಕಿವೆ. ಆ್ಯಪ್‌ನ ಮೂಲಕ ತನ್ನ ಬಳಕೆದಾರರಿಗೆ ಮಾಹಿತಿ ನೀಡಿರುವ ರ್‍ಯಾಪಿಡೋ ಕಂಪನಿ, 'ಹೈಕೋರ್ಟ್‌ನ ಇತ್ತೀಚಿನ ಆದೇಶದ ಅನುಸಾರವಾಗಿ ಕರ್ನಾಟಕದಲ್ಲಿ ನಮ್ಮ ಬೈಕ್ ಟ್ಯಾಕ್ಸಿ ಸೇವೆಗಳನ್ನು ಸ್ಥಗಿತಗೊಳಿಸಲಾಗಿದೆ. ಬೈಕ್ ಟ್ಯಾಕ್ಸಿಗಳಿಂದ ದೈನಂದಿನ ಪ್ರಯಾಣಿಕರಿಗೆ ಸಿಗುತ್ತಿರುವ ಸೌಲಭ್ಯಗಳ ಬಗ್ಗೆ ನಮಗೆ ಹೆಮ್ಮೆ ಇದೆ, ಆದರೆ ನಾವು ಕಾನೂನನ್ನು ಗೌರವಿಸುತ್ತೇವೆ ಮತ್ತು ರಾಜ್ಯ ಸರಕಾರದ ನಿರ್ದೇಶನವನ್ನು ಸಂಪೂರ್ಣವಾಗಿ ಪಾಲಿಸುತ್ತೇವೆ. ಬೈಕ್ ಟ್ಯಾಕ್ಸಿಗಳನ್ನು ಶೀಘ್ರದಲ್ಲೇ ಪುನಃ ರಸ್ತೆಗಿಳಿಸಲು ಸರಕಾರದೊಂದಿಗೆ ಮುಂದಿನ ಹಾದಿಯಲ್ಲಿ ನಾವೂ ಸಾಗುತ್ತೇವೆ' ಎಂದೂ ತಿಳಿಸಿದೆ.

ಬೈಕ್ ಟ್ಯಾಕ್ಸಿ ಓಡಾಡಕ್ಕೆ ಕಾನೂನಿನ ಕುಣಿಕೆ: ಬೈಕ್ ಟ್ಯಾಕ್ಸಿಗಳಿಗೆ ಹೊಸ ನಿಯಮಗಳ ಅಗತ್ಯವಿಲ್ಲ, ಬದಲಿಗೆ 1988ರ ಮೋಟಾರು ವಾಹನ ಕಾಯ್ದೆಯಡಿಯಲ್ಲಿ ಅವು ಕಾರ್ಯನಿರ್ವಹಿಸಬಹುದು ಎಂದು ಅಗ್ರಿಗೇಟರ್‌ಗಳ ಪರವಾಗಿ ಹಿರಿಯ ವಕೀಲ ಧ್ಯಾನ್ ಚಿನ್ನಪ್ಪ ಪ್ರತಿಪಾದಿಸಿದ್ದರು, ಆದರೆ ಕಳೆದ ಐದು ವರ್ಷಗಳಿಂದ ನ್ಯಾಯಾಲಯದ ರಕ್ಷಣೆಯಲ್ಲಿ ಬೈಕ್ ಟ್ಯಾಕ್ಸಿಗಳು ಪರವಾನಗಿ ಇಲ್ಲದೆ ಕಾರ್ಯನಿರ್ವಹಿಸುತ್ತಿವೆ ಎಂದು ಸರಕಾರ ವಾದಿಸಿತ್ತು. ಹೀಗಾಗಿ ತಡೆ ನೀಡಲು ನಿರಾಕರಿಸಿದ ಹೈಕೋರ್ಟ್ ಮುಂದಿನ ವಿಚಾರಣೆಯನ್ನು ಜೂನ್ 24ರಂದು ನಿಗದಿಪಡಿಸಿ, ಅಲ್ಲಿಯವರೆಗೂ ಬೈಕ್ ಟ್ಯಾಕ್ಸಿ ಸೇವೆಗಳಿಗೆ ನಿರ್ಬಂಧ ಹೇರಿದೆ.

ರಾಜ್ಯ ಸರಕಾರದ ಸಾರಿಗೆ ಇಲಾಖೆ, ಆಟೋ-ರಿಕ್ಷಾ ಹಾಗೂ ಟ್ಯಾಕ್ಸಿ ಒಕ್ಕೂಟಗಳು ಬೈಕ್ ಟ್ಯಾಕ್ಸಿಗಳನ್ನು ನಿರಂತರವಾಗಿ ವಿರೋಧಿಸುತ್ತಾ ಬಂದಿವೆ. 2021ರಲ್ಲಿ ಆರಂಭವಾಗಿದ್ದ ಎಲೆಕ್ಟ್ರಿಕ್ ಬೈಕ್ ಟ್ಯಾಕ್ಸಿ ಯೋಜನೆಯನ್ನೂ ಸಹ ಮಹಿಳೆಯರ ಸುರಕ್ಷತೆ ಮತ್ತು ಕಾನೂನು ಉಲ್ಲಂಘನೆಗಳ ಕಾರಣದಿಂದ 2024ರಲ್ಲಿ ಸರಕಾರ ಹಿಂತೆಗೆದುಕೊಂಡಿತ್ತು. ಆದರೆ ಬೈಕ್ ಟ್ಯಾಕ್ಸಿಗಳು ಕಾರ್ಯಾಚರಣೆ ಮುಂದುವರಿಸಿದ್ದವು. 2022ರಲ್ಲಿ ಕರ್ನಾಟಕ ಹೈಕೋರ್ಟ್ ನೀಡಿದ್ದ ಮಧ್ಯಂತರ ಆದೇಶದ ಅನ್ವಯ ಅವು ಕಾರ್ಯಾಚರಣೆ ನಡೆಸುತ್ತಿದ್ದವು. ಈ ಆದೇಶದಲ್ಲಿ, ಕಾನೂನು ಸಮಸ್ಯೆಗಳು ಇತ್ಯರ್ಥವಾಗುವವರೆಗೂ ಬೈಕ್ ಟ್ಯಾಕ್ಸಿ ಆಪರೇಟರ್‌ಗಳ ವಿರುದ್ಧ ಬಲವಂತದ ಕ್ರಮ ಕೈಗೊಳ್ಳದಂತೆ ಸರಕಾರಕ್ಕೆ ನಿರ್ಬಂಧ ಹೇರಿತ್ತು. ಆದರೆ ಏಪ್ರಿಲ್‌ನಲ್ಲಿ ಆದೇಶವನ್ನು ಮಾರ್ಪಡಿಸಿ, ಬೈಕ್ ಟ್ಯಾಕ್ಸಿ ನಿಷೇಧಿಸುವ ಸರಕಾರದ ಹಕ್ಕನ್ನು ಎತ್ತಿ ಹಿಡಿದಿತ್ತು.

ಹೈಕೋರ್ಟ್ ಆದೇಶ ಏನಿತ್ತು?: ಮೋಟಾರು ವಾಹನ ಕಾಯ್ದೆ-1988ರ ಕಲಂ 93ರ ಅನುಸಾರ ರಾಜ್ಯ ಸರಕಾರವು ಮಾರ್ಗದರ್ಶಿ ಸೂತ್ರಗಳನ್ನು ರೂಪಿಸುವ ತನಕ ಸಂಬಂಧಿತ ಸಂಸ್ಥೆಗಳಾದ ಓಲಾ, ಉಬರ್ ಮತ್ತು ರಾಪಿಡೊ ತಮ್ಮ ಬೈಕ್ ಟ್ಯಾಕ್ಸಿ ಸೇವೆಯನ್ನು ಆರು ವಾರಗಳ ಒಳಗಾಗಿ ನಿರ್ಬಂಧಿಸಬೇಕು ಎಂದು ಹೈಕೋರ್ಟ್ ಆದೇಶ ನೀಡಿತ್ತು.

ಬೈಕ್ ಟ್ಯಾಕ್ಸಿ ಸೇವೆ ಮುಂದುವರಿಸುವ ಅನುಮತಿಗೆ ನಿರ್ದೇಶನ ನೀಡಬೇಕು ಎಂದು ಕೋರಿ, ಉಬರ್ ಇಂಡಿಯಾ ಸಿಸ್ಟಮ್ಸ್ ಪ್ರೈವೆಟ್ ಲಿಮಿಟೆಡ್, ರೊಪೈನ್ ಟ್ರಾನ್ಸ್‌ಪೋರ್ಟೇಶನ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್ ಮತ್ತು ಎಎನ್‌ಐ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ ಕಂಪನಿಗಳು ಸಲ್ಲಿಸಿದ್ದ ರಿಟ್ ಅರ್ಜಿಗಳ ವಿಚಾರಣೆ ನಡೆಸಿ ಕಾಯ್ದಿರಿಸಿದ್ದ ಆದೇಶವನ್ನು ನ್ಯಾಯಮೂರ್ತಿ ಬಿ.ಎಂ. ಶ್ಯಾಮ್ ಪ್ರಸಾದ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಪ್ರಕಟಿಸಿತ್ತು. ಬೈಕ್ ಟ್ಯಾಕ್ಸಿ ಸೇವೆಗೆ ಸಂಬಂಧಿಸಿದಂತೆ ನಿಯಂತ್ರಣ ಕ್ರಮಗಳನ್ನು ರೂಪಿಸಲು ಮತ್ತು ಸಾರಿಗೆಯೇತರ ವಾಹನಗಳನ್ನು ಸಾರಿಗೆ ವಾಹನಗಳನ್ನಾಗಿ ಪರಿವರ್ತಿಸಲು ರಾಜ್ಯ ಸರಕಾರಕ್ಕೆ ನಿರ್ದೇಶಿಸಲಾಗದು. ಹೀಗಾಗಿ ಈ ಕುರಿತು ಮಾರ್ಗದರ್ಶಿ ಸೂತ್ರಗಳು ಜಾರಿಯಾಗುವ ತನಕ ಬೈಕ್ ಟ್ಯಾಕ್ಸಿ ಸೇವೆ ಒದಗಿಸುತ್ತಿರುವ ಓಲಾ, ಉಬರ್ ಮತ್ತಿತರ ಸಂಸ್ಥೆಗಳು ತಮ್ಮ ಚಟುವಟಿಕೆಗಳನ್ನು ನಿರ್ಬಂಧಿಸಬೇಕು ಎಂದು ನ್ಯಾಯಪೀಠ ಆದೇಶಿಸಿತು.

ಬೈಕ್ ಟ್ಯಾಕ್ಸಿ ಸೇವೆಗಳ ನಿಷೇಧಕ್ಕೆ ಕಾರಣವೇನು?

ಬೈಕ್ ಟ್ಯಾಕ್ಸಿ ಸೇವೆಗಳ ನಿಯಂತ್ರಣಕ್ಕೆ ಸರಕಾರ ಇದುವರೆಗೂ ಯಾವುದೇ ಮಾರ್ಗಸೂಚಿಯನ್ನು ಹೊಂದಿಲ್ಲ. ಪ್ರಯಾಣಿಸುವವರ ಸುರಕ್ಷತೆ, ಹೆಲ್ಮೆಟ್ ಬಳಕೆ ಹಾಗೂ ಅವುಗಳ ಗುಣಮಟ್ಟ, ಚಾಲಕನ ಪರವಾನಗಿ, ಅಪಘಾತ, ಇನ್ಶ್ಯೂರೆನ್ಸ್ ಕುರಿತು ಬೈಕ್ ಟ್ಯಾಕ್ಸಿ ವಿರುದ್ಧ ಆರೋಪಗಳಿವೆ. ಬೈಕ್ ಟ್ಯಾಕ್ಸಿ ಸೇವೆಗಳಿಗೆ ಆರಂಭದಿಂದಲೂ ಪ್ರಬಲ ವಿರೋಧ ವ್ಯಕ್ತಪಡಿಸುತ್ತಿರುವ ಆಟೋ, ಟ್ಯಾಕ್ಸಿ ಚಾಲಕರು,ಕೋವಿಡ್ ಬಳಿಕ ಪ್ರಯಾಣಿಕರ ಸಂಖ್ಯೆ ಗಣನೀಯವಾಗಿ ಇಳಿಮುಖವಾಗಿದ್ದು, ಅದರ ನಡುವೆ ಬೈಕ್ ಟ್ಯಾಕ್ಸಿ ಸೇವೆಯು ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ ನೀಡಿರುವ ರಾಜ್ಯ ಸರಕಾರದ ಶಕ್ತಿ ಯೋಜನೆ ಗಳಿಂದ ಆರ್ಥಿಕ ಸಂಕಷ್ಟಕ್ಕೀಡಾಗುತ್ತಿದ್ದೇವೆ ಎನ್ನುತ್ತಿದ್ದಾರೆ. ಇದರ ನಡುವೆ ಸುರಕ್ಷತಾ ಕಾಳಜಿ ಮತ್ತು ಪರವಾನಗಿಗಳಿಲ್ಲದೆ ಕಾರ್ಯನಿರ್ವಹಿಸುವುದು ಕಾನೂನುಬಾಹಿರ ಎಂದು ಬೈಕ್ ಟ್ಯಾಕ್ಸಿ ಸೇವೆಗಳನ್ನು ಸ್ಥಗಿತಗೊಳಿಸಲಾಗಿದೆ. ಆದರೆ ಪರವಾನಗಿ, ತರಬೇತಿ ಮತ್ತು ವಿಮೆಗಾಗಿ ಸ್ಪಷ್ಟ ನಿಯಮಗಳನ್ನು ರೂಪಿಸುವ ಬದಲು ಸೇವೆಯನ್ನೇ ನಿಷೇಧ ಮಾಡುವ ನಿರ್ಧಾರ ಸೂಕ್ತವಲ್ಲ, ಇದು ಸಾವಿರಾರು ಚಾಲಕರನ್ನು ಆರ್ಥಿಕ ಸಂಕಷ್ಟಕ್ಕೆ ದೂಡಲಿದೆ ಎಂಬುದು ಬೈಕ್ ಟ್ಯಾಕ್ಸಿ ಸೇವೆಗಳ ಚಾಲಕರ ವಾದ.

ಬೈಕ್ ಟ್ಯಾಕ್ಸಿ ಸೇವೆಗಳ ನಿಷೇಧದಿಂದಾಗುವ ಪರಿಣಾಮ

ರಾಜ್ಯದಲ್ಲಿ ಹಲವರು ಬೈಕ್ ಟ್ಯಾಕ್ಸಿ ಸೇವೆ ಬಳಸುತ್ತಿದ್ದಾರೆ. ವಿದ್ಯಾರ್ಥಿಗಳು, ದಿನಗೂಲಿ ನೌಕರರು ಸೇರಿದಂತೆ ಅನೇಕರು ತಮಗೆ ಉದ್ಯೋಗ ಸಿಗದಿದ್ದಾಗ ಅಥವಾ ತಮ್ಮ ಬಿಡುವಿನ ಸಮಯದಲ್ಲಿ ಬೈಕ್ ಟ್ಯಾಕ್ಸಿ ಕೆಲಸ ಮಾಡುತ್ತಿದ್ದಾರೆ. ಕೋವಿಡ್ ಸಾಂಕ್ರಾಮಿಕ ರೋಗದ ನಂತರ ಬೈಕ್ ಟ್ಯಾಕ್ಸಿಗಳಲ್ಲಿ ಕೆಲಸ ಮಾಡುವವರ ಸಂಖ್ಯೆ ಹೆಚ್ಚಾಗಿದೆ, ಬೈಕ್ ಟ್ಯಾಕ್ಸಿ ಬಳಕೆದಾರರ ಸಂಖ್ಯೆಯೂ ಹೆಚ್ಚಾಗಿದೆ. ಬಸ್, ಆಟೋ ಸೇವೆಗಳು ವಿರಳವಾಗಿರುವ ಅನೇಕ ಸ್ಥಳಗಳಲ್ಲಿ ಬೈಕ್ ಟ್ಯಾಕ್ಸಿ ಕಂಪನಿಗಳು ಸೇವೆಯನ್ನು ಒದಗಿಸುತ್ತಿವೆ. ಆಟೋ, ಟ್ಯಾಕ್ಸಿಗಳಲ್ಲಿ ವಿಧಿಸುವ ಶುಲ್ಕಗಳಿಗಿಂತಲೂ ತುಸು ಕಡಿಮೆ ಹಾಗೂ ತ್ವರಿತವೆಂದು ಬೈಕ್ ಟ್ಯಾಕ್ಸಿ ಸೇವೆಯನ್ನು ಆಯ್ಕೆ ಮಾಡುವವರ ಸಂಖ್ಯೆ ಅಧಿಕವಾಗಿದೆ. ಈಗ ಬೈಕ್ ಟ್ಯಾಕ್ಸಿಗಳ ಸ್ಥಗಿತದಿಂದ ಅವರೆಲ್ಲರೂ ಸಹ ಪರ್ಯಾಯ ವೃತ್ತಿ ಆಯ್ಕೆಗಳನ್ನು ನೋಡಬೇಕಾದ ಅನಿವಾರ್ಯತೆ ಎದುರಾಗಿದೆ.

ಪ್ರಯಾಣಿಕರಿಗೇನು ಲಾಭ?

- ಇತರ ಸಂಚಾರಿ ವ್ಯವಸ್ಥೆಗೆ ಹೋಲಿಸಿದರೆ ಅಗ್ಗದ ಪ್ರಯಾಣ ದರ
- ಬಹುದೂರವನ್ನು ಬೇಗ ತಲುಪಲು ಸಾಧ್ಯ
- ಒಂಟಿ ಪ್ರಯಣಕ್ಕೆ ಉತ್ತಮ ವ್ಯವಸ್ಥೆ

ಸರಕಾರದಿಂದ ಮಾರ್ಗಸೂಚಿ ಸ್ಪಷ್ಟತೆ ಏಕಿಲ್ಲ?

- ಆಟೋ ರಿಕ್ಷಾ ಸಂಘಗಳಿಂದ ಸರಕಾರಕ್ಕೆ ಒತ್ತಡದ ಲಾಬಿ
- ಸರಕಾರಕ್ಕೆ ಹೆಚ್ಚುವರಿ ತೆರಿಗೆ ಆದಾಯ ಇಲ್ಲ
- ಬೈಕ್ ಟ್ಯಾಕ್ಸಿಯ ವ್ಯವಸ್ಥೆಯ ಮೇಲೆ ಹಿಡಿತ ಅಸಾಧ್ಯ

> ಬೈಕ್ ಟ್ಯಾಕ್ಸಿ ಸೇವೆ ಸ್ಥಗಿತವಾಗಿರುವುದರಿಂದ ಕರ್ನಾಟಕದಾದ್ಯಂತ ಒಂದು ಲಕ್ಷಕ್ಕೂ ಹೆಚ್ಚು ಜನರು ತಮ್ಮ ಕೆಲಸ ಕಳೆದುಕೊಂಡಿದ್ದಾರೆ. ಪ್ರತಿನಿತ್ಯ 10ರಿಂದ 12 ಗಂಟೆಗಳ ಕಾಲ ಕೆಲಸ ಮಾಡುತ್ತಿದ್ದರು. ಮನೆ ಬಾಡಿಗೆ, ವೈದ್ಯಕೀಯ ಶುಲ್ಕ, ಮಕ್ಕಳ ಶಾಲಾ ಶುಲ್ಕಗಳನ್ನೂ ಪಾವತಿಸುತ್ತಿದ್ದರು. ಆದ್ದರಿಂದ ನಿಷೇಧ ಹಿಂಪಡೆಯುವ ಮೂಲಕ ನಿತ್ಯದ ಸಂಪಾದನೆಗೆ ಅವಕಾಶ ನೀಡುವಂತೆ ರಾಹುಲ್ ಗಾಂಧಿ, ಸಿದ್ಧರಾಮಯ್ಯ ಅವರ ಬಳಿ ಮನವಿ ಮಾಡಿದ್ದೇನೆ.
>
> **-ಮೊಹಮ್ಮದ್ ಸಲೀಂ** ಬೈಕ್ ಟ್ಯಾಕ್ಸಿ ಅಸೋಸಿಯೇಷನ್ ಅಧ್ಯಕ್ಷ

> ಸಚಿವ ಡಿ.ಕೆ ಶಿವಕುಮಾರ್, ದಯವಿಟ್ಟು ಬೆಂಗಳೂರಿನಲ್ಲಿ ಬೈಕ್ ಟ್ಯಾಕ್ಸಿಗಳಿಗೆ ಅವಕಾಶ ನೀಡಿ. ಅವು ನಾಗರಿಕರಿಗೆ ಬಹಳ ಉಪಯುಕ್ತ ಸೇವೆ ನೀಡುತ್ತಿವೆ. ನಮ್ಮ ಮೆಟ್ರೋ ವೇಳಾಪಟ್ಟಿಯಲ್ಲಿ ಬಹಳ ಹಿಂದಿದೆ, ಬಸ್ ಸೇವೆ ಅಸಮರ್ಪಕವಾಗಿದೆ, ಜನಸಾಮಾನ್ಯರು ವೈಯಕ್ತಿಕ ವಾಹನಗಳನ್ನು ಹೆಚ್ಚು ಬಳಸುವುದೂ ಸಾಧ್ಯವಿಲ್ಲ. ದಯವಿಟ್ಟು ಮಧ್ಯಪ್ರವೇಶಿಸಿ ಮತ್ತು ಸಮಸ್ಯೆಯನ್ನು ತುರ್ತಾಗಿ ಪರಿಹರಿಸಿಕೊಡಿ.
>
> **-ಮೋಹನದಾಸ್ ಪೈ**
> ಆರಿನ್ ಕ್ಯಾಪಿಟಲ್ ಅಧ್ಯಕ್ಷ ಮತ್ತು ಬೈಕ್ ಟ್ಯಾಕ್ಸಿಗಳ ಬೆಂಬಲಿಗರು

> ಸರಕಾರದ ಈ ಆದೇಶದಿಂದಾಗಿ ಬೆಂಗಳೂರು ಸೇರಿದಂತೆ ಕರ್ನಾಟಕದಾದ್ಯಂತ ಸುಮಾರು ಒಂದು ಲಕ್ಷ ಮಂದಿ ತಮ್ಮ ಆದಾಯದ ಮೂಲವನ್ನು ಕಳೆದುಕೊಳ್ಳಲಿದ್ದಾರೆ. ಹಾಗಾಗಿ ಉಳಿದ ರಾಜ್ಯಗಳಲ್ಲಿ ಚಾಲ್ತಿಯಲ್ಲಿ ಇರುವಂತೆ ತಕ್ಷಣವೇ ಬೈಕ್ ಟ್ಯಾಕ್ಸಿ ಸೇವೆಯನ್ನು ಆರಂಭಿಸುವ ನಿಟ್ಟಿನಲ್ಲಿ ರಾಜ್ಯ ಸರಕಾರವು ಮುತುವರ್ಜಿಯ ಕ್ರಮ ವಹಿಸಬೇಕೆಂಬ ವಿನಂತಿ ನಮ್ಮದು.
>
> **-ಮೊಹಮ್ಮದ್ ಸಲೀಮ್**
> ಅಧ್ಯಕ್ಷರು, ನಮ್ಮ ಬೈಕ್ ಟ್ಯಾಕ್ಸಿ ಅಸೋಸಿಯೇಶನ್

ಸಿಎಂ ತವರೂರಿಗೆ ನವ ಮೈಸೂರಿನ ಕನಸು | 5 ವಲಯಗಳಡಿ ಅಭಿವೃದ್ಧಿಯ ಫೋಕಸ್

ನವ ಮೈಸೂರು ಯೋಜನೆಗೆ ಸಿದ್ಧತೆ ಹೈಟೆಕ್ ಸಿಟಿಯಾಗಿ ಬೆಳೆಸುವ ಬದ್ಧತೆ

ಜಿಲ್ಲಾ ನೋಟ

ಕೆ.ಜೆ.ಲೋಕೇಶ್ ಬಾಬು, ಮೈಸೂರು

ನಾಲ್ವಡಿಯವರ ದೂರದೃಷ್ಟಿಯ ಪರಿಕಲ್ಪನೆ ಯೊಂದಿಗೆ ರೂಪು ತಳೆದ ಮೈಸೂರು ಎಂಬ ಸಾಂಸ್ಕೃತಿಕ ನಗರಿಗೆ ಇದೀಗ ನವ ಮೈಸೂರಿನ ಕನಸು ಮೊಳಕೆಯೊಡೆದಿದೆ. ನಾಡಿನ ದೊರೆ ಎನಿಸಿಕೊಂಡ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಂದ ತವರು ಜಿಲ್ಲೆ ಮೈಸೂರಿಗೆ ಶಾಶ್ವತ ಕೊಡುಗೆ ಲಭಿಸುವ ಕನಸೊಂದು ನನಸಾಗುತ್ತಿದೆ...!

ಪಂಚ ಯೋಜನೆ ರೂಪ

ಇದಕ್ಕೆ ಪುಷ್ಟಿ ನೀಡುವಂತೆ ಐದು ಅಂಶಗಳನ್ನೊಳ ಗೊಂಡ ಪಂಚ ಯೋಜನೆಯ ರೂಪದಲ್ಲಿ ಬಿರುಸು ಗೊಂಡಿದೆ. ಇದಕ್ಕೆ ಪೂರಕವಾಗಿ ಸಿದ್ದರಾಮಯ್ಯ ಅವರ ನಂಬುಗೆಯ ಬಂಟ, ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್, ಇತ್ತೀಚೆಗೆ ಮೇಲಿಂದ ಮೇಲೆ ಮೈಸೂರು ಅಭಿವೃದ್ಧಿ ಕುರಿತಾದ ಸಭೆ, ಸಮಾಲೋಚನೆ, ಅಗತ್ಯ ಮಾಹಿತಿ ಸಂಗ್ರಹಿಸಿರುವುದು ನವ ಮೈಸೂರಿನ ಅನುಷ್ಠಾನ ಕುರಿತಾದ ಆಶಾಭಾವನೆ ಹೆಚ್ಚಿಸಿವೆ. ಬೃಹತ್ ಮೈಸೂರು ಮಹಾನಗರಪಾಲಿಕೆ ಯೋಜನೆ ಸಿಎಂ ಮನಸ್ಸಿನಲ್ಲಿ ಮೂಡಿರುವ ಹೊತ್ತಿನಲ್ಲೇ ಮೈಸೂರಿನ ಭವಿಷ್ಯ ಕುರಿತಾದ ಮತ್ತೊಂದು ಯೋಜನೆ ಜಾರಿಯಾಗುವ ಸಾಧ್ಯತೆ ಯಿದೆ ಎಂಬ ಸುದ್ದಿ ವಿಧಾನಸೌಧ ದಾಟಿ ಹೊರಬಂದಿದೆ. ಇದು ಮೈಸೂರಿಗರಲ್ಲಿ ಹೊಸ ಭರವಸೆ ಚಿಗರೊಡದಿದೆ. ದಿನದಿಂದ ದಿನಕ್ಕೆ ಬೆಳೆಯುತ್ತಿರುವ ಸಾಂಸ್ಕೃತಿಕ ನಗರಿ ಮೈಸೂರನ್ನು ಸುಸಜ್ಜಿತವಾಗಿಸುವಲ್ಲಿ ರಾಜ್ಯ ಸರಕಾರ ಮಹತ್ವಾಕಾಂಕ್ಷೆಯ ನವ ಮೈಸೂರು ಯೋಜನೆಯನ್ನು ಅನುಷ್ಠಾನಗೊಳಿಸಲು ಗಂಭೀರ ಚಿಂತನೆ ನಡೆಸಿದೆ.

ಬೃಹತ್ ನಗರ ಪಾಲಿಕೆ

ಮೈಸೂರಿನ ಸುತ್ತಮುತ್ತ ಲಿನ ಪ್ರದೇಶಗಳನ್ನು ನಗರ ವ್ಯಾಪ್ತಿಗೆ ತಂದು ಸಮಗ್ರ ಅಭಿವೃದ್ಧಿಗೆ ಪೂರಕವಾದ ಯೋಜನೆಗಳನ್ನು ಸಿದ್ಧಪಡಿಸಲಾಗುತ್ತಿದೆ. ರಾಜಧಾನಿ ಬೆಂಗಳೂರಿನಂತೆಯೇ ಮೈಸೂರು ಕೂಡ ವೇಗವಾಗಿ ಬೆಳೆಯುತ್ತಿರುವ ನಗರವಾ ಗಿದ್ದು, ಐಟಿ, ಬಿಟಿ, ಇತರೆ ಕೈಗಾರಿಕೆಗಳು, ವಸತಿ ಯೋಜನೆ ವೇಗವಾಗಿ ಹೆಚ್ಚಾಗುತ್ತಿವೆ. ನಗರ ವಿಸ್ತರಣೆಯಾ ಗುತ್ತಿದ್ದು, ಇದಕ್ಕೆ ಪೂರಕವಾಗಿ ಸಮಗ್ರ ಯೋಜನೆ ಸಿದ್ಧಪಡಿಸುವತ್ತ ರಾಜ್ಯ ಸರಕಾರ ಗಮನಹರಿ ಸಿರುವುದು ಸದ್ಯದ ಸಂಗತಿ. ನವ ಮೈಸೂರು ಯೋಜನೆಯ ಪರಿಕಲ್ಪನೆಯ ಭಾಗವಾಗಿ ಪ್ರಮುಖ ಐದು ಕ್ಷೇತ್ರಗಳನ್ನು ಅಭಿವೃದ್ಧಿಪಡಿಸುವ ಉದ್ದೇಶವಿದ್ದಂತಿದೆ.

ವಲಯಗಳ ವಿಸ್ತರಣೆ

ಉದ್ಯಮ ಮೈಸೂರು ಕ್ಷೇತ್ರದ ಯೋಜನೆಯಲ್ಲಿ ಅತ್ಯಾಧುನಿಕ ಉತ್ಪಾದನಾ ಹಬ್ ಸ್ಥಾಪನೆ ಮಾಡುವುದು, ಒಟ್ಟಾರೆ ಈ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಒತ್ತು ನೀಡುವುದು. ನಿಪುಣ ಮೈಸೂರು ವಲಯವನ್ನು ಸ್ಥಾಪಿಸಿ ಇದರ ಮೂಲಕ ಕೌಶಲ್ಯ ತರಬೇತಿ ಮತ್ತು ಕೌಶಲ್ಯಾಧಾರಿತ ಉದ್ಯೋಗಗಳಿಗೆ ಆದ್ಯತೆ ನೀಡುವುದು, ಉದ್ಯಮಶೀಲತ್ವ ವಿಶ್ವ ವಿದ್ಯಾಲಯ ಸ್ಥಾಪನೆ ಮಾಡುವುದು. ಸುಖೀವಾಸದಡಿಯಲ್ಲಿ ಸುಸಜ್ಜಿತವಾದ ಸಮಗ್ರ ಟೆಕ್ ಸಿಟಿ ನಿರ್ಮಾಣ ಮಾಡುವುದು. ಪ್ರವಾಸಿ ಮೈಸೂರು ಅಡಿಯಲ್ಲಿ ಸಮಗ್ರ ಆರೋಗ್ಯ, ಕ್ಷೇಮ ಮತ್ತು ಪುನಶ್ಚೇತನ ಕೇಂದ್ರ ಆರಂಭಿಸುವುದು. ಸಂಚಾರ ಮೈಸೂರು ಎಂಬ ಹೆಸರಿನ ಯೋಜನೆಯಡಿ ಮೈಸೂರು ಮೆಟ್ರೋ ಯೋಜನೆ ಪ್ರಸ್ತಾಪಿಸಲಾಗಿದೆ.

ಯೋಜನೆಯ ಪರಿಕಲ್ಪನೆ

- ಉದ್ಯಮ ಮೈಸೂರು
- ನಿಪುಣ ಮೈಸೂರು
- ಸುಖೀವಾಸ ಮೈಸೂರು
- ಪ್ರವಾಸೋದ್ಯಮ ಮೈಸೂರು
- ಸಂಚಾರ ಮೈಸೂರು

ಖಾಸಗಿ ಸಹಭಾಗಿತ್ವ

ಸಾರ್ವಜನಿಕ- ಖಾಸಗಿ ಸಹಭಾಗಿತ್ವ ಈ ಸಮಗ್ರ ಯೋಜನೆಯನ್ನು ಮಾದರಿಯಾಗಿ ಅನುಷ್ಠಾನ ಗೊಳಿಸುವ ಬಗ್ಗೆ ಚಿಂತನೆ ನಡೆಸಲಾಗಿದೆ. ಹೀಗಾಗಿ ಸರಕಾರದ ಮೇಲೆ ಯಾವುದೇ ಆರ್ಥಿಕ ಹೊರೆ ಬೀಳುವುದಿಲ್ಲ ಎನ್ನಲಾಗಿದೆ. ಖಾಸಗಿ ಸಂಸ್ಥೆಗಳ ಸಹಭಾಗಿತ್ವದಲ್ಲಿ ಅನುಷ್ಠಾನಕ್ಕೆ ತಂದು ಸಾಂಸ್ಕೃತಿಕ ನಗರವನ್ನು ಸಮಗ್ರ ಅಭಿವೃದ್ಧಿಪಡಿಸುವ ಉದ್ದೇಶ ಈ ಯೋಜನೆ ಒಳಗೊಂಡಿದೆ.

ಬಂಡವಾಳ ಆಕರ್ಷಣೆ

ಬಂಡವಾಳ ಹೂಡಿಕೆ ಯಲ್ಲಿ ಬೆಂಗಳೂರಿನ ನಂತರದ ಸ್ಥಾನದಲ್ಲಿ ಮೈಸೂರು ನಗರವಿದ್ದು, ಇಲ್ಲಿ ಹೂಡಿಕೆ ಯಾಗುತ್ತಿರುವ ಬಂಡವಾಳದ ಮೊತ್ತ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿದೆ. ಮೈಸೂರು ಬಂಡವಾಳ ಹೂಡಿಕೆಗೆ ನೆಚ್ಚಿನ ತಾಣವಾಗಿದ್ದು, ಉದ್ಯಮಿಗಳನ್ನು ಆಕರ್ಷಿಸುವ ದಿಸೆಯಲ್ಲಿ ಯೋಜನೆ ರೂಪಿಸಲಾಗುತ್ತಿದೆ. ಯಾವುದೇ ತೊಂದರೆ ಇಲ್ಲದೆ ಉದ್ಯಮಗಳನ್ನು ಸ್ಥಾಪಿಸಲು ಹೂಡಿಕೆದಾರರಿಗೆ ತ್ವರಿತವಾಗಿ ಭೂಮಿ ಹಂಚಿಕೆ, ಆವಿಷ್ಕಾರ ಆಧಾರಿತ ನೀತಿಗಳನ್ನು ರೂಪಿಸುವುದು ಮತ್ತು ಮೂಲಸೌಕರ್ಯ ಹೂಡಿಕೆಗೆ ಹೆಚ್ಚಿನ ಆದ್ಯತೆ ನೀಡಲು ಸರಕಾರ ಅಗತ್ಯ ನೆರವು ನೀಡಲು ಸಿದ್ಧವಿದೆ ಎಂದು ಗೊತ್ತಾಗಿದೆ.

ಡಿಪಿಆರ್ ತಯಾರಿ ಶೀಘ್ರ

ಮೈಸೂರು ನಗರಪಾಲಿಕೆಯನ್ನು ಬೃಹತ್ ಮೈಸೂರು ಮಹಾ ನಗರಪಾಲಿಕೆಯನ್ನಾಗಿ ಮೇಲ್ದರ್ಜೆಗೇರಿಸಲು ಉದ್ದೇಶಿಸಲಾಗಿದೆ. ಈ ಸಂಬಂಧ ಪ್ರಸ್ತಾಪಿತ ಬೃಹತ್ ಮೈಸೂರು ಮಹಾನಗರ ಪಾಲಿಕೆಯ ಎಲ್ಲೆ(ಗಡಿ)ಯನ್ನು ಗುರುತಿಸಿ 2018ರ ವಾರ್ಡ್ ಪುನರ್ ವಿಂಗಡನೆ ಪರಿಗಣಿಸಿ ಹಾಲಿ ಮೈಸೂರು ಮಹಾನಗರ ಪಾಲಿಕೆ ಸರಹದ್ದಿನ ನಗರಸಭೆ, ಪಪಂ ಹಾಗೂ ಗ್ರಾಪಂಗಳ ವಿಲೀನಗೊಳಿಸಿ ಯೋಜನಾಬದ್ಧ ಬೆಳವಣಿಗೆಗೆ ಉದ್ದೇಶಿಸಲಾಗಿದೆ. ಮೈಸೂರು ಸುತ್ತಮುತ್ತಲಿನ 20ರಿಂದ 30 ಹಳ್ಳಿಗಳನ್ನು ಬೃಹತ್ ಮೈಸೂರು ಮಹಾ ನಗರ ಪಾಲಿಕೆ ವ್ಯಾಪ್ತಿಗೆ ಸೇರಿಸಿಕೊಂಡು ವಿಸ್ತೃತವಾದ ಯೋಜನಾ ವರದಿ ಸಿದ್ಧಪಡಿಸಲಾಗುತ್ತಿದೆ.

ಮೂಲ ಸೌಕರ್ಯದ ಸವಾಲು

ಪ್ರಸ್ತುತ ಮೈಸೂರು ನಗರಪಾಲಿಕೆ ವ್ಯಾಪ್ತಿಯ ಜನಸಂಖ್ಯೆ 13.30 ಲಕ್ಷದಷ್ಟಿದ್ದು, ನಗರಪಾಲಿಕೆ ಸರಹದ್ದಿನಂಚಿನ ನಗರಸಭೆ, ಪಪಂ ಮತ್ತು ಗ್ರಾಪಂಗಳನ್ನು ಸೇರಿಸಿಕೊಂಡರೆ ಅದು 16.80 ಲಕ್ಷ ದಾಟುತ್ತದೆ. ಮೈಸೂರಿನಲ್ಲಿ ಕುಡಿವ ನೀರು, ಇತರೆ ಮೂಲ ಸೌಕರ್ಯಗಳಿಗೆ ಕೊರತೆ ಇಲ್ಲ, ಹೀಗಾಗಿ ಬೃಹತ್ ಪಾಲಿಕೆ ಮಾಡಲು ಯಾವುದೇ ರೀತಿ ಅಡೆತಡೆಯೂ ಇಲ್ಲ. ಆದರೆ ವಾಸ್ತವ ಸಂಗತಿ ಏನೆಂದರೆ ನಗರ ಪಾಲಿಕೆ ವ್ಯಾಪ್ತಿಯ ಕೆಲ ಬಡಾವಣೆಗಳಲ್ಲಿ ವಾರಕ್ಕೆ ಎರಡು ಬಾರಿ ನೀರು ನೀಡಲಾಗುತ್ತಿದೆ. ಇನ್ನು ಕೆಲ ಬಡಾವಣೆ ತಲೆಎತ್ತಿ ದಶಕಗಳೇ ಕಳೆದಿದ್ದರೂ, ಇಂದಿಗೂ ಬೋರ್ ವೆಲ್ ನೀರನ್ನೇ ಆಶ್ರಯಿಸಲಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಬೃಹತ್ ಮಹಾನಗರಪಾಲಿಕೆ ಅನಿವಾರ್ಯವೂ ಆಗಿದೆ!

ಬಗರಹುಕುಂ ಸಾಗವಳಿದಾರರ ಸಂಕಷ್ಟ | ಶಾಸಕರ ನೇತೃತ್ವದ ಸಮಿತಿಗಳೂ ವಿಫಲ

ದಶಕಗಳಿಂದ ಸಿಕ್ಕಿಲ್ಲ ಹಕ್ಕು ಪತ್ರ ಮಲೆನಾಡಿನ ರೈತರು ಅತಂತ್ರ

ಜಿಲ್ಲಾ ನೋಟ

ಹೆಗ್ಗೆರೆ ರೇಣುಕಾರಾಧ್ಯ, ಶಿವಮೊಗ್ಗ

ಜಿಲ್ಲೆಯಲ್ಲಿ ಬಗರಹುಕುಂ ಭೂಮಿಯನ್ನು ಸಾಗವಳಿ ಮಾಡುತ್ತಿರುವ ರೈತರು ಹಕ್ಕು ಪತ್ರಕ್ಕೆ ಚಾತಕ ಪಕ್ಷಿಯಂತೆ ಕಾದರೂ ಭೂಮಿ ಹಕ್ಕು ಪತ್ರ ಕೊಡಿಸುವಲ್ಲಿ ಶಾಸಕರ ನೇತೃತ್ವದ ಸಮಿತಿಗಳು ಕೂಡ ವಿಫಲವಾಗಿವೆ. ಇದು ಹೊಸ ಸಮಸ್ಯೆಯೊಂದನ್ನು ಹುಟ್ಟುಹಾಕಿದೆ.

ಜಿಲ್ಲೆಯಲ್ಲಿ ಬಗರ್ ಹುಕುಂ ಭೂಮಿಯ ಹಕ್ಕು ಪತ್ರ ನೀಡಲು ಸರಕಾರ ಮೀನಮೇಷ ಎಣಿಸುತ್ತಿರುವ ಸಂಗತಿಗಳು ಬೆಳಕಿಗೆ ಬಂದಿದೆ.

ಏನಿದು ಬಗರ್ ಹುಕುಂ

ಬಗರ್ ಹುಕುಂ ಅಥವ ಕೃಷಿ ಜಮೀನು ಅಕ್ರಮ ಸಕ್ರಮ ಅಂದರೆ ಅನಾದಿ ಕಾಲದಿಂದ ರೈತರು ಸರಕಾರಿ ಭೂಮಿ ಕೃಷಿಗೆ ಸಾಗುವಳಿ ಮಾಡಿಕೊಂಡು ಬರುತ್ತಿದ್ದಾರೆ. ಆದರೆ ಆ ಜಮೀನು ಅವರ ಹೆಸರಿಗೆ ಖಾತೆ ಆಗಿರುವುದಿಲ್ಲ. ಇಂತಹ ಜಮೀನುಗಳನ್ನು ನಿಯಮ ಪ್ರಕಾರ ಕೃಷಿ ಮಾಡುವ ಸಾಗುವಳಿ ದಾನಿಗೆ ಕೆಲವು ನಿಬಂಧನೆ ಪ್ರಕಾರ ಖಾತೆ ಮಾಡಿ ಕೊಡುವುದು. ಅಂದರೆ ಅಕ್ರಮ ಸಾಗುವಳಿಯನ್ನೆ ಸರಕಾರ ಸಕ್ರಮ ಮಾಡಿ ಹಕ್ಕುಪತ್ರ ಕೊಡುವುದೇ ಬಗರ್‌ಹುಕುಂ.

ದರಖಾಸ್ತು ಕಾನೂನು

ಎಂಬತ್ತರ ದಶಕದ ಪೂರ್ವದಲ್ಲಿ ಭೂ ರಹಿತ ರೈತರಿಗೆ ಜೀವನೋಪಾಯಕ್ಕೆ 2 ಎಕರೆ ದರಖಾಸ್ತು ಮಂಜೂರು ಮಾಡುವ ಕಾನೂನು ಜಾರಿಯಲ್ಲಿತ್ತು. ಇದಾದ ಬಳಿಕವೂ ರೈತರು ತಮಗೆ ಅನುಕೂಲವಾದ ಕಡೆ ಹೊಟ್ಟೆಪಾಡಿಗಾಗಿ ಅದು ಯಾವ ಭೂಮಿ ಎಂಬ ಪರಿವೇ ಇಲ್ಲದೆ ಸಾಗುವಳಿ ಮಾಡಲಾರಂಭಿಸಿದರು. ಇಂತಹ ರೈತರಿಗೆ ಭೂಮಿ ಹಕ್ಕುದಾರಿಕೆ ನೀಡುವ ಸಲುವಾಗಿಯೇ ಕರ್ನಾಟಕ ಭೂ ಕಂದಾಯ ಕಾಯಿದೆ 1964ರ ಅನ್ವಯ 1991ರಲ್ಲಿ ನಮೂನೆ 50, 1999ರಲ್ಲಿ ನಮೂನೆ 53, 2018ರಲ್ಲಿ ನಮೂನೆ 57ರಲ್ಲಿ ಅರ್ಜಿ ಸ್ವೀಕರಿಸುವ ಪ್ರಕ್ರಿಯೆ ಆರಂಭಗೊಂಡವು. ನಮೂನೆ 57ರ ಅಡಿ ಅರ್ಜಿ ಸ್ವೀಕರಿಸುವ ಅವಧಿಯನ್ನು ಸರಕಾರ 2023ನೇ ಏಪ್ರಿಲ್‌ವರೆಗೆ ವಿಸ್ತರಿಸಿತ್ತು.

ಕಾಗೋಡು ಅವಕಾಶ

ಶಿವಮೊಗ್ಗ ಜಿಲ್ಲೆಯಲ್ಲಿ ಮಾತ್ರ ಫಾರಂ-57ರ ಅನುಸಾರ ಅರ್ಜಿ ಸಲ್ಲಿಸಲು ಕಾಗೋಡು ತಿಮ್ಮಪ್ಪನವರು ಕಂದಾಯ ಸಚಿವರಾಗಿದ್ದಾಗ ಅವಕಾಶ ಮಾಡಿಕೊಟ್ಟಿದ್ದರು. ನಂತರದಲ್ಲಿ ಎಲ್ಲ ಜಿಲ್ಲೆಗಳಲ್ಲೂ ಇಂತಹ ಅರ್ಜಿಗಳು ಸಲ್ಲಿಕೆಯಾದವು. ಆದರೆ ಶಿವಮೊಗ್ಗದಲ್ಲಿ ಮಾತ್ರ ಈ ಅರ್ಜಿಗಳ ವಿಲೇವಾರಿ ಬಹಳಷ್ಟು ಗೊಂದಲಕ್ಕೆ ಈಡಾಗಿದೆ. ಏಕೆಂದರೆ ಸಾಕಷ್ಟು ಪ್ರಮಾಣದ ಅರಣ್ಯ ಭೂಮಿ ಒತ್ತುವರಿ ಮಾಡಿ ಅರಣ್ಯವನ್ನೇ ಕಬಳಿಸಿದ್ದಾರೆ ಎಂಬ ಸಮೀಕ್ಷಾ ವರದಿಗಳು ಬಂದ ನಂತರ ಈ ಅಕ್ರಮ ಸಕ್ರಮ ದಡಿಯ ಅರ್ಜಿಗಳ ವಿಲೇವಾರಿ ತಡವಾಗಿದೆ.

> 2017 ರಿಂದ 2020ರ ವರೆಗೆ ತೀರ್ಥಹಳ್ಳಿ ತಾಲೂಕಿನಲ್ಲಿ ಫಾರಂ-57 ರ ನಿಯಮದಡಿ 16,347 ಅರ್ಜಿದಾರರು ಬಗರ್‌ಹುಕುಂ ಭೂ ಮಂಜೂ ರಾತಿ ಕೋರಿ ಅರ್ಜಿ ಸಲ್ಲಿಸಿದ್ದಾರೆ. ಅವರಲ್ಲಿ 54 ರೈತರಿಗೆ ಮಾತ್ರ ಹಕ್ಕುಪತ್ರ ನೀಡಲಾಗಿದೆ. 2023ರ ನಂತರ ರೈತರಿಗೆ ಭೂ ಮಂಜೂರಾತಿ ಆಗಿಲ್ಲ. ಈಗ ಮಂಜೂರಾತಿಗೆ 141 ಅರ್ಜಿ ಮಾತ್ರ ಅರ್ಹತೆ ಪಡೆದಿವೆ. ಉಳಿದ ಅರ್ಜಿ ತಿರಸ್ಕೃತವಾಗಿವೆ. ಸರಕಾರ ಇದುವರೆಗೆ ಈ ವಿಚಾರದಲ್ಲಿ ತಾನು ಹೇಳಿದಂತೆ ನಡೆದು ಕೊಂಡಿಲ್ಲ. ಮಲೆನಾಡಿನ ರೈತರಿಗೆ ಹಕ್ಕು ಪತ್ರ ನೀಡುವ ಬಗ್ಗೆ ತಲೆಕೆಡಿಸಿಕೊಂಡಿಲ್ಲ. ಇಂತಹ ವ್ಯವಸ್ಥೆ ಯಲ್ಲಿ ನಾವು ರೈತರಿಗೆ ಸಹಾಯ ಮಾಡದೇ ಇದ್ದರೆ, ಶಾಸಕರಾಗಿ ಏನು ಪ್ರಯೋಜನ ಹೇಳಿ?
>
> **-ಅರಗ ಜ್ಞಾನೇಂದ್ರ,** ಶಾಸಕರು, ತೀರ್ಥಹಳ್ಳಿ

ಹಕ್ಕು ಪತ್ರ ವಿಳಂಬ ಏಕೆ

ಬಗರ ಹುಕುಂ ಫಾರಂ 57ರ ಅಡಿಯಲ್ಲಿ ಅರ್ಜಿ ಸಲ್ಲಿಸಿದ ರೈತರಿಗೆ ಇದುವರೆಗೂ ಹಕ್ಕು ಪತ್ರ ನೀಡಲು ಸಾಧ್ಯವಾಗಿಲ್ಲದಕ್ಕೆ ಹಲವು ಕಾರಣಗಳನ್ನು ಶಿವಮೊಗ್ಗ ಜಿಲ್ಲಾಡಳಿತ ನೀಡುತ್ತಿದೆ. ಅರಣ್ಯ ಹಾಗೂ ಕಂದಾಯ ಇಲಾಖೆಗಳ ಜಂಟಿ ಸರ್ವೇ ಇದುವರೆಗೆ ಕೆಲವು ತಾಲೂಕುಗಳಲ್ಲಿ ಮುಗಿದೇ ಇಲ್ಲ. ಇದರಿಂದ ಅರ್ಜಿಗಳ ವಿಲೇವಾರಿ ಮಾಡಲು ಸಮಿತಿಗೆ ಸಾಧ್ಯವಾಗುತ್ತಿಲ್ಲ. ಎರಡೂ ಇಲಾಖೆಗಳಲ್ಲಿ ಸರ್ವೆ ಕಾರ್ಯ ಮಾಡಲು ಅನೇಕ ಸಮಸ್ಯೆ ತಲೆದೋರಿದೆ. ಅರಣ್ಯ ಇಲಾಖೆ ನಿಯಮಗಳ ಅನ್ವಯ ಕೆಲ ಅರಣ್ಯ ಭೂಮಿಗೆ ಹಕ್ಕು ಪತ್ರ ನೀಡಲು ಬರುವುದಿಲ್ಲ ಎಂಬ ಕಾರಣ ಮುಂದಿಟ್ಟು ಅರ್ಜಿಗಳನ್ನು ತಿರಸ್ಕರಿಸಲಾಗಿದೆ.

ತೀರ್ಥಹಳ್ಳಿಯ ಕತೆ

ಜಿಲ್ಲೆಯ ತೀರ್ಥಹಳ್ಳಿ ತಾಲೂಕುವೊಂದರಲ್ಲಿ 16 ಸಾವಿರಕ್ಕೂ ಹೆಚ್ಚು ಅರ್ಜಿಗಳು ಸಲ್ಲಿಕೆಯಾಗಿವೆ. ಆದರೆ ಕೇವಲ 54 ರೈತರಿಗೆ ಮಾತ್ರ ಹಕ್ಕುಪತ್ರ ನೀಡಲಾಗಿದೆ. ರೈತರಿಗೆ ಹಕ್ಕು ಪತ್ರ ನೀಡಲು ತಾಂತ್ರಿಕ ಸಮಸ್ಯೆಗಳ ಕಾರಣ ನೀಡಲಾಗುತ್ತಿದೆ. ಇದು ಸರಿಯಾದ ಮಾರ್ಗವಲ್ಲ. ಸರಕಾರ ಇದರ ಬಗ್ಗೆ ಗಂಭೀರವಾಗಿ ಯೋಚಿಸಿ ಒಂದು ಸರಿಯಾದ ನಿರ್ಧಾರ ತೆಗೆದುಕೊಳ್ಳಬೇಕು ಎನ್ನುತ್ತಾರೆ ಜಿಲ್ಲೆಯ ಕೆಲ ಶಾಸಕರು.

ಶಿವಮೊಗ್ಗ ಜಿಲ್ಲೆ ಸಮಸ್ಯೆ

ಶಿವಮೊಗ್ಗ ಜಿಲ್ಲೆಯಲ್ಲಿ ಅರಣ್ಯಭೂಮಿ ಹೆಚ್ಚಿರುವುದರಿಂದ ಹಾಗೂ ಸಾಗರ, ತೀರ್ಥಗಳ್ಳಿ, ಹೊಸನಗರ ತಾಲೂಕಿನ ಅನೇಕ ಕಡೆಗಳಲ್ಲಿ ಅರಣ್ಯ ಭೂಮಿ ಒತ್ತುವರಿ ಮಾಡಿಕೊಂಡು ಅದನ್ನು ಬಗರ್ ಹುಕುಂ ಘೋಷಣೆ ಮಾಡಿದ್ದಾರೆ. ಇದರಿಂದ ಹಕ್ಕು ಪತ್ರ ನೀಡಲು ಸಾಧ್ಯವಿಲ್ಲ. ಅದನ್ನು ಹೊರತುಪಡಿಸಿ ಜಂಟಿ ಸರ್ವೆ ಕಾರ್ಯ ನಡೆಸಿದ ಎಲ್ಲ ಭೂಮಿಗಳಿಗೆ ಹಕ್ಕುಪತ್ರ ನೀಡಲಾಗಿದೆ ಎಂದು ಕಂದಾಯ ಇಲಾಖೆ ಅಧಿಕಾರಿಗಳು ಹೇಳುತ್ತಾರೆ. ಶಿವಮೊಗ್ಗ ಜಿಲ್ಲೆಯಲ್ಲಿ 60 ಸಾವಿರದಷ್ಟು ಅರ್ಜಿಗಳು ಹಕ್ಕು ಪತ್ರದ ಇತ್ಯರ್ಥಕ್ಕಾಗಿ ಕಾಯುತ್ತಿವೆ. ಶಾಸಕರ ನೇತೃತ್ವದ ಸಮಿತಿಗಳಿಗೆ ಹಕ್ಕು ಪತ್ರ ನೀಡಲು ನೂರಾರು ಕಾರಣಗಳು ಅಡ್ಡಿಯಾಗುತ್ತಿದ್ದು ತಾವೂ ಅಸಹಾಯಕರಾಗಿದ್ದೇವೆ ಎಂಬ ಉತ್ತರ ಬರುತ್ತದೆ.

ನಿಯಮ ಸರಳೀಕರಿಸಿ

ಅಧಿಕಾರಿಗಳು ಈ ಅರ್ಜಿಗಳ ಬಗೆಹರಿಸಲು ಸರ್ವ ಪ್ರಯತ್ನ ಮಾಡುತ್ತಿದ್ದಾರೆ. ಬಗರ್‌ಹುಕುಂ ಅರ್ಜಿಗಳ ವಿಲೇವಾರಿ ಸಮರೋಪಾದಿ ಮಾಡಿದರೆ ಮಾತ್ರ ದಶಕಗಳ ಅರ್ಜಿಗೆ ಮುಕ್ತಿ ಸಿಗುವುದು ಸಾಧ್ಯವಿದೆ. ಭೂ ಹಕ್ಕು ಮಂಜೂರಾತಿಗೆ ಈಗ ಇರುವ ನಿಯಮಗಳೇ ಅಡ್ಡಿ ಆದಂತಿದೆ. ಅದನ್ನು ಸರಳಗೊಳಿಸಿದರೆ ಮಾತ್ರ ಅರ್ಜಿ ಇತ್ಯರ್ಥಪಡಿಸಬಹುದು ಎಂಬ ಸಲಹಾತ್ಮಕ ಅಭಿಪ್ರಾಯವನ್ನು ಅಧಿಕಾರಿಗಳು ಸರಕಾರಕ್ಕೆ ಮುಟ್ಟಿಸಿದ್ದಾರೆ. ಆದರೆ, ಸರಕಾರ ಈ ಬಗ್ಗೆ ಅಂತಿಮ ಅಖೈರು ತೀರ್ಮಾನಕ್ಕೆ ಬಂದಂತಿಲ್ಲ!

ವಿಶ್ವವಾಣಿ ಬೆಂಗಳೂರು 17-06-2025, ಮಂಗಳವಾರ @vishwavaninews
ಆರಾಮ
ಅನುದಿನವೂ ವಿರಾಮಕ್ಕೆ ಒಂದು ನೆಪ

ಚಿತ್ರವಿಹಾರ

ಜಂಟೀ ಖಾತೆಯ ಸ್ವಾರಸ್ಯ

● ಬೇಲೂರು ರಾಮಮೂರ್ತಿ

ಆತ ನಿವೃತ್ತ ಸರ್ಕಾರೀ ಹಿರಿಯ ಅಧಿಕಾರಿ. ತನ್ನ ಪತ್ನಿಯೊಂದಿಗೆ ಬ್ಯಾಂಕಿನಲ್ಲಿ ಜಂಟಿಯಾಗಿ ಒಂದು ಖಾತೆ ಹೊಂದಿದ್ದರು. ಸಾಕಷ್ಟು ದುಡ್ಡು ಖಾತೆಯಲ್ಲಿತ್ತು. ಒಂದು ದಿನ ಆ ಹಿರಿಯರು ಹೊರಗೆ ಹೋಗುವಾಗ ತಮ್ಮ ಮೊಬೈಲ್ ಫೋನನ್ನು ಮನೆಯಲ್ಲೇ ಮರೆತು ಹೋಗಿದ್ದರು. ಸುಮಾರು ಮೂರು ಗಂಟೆಗಳ ನಂತರ ತುಸು ಗಾಬರಿಯಿಂದಲೇ ಮನೆಗೆ ಬಂದವರು 'ನನ್ನ ಮೊಬೈಲಿಗೆ ಯಾವುದಾದರೂ ಕರೆ ಬಂದಿತ್ತಾ ಅಂತ ಕೇಳಿದರು. ಆಗ ಆತನ ಪತ್ನಿ ಹೌದು ಯಾರೋ ಬ್ಯಾಂಕಿನಿಂದ ಕರೆ ಮಾಡುತ್ತಿದ್ದೇವೆ ಎಂದು ಹೇಳಿ ಒಟಿಪಿ ಸಂಖ್ಯೆ ಕೇಳುತ್ತಿದ್ದರು ಅಂತ ಹೇಳಿದರು.

ಆಗ ಹಿರಿಯರು ಮತ್ತಷ್ಟು ಗಾಬರಿಯಿಂದ ಏನು ನಮ್ಮ ಒಟಿಪಿ ಸಂಖ್ಯೆ ಅವರಿಗೆ ಕೊಟ್ಯಾ. ಹಾಗಿದ್ದರೆ ಇವತ್ತು ನಾವು ಬಹಳ ದೊಡ್ಡ ಮೊತ್ತವನ್ನೇ ಕಳೆದುಕೊಳ್ಳುತ್ತೇವೆ. ಈ ಕೂಡಲೇ ನಾನು ಬ್ಯಾಂಕಿಗೆ ಮಾಹಿತಿ ಕೊಡಬೇಕು ಅಂದರು. ಕೂಡಲೇ ತಮ್ಮ ಮೊಬೈಲಿಂದ ಬ್ಯಾಂಕಿಗೆ ಕರೆ ಮಾಡಿದರು. ಅವರ ಅದೃಷ್ಟ ಅವರ ಎಲ್ಲಾ ಹಣವೂ ಭದ್ರವಾಗಿತ್ತು. ಆಗ ಅವರು ನನ್ನ ಹೆಂಡತಿ ಯಾರೋ ಕರೆ ಮಾಡಿದರು ಎಂದು ಯಾರು ಅಂತಾನೂ ಕೇಳದೇ ನಮ್ಮ ಒಟಿಪಿ ಸಂಖ್ಯೆ ಕೊಟ್ಟುಬಿಟ್ಟಿದ್ದಾಳೆ. ನನ್ನ ಖಾತೆಯಿಂದ ಯಾವುದೇ ಹಣ ಹಿಂಪಡೆಯುವ ಮನವಿ ಬಂದರೆ ಸ್ವೀಕರಿಸಬೇಡಿ. ಕೂಡಲೇ ನನ್ನನ್ನು ಸಂಪರ್ಕಿಸಿ ಎಂದು ಹೇಳಿದರು.

ನಂತರ ಹೆಂಡತಿಯ ಕಡೆ ತಿರುಗಿ ನಿನಗೆ ನೆನಪಿದೆಯಾ ನಮ್ಮ ಒಟಿಪಿ ಸಂಖ್ಯೆಯನ್ನೇ ಅವರಿಗೆ ಹೇಳಿದೆಯಾ ಅಂತ ಕೇಳಿದರು. ಆಗ ಆಕೆ, ಹೌದು ಕೊಟ್ಟೆ, ಬ್ಯಾಂಕಿನವರು ಪದೇ ಪದೇ ಫೋನ್ ಮಾಡಿ ಸರಿಯಾದ ಒಟಿಪಿ ಕೊಡಿ ಕೊಡಿ ಅಂತ ಕೇಳ್ತಾನೇ ಇದ್ರು. ಕೊನೆಗೆ ಅವರಿಗೆ ಸಿಟ್ಟು ಬಂದ ಹಾಗಿತ್ತು ಇದು ಸರಿಯಾದ ಒಟಿಪಿ ಅಲ್ಲ ಅಂತ ಕೂಗಾಡಿದರು. ಮತ್ತೆ ಕರೆ ಮಾಡಲಿಲ್ಲ ಅಂದರು

ಮತ್ತೆ ಹಿರಿಯರು ನೀನು ಕೊಟ್ಟ ಒಟಿಪಿ ಸಂಖ್ಯೆ ಯಾವುದು ಅಂತ ಕೇಳಿದರು. ಅದಕ್ಕೆ ಆಕೆ ಬ್ಯಾಂಕಿನ ಖಾತೆಯ ಒಟಿಪಿ ಸಂಖ್ಯೆ 8406 ಅಂತ ಬಂದಿತ್ತು; ನಮ್ಮದು ಜಂಟಿ ಖಾತೆ ಅಲ್ವಾ. ಅದಕ್ಕೇ ನಿಮ್ಮ ಪಾಲಿನದು, ಅಂದರೆ, ಒಟಿಪಿಯ ಅರ್ಧದಷ್ಟು ಅಂದರೆ 4203 ಕೊಟ್ಟೆ. ಅವರಿಗೆ ನನ್ನ ಒಟಿಪಿನೂ ಬೇಕು ಅಂದಿದ್ದರೆ ಅವರು ನನಗೆ ಫೋನ್ ಮಾಡಬೇಕಿತ್ತು. ಆದರೆ ಮಾಡಲಿಲ್ಲ' ಅಂದರು.

ಆಗ ಆ ಹಿರಿಯರು 'ಅಯ್ಯೋ ನಿನ್ನನ್ನು ನಾನು ದಡ್ಡಿ ಅನ್ನಾ ಇಲ್ಲಾ ಬುದ್ಧಿವಂತೆ ಅನ್ನಾ, ಏನಂದ್ರೂ ಸರಿ, ನಿನ್ನ ಲೆಕ್ಕಾಚಾರದಿಂದಾಗಿ ನಮ್ಮ ಖಾತೆಯ ಹಣ ಭದ್ರವಾಗಿದೆ' ಅಂದು ಹೆಂಡತಿಯನ್ನು ತಬ್ಬಿಕೊಂಡರು.

ಧ್ವನಿ ಕಳೆದುಕೊಂಡವರಿಗೆ ಎಐ ಸಹಾಯ!

ಪಾರ್ಶ್ವವಾಯು ಮೊದಲಾದ ಕಾರಣದಿಂದ ಧ್ವನಿ ಕಳೆದುಕೊಂಡವರಿಗೆ, ಕೃತಕ ಬುದ್ಧಿಮತ್ತೆ (ಎಐ) ಮೂಲಕ ಸಹಜ ಮಾತು ಬರುವಂತಹ ಸಾಧನವನ್ನು ಭಾರತೀಯ ಮೂಲಕ ವಿಜ್ಞಾನಿಗಳು ಕಂಡು ಹಿಡಿದಿದ್ದು, ಇದೊಂದು ಪ್ರಮುಖ ಸಂಶೋಧನೆ ಎನಿಸಿದೆ.

● ಡಾ. ರೋಹಿತ್ ಕುಮಾರ್ ಎಚ್. ಜಿ.

ಮನಸ್ಸಿನಲ್ಲಿ ಅಂದುಕೊಂಡ ಮಾತುಗಳು, ಎದುರು ಇರುವವರಿಗೆ ಕೇಳುವಂತಾದರೆ? ತುಟಿ ಬಿಚ್ಚದೆಯೇ ಒಬ್ಬರ ಮನಸ ಮಾತುಗಳು ಸ್ಪಷ್ಟವಾಗಿ, ಅವರ ಧ್ವನಿಯಲ್ಲೇ, ಕೇಳಿಸುವ ತಂತ್ರಜ್ಞಾನವು ಬಂದರೆ? ಮಾತು ಬಾರದ ಅಥವಾ ಧ್ವನಿಯನ್ನು ಕಳೆದುಕೊಂಡ ವ್ಯಕ್ತಿ ಹಾಡುವಂತಾಗುವುದಾದರೇ? ನರರೋಗದಿಂದ ಧ್ವನಿಯನ್ನು ಕಳೆದುಕೊಂಡ ವ್ಯಕ್ತಿಯೋರ್ವ ಮಾತನಾಡಲು ಸಾಧ್ಯವಾದಂತಹ ಸಂಶೋಧನೆಯ ವಿವರವು, ಪ್ರತಿಷ್ಠಿತ 'ನೇಚರ್' ಪತ್ರಿಕೆಯಲ್ಲಿ ಜೂನ್ 12 ರಂದು ಪ್ರಕಟಗೊಂಡಿದೆ.

ಕ್ಯಾಸಿ ಹಾರೆಲ್ ಎಂಬ 45 ವರ್ಷದ ವ್ಯಕ್ತಿಯು ಅಮಿಯೋಟ್ರೋಫಿಕ್ ಲ್ಯಾಟರಲ್ ಸ್ಲೀರೋಸಿಸ್ (ಎಎಲ್ಎಸ್) ಎಂಬ ನರ ಕ್ಷೀಣಗೊಳಿಸುವ ರೋಗಕ್ಕೆ ತುತ್ತಾಗಿದ್ದರು. ಈ ರೋಗವು, ಮೆದುಳು ಮತ್ತು ಬೆನ್ನುಹುರಿಯಲ್ಲಿರುವ ನರಗಳನ್ನು ಹಾನಿಗೊಳಿಸಿ, ಸ್ನಾಯು ದುರ್ಬಲಗೊಳಿಸಿ, ಆ ಮೂಲಕ ಪಾರ್ಶ್ವವಾಯುಗೆ ಕಾರಣವಾಗುತ್ತದೆ. ಸ್ನಾಯು ಚಲನೆಗಳನ್ನು ನಿಯಂತ್ರಿಸುವ ನರಗಳೂ ಹಾನಿಯಾಗುವುದರಿಂದ ರೋಗಿಗಳು ಮಾತನಾಡುವ ಶಕ್ತಿಯನ್ನು ಕಳೆದುಕೊಳ್ಳುತ್ತಾರೆ. ಕೆಲವೊಂದು ಧ್ವನಿಗಳನ್ನು ಅಥವಾ ತುಟಿಗಳಿಂದ ಪದಗಳನ್ನು ರೂಪಿಸಬಲ್ಲವರಾದರೂ ಸ್ಪಷ್ಟವಾಗಿ ಮಾತನಾಡಲು ಸಾಧ್ಯವಾಗುವುದಿಲ್ಲ. ಆದರೆ, ಕ್ಯಾಸಿ ಹಾರೆಲ್‌ರ ಮಾತುಗಳನ್ನು ಅವರದ್ದೇ ಧ್ವನಿಯಲ್ಲಿ ಕೇಳಿಸಿಕೊಳ್ಳುವ ಆವಿಷ್ಕಾರದ ಅಧ್ಯಯನದ ಯಶಸ್ಸಿನಿಂದ ಮಾತಿನ ಅಂಗವಿಕಲತೆಯಿರುವ ರೋಗಿಗಳಿಗೆ ಆಶಾ ಕಿರಣವೊಂದು ಸಿಕ್ಕಂತಾಗಿದೆ.

ಒಂದು ಪದವನ್ನು ಮಾತನಾಡುವಾಗ, ಮೆದುಳು ಅತ್ಯಂತ ವೇಗವಾಗಿ ವಿವಿಧ ಹಂತಗಳ ಸರಣಿ ಕ್ರಿಯೆಯಲ್ಲಿ ತೊಡಗಿಕೊಳ್ಳುತ್ತದೆ. ಮೊದಲು, ಪದದ ಬಗ್ಗೆ ಯೋಚಿಸಿ, ಏನು ಹೇಳಬೇಕೆಂದು ನಿರ್ಧರಿಸುತ್ತೀರಿ. ಇದು ಮೆದುಳಿನ ಮುಂಬಾಗದಲ್ಲಿರುವ ಯೋಜನೆ ಮತ್ತು ನಿರ್ಧಾರ ಕೈಗೊಳ್ಳುವ ಪ್ರದೇಶವಾದ 'ಪ್ರಿಫ್ರಂಟಲ್ ಕಾರ್ಟೆಕ್ಸ್' ಎಂಬ ಭಾಗದಲ್ಲಿ ಪ್ರಾರಂಭವಾಗುತ್ತದೆ. ಎರಡನೇ ಹಂತದಲ್ಲಿ, ಸರಿಯಾದ ಪದವನ್ನು ಹುಡುಕುತ್ತದೆ (ಇದು 'ವೆರ್ನಿಕೆ' ಎಂಬ ಭಾಗದಲ್ಲಿ ನಡೆಯುತ್ತದೆ). ನಂತರ, ಮೆದುಳಿನ 'ಬ್ರೋಕಾ' ಪ್ರದೇಶವು ಅದನ್ನು ಹೇಳಲು ಯಾವ ಸ್ನಾಯುಗಳನ್ನು, ಯಾವ ಕ್ರಮದಲ್ಲಿ ಚಲಿಸಿ ಶಬ್ದಗಳನ್ನು ಮಾಡಬೇಕೆಂದು ಯೋಜಿಸಲು ಸಹಾಯ ಮಾಡುತ್ತದೆ.

ಮೋಟಾರ್ ಕಾರ್ಟೆಕ್ಸ್

ಈ ಯೋಜನೆಯನ್ನು 'ಮೋಟಾರ್ ಕಾರ್ಟೆಕ್ಸ್' ಮೂಲಕ ತುಟಿಗಳು, ನಾಲಿಗೆ, ಗಂಟಲು ಮತ್ತು ಎದೆಯಲ್ಲಿನ ಸ್ನಾಯುಗಳಿಗೆ ಸಂಕೇತಗಳನ್ನು ಕಳುಹಿಸಿ, ಸ್ನಾಯುಗಳನ್ನು ಸಕ್ರಿಯಗೊಳಿಸುತ್ತದೆ. ಸ್ನಾಯುಗಳು ಪದವನ್ನು ಹೇಳಬಲ್ಲವು. ಈ ಎಲ್ಲಾ ಚಟುವಟಿಕೆಗಳು ನರಕೋಶಗಳ ನಡುವೆ ವಿದ್ಯುತ್ ಸಂಕೇತಗಳ ಪ್ರಸರಣಗಳನ್ನೊಳಗೊಂಡಿದ್ದು, ಊಹಿಸಲಸಾಧ್ಯ ವೇಗದಲ್ಲಿ ನಡೆಯುತ್ತವೆ.

ಮಾತನಾಡುವಾಗ ಮೆದುಳಿನಲ್ಲಿ ನಡೆಯುವ ಈ ಎಲ್ಲಾ ಚಟುವಟಿಕೆಗಳನ್ನು ಶಬ್ದವಾಗಿ ಅನುವಾದಿಸುವ ಬ್ರೈನ್ ಇಂಪ್ಲಾಂಟ್‌ನ್ನು ಮತ್ತು ಅದರ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವ ಮೂಲಕ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದ ನ್ಯೂರೊಲಾಜಿಕಲ್ ಸರ್ಜರಿ ವಿಭಾಗದ ಮೈತ್ರೀ ವೇರಾಗ್ಕರ್ ಮತ್ತು ಅವರ ತಂಡ ಈ ಸಾಧನೆ ಮಾಡಿದ್ದಾರೆ.

ಬ್ರೈನ್ ಕಂಪ್ಯೂಟರ್ ಇಂಟರ್‌ಫೇಸ್

ಕ್ಯಾಸಿ ಹಾರೆಲ್‌ಗೆ ಅಮಿಯೋಟ್ರೋಫಿಕ್ ಲ್ಯಾಟರಲ್ ಸ್ಲೀರೋಸಿಸ್ ರೋಗ ಪ್ರಾರಂಭವಾದ ಐದು ವರ್ಷಗಳ ಬಳಿಕ, ಅವರ ಮೆದುಳಿನಲ್ಲಿರುವ ಚಲನೆಯನ್ನು ನಿಯಂತ್ರಿಸುವ 'ಮೋಟಾರ್ ಕಾರ್ಟೆಕ್ಸ್' ಪ್ರದೇಶದಲ್ಲಿ ತಲಾ 1.5 ಮಿಮೀ ಉದ್ದವಿರುವ ಒಟ್ಟು 256 ಸಿಲಿಕಾನ್ ಎಲೆಕ್ಟ್ರೋಡ್‌ಗಳನ್ನು ಶಸ್ತ್ರಚಿಕಿತ್ಸೆ ಮೂಲಕ ಸೇರಿಸಲಾಗುತ್ತದೆ. ಬ್ರೈನ್-ಕಂಪ್ಯೂಟರ್ ಇಂಟರ್‌ಫೇಸ್ ಎಂದು ಕರೆಯಲಾಗುವ ವ್ಯವಸ್ಥೆಯ ಭಾಗವಾದ ಈ ಎಲೆಕ್ಟ್ರೋಡ್‌ಗಳು, ವ್ಯಕ್ತಿಯು ಮಾತನಾಡಲು ಯತ್ನಿಸಿದಾಗ ಉಂಟಾಗುವ ಮೆದುಳಿನ ವಿದ್ಯುತ್ ಚಟುವಟಿಕೆಯನ್ನು ಸೆರೆಹಿಡಿಯುತ್ತದೆ. ತದನಂತರ, ಅವುಗಳನ್ನು ಆಳವಾದ ಕಲಿಕಾ ಆಲ್ಗೋರಿದಮ್‌ಗಳಿಂದ ತರಬೇತಿ ಹೊಂದಿದ ಕೃತಕ ಬುದ್ಧಿಮತ್ತೆ (ಎಐ)ಯ ಸಹಾಯದಿಂದ ವಿಶ್ಲೇಷಿಸಿ, ಆ ವ್ಯಕ್ತಿಯು ಹೇಳಲು ಉದ್ದೇಶಿಸಿದ ಪದಗಳ ಬದಲಾಗಿ, ಅವರು ಪ್ರಯತ್ನಿಸುತ್ತಿರುವ ಶಬ್ದಗಳನ್ನು ನೇರವಾಗಿ ಡಿಕೋಡ್ ಮಾಡುತ್ತದೆ. ಈ ಶಬ್ದಗಳು ವ್ಯವಸ್ಥೆಗೆ ಅಳವಡಿಸಲಾದ ಸ್ಪೀಕರ್‌ಗಳ ಮೂಲಕ ಪದವಾಗಿ ಹೊರಬರುತ್ತವೆ. ಆ ವ್ಯಕ್ತಿಯ ರೋಗಪೀಡಿತನಾಗುವ ಮೊದಲು ಮಾತನಾಡಿದ್ದ ಆಡಿಯೋಗಳನ್ನು ಬಳಸಿ, ಆತನ ಧ್ವನಿಯನ್ನು ಎಐ ವ್ಯವಸ್ಥೆಗೆ ತರಬೇತಿ ನೀಡಿ, ಸಿಂಥೆಟಿಕ್ ಧ್ವನಿಯನ್ನು ತಯಾರಿಸಿದ್ದರಿಂದ, ಧ್ವನಿಯು ವ್ಯಕ್ತಿಯದ್ದಂತೆಯೇ ಕೇಳಿಸುತ್ತದೆ.

ಹತ್ತು ಮಿಲಿ ಸೆಕೆಂಡು

ಈ ಸಾಧನವು ಧ್ವನಿಯ ಸ್ವರ, ಉಚ್ಚಾರಣೆ ಮತ್ತು ಶಬ್ದಕ್ಕೆ ಒತ್ತು ನೀಡುವ ರೀತಿಯನ್ನು ಸಹ ಪುನರ್ ನಿರ್ಮಾಣ ಮಾಡಬಲ್ಲ ಮೊದಲ ಸಾಧನವಾಗಿದ್ದು, ಇವು ಅರ್ಥ ಮತ್ತು ಭಾವನೆಗಳನ್ನು ವ್ಯಕ್ತಪಡಿಸಲು ಸಹಾಯಕವಾಗಿವೆ. ಜತೆಗೆ, ಮೂರು ರಾಗಗಳಲ್ಲಿ ಸಂಗೀತ ಸ್ವರಗಳನ್ನು ಹಾಡಲು ಸಹ ರೋಗಿಗೆ ಸಾಧ್ಯವಾಗಿದೆ. ವ್ಯಕ್ತಿ ಮಾತನಾಡಲು ಯತ್ನಿಸಿದ ಮೆದುಳಿನ ಚಟುವಟಿಕೆ ನಡೆದು ಕೇವಲ 10 ಮಿಲಿಸೆಕೆಂಡುಗಳಲ್ಲಿ ಅವರ ಪದಗಳನ್ನು ಉಚ್ಚರಿಸುತ್ತದೆ. ಇದಕ್ಕಿಂತ ಹಿಂದೆ ಅಭಿವೃದ್ಧಿಯಾಗಿದ್ದ ವ್ಯವಸ್ಥೆಗಳಿಗೆ 3 ಸೆಕೆಂಡು ಬೇಕಿತ್ತು.

ಈ ತಂತ್ರಜ್ಞಾನವು ಎಎಲ್ಎಸ್ ಅಥವಾ ಪಾರ್ಶ್ವವಾಯುವಿನಿಂದ ಮಾತನಾಡುವ ಸಾಮರ್ಥ್ಯವನ್ನು ಕಳೆದುಕೊಂಡವರಿಗೆ ಹೊಸ ಆಸೆಯನ್ನು ನೀಡುತ್ತಿದೆ.

ಹಸಿವು ಮಮತೆ ಈ ಸೃಷ್ಟಿಯ ರಹಸ್ಯಗಳು

ಹೊಟ್ಟೆಯಲಿ ಹಸಿವು, ಮನದಲಿ ಮಮತೆ - ಈ ಎರಡು
ಗುಟ್ಟು ಕೀಲುಗಳಿಹವು ಸೃಷ್ಟಿಯಂತ್ರದಲಿ
ಕಟ್ಟಿಪುವು ಕೋಟೆಗಳ, ಕೀಳಿಪುವು ತಾರೆಗಳ
ಸೊಟ್ಟಾಗಿಪುವು ನಿನ್ನ - ಮಂಕುತಿಮ್ಮ॥

ಮನುಷ್ಯನ ಉದರದ ಹಸಿವು ಹಾಗೂ ಮನದಲ್ಲಿನ ಮಮತೆಗಳೇ ಈ ಜಗತ್ತಿನ ಸೃಷ್ಟಿಯಂತ್ರದ ಹಾಗೂ ನಮ್ಮಯ ಬದುಕಿನ ಕೀಲುಗಳು. ಈ ಹಸಿವು ಹಾಗೂ ಮಮತೆಗಳು ಮನುಷ್ಯನಿಂದ ಅಸಾಧ್ಯವಾದುದನ್ನೂ ಸಹ ಸಾಧ್ಯವಾಗಿಸಿವೆ. ಹಸಿವು ಹಾಗೂ ಮಮತೆಗಳು ಯಾವ ರೀತಿ ಎಂದರೆ, ನಮ್ಮಗಳಿಂದ ಕೋಟೆಗಳನ್ನು ಕಟ್ಟಿಸುತ್ತವೆ ಹಾಗೆಯೇ ನಭದಲ್ಲಿಯ ತಾರೆಗಳನ್ನೂ ಸಹ ಕೀಳಿಸುವಂತೆ ಪ್ರೇರೇಪಿಸುತ್ತವೆ. ಅಂತೆಯೇ ಫಲ ಕೈಗೂಡದೇ ಇದ್ದಾಗ ಅವುಗಳು ನಮ್ಮ ಜೀವನವನ್ನೂ ಸಹ ಸೊಟ್ಟಾಗಿಸುತ್ತವೆ ಎಂದು ಮನುಷ್ಯನ ನೈಜ ಬದುಕಿನ ಸ್ವರೂಪವನ್ನು ಈ ಪದ್ಯದಲ್ಲಿ ತಿಳಿಸಿದ್ದಾರೆ.

ಮನುಷ್ಯನ ಮನದಲ್ಲಿ ಮಹತ್ವಾಕಾಂಕ್ಷೆಗಳೆಲ್ಲವೂ ಸಹ ಮೂಡುವುದು ಈ ಹಸಿವು ಹಾಗೂ ಮಮತೆಗಳಿಂದಲೇ. ಅಂತೆಯೇ ಮನುಷ್ಯನಿಗಿರುವ ಹಸಿವು ಹಾಗೂ ಮನದಲ್ಲಿ ಮೂಡುವ ಮಮತೆಗಳು ಆತನಿಂದ ಎಂಥಹ ಕೆಲಸಕ್ಕೂ ಕೈ ಹಾಕಿಸಿಬಿಡುತ್ತವೆ. ಹಸಿವೆಂಬುದು ಮೊದಲಿಗೆ ವಸ್ತುಗಳ ಅವಿಷ್ಕಾರಕ್ಕೋ, ಪಡೆಯಲೋ ಪ್ರೇರೇಪಿಸಿದರೆ, ನಂತರ ಪಡೆದ ವಸ್ತುಗಳ ಮೇಲೆ ಮನದಲ್ಲಿ ಮಮಕಾರ ಉಂಟಾಗುತ್ತದೆ. ಈ ಹಿಂದಿನ ಇತಿಹಾಸವನ್ನೇ ನಾವು ನೋಡಿದರೂ ಸಹ ಎಲ್ಲಾ ವ್ಯವಸ್ಥೆಗಳೂ ಸಹ ನಿಂತಿರುವುದು ಈ ಹಸಿವು ಹಾಗೂ ಮನದ ಮಮತೆಗಳಿಂದಲೇ ಹೌದು. ಜಠರಾಗ್ನಿಯು ಭುಗಿಲೆದ್ದರೆ ಆ ಜ್ವಾಲೆಗೆ ಕಂದದವರು ಯಾರೂ ಇಲ್ಲ. ಹಾಗೆಯೇ ಈ ಮನದಲ್ಲಿಯ ಮಮತೆಗಳೂ ಸಹ ಯಾವುದೋ ರೀತಿಯಲ್ಲಿ ಎಲ್ಲವೂ ನನ್ನದಾಗಬೇಕು ಎಂಬ ಇಚ್ಚೆಯನ್ನು ವ್ಯಕ್ತಪಡಿಸಿ ಆಪೋಷನ ಮಾಡುತ್ತಲಿರುತ್ತದೆ. ಇವನು ಕಟ್ಟಿದ ರಾಜ್ಯಗಳು, ಗೆದ್ದ ಪ್ರದೇಶಗಳು, ಸಮುದ್ರಗಳು, ಆಕಾಶ , ಕಲಿತ ಕಲೆ, ಶಾಸ್ತ್ರ, ಅರಿತ ಜ್ಞಾನ - ವಿಜ್ಞಾನಗಳು ಎಲ್ಲವೂ ತನ್ನನ್ನು ಮತ್ತು ತಾನು ಕಟ್ಟಿಕೊಂಡ ಸಮಾಜವನ್ನು ಬದಲಾಯಿಸುವ, ಸುಧಾರಿಸುವ ಮತ್ತು ಔನ್ನತ್ಯಕ್ಕೆ ಕೊಂಡುಹೋಗುವ ಇವನ ಪ್ರಯತ್ನಕ್ಕೆ ಇವನ ಮಹತ್ವಾಕಾಂಕ್ಷೆ ಮತ್ತು ಮಮತೆಗಳೇ ಕಾರಣವೆಂದರೆ ಸೂಕ್ತವಾಗುತ್ತದೆ. ಆದುದರಿಂದ ಮನುಷ್ಯನ ಹೊಟ್ಟೆಯ ಹಸಿವು, ಮಾನಸಿಕವಾದ ಜ್ಞಾನ ವಿಜ್ಞಾನದ ಹಸಿವುಗಳು ಹಾಗೂ ಆತನು ಮನದಲ್ಲಡಗಿಸಿಕೊಂಡ ಮಮತೆಗಳು ಆತನನ್ನು ಮೇರು ಮಟ್ಟಕ್ಕೂ ತರುತ್ತವೆ; ಅಂತೆಯೇ ಪ್ರಪಾತಕ್ಕೂ ಕೊಂಡೊಯ್ಯುತ್ತವೆ. ಇವೆರಡೂ ಕೋಟೆಗಳನ್ನು ಕಟ್ಟಿಸುತ್ತವೆ ಅಂದರೆ ಸಮಾಜಕ್ಕೆ ಕೋಟೆಯಾಗಿ ರಕ್ಷಿಸುವಂಥಹ ಕೆಲಸವನ್ನೂ ಮಾಡಿಸುತ್ತವೆ. ಕೆಲವೊಮ್ಮೆ ಈ ಹಸಿವು ಹಾಗೂ ಮಮತೆಗಳು ಅಸಾಧ್ಯವಾದುದನ್ನು ಸಾಧಿಸಲೆತ್ನಿಸಿ ಆತನನ್ನು ಚೊಟ್ಟವಾಗಿಸಿಯೂ ಬಿಡುತ್ತವೆ. ಒಟ್ಟಿನಲ್ಲಿ ಮನುಷ್ಯನಲ್ಲಿ ಉದ್ಭವಿಸುವ ಆಸೆಗಳ ಮೂಲ ಆತನ ಹಸಿವು ಹಾಗು ಆತನಲ್ಲಿಯ ಮಮತೆಗಳು, ಇವೆರಡೂ ಈತನನ್ನು ಔನ್ನತ್ಯಕ್ಕೂ ಕೊಂಡೊಯ್ಯುತ್ತವೆ ಹಾಗೆಯೇ ಕೆಲವೊಮ್ಮೆ ಆತನನ್ನು ಚೊಟ್ಟವಾಗಿಸಿಬಿಡುತ್ತವೆ ಎಂಬ ನಗ್ನ ಸತ್ಯವನ್ನ ಈ ಪದ್ಯವು ಹೇಳಿದೆ.

ಡೈನಾಮೆಟ್ ಕಂಡು ಹಿಡಿದವನು ನೊಬೆಲ್. ಆತನು ರಾಸಾಯನಿಕ ವಸ್ತುಗಳ ಮೇಲೆ ಇಟ್ಟಿದ್ದ ಮಮತೆ ಹಾಗೂ ಹೆಸರಾಗಬೇಕೆಂಬ ಹಂಬಲದ ಮಮತೆಯಲಿ ಈ ಅವಿಷ್ಕಾರ ಮಾಡಿ ಹೇರಳವಾಗಿ ಹಣ ಸಂಪಾದನೆ ಮಾಡಿದನು. ಕೊನೆಗೊಮ್ಮೆ ನಾನು ಕಂಡು ಹಿಡಿದ ಅವಿಷ್ಕಾರವೇ ಈ ಮಾನವ ಕುಲಕ್ಕೆ ಘೋರ ದುರಂತ ಎಸಗುತ್ತದೆ ಎಂದರಿತ ಆತನು ತನ್ನಲ್ಲಿಯ ಎಲ್ಲಾ ಸಂಪತ್ತನ್ನು ದಾನಮಾಡಿದನು. ಈಗಲೂ ಆತನ ಹೆಸರಲ್ಲಿ ನೊಬೆಲ್ ಬಹುಮಾನ ಇರುವುದನ್ನು ಕಂಡಿದ್ದೇವೆ. ಹಣ ಗಳಿಸಿದರೂ, ಆತನಿಗೆ ತನ್ನ ಆವಿಷ್ಕಾರ ಮಾಡಿರುವುದು ಸೊಟ್ಟಾಗಿದೆ ಎಂಬ ಅರಿವು ಆಗಿ ಆತನು ತನ್ನ ತಪ್ಪನ್ನು ತಿದ್ದಿಕೊಂಡನು. ಹೀಗೆ ಹಸಿವು ಹಾಗೂ ಮಮತೆಗಳು ಎಂತಹ ಕೆಲಸಕ್ಕೂ ಈ ಮಾನವರಿಂದ ಕೈ ಹಾಕಿಸುತ್ತವೆ ಎಂಬ ಸೂಕ್ತಿಯು ಸತ್ಯವಾದುದೇ ಆಗಿದೆ.

ಶುಭೋದಯಕ್ಕೊಂದು ಕಗ್ಗ



ರವೀ ಚಿಕ್ಕನಾಯಕನಹಳ್ಳಿ

ಸಂಗೀತ ಮತ್ತು ನಟನೆಯಲ್ಲಿ ಅಪೂರ್ವ ಪ್ರತಿಭೆ

● ವಿನೀತ

'ಮತ್ತೆ ಮಾಯಾಮೃಗ' ಧಾರಾವಾಹಿಯಲ್ಲಿ ನಟಿಸಿ ಹೆಸರು ಗಳಿಸಿರುವ ಮೇಧಾ ವಿದ್ಯಾಭೂಷಣ್ ಅವರು, ಶಾಸ್ತ್ರೀಯ ಸಂಗೀತಗಾರರೂ ಹೌದು, ನಟನೆ ಅವರ ನೆಚ್ಚಿನ ಹವ್ಯಾಸ. 5ನೆಯ ವಯಸ್ಸಿನಲ್ಲೇ ಸಂಗೀತ ಕಲಿಯಲು ಆರಂಭಿಸಿದ ಮೇಧಾ ಅವರು, 13ನೆಯ ವಯಸ್ಸಿನಲ್ಲಿ ಮೊದಲ ಸಂಗೀತದ ಆಲ್ಬಮ್ ಬಿಡುಗಡೆ ಮಾಡಿದರು.

ಕರ್ನಾಟಕ ಸಂಗೀತ ಮತ್ತು ಹರಿದಾಸ ಸಾಹಿತ್ಯದಲ್ಲಿ ವಿಶೇಷ ಪರಿಶ್ರಮ ಹೊಂದಿರುವ ಇವರು, ಹಲವು ಕಾರ್ಯಕ್ರಮಗಳನ್ನು ನೀಡಿ ದ್ದಾರೆ; ಜತೆಗೆ, ಕನ್ನಡ ಮತ್ತು ತುಳು ಚಲನಚಿತ್ರಗಳಿಗೆ ಹಿನ್ನೆಲೆ ಗಾಯನವನ್ನೂ ಮಾಡಿದ್ದಾರೆ. ಹರಿದಾಸ ಸಾಹಿತ್ಯದಲ್ಲಿ ಅಪಾರ ಸಾಧನೆ ಮಾಡಿರುವ ವಿದ್ಯಾಭೂಷಣ ಸ್ವಾಮಿ ಅವರ ಮಗಳು ಮೇಧಾ ವಿದ್ಯಾಭೂಷಣ್ ಅವರಿಗೆ, ತಂದೆಯಂತೆಯೇ ಹರಿದಾಸ ಸಾಹಿತ್ಯ ವನ್ನು ಹಾಡುವಲ್ಲಿ ಆಸಕ್ತಿ ಬೆಳೆದಿದ್ದು ವಿಶೇಷ. ಜತೆಯಲ್ಲೇ, ಮೇಧಾ ಅವರು ಹಲವು ಧಾರಾವಾಹಿಗಳಲ್ಲಿ ಮನೋಜ್ಞವಾಗಿ ಅಭಿನಯಿ ಸಿದ್ದಾರೆ. ಸಂಗೀತ ಮತ್ತು ನಟನೆ - ಈ ಎರಡೂ ಕ್ಷೇತ್ರಗಳಲ್ಲಿ ಅಪೂರ್ವ ಪ್ರತಿಭೆ ಹೊಂದಿರುವ ಮೇಧಾ ಅವರು, ಎರಡೂ ಕ್ಷೇತ್ರಗಳಲ್ಲಿ ತಮ್ಮ ಕೌಶಲ್ಯವನ್ನು ತೋರುತ್ತಿರುವುದು ವಿಶೇಷ ಎನಿಸಿದೆ.

ಮತ್ತೆ ಮಾಯಾಮೃಗ: ಕನ್ನಡದ ಧಾರಾವಾಹಿಗಳಲ್ಲೇ ವಿಶಿಷ್ಟ ಎನಿಸಿದ 'ಮಾಯಾ ಮೃಗ'ದ ಸರಣಿಯಲ್ಲಿ ಹೊರಬಂದ 'ಮತ್ತೆ ಮಾಯಾಮೃಗ' ಧಾರಾವಾಹಿಯಲ್ಲಿ ಮೇಧಾ ವಿದ್ಯಾಭೂಷಣ್ ಅವರು ನಟಿಸಿ, ಅಪಾರ ಜನಪ್ರಿಯತೆಯನ್ನು ಗಳಿಸಿದ್ದಾರೆ. ಈ ಧಾರಾವಾಹಿ ಯನ್ನು ಟಿ.ಎನ್. ಸೀತಾರಾಂ ಅವರು ನಿರ್ದೇಶಿಸಿದ್ದು, ಮೇಧಾ ಅವರಲ್ಲಿದ್ದ ಪ್ರತಿಭೆಯನ್ನು ಗುರುತಿಸಿ, ಉತ್ತಮ ಪಾತ್ರವನ್ನು ಬೆಳೆಸಿದ್ದಾರೆ. ಮುಂದಿನ ದಿನಗಳಲ್ಲಿ ಇನ್ನಷ್ಟು ಧಾರಾವಾಹಿಯಲ್ಲಿ ನಟಿಸಲು ಮೇಧಾ ಸಿದ್ಧತೆ ನಡೆಸಿದ್ದಾರೆ.

ಪ್ರಶಸ್ತಿಗಳು

ಮೇಧಾ ಅವರ ಹಾಡುಗಾರಿಕೆಯು ಹಲವರ ಮೆಚ್ಚುಗೆ ಗಳಿಸಿದೆ ಮತ್ತು ಹಲವು ಪ್ರಶಸ್ತಿಗಳಿಗೆ ಅವರು ಭಾಜನರಾಗಿದ್ದಾರೆ. ಹರಿದಾಸ ಸಾಹಿತ್ಯವನ್ನು ಹಾಡುವುದೆಂದರೆ, ಇವರಿಗೆ ಬಹಳ ಇಷ್ಟ. ಹಲವು ವೇದಿಕೆಗಳಲ್ಲಿ ಅವರು ಹಾಡುಗಾರಿಕೆಯನ್ನು ಮಾಡಿದ್ದು, ನಟನೆಯಲ್ಲೂ ಮಿಂಚಿದ್ದಾರೆ. 'ಮತ್ತೆ ಮಾಯಾಮೃಗ' ಧಾರಾವಾಹಿಯಲ್ಲಿ ಅವರ ನಟನೆಯು ಅಪಾರ ಜನಪ್ರಿಯತೆಯನ್ನು ತಂದುಕೊಟ್ಟಿದೆ.

ಹನಿ ಮಳೆ

ವಾಸ್ತವ
ದೊಡ್ಡ ದೊಡ್ಡ ನಾಯಕರು
ಹಗರಣ ಅವ್ಯವಹಾರ ಇತ್ಯಾದಿಗಳ
ಸರ್ವ ಜನಕರು
ಪರಿಣಾಮ ಅನುಭವಿಸುವವರು
ಮಾತ್ರ ಸಾರ್ವಜನಿಕರು

● ಮಹಾಂತೇಶ ಮಾಗನೂರ

ಪದಬಂಧ

● ಸಿ.ರವಿಶಂಕರ ಶಾಸ್ತ್ರಿ, ದಂಬೆ



ಎಡದಿಂದ ಬಲಕ್ಕೆ

1. ಪೂಜೆ ಅಥವಾ ಉಪಾಸನೆ (4)
4. ತಾಯಿಯ ತಂದೆ (4)
6. ಎಲ್ಲೆಡೆ ಹರಡು (3)
8 ಕಾಡಿನೊಂದಿಗೆ ಬದುಕು (3)
11. ಅಗಲ ಬಾಯಿಯ ಲೋಹದ ಪಾತ್ರೆ (3)
12. ಗೆಳೆಯ (2)
14. ವಾಯು (2)
15. ಬಡವನಿಗೂ ಇದೆಯೇ ಒಣ ಹೆಮ್ಮೆ (3)
17. ಬುದ್ಧನ ಮತ್ತೊಂದು ಹೆಸರು (3)
19. ಈತ ಸದಾ ಮೌನಿ! (3)
21. ತಿಮ್ಮಪ್ಪನ ಊರು (4)
22. ಪತಿಯ ನಡುವೆ ಇದೆ ನೈಪುಣ್ಯತೆ (4)

ಮೇಲಿಂದ ಕೆಳಕ್ಕೆ

2. ಮಾಜಿ ಪ್ರಧಾನಿ (3)
3. ಸೋಮಾರಿಗಳಿಗೆ ಇದು ಸುಲಭ! (2)
4. ವಿಕ್ರಯಿಸು ಎಂದರ್ಥ (2)
5. ಹೋಮದಲ್ಲಿ ಬಳಸುವ ವಸ್ತುಗಳು (3)
7. ವಾಹನಗಳ ಮೇಲೆ ಸಂಚಾರ (3)
8. ವಿಷಯವೊಂದರ ತಿರುಳು (3)
9. ಇದು ಚೆನ್ನಾಗಿದ್ದರೆ ಉತ್ತಮ (5)
10. ಪ್ರೇರೇಪಿಸು ಅಥವಾ ಹುರುಪುಕೊಡು (5)
13. ಇದು ಎಂದರೆ ನನಗೆ ಹೆಮ್ಮೆ (3)
15. ಅಕ್ಷರ ಬರೆಯುವ ಮಿದುಕಲ್ಲು (3)
16. ಗಾಳಿಸುದ್ದಿ (3)
18. ಸಮೂಹ ಅಥವಾ ಗುಂಪು (3)
19. ಗಿಡಗಳ ಸುತ್ತ ಇದೆ (2)
20. ತಿರುಗಿ ಬಂದಿರುವ ಶಬ್ದ (2)

ಉತ್ತರಗಳು

ಎಡದಿಂದ ಬಲಕ್ಕೆ: [illegible]

ಮೇಲಿಂದ ಕೆಳಕ್ಕೆ: [illegible]

ಜ್ಞಾನ ದಕ್ಕಿಸಿಕೊಳ್ಳಲು ಬೇಕಾದ ಅರ್ಹತೆ

ಒಬ್ಬ ಗುರು ತನ್ನ ಬಳಿಗೆ ವಿದ್ಯಾಭ್ಯಾಸ ಮಾಡಲು ಬರುವ ಶಿಷ್ಯರನ್ನು ಒಂದು ವರ್ಷಕ್ಕಿಂತ ಹೆಚ್ಚು ಕಾಲ ತನ್ನ ಆಶ್ರಮದಲ್ಲಿ ಇಟ್ಟುಕೊಳ್ಳುತ್ತಿರಲಿಲ್ಲ. ತನ್ನ ಬಳಿ ಇದ್ದ ಹತ್ತು ಜನ ಶಿಷ್ಯರಲ್ಲಿ ಕುಶ ಎನ್ನುವವನಿಗೆ ಹೆಚ್ಚು ಕಾಲ ಪಾಠಗಳನ್ನು ಬೋಧಿಸುತ್ತಿದ್ದರು. ಇದರಿಂದ ಆ ವರ್ಷ ವಿದ್ಯಾಭ್ಯಾಸ ಮಾಡಲು ಬಂದ ಉಳಿದ ಶಿಷ್ಯರಿಗೆ ಕುಶನ ಬಗ್ಗೆ ಹೊಟ್ಟೆಕಿಚ್ಚುಂಟಾಯಿತು.

ವರ್ಷದ ಕಡೆಯ ದಿವಸ ಹತ್ತೂ ಜನರನ್ನು ಕರೆದು, ಹತ್ತು ಬೀಜಗಳನ್ನು ಕೈಯಲ್ಲಿ ಇರಿಸಿಕೊಂಡು ತಲಾ ಒಂದೊಂದು ಬೀಜಗಳನ್ನು ತೆಗೆದುಕೊಳ್ಳುವಂತೆ ಹೇಳಿದರು. ನೀವೆಲ್ಲರೂ ನಿಮ್ಮ ನಿಮ್ಮ ಮನೆಗಳಿಗೆ ಹಿಂದಿರುಗಿ ಈ ಬೀಜಗಳನ್ನು ನಾಟಿ ಮಾಡಿ. ಒಂದು ಬೀಜದಿಂದ ಮಾತ್ರವೇ ನೀಲಿ ಬಣ್ಣದ ಹೂವು ಬಿಡುತ್ತದೆ ಯಾರ ಮನೆಯಲ್ಲಿ ಆ ನೀಲಿ ಬಣ್ಣದ ಹೂವು ಬಿಡುತ್ತದೆಯೋ ಅವರು ಆ ಹೂವನ್ನು ತಂದು ನನಗೆ ಗುರುದಕ್ಷಿಣೆಯಾಗಿ ಕೊಡಬೇಕು. ಅಂತಹವರಿಗೆ ನಾನು ಹೇಳಿಕೊಟ್ಟ ವಿದ್ಯೆ ಚಿರಕಾಲ ನೆನಪಿರುತ್ತದೆ. ಉಳಿದವರು ನಿರಂತರವಾಗಿ ಅಧ್ಯಯನ ಮಾಡುತ್ತಿದ್ದರಷ್ಟೇ ನಾನು ಹೇಳಿದ ವಿಷಯಗಳು ಜ್ಞಾಪಕದಲ್ಲಿರುತ್ತವೆ ಎಂದರು.

ಹೀಗೆ ಹೂವೊಂದನ್ನು ಗುರುದಕ್ಷಿಣೆಯಾಗಿ ತೆಗೆದುಕೊಳ್ಳುವುದು ವಿಚಿತ್ರವಾಗಿದೆ, ಅದೇಕೆ ಹಾಗೆ ಗುರುಗಳೇ ಎಂದು ಶಿಷ್ಯನೊಬ್ಬ ಪ್ರಶ್ನಿಸಿದ. ಅದಕ್ಕೆ ಗುರುಗಳು, ಆ ಹೂವನ್ನು ಜಗಿದು ತಿಂದರೆ ಮಳೆಗಳು ಯಾವಾಗ ಬೀಳುತ್ತವೆ ಎಂದು ಒಂದು ತಿಂಗಳ ಮುಂಚೆಯೇ ಗೊತ್ತಾಗುವ ಜ್ಞಾನವು ಉಂಟಾಗುತ್ತದೆ ಎಂದರು.

ತಿಂಗಳ ನಂತರ ಗಣನಾಥನೆನ್ನುವ ಶಿಷ್ಯನ ಹಿತ್ತಲಿನಲ್ಲಿ ನಾಟಿ ಮಾಡಿದ ಬೀಜವು ಮೊಳಕೆಯೊಡೆದು ಅದರಿಂದ ಹೊರಟ ಬಳ್ಳಿಯಿಂದ ನೀಲಿ ಬಣ್ಣದ ಹೂವು ಬಿಟ್ಟಿತು. ಅವನು ಸಂತೋಷದಿಂದ ಅದನ್ನು ಕೊಯ್ದನು. ಆದರೆ ತನ್ನ ಗುರುಗಳು ಕುಶನ ವಿಷಯದಲ್ಲಿ ಬೇಧಭಾವ ತೋರಿಸಿ ಅವನಿಗೆ ಹೆಚ್ಚಿನ ವಿದ್ಯೆಯನ್ನು ಕಲಿಸಿಕೊಟ್ಟರು ಎಂದು ಗುರುಗಳ ಮೇಲಿನ ಕೋಪದಿಂದ, ಅದನ್ನು ಗುರುಗಳಿಗೆ ಸಮರ್ಪಿಸದೆ ತಾನೇ ಜಗಿದು ತಿಂದನು. ತಕ್ಷಣವೇ ಗಣನಾಥನಿಗೆ ಮಳೆಗಳ ಕುರಿತಾದ ಜ್ಞಾನವು ಉಂಟಾಯಿತು. ಇದರಿಂದ ಅವನು ತನ್ನ ಗ್ರಾಮದಲ್ಲಷ್ಟೇ ಅಲ್ಲ ಅಕ್ಕ ಪಕ್ಕದ ಗ್ರಾಮಗಳಲ್ಲೂ ಪ್ರಸಿದ್ಧಿಗೆ ಬಂದನು. ಹೀಗಿರುವಾಗ ಮುಂದಿನ ವರ್ಷ ಆ ಪ್ರಾಂತದಲ್ಲಿ ಬರಗಾಲ ಬಂದಿತು. ಎರಡು ವರ್ಷಗಳ ಕಾಲ ಮಳೆಗಳೇ ಬೀಳುವುದಿಲ್ಲ ಎಂದು ಗಣನಾಥನು ಹೇಳಿದ. ಅದೇ ಸಮಯದಲ್ಲಿ ಪಕ್ಕದೂರಿನವನೊಬ್ಬನು ಗಣನಾಥನಿದ್ದ ಊರಿಗೆ ಬಂದು, ನಮ್ಮ ಊರಿಗೆ ಮಹಾತ್ಮನೊಬ್ಬ ಬಂದು ಎರಡು ದಿನಗಳಲ್ಲಿ ಮಳೆಯಾಗುತ್ತದೆ ಎಂದು ಹೇಳಿದ ನಂತರ ಅದೇ ವಿಧವಾಗಿ ಮಳೆಯಾಯಿತು. ಆದ್ದರಿಂದ ನೀವೂ ಸಹ ಅವನನ್ನು ನಿಮ್ಮೂರಿಗೆ ಆಹ್ವಾನಿಸಿ ಕರೆತಂದಲ್ಲಿ ನಿಮ್ಮ ಊರಿನಲ್ಲೂ ಮಳೆಯಾಗುತ್ತದೆ ಎಂದು ಹೇಳಿದ.

ಪಕ್ಕದೂರಿನವನ ಮಾತಿನಂತೆ ಆ ಊರಿನ ಗ್ರಾಮಾಧಿಕಾರಿ ಆ ಮಹಾತ್ಮನನ್ನು ತಮ್ಮ ಊರಿಗೆ ಬರಮಾಡಿಕೊಂಡ. ಅವನು ಬಂದು ನಾಡಿದ್ದು ಮಳೆಯಾಗುತ್ತದೆ ಎಂದು ಹೇಳಿದ ನಂತರ ಅದರ ಪ್ರಕಾರವೇ ಈ ಊರಿನಲ್ಲಿಯೂ ಮಳೆಯಾಯಿತು. ಹಾಗೆ ಬಂದ ಮಹಾತ್ಮ ಯಾರೆಂದು ನೋಡಿದರೆ ಅವನೇ ಗುರುಗಳ ಪ್ರೀತಿಯ ಶಿಷ್ಯ ಕುಶ. ಅವನನ್ನು ಭೇಟಿಯಾದ ಗಣನಾಥನು ಗುರುಗಳು ಏನೋ ತಂತ್ರ ಹೂಡಿದ್ದಾರೆಂದು ಕುಹಕವಾಡಿದನು. ಅದಕ್ಕೆ ಕುಶನು, ಇದರಲ್ಲಿ ಗುರುಗಳ ತಪ್ಪೇನೂ ಇಲ್ಲ. ಅವರು ಪ್ರತಿಯೊಬ್ಬರಿಗೂ ನೀಲಿ ಬಣ್ಣದ ಹೂವು ಬಿಡುವ ಬೀಜಗಳನ್ನೇ ಕೊಟ್ಟಿದ್ದರು. ಆದರೆ ನನ್ನ ಹೊರತು ನೀವಾರೂ ಗುರುಗಳಿಗೆ ಹೂವು ತೆಗೆದುಕೊಂಡು ಗುರುದಕ್ಷಿಣೆಯನ್ನು ಕೊಡಲು ಹಿಂದಿರುಗಿ ಹೋಗಲಿಲ್ಲ. ನಾನು ಹೂವನ್ನು ಅವರಿಗೆ ಅರ್ಪಿಸಲು ಹೋದಾಗ ಅವರು ಅಕಾಲ ಮಳೆಯನ್ನು ಸುರಿಸುವ ಶಕ್ತಿಯನ್ನು ನನಗೆ ಹೆಚ್ಚುವರಿಯಾಗಿ ಪ್ರಸಾದಿಸಿದರು ಎಂದು ಕೃತಜ್ಞತೆಯಿಂದ ಕೈಮುಗಿದು ಹೇಳಿದ. ಅದನ್ನು ಕೇಳಿದ ಗಣನಾಥನಿಗೆ ಭಕ್ತಿ ಮತ್ತು ಅರ್ಹತೆಗಳನ್ನು ಅವಲಂಬಿಸಿ ಜ್ಞಾನವು ಲಭಿಸುತ್ತದೆ ಎನ್ನುವ ಸತ್ಯ ತಿಳಿಯಿತು.

ವಿದ್ಯೆಗೆ ವಿನಯವೇ ಭೂಷಣ. ಎಷ್ಟೇ ವಿದ್ಯೆಯನ್ನು ಪಡೆದುಕೊಂಡರೂ ಅಲ್ಲಿ ವಿನಯ, ನಿರಹಂಕಾರ , ಸಮರ್ಪಣ ಭಾವ ಇರದಿದ್ದರೆ ಸಕಲ ವಿದ್ಯೆಗಳೂ ನಿರರ್ಥಕ. ಇದು ನಮ್ಮೆಲ್ಲರಿಗೂ ಪಾಠವಾಗಲಿ.

ಒಂದೊಳ್ಳೆ ಮಾತು



ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು
Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ಮತ್ತೆ ಶುರುವಾಗಿದೆ ಶಾಲೆ!

● ಅಶ್ವಿನಿ. ಎಸ್. ಜಿ. ಆರ್. ಆರ್. ನಗರ.

ಜೂನ್ ತಿಂಗಳಿನ ಮೊದಲ ದಿನ ಎಂದರೆ ಏನೋ ಹರ್ಷ, ಮಕ್ಕಳಿಗೆ ಹೊಸ ಕ್ಲಾಸಿಗೆ ಹೋಗುವ ತವಕ. ಇದನ್ನು ಶೈಕ್ಷಣಿಕ ವರ್ಷದ ಆರಂಭದ ತಿಂಗಳೆಂದು ಕರೆಯುತ್ತಾರೆ. ಎಪ್ರಿಲ್, ಮೇ ತಿಂಗಳ ಬೇಸಿಗೆ ರಜೆಯಲ್ಲಿ ಕುಣಿದು ಕುಪ್ಪಳಿಸಿದ ಮಕ್ಕಳಿಗೆ ಜೂನ್ ಬಂತೆಂದರೆ ಮತ್ತೆ ಶಾಲೆಯತ್ತ ಹೆಜ್ಜೆ ಇಡಲೇಬೇಕಾದ ಅನಿವಾರ್ಯತೆ. ಹೊಸ ಯುನಿಫಾರ್ಮ್, ನೀಟ್ ಅಂಡ್ ಕ್ಲೀನ್ ಇರುವ ಹೊಸ ಸ್ಕೂಲ್ ಬ್ಯಾಗ್, ವೆರೈಟಿ ಫುಡ್ ತುಂಬಿದ ಲಂಚ್ ಬ್ಯಾಗ್. ಫಾಲೀಶ್‌ನಿಂದ ಮಿರಿ ಮಿರಿ ಮಿಂಚುವ ಶೂ. ಮನೆ ಬಾಗಿಲ ಬಳಿಯಲ್ಲೇ ಬಂದು ನಿಲ್ಲುವ ಸ್ಕೂಲ್ ಬಸ್. ಮೂರು ನಾಲ್ಕು ಮಹಡಿಯ ಸ್ಕೂಲ್ ಬಿಲ್ಡಿಂಗ್, ಬಣ್ಣ ಬಣ್ಣದ ಬೇಂಚು ಡೆಸ್ಕುಗಳು.

ಇಷ್ಟೆಲ್ಲಾ ಇದ್ದರೂ ಇಂದು, ಕೆಲವು ಸ್ಕೂಲ್ ಮಕ್ಕಳ ಮುಖದಲ್ಲಿರಬೇಕಾದ ಮಂದಹಾಸದ ಕಿರುನಗುವೇ ಮರೆಯಾಗಿದೆ. ಅಂದು ಹಳೆಯದಾದ ಕಟ್ಟಡ, ಸವೆದ ಚಪ್ಪಲಿ, ರಿಪೇರಿಗೆ ತಯಾರಾದ ಬೇಂಚು ಡೆಸ್ಕುಗಳು, ಕೈಯಲ್ಲೊಂದು ಹಿಡಿಕೆ ಇರುವ ಪುಟ್ಟ ಡಬ್ಬಿ (ಬುತ್ತಿ). ಅದರಲ್ಲಿ ವೆರೈಟಿ ಫುಡ್ಡುಗಳಿರಲಿಲ್ಲ. ಮನೆ ಮಂದಿಗೆ ತಯಾರಾದ ಅಡುಗೆಯೇ ಡಬ್ಬಿಯೊಳಗಿರುತ್ತಿತ್ತು. ಇಷ್ಟೆಲ್ಲಾ ಅಂಕು ಡೊಂಕುಗಳಿದ್ದರೂ, ಮುಖದ ಮೇಲೆ ಬೇಸರದ ಕಿರು ಗೆರೆಗಳಿಲ್ಲದೆ ಶಾಲೆಗೆ ಹೋಗುವ ಸಡಗರವೇ ಹಬ್ಬದಂತಿತ್ತು. ಕಾಲ್ನಡಿಗೆಯಲ್ಲಿ ಗುಂಪು ಗುಂಪಾಗಿ ಸಾಗುವ ವಿದ್ಯಾರ್ಥಿಗಳ ದಂಡು ಶಾಲೆಗೂ ಒಂದು ಮೆರುಗು ನೀಡುತಿತ್ತು.

ಇಂದಿನಂತೆ, ಅಂದು ವರ್ಷಕ್ಕೂ ಮುಂಚೆ ಅಡ್ಮಿಷನ್‌ಗೆ ಕಾಯಬೇಕಿರಲಿಲ್ಲ. ಲಕ್ಷ ಲಕ್ಷ ಫೀಸುಗಳನ್ನ ಕಟ್ಟಬೇಕಿರಲಿಲ್ಲ. ಬೆಳಗ್ಗೆ ಬೇಗನೆ, ಅರೆ ನಿದ್ದೆಯಿಂದ ಎದ್ದು ಶಾಲೆಗೆ ಹೊರಡುವ ಧಾವಂತವಿರಲಿಲ್ಲ; ಹತ್ತು ಗಂಟೆಗೆ ಅಂದು ಶಾಲೆ ಶುರು! ನಿಧಾನವಾಗಿ ನಡೆದುಕೊಂಡು ಶಾಲೆಗೆ ತಲುಪುವ ಸಂತಸ. ಶಿಕ್ಷಕರ ಭಯದಲ್ಲಿ ಭಕ್ತಿಯಿಂದ ಕಲಿತ ವಿದ್ಯೆ ಎಂದೂ ಮರೆಯದೇ ತಲೆಯೊಳಗಿರುತಿತ್ತು. ಟ್ಯೂಷನ್‌ಗಳ ಅನಿವಾರ್ಯತೆಯ ಅಗತ್ಯವಿಲ್ಲದೆಯೇ ಅಂದು, ಕಲಿಕೆ ಸುಗಮವಾಗಿತ್ತು. ಬೆತ್ತದೇಟಿನ ಭಯದಲ್ಲೂ ಬದುಕಿನ ಕುರಿತು ಭರವಸೆಯಿತ್ತು. ಸೋಲಿಗೆ ಅಂಜಿ ಸಾಯುವ ಆಲೋಚನೆಗಳೇ ಇಲ್ಲದ ಅಂದಿನ ದಿನಗಳು ಅದೆಷ್ಟು ಚೆಂದವಿದ್ದವು. ಪರಿಶ್ರಮದಿಂದ ಗಳಿಸಿದ ವಿದ್ಯೆಯಿಂದ ಗುರಿ ತಲುಪಿದವರಂದು ಅನೇಕರಿದ್ದಾರೆ. ಸದೃಢರಾಗಿದ್ದು, ಸಾಧಿಸುವ ಮನಸ್ಸುಗಳಿಗೆ ಇನ್ನೂ ದಾರಿ ದೀಪದಂತಿದ್ದಾರೆ.

ಅದೇನೇ ಇರಲಿ. ಶಾಲೆ ಎನ್ನುವುದು ಪ್ರತಿ ಮಗುವಿನ ಮಹತ್ವಪೂರ್ಣ ಘಟ್ಟ. ಮಗುವಿಗೆ ಮನೆಯ ನಂತರದ ಇನ್ನೊಂದು ಪ್ರಪಂಚವಿದ್ದರೆ ಅದು ಶಾಲೆಯೇ. ಇಂದಿನ ಶಾಲೆಗಳು ಒತ್ತಡವಿಲ್ಲದ ಕಲಿಕೆಯನ್ನ ಬಿತ್ತಲಿ. ಶೈಕ್ಷಣಿಕ ಪ್ರಗತಿಯೊಂದಿಗೆ ಶಾರೀರಿಕ ಆರೋಗ್ಯಕ್ಕೂ ಆದ್ಯತೆ ನೀಡಲಿ. ಕಲಿತ ಪ್ರತಿ ಮಗುವೂ ಸಮಾಜದ ಸ್ವಸ್ಥ ಆಸ್ತಿಯಾಗಿ ದೀರ್ಘ ಕಾಲ ಬದುಕಿ ಬಾಳಲಿ ಎನ್ನುವ ಪುಟ್ಟ ಚಿಂತನೆ ನನ್ನದು. ಇಂದಿನ ಮಕ್ಕಳಿಗೆ ಕಲಿಕೆಯ ಹೊರೆ ಹೆಚ್ಚು ನಿಜ, ಆದರೂ ಮುಂದೆ ಅವರು ತಮ್ಮ ಕಾಲಿನ ಮೇಲೆ ತಾವೇ ನಿಲ್ಲಲು ಇಂದಿನ ಕಷ್ಟದ ವಿದ್ಯಾಭ್ಯಾಸವು ಸಹಾಯ ಮಾಡುತ್ತದೆ ಎಂಬ ನಿರೀಕ್ಷೆ ಪೋಷಕರದು.

ನೀವೂ ಬರೆಯಬಹುದು
ನಮ್ಮ ವಿಳಾಸ
ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
e-mail: vishwavanimagazine@gmail.com

ಸಮಾಚಾರ ಸಣ್ಣದಲ್ಲ

ಜೂನಿಯರ್ ತಂಡಕ್ಕೆ ಬದಲಿ ಆಟಗಾರರು

ಲಾರ್ಡ್ಸ್: ಭಾರತ ಹಾಗೂ ಇಂಗ್ಲೆಂಡ್ ಅಂಡರ್-19 ತಂಡಗಳ ನಡುವೆ ಒಟ್ಟು 8 ಪಂದ್ಯಗಳು ಇಂಗ್ಲೆಂಡ್‌ನಲ್ಲಿ ನಡೆಯಲ್ಲಿವೆ. ಉಭಯ ತಂಡಗಳ ಈ ಮುಖಾಮುಖಿ ಜೂನ್ 24ರಿಂದ ಆರಂಭವಾಗಲಿದೆ. ಆದರೆ ಈ ಪ್ರವಾಸಕ್ಕೂ ಮುನ್ನ ಭಾರತ ತಂಡದ ಇಬ್ಬರು ಆಟಗಾರರು ಗಾಯಗೊಂಡಿದ್ದಾರೆ. ತಂಡದ ಯುವ ಆಟಗಾರರಾದ ಆದಿತ್ಯ ರಾಣಾ ಮತ್ತು ಖಿಲನ್ ಪಟೇಲ್ ಗಾಯಗೊಂಡಿದ್ದು, ಇಬ್ಬರೂ ಆಟಗಾರರನ್ನು ಇಂಗ್ಲೆಂಡ್ ಪ್ರವಾಸದಿಂದ ಹೊರಗಿಡಲಾಗಿದೆ. ಇದೀಗ ಅವರ ಬದಲಿ ಆಟಗಾರರನ್ನು ಸಹ ಬಿಸಿಸಿಐ ಘೋಷಿಸಿದೆ. ಜೂನಿಯರ್ ಕ್ರಿಕೆಟ್ ಸಮಿತಿಯು ಮುಂಬರುವ ಭಾರತ ಅಂಡರ್-19 ಇಂಗ್ಲೆಂಡ್ ಪ್ರವಾಸಕ್ಕಾಗಿ ಆದಿತ್ಯ ರಾಣಾ ಮತ್ತು ಖಿಲನ್ ಪಟೇಲ್ ಬದಲಿಗೆ ಡಿ. ದೀಪೇಶ್ ಮತ್ತು ನಮನ್ ಪುಷ್ಪಕ್ ಅವರನ್ನು ತಂಡದಲ್ಲಿ ಸೇರಿಸಿಕೊಂಡಿದೆ. ಬಿಸಿಸಿಐ ಸೆಂಟರ್ ಆಫ್ ಎಕ್ಸಲೆನ್ಸ್‌ನಲ್ಲಿ ನಡೆಯುತ್ತಿರುವ ಹೈ ಪರ್ಫಾರ್ಮೆನ್ಸ್ ಶಿಬಿರದ ಆದಿತ್ಯ ಬೆನ್ನಿನ ಗಾಯಕ್ಕೆ ತುತ್ತಾಗಿದ್ದರೆ, ಖಿಲನ್ ಅವರ ಬಲಗಾಲಿನಲ್ಲಿ ಸಮಸ್ಯೆ ಇದೆ. ಹೀಗಾಗಿ ಬಿಸಿಸಿಐ ಇಬ್ಬರೂ ಆಟಗಾರರನ್ನು ಪ್ರವಾಸದಿಂದ ಹೊರಗಿಟ್ಟು, ಅವರಿಬ್ಬರ ಬದಲಿಯಾಗಿ ಡಿ. ದೀಪೇಶ್ ಮತ್ತು ನಮನ್ ಪುಷ್ಪಕ್ ಅವರನ್ನು ತಂಡಕ್ಕೆ ಆಯ್ಕೆ ಮಾಡಿದೆ.

ಆಯಾನ್ ದಾಖಲೆ

ಪಟ್ನಾ: ಬಿಹಾರದ ಮುಜಫರ್‌ಪುರ ಜಿಲ್ಲೆಯ 13 ವರ್ಷದ ಅಯಾನ್ ರಾಜ್ ಜಿಲ್ಲಾ ಕ್ರಿಕೆಟ್ ಲೀಗ್‌ನಲ್ಲಿ 327 ರನ್ ಬಾರಿಸುವ ಮೂಲಕ ಐತಿಹಾಸಿಕ ಇನ್ನಿಂಗ್ಸ್ ಆಡಿದ್ದಾರೆ. ಅಯಾನ್ ಕೇವಲ 134 ಎಸೆತಗಳಲ್ಲಿ 41 ಬೌಂಡರಿಗಳು ಮತ್ತು 22 ಸಿಕ್ಸರ್‌ಗಳ ಸಹಿತ ಈ ತ್ರಿಶತಕ ಸಿಡಿಸಿದ್ದಾರೆ. ಈ ಮೂಲಕ ಅಯಾನ್ ಅಂಡರ್-14 ಟೂರ್ನಮೆಂಟ್‌ನಲ್ಲಿ ತ್ರಿಶತಕ ಬಾರಿಸಿದ ಮೊದಲ ಆಟಗಾರ ಎಂಬ ದಾಖಲೆ ಬರೆದಿದ್ದಾರೆ. ಈ ಸ್ಪರ್ಧೆಯಲ್ಲಿ ಇದಕ್ಕೂ ಮೊದಲು ಯಾವುದೇ ಆಟಗಾರ 300 ರನ್ ಗಳಿಸಲು ಸಾಧ್ಯವಾಗಿರಲಿಲ್ಲ. ಪ್ರಸ್ತುತ 8ನೇ ತರಗತಿ ಓದುತ್ತಿರುವ ಅಯಾನ್ ರಾಜ್ ಜಿಲ್ಲಾ ಕ್ರಿಕೆಟ್ ಲೀಗ್‌ನ 30 ಓವರ್‌ಗಳ ಪಂದ್ಯದಲ್ಲಿ ಸಂಸ್ಕೃತಿ ಕ್ರಿಕೆಟ್ ಅಕಾಡೆಮಿ ಪರ ಆಡುತ್ತಿದ್ದಾನೆ. ಅಯಾನ್ ಅವರ ಈ ಇನ್ನಿಂಗ್ಸ್‌ನಲ್ಲಿ, 296 ರನ್‌ಗಳು ಕೇವಲ ಬೌಂಡರಿಗಳಿಂದ (ಬೌಂಡರಿಗಳು ಮತ್ತು ಸಿಕ್ಸರ್‌ಗಳು) ಬಂದಿದ್ದು, ಇದು ಅವರ ಆಕ್ರಮಣಕಾರಿ ಬ್ಯಾಟಿಂಗ್ ಆಗಿದೆ.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ಅಕ್ಟೋಬರ್ 5ರಂದು ಭಾರತ-ಪಾಕ್ ಪಂದ್ಯ | ನ.2ರಂದು ಫೈನಲ್

ಸೆ.30ರಿಂದ ಮಹಿಳಾ ಏಕದಿನ ವಿಶ್ವಕಪ್

ದುಬೈ: ಭಾರತ ಮತ್ತು ಪಾಕಿಸ್ತಾನ ಮಹಿಳಾ ತಂಡಗಳು ಅಕ್ಟೋಬರ್ 5ರಂದು ಕೊಲಂಬೊದ ಆರ್. ಪ್ರೇಮದಾಸ ಕ್ರೀಡಾಂಗಣದಲ್ಲಿ ನಡೆಯಲಿರುವ ಏಕದಿನ ವಿಶ್ವಕಪ್ ಪಂದ್ಯದಲ್ಲಿ ಪರಸ್ಪರ ಮುಖಾಮುಖಿಯಾಗಲಿವೆ. ಅಂತಾರಾಷ್ಟ್ರೀಯ ಕ್ರಿಕೆಟ್ ಮಂಡಳಿ (ಐಸಿಸಿ) ಸೋಮವಾರ ಮಹಿಳಾ ಏಕದಿನ ವಿಶ್ವಕಪ್ ಟೂರ್ನಿಯ ವೇಳಾಪಟ್ಟಿಯನ್ನು ಪ್ರಕಟಿಸಿದೆ. ಈ ಟೂರ್ನಿಯು ಭಾರತದ ಆತಿಥ್ಯದಲ್ಲಿ ಈ ಸಲ ನಡೆಯಲಿದ್ದು, ಪಾಕಿಸ್ತಾನ ತಂಡಕ್ಕಾಗಿ ಹೈಬ್ರಿಡ್ ಮಾದರಿಯ ಪ್ರಕಾರ ಕೊಲಂಬೊವನ್ನು ತಟಸ್ಥ ಸ್ಥಳವಾಗಿ ಆರಿಸಲಾಗಿದೆ, ಹಾಗಾಗಿ ಪಾಕ್ ಮಹಿಳಾ ತಂಡವು ತನ್ನೆಲ್ಲಾ ಪಂದ್ಯವನ್ನು ಶ್ರೀಲಂಕಾದಲ್ಲಿ ಆಡಲಿದೆ. ಟೂರ್ನಿಯ ಎಲ್ಲಾ ಪಂದ್ಯಗಳೂ ಮಧ್ಯಾಹ್ನ 3 ಗಂಟೆಗೆ ಪ್ರಾರಂಭವಾಗಲಿದೆ.

ಸೆಪ್ಟೆಂಬರ್ 30ರಂದು ಬೆಂಗಳೂರಿನಲ್ಲಿ ಶ್ರೀಲಂಕಾ ವಿರುದ್ಧ ಹರ್ಮನ್‌ಪ್ರೀತ್ ಕೌರ್ ನಾಯಕತ್ವದ ಭಾರತ ಮಹಿಳಾ ತಂಡವು ಈ ಟೂರ್ನಿಯಲ್ಲಿ ತನ್ನ ಅಭಿಯಾನವನ್ನು ಆರಂಭಿಸಲಿದೆ. ಅಕ್ಟೋಬರ್ 5ರಂದು ಭಾರತ ತಂಡವು ಕೊಲಂಬೋದಲ್ಲಿ ಪಾಕ್ ತಂಡವನ್ನು ಎದುರಿಸಲಿದೆ. ಅಕ್ಟೋಬರ್ 9ರಂದು ದಕ್ಷಿಣ ಆಫ್ರಿಕಾ ವಿರುದ್ಧ, ಅಕ್ಟೋಬರ್ 12ರಂದು ವಿಶಾಖಪಟ್ಟಣಂನಲ್ಲಿ ಆಸ್ಟ್ರೇಲಿಯಾ ವಿರುದ್ಧ ಭಾರತ ಮಹಿಳಾ ತಂಡವು ತನ್ನ ಪಂದ್ಯವನ್ನಾಡಲಿದೆ. ಅಕ್ಟೋಬರ್ 19ರಂದು ಇಂದೋರ್‌ನಲ್ಲಿ ಇಂಗ್ಲೆಂಡ್ ವಿರುದ್ಧ, ಅಕ್ಟೋಬರ್ 23ರಂದು ಗುವಾಹಟಿಯಲ್ಲಿ ನ್ಯೂಜಿಲೆಂಡ್ ವಿರುದ್ಧ ಮತ್ತು ಅಕ್ಟೋಬರ್ 26ರಂದು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಬಾಂಗ್ಲಾದೇಶ ತಂಡವನ್ನು ಭಾರತ ಮಹಿಳಾ ತಂಡ ಸೆಣಸಾಡಲಿದೆ. ಆಸ್ಟ್ರೇಲಿಯಾ ತಂಡವು ಟೂರ್ನಿಯ ಹಾಲಿ ಚಾಂಪಿಯನ್ ಆಗಿದ್ದರೆ, ಭಾರತ ಮಹಿಳಾ ತಂಡವು ತನ್ನ ಮೊದಲ ಪ್ರಶಸ್ತಿ ಯನ್ನು ಈ ವಿಶ್ವಕಪ್ ಮೂಲಕ ಎದುರು ನೋಡುತ್ತಿದೆ. ಮೊದಲನೇ ಸೆಮಿಫೈನಲ್ ಪಂದ್ಯವು ಬೆಂಗಳೂರಿನಲ್ಲಿ ನಡೆಯಲಿದ್ದು, ಎರಡನೇ ಸೆಮಿಫೈನಲ್ ಪಂದ್ಯ ಕೊಲಂಬೊ ಅಥವಾ ಗುವಾಹಟಿಯಲ್ಲಿ ನಡೆಯಲಿದೆ. ಫೈನಲ್ ಪಂದ್ಯವು ನವೆಂಬರ್ 2ರಂದು ಬೆಂಗಳೂರು ಅಥವಾ ಕೊಲಂಬೊದಲ್ಲಿ ನಡೆಯಲಿದೆ. 8 ತಂಡಗಳ ಟೂರ್ನಿ ಇದಾಗಿದ್ದು, ಒಂದು ತಂಡವು ಲೀಗ್ ಹಂತದಲ್ಲಿ ಪರಸ್ಪರ ಒಮ್ಮೆ ಎಲ್ಲಾ ತಂಡಗಳೆದುರು ಆಡಲಿವೆ. ಅಗ್ರಸ್ಥಾನ ಪಡೆದ ನಾಲ್ಕು ತಂಡಗಳು ಸೆಮಿಫೈನಲ್‌ಗೆ ಪ್ರವೇಶ ಮಾಡಲಿವೆ. ಫೈನಲ್ ಪಂದ್ಯವು ನ.2ರಂದು ನಡೆಯಲಿದೆ.ಮಹಿಳಾ ವಿಶ್ವಕಪ್ ಏಕದಿನ ಕ್ರಿಕೆಟ್ ಟೂರ್ನಿಯು 1973ರಲ್ಲಿ ಪ್ರಾರಂಭವಾಗಿದ್ದು, ಈ ಬಾರಿ 13ನೇ ಆವೃತ್ತಿಯ ಟೂರ್ನಿ ನಡೆಯಲಿದೆ. ಆಸ್ಟ್ರೇಲಿಯಾ ತಂಡವು ಏಳು ಸಲ ಪ್ರಶಸ್ತಿಯನ್ನು ಗೆದ್ದುಕೊಂಡಿದೆ.

ಭಾರತ ತಂಡದ ಪಂದ್ಯಗಳು

	ಪಂದ್ಯ	ತಾಣ
ಸೆ.30	ಭಾರತ-ಶ್ರೀಲಂಕಾ	ಬೆಂಗಳೂರು
ಅ.5	ಭಾರತ -ಪಾಕಿಸ್ತಾನ	ಕೊಲಂಬೊ
ಅ.9	ಭಾರತ-ದ.ಆಫ್ರಿಕಾ	ವಿಶಾಖಪಟ್ಟಣಂ
ಅ.12	ಭಾರತ-ಆಸ್ಟ್ರೇಲಿಯಾ	ವಿಶಾಖಪಟ್ಟಣಂ
ಅ.19	ಭಾರತ-ಇಂಗ್ಲೆಂಡ್	ಇಂದೋರ್
ಅ.23	ಭಾರತ-ನ್ಯೂಜಿಲೆಂಡ್	ಗುವಾಹಟಿ
ಅ.26	ಭಾರತ-ಬಾಂಗ್ಲಾದೇಶ	ಬೆಂಗಳೂರು
ಅ.29	ಸೆಮಿಫೈನಲ್-1	ಗುವಾಹಟಿ/ಕೊಲಂಬೊ
ಅ.30	ಸೆಮಿಫೈನಲ್-2	ಬೆಂಗಳೂರು
ನ.2	ಫೈನಲ್	ಕೊಲಂಬೊ/ಬೆಂಗಳೂರು

2026ರ ಏಷ್ಯನ್ ಕ್ರೀಡಾಕೂಟದಲ್ಲಿ ವೆಚ್ಚ ಕಡಿತಗೊಳಿಸಲು ಜಪಾನ್ ನೂತನ ಕ್ರಮ

ಕ್ರೀಡಾಳುಗಳಿಗೆ ತೇಲುವ ಮನೆ

ಟೋಕಿಯೊ: ಮುಂದಿನ ವರ್ಷ ಜಪಾನ್‌ನಲ್ಲಿ ನಡೆಯಲಿರುವ ಏಷ್ಯನ್ ಕ್ರೀಡಾಕೂಟಕ್ಕೆ ಈಗಿನಿಂದಲೇ ಭರ್ಜರಿ ತಯಾರಿಗಳು ನಡೆಯುತ್ತಿವೆ. ಐಚಿ-ನಗೋಯಾದಲ್ಲಿ ನಡೆಯಲಿರುವ ಆ ಕ್ರೀಡಾಕೂಟದಲ್ಲಿ ಕ್ರೀಡಾಪಟುಗಳಿಗಾಗಿ ಜಪಾನ್ ಹೊಸ ಮತ್ತು ಆಸಕ್ತಿದಾಯಕ ವಸತಿ ವ್ಯವಸ್ಥೆಯನ್ನು ಮಾಡಲು ಸಜ್ಜಾಗಿದೆ. ಮುಂದಿನ ವರ್ಷ ಸೆಪ್ಟೆಂಬರ್ 19ರಿಂದ ಅಕ್ಟೋಬರ್ 4ರ ತನಕ ನಡೆಯಲಿರುವ 20ನೇ ಆವೃತ್ತಿಯ ಏಷ್ಯನ್ ಕ್ರೀಡಾಕೂಟದಲ್ಲಿ ಭಾಗವಹಿಸುವ 4,600 ಕ್ರೀಡಾಪಟುಗಳಿಗೆ ಉಳಿದುಕೊಳ್ಳುವ ವ್ಯವಸ್ಥೆಯನ್ನು ತುಂಬಾ ವಿಭಿನ್ನವಾಗಿ ವಿನ್ಯಾಸಗೊಳಿಸುವ ಸಿದ್ಧತೆ ಆರಂಭವಾಗಿದೆ. ಏಷ್ಯನ್ ಗೇಮ್ಸ್‌ನಲ್ಲಿ ಭಾಗವಹಿಸುವ ಅಥ್ಲೀಟ್‌ಗಳ ವಸತಿ ಸ್ಥಳವನ್ನು 'ತೇಲುವ ಗ್ರಾಮ' ರೂಪದಲ್ಲಿ ನಿರ್ಮಿಸಲಾಗುತ್ತಿದೆ. ಕ್ರೀಡಾಪಟುಗಳು, ತರಬೇತಿ ಸಿಬ್ಬಂದಿ ಮತ್ತು ಆತಿಥ್ಯ ವೃತ್ತಿಪರರು ಸೇರಿದಂತೆ 4600ಕ್ಕೂ ಹೆಚ್ಚು ಜನರು ಕ್ರೂಸ್ ಹಡಗಿನಲ್ಲಿ ತಂಗಲಿದ್ದಾರೆ. ನಗೋಯಾ ಬಂದರಿನ ಕಿಂಜೊ ಪಿಯರ್‌ನಲ್ಲಿ ನೆಲೆಗೊಂಡಿರುವ ಕ್ರೂಸ್ ಹಡಗನ್ನು ಭಾಗವಹಿಸುವ ಕ್ರೀಡಾಪಟುಗಳಿಗೆ ವಸತಿ ವ್ಯವಸ್ಥೆಗಳಾಗಿ ಪರಿವರ್ತಿಸಲು ಗುತ್ತಿಗೆಗೆ ನೀಡುವ ವ್ಯವಸ್ಥೆ ಇದೀಗ ಆರಂಭವಾಗಿದೆ. ಎಲ್ಲಾ ಕ್ರೀಡಾಪಟುಗಳು ಎಲ್ಲಾ ಪಂದ್ಯಗಳು ನಡೆಯುವ ಸ್ಥಳಕ್ಕೆ ಹತ್ತಿರದಲ್ಲಿರುವ ನಾಗೋಯಾ ಬಂದರಿನಲ್ಲಿರುವ ಕ್ರೂಸ್ ಹಡಗಿನಲ್ಲಿ ಉಳಿಯಲಿದ್ದಾರೆ. ಏಷ್ಯನ್ ಕ್ರೀಡಾಕೂಟವನ್ನು ಆಯೋಜಿಸುವಾಗ ಆಗುವ ವೆಚ್ಚವನ್ನು ಕಡಿತಗೊಳಿಸಲು ಸಂಘಟಕರು ಈ ಒಂದು ವ್ಯವಸ್ಥೆಗೆ ಮುಂದಾಗಿದ್ದಾರೆ.

ಯಶಸ್ವಿ ಜೈಸ್ವಾಲ್ ಚಿತ್ತ ಹೊಸ ದಾಖಲೆಯತ್ತ

ದೆಹಲಿ: ಇಂಗ್ಲೆಂಡ್ ವಿರುದ್ಧದ ಟೆಸ್ಟ್ ಸರಣಿಯಲ್ಲಿ ಭಾರತ ತಂಡದ ಯುವ ಆರಂಭಿಕ ಆಟಗಾರ ಯಶಸ್ವಿ ಜೈಸ್ವಾಲ್, ದಿಗ್ಗಜರಾದ ರಾಹುಲ್ ದ್ರಾವಿಡ್ ಹಾಗೂ ವೀರೇಂದ್ರ ಸೆಹ್ವಾಗ್ ಅವರ ದಾಖಲೆ ಮುರಿದು ಇತಿಹಾಸ ಬರೆಯುವ ಸನಿಹದಲ್ಲಿದ್ದಾರೆ. 2023ರಲ್ಲಿ ಅಂತಾರಾಷ್ಟ್ರೀಯ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ್ದ ಯಶಸ್ವಿ ಜೈಸ್ವಾಲ್, ಇದೀಗ ವಿಶ್ವ ಕ್ರಿಕೆಟ್‌ನಲ್ಲಿ ತಮ್ಮದೇ ಪ್ರಭಾವವನ್ನು ಬೀರಿದ್ದಾರೆ. ಇಂಗ್ಲೆಂಡ್ ವಿರುದ್ಧದ ಸರಣಿಯಲ್ಲಿ ಭಾರತದ ಪರ ಅತಿ ವೇಗವಾಗಿ 2000 ಟೆಸ್ಟ್ ರನ್ ಗಳಿಸಿದ ದಾಖಲೆ ಬರೆಯುವ ಹಾದಿಯಲ್ಲಿದ್ದಾರೆ. ಯುವ ಎಡಗೈ ಆಟಗಾರ ಇದುವರೆಗೂ ಆಡಿರುವ 19 ಟೆಸ್ಟ್ (36 ಇನಿಂಗ್ಸ್) ಪಂದ್ಯಗಳಲ್ಲಿ 52.88ರ ಸರಾಸರಿಯಲ್ಲಿ 1798 ರನ್ ಬಾರಿಸಿದ್ದು, ಇದರಲ್ಲಿ 10 ಅರ್ಧಶತಕ ಹಾಗೂ 4 ಶತಕಗಳನ್ನು ಬಾರಿಸಿದ್ದಾರೆ. ಇಂಗ್ಲೆಂಡ್ ವಿರುದ್ಧ ನಡೆಯುವ ಐದು ಟೆಸ್ಟ್ ಪಂದ್ಯಗಳ ಮೂರು ಇನ್ನಿಂಗ್ಸ್‌ಗಳಲ್ಲಿ ಜೈಸ್ವಾಲ್ 212 ರನ್ ಗಳಿಸಿದರೆ, ಟೆಸ್ಟ್ ಕ್ರಿಕೆಟ್‌ನಲ್ಲಿ ವೇಗವಾಗಿ 2000 ರನ್ ಗಳಿಸಿದ ಭಾರತದ ಮೊದಲ ಆಟಗಾರ ಎಂಬ ದಾಖಲೆಯನ್ನು ಅವರು ಬರೆಯಲಿದ್ದಾರೆ. ಆ ಮೂಲಕ ದಿಗ್ಗಜರಾದ ರಾಹುಲ್ ದ್ರಾವಿಡ್ ಹಾಗೂ ವೀರೇಂದ್ರ ಸೆಹ್ವಾಗ್ ಅವರ ದಾಖಲೆ ಮುರಿಯಲಿದ್ದಾರೆ. ಆ ಇಬ್ಬರು ಆಟಗಾರರೂ ತಮ್ಮ 40ನೇ ಟೆಸ್ಟ್ ಇನಿಂಗ್ಸ್‌ನಲ್ಲಿ 2000 ರನ್ ಪೂರೈಸಿದ್ದರು.

ತಂಡದಲ್ಲಿ ಸುರಕ್ಷತೆ, ಸಂತಸದ ಆಶಾಭಾವನೆಯಲ್ಲಿ ನೂತನ ನಾಯಕ | ಆರೋಗ್ಯಪೂರ್ಣ ವಾತಾವರಣ ಮುಖ್ಯ

ಸಂಘಟಿತ ಸಂಸ್ಕೃತಿಗೆ ಶ್ರಮಿಸುವೆ: ಗಿಲ್

ಲಂಡನ್: ಭಾರತ ಕ್ರಿಕೆಟ್ ತಂಡದಲ್ಲಿ ಪ್ರತಿಯೊಬ್ಬ ಆಟಗಾರ ಸದಾ ಸುರಕ್ಷಿತ ಮತ್ತು ಸಂತಸದಿಂದ ಇರಬೇಕು, ಸಂಘಟಿತ ಸಂಸ್ಕೃತಿಗಾಗಿ ತಾನೆಂದೂ ಶ್ರಮಿಸುವೆ ಎಂದು ಟೀಮ್ ಇಂಡಿಯಾ ಟೆಸ್ಟ್ ತಂಡದ ನಾಯಕ ಶುಭ್‌ಮನ್ ಗಿಲ್ ಹೇಳಿದ್ದಾರೆ.

'ನಾನು ಇಷ್ಟು ಬೇಗ ಭಾರತ ಟೆಸ್ಟ್ ತಂಡಕ್ಕೆ ನಾಯಕನಾಗುತ್ತೇನೆ ಎಂದು ಕನಸಿನಲ್ಲಿಯೂ ಅಂದುಕೊಂಡಿರಲಿಲ್ಲ. ಟ್ರೋಫಿ ಮತ್ತು ಪ್ರಶಸ್ತಿಗಳ ಗೆಲುವು ಒಂದು ಕಡೆ ಇರಲಿ. ಆಟಗಾರರಲ್ಲಿ ಭದ್ರತೆ ಮತ್ತು ಸಂತಸದ ಭಾವ ಮೂಡಿಸುವುದೇ ನನ್ನ ಆದ್ಯತೆ. ಒಟ್ಟಿನಲ್ಲಿ ತಂಡದಲ್ಲಿ ಆರೋಗ್ಯಪೂರ್ಣ ವಾತಾವರಣವಿರುವಂತೆ ಮಾಡುವುದೇ ನನ್ನ ಪ್ರಮುಖ ಗುರಿ' ಎಂದು ಶುಭ್‌ಮನ್ ಗಿಲ್ ಇಂಗ್ಲಿಷ್ ವಾಹಿನಿಯೊಂದಕ್ಕೆ ಇಲ್ಲಿ ನೀಡಿದ ಸಂದರ್ಶನದಲ್ಲಿ ಹೇಳಿದರು.

'ಗೆಲುವಿನ ಗುರಿಯನ್ನು ಸಾಧಿಸುವುದು ಇಂದಿನ ವಾತಾವರಣದಲ್ಲಿ ಎಷ್ಟು ಕಠಿಣ ಎಂಬುದರ ಅರಿವು ನನಗಿದೆ. ಪ್ರಸ್ತುತ ನಾವು ಆಡುವ ಪಂದ್ಯಗಳ ಸಂಖ್ಯೆ ಅಪಾರ ಇದೆ. ಒಂದೊಮ್ಮೆ ಅಂದುಕೊಂಡ ಗುರಿಯನ್ನು ಸಾಧಿಸಿದರೆ ಎಲ್ಲ ರೀತಿಯಿಂದಲೂ ಒಳ್ಳೆಯದು. ತಂಡದಲ್ಲಿ ಸದಾ ಸುರಕ್ಷತಾ ಭಾವ ಇರಬೇಕು. ಪ್ರತಿಯೊಬ್ಬ ಆಟಗಾರನ ಸಾಮರ್ಥ್ಯವನ್ನು ಗುರುತಿಸುವ ಕಾರ್ಯವನ್ನು ನಾಯಕರಾದವರು ಮಾಡಬೇಕು' ಎಂದರು. ಈಚೆಗೆ ರೋಹಿತ್ ಶರ್ಮಾ ಅವರು ಟೆಸ್ಟ್ ಕ್ರಿಕೆಟ್‌ಗೆ ನಿವೃತ್ತಿ ಘೋಷಿಸಿದ ನಂತರ ಶುಭ್‌ಮನ್ ಗಿಲ್ ಅವರಿಗೆ ತಂಡದ ನಾಯಕಪಟ್ಟ ಕಟ್ಟಲಾಗಿತ್ತು. 25 ವರ್ಷದ ಗಿಲ್ ಅವರಿಗೆ ನಾಯಕರಾಗಿ ಇಂಗ್ಲೆಂಡ್ ಟೆಸ್ಟ್ ಸರಣಿ ಮೊದಲನೇ ಸವಾಲಾಗಿದೆ. ಇದೇ 20ರಿಂದ ಇಂಗ್ಲೆಂಡ್ ವಿರುದ್ಧ ನಡೆಯ ಲಿರುವ ಐದು ಟೆಸ್ಟ್ ಪಂದ್ಯಗಳ ಸರಣಿಯಲ್ಲಿ ಭಾರತ ತಂಡವನ್ನು ಶುಭ್‌ಮನ್ ಗಿಲ್ ಮುನ್ನಡೆಸಲಿದ್ದಾರೆ. ರಿಷಬ್ ಪಂತ್ ಟೂರ್ನಿಯಲ್ಲಿ ಭಾರತ ತಂಡದ ಉಪ-ನಾಯಕರಾಗಿದ್ದಾರೆ. ಮೊದಲ ಪಂದ್ಯವು ಲೀಡ್ಸ್‌ನಲ್ಲಿ ನಡೆಯಲಿದೆ. 2007ರ ನಂತರ ಇಂಗ್ಲೆಂಡ್ ನೆಲದಲ್ಲಿ ಭಾರತ ಟೆಸ್ಟ್ ತಂಡವು ಟೂರ್ನಿ ಗೆದ್ದಿಲ್ಲ.

ಮುಖ್ಯ ಕೋಚ್ ಗೌತಮ್ ಗಂಭೀರ್ ಕುರಿತ ಪ್ರಶ್ನೆಗೆ ಪ್ರತಿಕ್ರಿಯಿಸಿದ ಗಿಲ್, 'ಗಂಭೀರ್ ಅವರು ಅಪಾರ ಬದ್ಧತೆಯುಳ್ಳವರು. ಸ್ಪಷ್ಟ ಸಂವಹನಕಾರರೂ ಹೌದು. ಆಟಗಾರರಿಂದ ತಾವು ಇಟ್ಟುಕೊಂಡಿರುವ ನಿರೀಕ್ಷೆಯನ್ನು ನೇರವಾಗಿ ತಿಳಿಸುತ್ತಾರೆ' ಎಂದು ಗಿಲ್ ಹೇಳಿದ್ದಾರೆ.

ಸ್ಪಿನ್ನರ್‌ಗಳಿಗೆ ಪಿಚ್ ನೆರವು ನಿರೀಕ್ಷೆ: ಕುಲ್ದೀಪ್

ಇಂಗ್ಲೆಂಡ್‌ನಲ್ಲಿರುವ ಪಿಚ್‌ಗಳು ಸ್ಪಿನ್ ಬೌಲರ್‌ಗಳಿಗೆ ನೆರವಾಗುವಂತೆ ಕಾಣುತ್ತಿವೆ. ಬ್ಯಾಟರ್‌ಗಳಿಗೆ ಆರಂಭದಲ್ಲಷ್ಟೇ ಅನುಕೂಲಕರವಾಗುವಂತಿವೆ ಎಂದು ಭಾರತ ಕ್ರಿಕೆಟ್ ತಂಡದ ಎಡಗೈ ಸ್ಪಿನ್ನರ್ ಕುಲದೀಪ್ ಯಾದವ್ ಲಾರ್ಡ್ಸ್‌ನಲ್ಲಿ ಹೇಳಿದ್ದಾರೆ. ರವೀಂದ್ರ ಜಡೇಜ ಅವರ ಜೊತೆಗೂಡಿ ಆಡುತ್ತಿರುವುದು ನನಗೆ ಗೌರವದ ಸಂಗತಿ. ಜಡೇಜ ಮತ್ತು ಅಶ್ವಿನ್ ಅವರು ನಾನು ತಂಡಕ್ಕೆ ಪದಾರ್ಪಣೆ ಮಾಡುವ ಸಂದರ್ಭದಲ್ಲೇ ಅವರು ಬಹಳ ಉತ್ತಮವಾಗಿಯೇ ಮಾರ್ಗದರ್ಶನ ಮಾಡಿದ್ದರು.

ಮುಂದಿನ ವಾರ ಎಕ್ಸ್ ಆ್ಯಂಡ್ ವೈ

ರಾಮಾ ರಾಮಾ ರೇ ಖ್ಯಾತಿಯ ಡಿ.ಸತ್ಯಪ್ರಕಾಶ್ ನಿರ್ಮಿಸಿ, ನಿರ್ದೇಶಿಸಿ ನಾಯಕನಾಗಿಯೂ ನಟಿಸಿರುವ ಎಕ್ಸ್ ಆ್ಯಂಡ್ ವೈ ಚಿತ್ರ ಪೋಸ್ಟರ್ ಹಾಗೂ ಹಾಡುಗಳ ಮೂಲಕವೇ ಕುತೂಹಲ ಮೂಡಿಸಿತ್ತು. ಈಗ ಟ್ರೇಲರ್ ಬಿಡುಗಡೆಯಾಗಿದ್ದು, ಟ್ರೇಲರ್‌ನಲ್ಲಿ ನಿರ್ದೇಶಕರು ಪ್ರೇಕ್ಷಕರ ಗಮನ ಸೆಳೆದಿದ್ದಾರೆ. ಚಿತ್ರವನ್ನು ನೋಡುವ ಕಾತುರ ಹೆಚ್ಚಿಸಿದ್ದಾರೆ. ವಿಭಿನ್ನ ಕಂಟೆಂಟ್ ಹೊಂದಿರುವ ಈ ಚಿತ್ರದ ಟ್ರೇಲರ್ ಲಕ್ಷಾಂತರ ವೀಕ್ಷಣೆ ಕಂಡಿದ್ದು, ಸಿನಿಪ್ರಿಯರಿಂದ ಮೆಚ್ಚುಗೆ ಪಡೆದಿದೆ. ಎಕ್ಸ್ ಆ್ಯಂಡ್ ವೈ ಯಾವಾಗ ತೆರೆಗೆ ಬರಲಿದೆ ಎಂದು ಸಿನಿಪ್ರಿಯರು ಕಾತರರಾಗಿದ್ದರು. ಅದಕ್ಕೆ ಈಗ ಉತ್ತರ ಸಿಕ್ಕಿದ್ದು, ಇದೇ ಜೂನ್ 26 ರಂದು ಚಿತ್ರ ರಾಜ್ಯಾದ್ಯಂತ ತೆರೆಗೆ ಬರಲಿದೆ. ಬೃಂದಾ ಆಚಾರ್ಯ, ಅಯಾನಾ, ಅಥರ್ವ ಪ್ರಕಾಶ್, ದೊಡ್ಡಣ್ಣ, ವೀಣಾ ಸುಂದರ್, ಸುಂದರ್ ವೀಣಾ, ಹರಿಣಿ, ಧರ್ಮಣ್ಣ ಕಡೂರ್, ತೇನಪ್ಪನ್ ಮುಂತಾದವರು ಚಿತ್ರದ ತಾರಾಗಣದಲ್ಲಿದ್ದಾರೆ. ನಿರ್ದೇಶಕ ಸತ್ಯಪ್ರಕಾಶ್ ಅವರೆ ಕಥೆ, ಚಿತ್ರಕಥೆ, ಸಂಭಾಷಣೆ ಬರೆದಿರುವ ಈ ಚಿತ್ರಕ್ಕೆ ಲವಿತ್ ಛಾಯಾಗ್ರಹಣ, ಬಿ.ಎಸ್.ಕೆಂಪರಾಜು, ಕೌಶಿಕ್ ಹರ್ಷ ಸಂಗೀತ ನಿರ್ದೇಶನ ಮಾಡಿದ್ದಾರೆ. ವರದರಾಜ್ ಕಾಮತ್ ಕಲಾ ನಿರ್ದೇಶನ ಈ ಚಿತ್ರಕ್ಕಿದೆ.

ಡೆವಿಲ್‌ಗೆ ಬಲು ಡಿಮಾಂಡ್

ದರ್ಶನ ಅಭಿನಯದ ಡೆವಿಲ್ ಚಿತ್ರದ ಚಿತ್ರೀಕರಣ ಭರದಿಂದ ಸಾಗಿದೆ. ಈಗಾಗಲೇ ಬಹುತೇಕ ಚಿತ್ರೀಕರಣ ಮುಗಿಸಿರುವ ಡೆವಿಲ್ ಡಬ್ಬಿಂಗ್ ಕೂಡ ಆರಂಭಿಸಿದೆ. ಇನ್ನು ಕೆಲವು ಸನ್ನಿವೇಶಗಳ ಶೂಟಿಂಗ್ ಬಾಕಿಯಿದ್ದು ಅದಕ್ಕಾಗಿ ವಿದೇಶಕ್ಕೂ ಹಾರಲಿದೆ. ಈ ನಡುವೆಯೇ ಡೆವಿಲ್ ಒಟಿಟಿ ರೈಟ್ಸ್‌ಗೆ ಡಿಮಾಂಡ್ ಹೆಚ್ಚಾಗಿದೆ. ಒಟಿಟಿ ಸಂಸ್ಥೆಗಳು ಹೆಚ್ಚಿನ ಬೆಲೆ ನೀಡಿ ಡೆವಿಲ್ ಚಿತ್ರದ ರೈಟ್ಸ್ ಪಡೆದುಕೊಳ್ಳಲು ಮುಂದಾಗಿವೆ. ಈ ಹಿಂದೆ ಕಾಟೇರ ಸಿನಿಮಾ ಭರ್ಜರಿ ಯಶಸ್ಸು ಪಡೆದಿತ್ತು. ಅಂತೆಯೇ ಈಗ ಡೆವಿಲ್ ಕೂಡ ಹಿಟ್ ಆಗಲಿದೆ ಎಂಬ ನಿರೀಕ್ಷೆ ಇದೆ. ಹಾಗಾಗಿಯೇ ಈ ಪೈಪೋಟಿ ಶುರುವಾಗಿದೆ.

ಮಿಲನ ಪ್ರಕಾಶ್ ಕಥೆ ಬರೆದು ನಿರ್ದೇಶಿಸುತ್ತಿರುವ ಡೆವಿಲ್ ಈ ಹಿಂದೆಯೇ ತೆರೆಗೆ ಬರಬೇಕಿತ್ತು. ಆದರೆ ಕೊಲೆಯ ಕೇಸ್ ನಲ್ಲಿ ದರ್ಶನ್ ಜೈಲು ಸೇರಿದ್ದ ಹಿನ್ನೆಲೆಯಲ್ಲಿ ಚಿತ್ರದ ಚಿತ್ರೀಕರಣ ಸ್ಥಗಿತವಾಗಿತ್ತು.

ಈಗ ಮತ್ತೆ ಶೂಟಿಂಗ್ ಆರಂಭವಾಗಿದೆ. ಬೆಂಗಳೂರು ಹಾಗೂ ರಾಜಸ್ಥಾನದಲ್ಲಿ ಶೂಟಿಂಗ್ ನಡೆಸಲಾಗಿದೆ. ಡೆವಿಲ್ ಗಟ್ಟಿ ಕಥೆಯ ಸಿನಿಮಾವಾಗಿದ್ದು, ದರ್ಶನ್ ವಿಭಿನ್ನ ಗೆಟಪ್‌ನಲ್ಲಿ ಮಿಂಚಲಿದ್ದಾರೆ. ಈ ಹಿಂದೆ ಬಿಡುಗಡೆಯಾಗಿದ್ದ ಫಸ್ಟ್ ಲುಕ್ ಟೀಸರ್ ಝಲಕ್ ನೋಡಿ ಸಿನಿಪ್ರಿಯರು ಖುಷಿಯಾಗಿದ್ದಾರೆ. ಇಲ್ಲಿ ರಿವೆಂಜ್ ಸ್ಟೋರಿಯ ಜತೆಗೆ ಲವ್ ಸ್ಟೋರಿಯೂ ಬೆರೆತಿದೆ. ರಚನಾ ರೈ ನಾಯಕಿಯಾಗಿ ನಟಿಸುತ್ತಿದ್ದು, ಶರ್ಮಿಳಾ ಮಾಂಡ್ರೆ ಹಲವು ವರ್ಷಗಳ ಬಳಿಕ ದರ್ಶನ್ ಸಿನಿಮಾದಲ್ಲಿ ಅಭಿನಯಿಸುತ್ತಿದ್ದಾರೆ. ಅಚ್ಯುತ್ ಕುಮಾರ್, ಶೋಭರಾಜ್ ಮುಂತಾದವರು ತಾರಾಗಣದಲ್ಲಿದ್ದಾರೆ.

ರಾಜಾಸಾಬ್ ಟೀಸರ್ ಬಿಡುಗಡೆ

ಟಾಲಿವುಡ್ ನಟ, ಪ್ರಭಾಸ್ ಅಭಿನಯದ, ದಿ ರಾಜಾಸಾಬ್ ಈಗಾಗಲೇ ದೊಡ್ಡ ಮಟ್ಟದ ಹೈಪ್ ಕ್ರಿಯೇಟ್ ಮಾಡಿದೆ. ಮೇಕಿಂಗ್ ಮೂಲಕ ಗಮನ ಸೆಳೆದ ಈ ಸಿನಿಮಾದ ಮೊದಲ ಟೀಸರ್ ಬಿಡುಗಡೆಯಾಗಿದೆ. ರೊಮ್ಯಾಂಟಿಕ್ ಲವ್ ಸ್ಟೋರಿಯ ಜತೆಗೆ ಕಾಮಿಡಿ, ಹಾರರ್ ಕಥೆಯೂ ಚಿತ್ರದಲ್ಲಿ ಬೆರೆತಿದೆ. ಪ್ರಭಾಸ್ ಡಬ್ಬಲ್ ಶೇಡ್‌ನಲ್ಲಿ ಮಿಂಚಿದ್ದು, ಲವರ್‌ಬಾಯ್ ಆಗಿ ಜತೆಗೆ ಮಾಸ್ ಆ್ಯಕ್ಷನ್ ಅವತಾರದಲ್ಲಿ ಅಬ್ಬರಿಸಿದ್ದಾರೆ. ಪ್ರಭಾಸ್ ಹಾರರ್ ಚಿತ್ರದಲ್ಲಿ ನಟಿಸಿರುವುದು ಇದೇ ಮೊದಲು ಹಾಗಾಗಿ ಈ ಚಿತ್ರದಲ್ಲಿ ಅವರನ್ನು ಕಣ್ತುಂಬಿಕೊಳ್ಳಲು ಸಿನಿಪ್ರಿಯರು ಕಾತರರಾಗಿದ್ದಾರೆ. ಅದ್ಭುತ ನೃತ್ಯ, ಪಂಚಿಂಗ್ ಕಾಮಿಡಿ ಡೈಲಾಗ್‌ಗಳು ಮನಸೂರೆಗೊಳ್ಳುತ್ತವೆ. ಬಾಲಿವುಡ್ ನಟ ಸಂಜಯ್ ದತ್ ಹಿಂದೆಂದೂ ಕಾಣದ ಗೆಟಪ್‌ನಲ್ಲಿ ಮಿಂಚಿದ್ದಾರೆ. ಮಾಳವಿಕಾ ಮೋಹನ್, ನಿಧಿ ಅಗರ್‌ವಾಲ್, ರಿದ್ದಿ ಕುಮಾರ್ ನಾಯಕಿಯರಾಗಿ ಬಣ್ಣಹಚ್ಚಿದ್ದಾರೆ. ತಮನ್ ಸಂಗೀತ ನಿರ್ದೇಶನದ ಟೀಸರ್‌ಗೆ ಹೊಸ ಮೆರುಗು ನೀಡಿದೆ. ಮಾರುತಿ ಚಿತ್ರದ ಕಥೆ ಬರೆದು ನಿರ್ದೇಶನ ಮಾಡಿದ್ದು, ಪೀಪಲ್ ಮೀಡಿಯಾ ಫ್ಯಾಕ್ಟರಿ ಬ್ಯಾನರ್‌ನಲ್ಲಿ ಟಿ.ಜಿ.ವಿಶ್ವ ಪ್ರಸಾದ್ ಚಿತ್ರ ನಿರ್ಮಾಣಕ್ಕೆ ಬಂಡವಾಳ ಹೂಡಿದ್ದಾರೆ. ದಿ ರಾಜಾಸಾಬ್ ಅದ್ದೂರಿ ವೆಚ್ಚದ ಚಿತ್ರವಾಗಿದ್ದು, ಪ್ಯಾನ್ ಇಂಡಿಯಾ ಸಿನಿಮಾವಾಗಿ ನಿರ್ಮಾಣವಾಗಿದೆ. ಡಿಸೆಂಬರ್ 5 ರಂದು ತೆಲುಗು, ಕನ್ನಡ, ಹಿಂದಿ, ತಮಿಳು ಮಲೆಯಾಳಂನಲ್ಲಿ ಬಿಡುಗಡೆಯಾಗಲಿದೆ.

ಸೆಟ್‌ನಲ್ಲಿ ಹೊಸ ದಾಖಲೆ

ದಿ ರಾಜಾಸಾಬ್ ಲವ್, ಹಾರರ್, ಕಾಮಿಡಿ ಜಾನರ್‌ನ ಸಿನಿಮಾ ಎಂಬುದು ಟೀಸರ್‌ನಲ್ಲಿ ಸ್ಪಷ್ಟವಾಗಿದೆ. ಅದರ ಜತೆಗೆ ಬಿಡುಗಡೆಗೂ ಮೊದಲೇ ದಾಖಲೆ ಬರೆದಿದೆ. ಈ ಚಿತ್ರಕ್ಕಾಗಿ ಅರಮನೆಯಂತಹ ಭೂತ ಬಂಗಲೆಯ ಅದ್ದೂರಿ ಸೆಟ್ ನಿರ್ಮಿಸಲಾಗಿತ್ತು. ಈ ಸೆಟ್ ಬರೋಬ್ಬರಿ ನಲವತ್ತೊಂದು ಚದರ ಅಡಿ ವಿಸ್ತೀರ್ಣದಲ್ಲಿ ನಿರ್ಮಾಣವಾಗಿದೆ. ಹಾರರ್ ಚಿತ್ರವೊಂದಕ್ಕೆ ಇಷ್ಟು ದೊಡ್ಡ ಮಟ್ಟದಲ್ಲಿ ಸೆಟ್ ನಿರ್ಮಾಣ ಮಾಡಿರುವುದು ಇದೇ ಮೊದಲು. ರಾಜೀವನ್ ನಂಬಿಯಾರ್ ನೇತೃತ್ವದಲ್ಲಿ ಇಂತಹ ದೊಡ್ಡ ಸೆಟ್ ನಿರ್ಮಾಣವಾಗಿದೆ. ಇದು ಚಿತ್ರದ ಕುತೂಹಲ ಮೂಡಿಸಿದೆ.